ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

(ಸಂಯುಕ್ತ ಸಂಚಿಕೆ) ಸಂಪುಟ 30 : ಸಂಚಿಕೆ 1, 2, 3 ಮತ್ತು 4
ಜನವರಿ - ಡಿಸೆಂಬರ್ 2001

ಸಾಧನೆ

ಸಂಪುಟ - 30, ಸಂಚಿಕೆ 1, 2, 3 ಮತ್ತು 4 : ಸಂಯುಕ್ತ ಸಂಚಿಕೆ

ಜನವರಿ - ಡಿಸೆಂಬರ್ 2001

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

SAADHANE : Kannada Quarterly (January - December 2001) of the Bangalore University, Bangalore. Pp 122 + iv

ಚಂದಾ ವಿವಾರ

ಸಾಂಸ್ಥಿಕ ಆಜೀವ ಸದಸ್ಯತ್ವ	ರೂ. 500-00
ಆಜೀವ ಸದಸ್ಯತ್ವ	ರೂ. 300-00
ವಾರ್ಷಿಕ ಚಂದಾ	ರೂ. 50-00

ಪ್ರಕಾಶಕರು ಮತ್ತು ಮುದ್ರಕರು
ಡಾ|| ಬಿ. ಗಣೇಶ್
ನಿರ್ದೇಶಕರು
ಪ್ರಸಾರಾಂಗ ಮತ್ತು ಮುದ್ರಣಾಲಯ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು - 560 056

ಪರಿವಿಡಿ

ನೆನಪುಗಳು

- ಪ್ರೊ. ಬಿ. ವೈ. ಲಲಿತಾಂಬ

1. ಆ ಹೆಣ್ಣು

ವಯಸ್ಸು
ಸುಮಾರು ಮೂವತ್ತರ ಹರಯ
ಸುಕ್ಕುಗಟ್ಟಿದ
ಒಣ ಬಿರುಕು - ಬಿರುಕಿನ ಚರ್ಮ

ಅವಳು ಒಕ್ಕಣ್ಣೆ
ಸಿಡುಕು ಮುಖದ ಸಿಡುಕಿ
ಓದಿದವಳಲ್ಲ - ಬರಹ ಬಾರದವಳು
ಆದರೆ
ಇಪ್ಪತ್ತಾರು ಮಂದಿ ಯುವತಿಯರ ರಕ್ಷಕಿ
ರಕ್ಷಣೆಯ ಅಘೋಷಿತ ಹೊರೆ ಹೊತ್ತ
ವಾರ್ಡನ್
ಆಕೆ ಹಾಸ್ಟೆಲಿನ
ವಾರ್ಡನ್ - ಆಯಾ - ಬಾಯೀ
ಎಲ್ಲ
ಮಿಕ್ಕವರ ಬಾಯಂದಕ್ಕೆ
ಸಿಕ್ಕ
ಹಾಸ್ಯಕ್ಕೆ ಆಹುತಿಯಾಗುತ್ತಿದ್ದ
ಒಂದು ಪ್ರಾಣಿ ,
ರಾಜಮ್ಮ
ಅವಳ ಹೆಸರು,

ತಮಿಳರ ವೈಖರಿಯಲ್ಲಿ
ಮಾಸಲು ಬಣ್ಣದ ಅವಳುಡುತ್ತಿದ್ದ ಸೀರೆ
ನನಗೆ ಕೆಲವೊಮ್ಮೆ

ಅನುಮಾನಕ್ಕೆ ಆಸ್ಪದ ಕೊಡುತ್ತಿತ್ತು -
ಸೀತೆಗೆ ಅನಸೂಯೆ ಕೊಟ್ಟಿದ್ದ
ಎಂದೆಂದಿಗೂ ಕೊಳೆಯಾಗದ
ಸೀರೆ
ಇದೇ
ಆಗಿತ್ತೇನೋ ಎಂದು.

ಎಲ್ಲ ಹುಡುಗಿಯರ
ಬಾಯ್ ಫ್ರೆಂಡ್ಸ್‌ನ ನೋಡಿ -
ಗೊಣಗುತ್ತಿದ್ದ
ಅವಳು :
ಕೆಲವೊಮ್ಮೆ ಅವಳು ಅಬ್ಬರಿಸುತ್ತಿದ್ದ
ಅವಳ ಧ್ವನಿ ಮಾತ್ರ
ನನ್ನ ಕಿವಿಗಳಲ್ಲಿ
ಹಿಂದಣ ಮೂರೂವರೆ ದಶಕಗಳ
ನಂತರವೂ
ಹೊಚ್ಚ ಹೊಸದೆಂಬಂತೆ
ಅಂಕಿತ.

ಧೂಳ ಆವರಣ ಹೊತ್ತು
ರಾಸಿ ಪಾತ್ರೆ ತೊಳೆಯುವ ಅವಳು
ಎಲ್ಲ ಹುಡುಗಿಯರ
ಗೌನ್ - ಸೀರೆ
ಮಾಸಿಕ ಎರಡು ರೂಪಾಯಿಗಳ
ಮಜೂರಿಯ ಮೇಲೆ
ಹದಗೊಳಿಸುತ್ತ ಅವಳು

ಜೀವನದ ಜಗತ್ತನ್ನು
ಕಾಣುತ್ತಿರುವಾಗ
ಸ್ವಾಭಿಮಾನದ ತುಣುಕಿನಲ್ಲಿ
ಯಾರಿಂದಲೂ
ಇನಾಮು ಬೇಡಿದವಳಲ್ಲ,
ಕೊಳಚೆಯಿಂದ ಕಕ್ಕಸು

ಕಟ್ಟಿದಾಗ
ಹೀನಾಮಾನ ಬೈಗಳ
ಉಪನಿಷತ್ತು ಪೋಣಿಸುವ
ಅವಳು
ಅವರ ಗೇಲಿಯಾಟವ ಕಂಡು
ಮುಗುಳ್ನಕ್ಕಾಗ ಒಮ್ಮೊಮ್ಮೆ
ಕ್ಯಾಕ್ಟಸ್‌ಗೆ ವಸಂತ ಬಂದು
ಹೂನಲ್ಲಿ ನಕ್ಕಂತೆ
ನನಗೆ ಅಭಾಸ.

ರಾಜಮ್ಮನ ಇರವಿನಲ್ಲಿ
ಧನ - ಕನಕ - ವಸ್ತುಗಳ ರಾಶಿ
ಸುರಕ್ಷಿತ.

* * *

ಆದರೂ
ನನಗೆ ನೆನಪಿದ್ದಂತೆ
ಅವಳ ಊಟ
ಕುಶಲ - ಕ್ಷೇಮ ಕುರಿತು
ಯಾರೂ
ಎಂದೂ
ವಿಚಾರಿಸಲಿಲ್ಲ
ನನಗೆ ಗೊತ್ತು
ಇಂದು ಅವಳಿಲ್ಲ
ಇಲ್ಲೆಲ್ಲೂ :
ಹಳೆ ರಾಗಿ ಹುಡುಕ
ಹೊರಟಿರಬೇಕು.
ಯಾರೂ ಅವಳ ದಿಕ್ಕನ್ನ
ನೆನಪು ಮಾಡಿಕೊಳ್ಳುವುದಿಲ್ಲ
ಇಂದು

ತನ್ನ
ಕುರುಹನ್ನ

ನೆರಳಲ್ಲಿ ಹಿಡಿದಿಡುವ ಪ್ರಯತ್ನ
ಅವಳು
ಮಾಡಿರಲಿಲ್ಲ

ಆದರೆ
ಇದು ಕೂಡ ನಿಜ
ನನ್ನ
ಆತ್ಮದ ಒಂದು ಮೂಲೆಯಲ್ಲಿ
ಮಾತ್ರ
ಅವಳು ಜಾಗ್ರತಳಾಗೇ
ಉಳಿದಿದ್ದಾಳೆ.

ಆರು ಅಪ್ರಕಟಿತ ಸ್ವರವಚನಗಳು

- (ಸಂ) ಎಸ್. ಶಿವಣ್ಣ

(೧)

ಆಗಲೋ ಈಗಲೋ ಯಾವಾಗಲೋ ಸ್ಥಿರವಲ್ಲ
ಆಗಮ ಪುರಾಣ ಓದುವ ಹಿರಿಯರು
ಸಾಗಿ ಹೋದರೆಲ್ಲ ॥ಪಲ್ಲ॥

ಜಂತ್ರದಗೊಂಬಿಗೆ ಮಂತ್ರವ ಮಾಡಿ ನರಕಂತೆಯ ತೊಡಿಸಿ (ದ) ರೆಲ್ಲ
ಭ್ರಾಂತು ಸಂಸಾರ ಪ್ರಪಂಚಿನೊಳು ಬಹು ಚಿಂತೆ ಹಚ್ಚಿದರೆಲ್ಲ
ಅಂತರಂಗವ ತಿಳಿಯದೆ ಯಮನ ಬಾಧೆಗೆ ಬೀಳುವರೆಲ್ಲ
ಸಜ್ಜನ ಸಂಗವ ಮಾಡದೆ ವ್ಯರ್ಥ ಕೆಟ್ಟು ಪೋಗುವರೆಲ್ಲ - 1

ನೂರುವರುಷದ ಕಲ್ಯಾಣ ಬರಹ ವಾರಿಜಭವನು ಬರದನೆಲ್ಲ
ಮೂರುದಿವುಸದ ಸಂತೆ ಕಾಯವು ಯಾರಿಗೆ ನೆಚ್ಚಿಕೆಯಿಲ್ಲ
ನಾರಿಯು ಧಾರುಣಿ ಸೇರಿದ ದ್ರವ್ಯವು ಮೂರು ತನ್ನದು ಅಲ್ಲ - 2

ದಾನ ಧರ್ಮ ದಯ ದಾಕ್ಷಿಣ್ಯದಿಂದಲಿ ಮೋಕ್ಷವಗಳಿಸಿದರಲ್ಲ
ಸ್ನಾನ ಜಪ ತಪ ಧ್ಯಾನದಿಂದಲಿ ಶಿವನ ಶೂನ ಹಿಡಿದವರಲ್ಲ
ದೀನತನಗಳ ಬಿಟ್ಟು ನೀವು ಗಾಹಿ(?) ವೊಡೆವರು ಅಲ್ಲ
ಮಾನುಜ ಜಲ್ಮ ಬರುವುದ ಅಪರೂಪ ಎಚ್ಚರ ಹೆದರಿಕೆ ಇಲ್ಲ - 3

ಹೊಲೆಯಲಿ ಜನಿಸಿದ ಬಲುಮೋಹಕೆ ಬಿದ್ದು ಇದರ ನೆಲೆಗಳ ತಿಳಿಯಲಿಲ್ಲ
ಎಲವು ತೊಗಲು ವರ ಮಾಂಸವ ದೇಹಕೆ ಬಹು ಸುಚಿಯೆಂಬವರೆಲ್ಲ
ಹಲವನೋದಿ ನಿಂದಿಸುವಂಥ ಪರ ಲಲನೆಗೆ ಭ್ರಮಿಸುವರಲ್ಲ
ಮಲಹರದೇವ (ನ) ಒಲುಮೆಯ ಪಡೆಯದೆ ಫಲವೇನಿದರೊಳಗಿಲ್ಲ -4

ಇರುವ ಕಾಲಕೆ ಒಂದ್ಮೂರು ಮನೆ ಹಿಡಿಯಿರಿ ಕಲಿಯುಗದೊಳು ನೀವೆಲ್ಲ
ಪರಿಪರಿಯಿಂದಲಿ ಇಂಬರಿದು ಗರ್ವವ ಮಾಡುವ ದುರುಳತನವು ತರವಲ್ಲ

ಹರಹರ ಶಿವಶಿವಯೆಂಬುವ ನಾಮ ಕೇಳಿ ಕಿವಿ ಗೊಡರಲ್ಲ
ವರಕವಿ ಶರ್ಧಗಿರಿರಾಮನ ಕರ್ನದಿ ಕೆಲದೊಳು ಸಂಸಾರಿಯಲ್ಲ
ಆಗಲೋ ಈಗಲೋ ಯಾವಾಗಲೋ ಸ್ಥಿರವಿಲ್ಲ -5

ಆಕರ : (7) 1762)(45 ಮುಂ - 46 ಹಿಂ) ಕು ಕ ಅ ಸಂ (ಮೈ)

(೨)

ಎಂಥಾ ಪರದೇಶಿ ಬಂದನೆ ಊರಿಂದ ಹೊರಗೆ
ನಿಂತಲ್ಲಿ ನೆಲನ ಮುಟ್ಟನೆ ನೋಡಮ್ಮ ಜಾಣೆ ॥ಪಲ್ಲ॥

ಬಾಂಪ್ರಾಯದ ಪರದೇಶಿ ಆತಗೆ ಮಂತೆ
ಕಾಲು ಕಣ್ಣುಗಳಿಲ್ಲವೆ ನೋಡಮ್ಮ ಜಾಣೆ
ಸುಪ್ವಿ ರಾಗವ ಪಾಡಿದ ಆತಗೆ ಮಂತೆ - 1
ಗಂಟಲ ಮೊದಲಿಲ್ಲವೆ -2
ಆರು ಭೂತದ ಗಾರುಡಿಗ ಆತನು ಮಂತೆ
ಬ್ಯಾರೊಂದು ಮನೆಯ ಮಾಡಿದ ನೋಡಮ್ಮ ಜಾಣೆ -3
ಮೂರರ ಹೃದಯವನಾಡಿದ ಆತನು ಮುಂತೆ
ಮೂರರ ಕಿಚ್ಚನಿಕ್ಕಿದ ನೋಡು ಜಾಣೆ -4

ನಾಗಲಿಂಗಪ್ಪನ ಕರಸ್ಥ(ಲ)ವು ಹಾದರವಲ್ಲಲೆ
ಹೋಗಿ ಮಹಲಿಂಗನ ನೋಡಮ್ಮ ಜಾಣೆ
ಎಂಥಾ ಪರದೇಶಿ ಬಂದನೆ -5

ಆಕರ : (7) ಕೆ. 1762 (6ನೇ) ಕು ಕ ಅ ಸಂ (ಮೈ)

(೩)

ಗೌರೀ ಸಮೇತ ಸೋಮ ಸು-
ಸ್ವರ ಶ್ರುತಿವರ ಧಾಮ ॥ ಪಲ್ಲ॥

ಗಿರಿಜಾಲೋಲ ಸುರ ಮುನಿ ಪಾಲ
ವರ ಪ್ರಣವಾದಿ ಸಮೂಲ ಶುಭಲೀಲ
ಪುಣ್ಯ (ಜಾ)ಲ ಘನಲೋಲ -1

ಜಗದೇಕ ವೀರ ಅಗಜಾಕುಮಾರ
ನಗದಿವ್ಯಚಾಪ ಗಂಭೀರ ಫಣಿಹಾರ
ಜಿತಮಾರ ಚಿತ್ತುಸ್ಸಾರ ವೀರ -2

ಪ್ರಾಲೇಯ ಸಂಗ ಕಾಲ ವಿಭಂಗ
ಪ್ರವಿಮಲ ಮೋಕ್ಷತಕುರಂಗ
ರಿಪುಭಂಗ ಧವಳಾಂಗ (ಲಿಂಗಾಂ)ಗ -3

ಪ್ರಮಥನಾಥ ನಮಿತ ಖ್ಯಾತ
ಸುಮನಸದಿ ಲೋಕ ತಾತ ವೇದಾತೀತ
ಫಣಿಯುತ ಮಮನಾಥ -4

ಅಂಬರಕೇಶ ನಿಂಬಪುರೀಶ
ಶಂಭು ಸುಜ್ಞಾನ ಗಣೇಶ ಸುಪ್ರಕಾಶ
ಭಕ್ತಿಪೋ ಸತ್ಯ ಭಾಷ -5

ಆಕರ : (7) 1762 (52 ಹಿಂ - 53 ಮುಂ) ಕು ಕ ಅ ಸಂ (ಮೈ)

(೪)

ರಾಗ : ಕಲ್ಯಾಣಿ

ರಮಣಿ ಮೈಲಾರಲಿಂಗನ ತೋರೆ
ಕಮಲಾಂಬಕಿ ನೀರೆ
ರಮಣಿ ಮೈಲಾರಲಿಂಗನ ತೋರೆ ॥ ಪಲ್ಲ॥

ರಮಣಿಮಣಿ ಹಿಮಧರನ ಶ್ರೀಶೈಲದಿ
ಘಮಘಮಿಸುವ ಮಲ್ಲಿಕಾರ್ಜುನದೇವನ ತೋರೆ -1

ಪುರನಾಶ ಸುರಪನ ಗಜ ಕುಂಭದಿ ಸೇರಿದ ಪರಿಯ ಶಂ
ಕರನನುಸುರು ಬೇಗ ರಮಣಿ -2

ನೀಲಕಂಠ ನಿಗಮಾಗಮ ಹೋಗೋ (?) ಚರ
ಪಲ ಗೌರಿಯ ಲೋಲ ತ್ರಿಶೂಲನೆ -3

ಮಂಗಳ ಮಹಿಮಾಭುಜಗಾಭರಣ ರಾಮ -
ಲಿಂಗಾಜಂಗಮ ಸಂಗ ತುರಂಗನ -4

ಪರಶಿವ ಪರಾಪರಗುಣಕರ ಪರಂಜ್ಯೋತಿಯ
ಪರ ವಂದಿತಾ ಪರವುಪದೇಶವ ರಮಣ -5

ಮುಡುಕುಧರೆಯ ಬೆಡಗಿನ ಕಡು ಚೆಲುವಿನ
ಮೃಡ ವಿರೂಪಾಕ್ಷ ತ್ರಿಯಂಬಕ ರೂಪನ ರಮಣಿ -6

ಧರಣಿಗಧಿಕ ಸರ್ಪಗಿರಿಯ ವರ ಸಖ
ವೀರಭದ್ರನ ಪಿತ ಗುರು ಭೂತೇಶನ
ರಮಣಿ ಮೈಲಾರಲಿಂಗನ ತೋರೆ -7

ಆಕರ : (7) ಕೆ. 1762 (44ನೇ) ಕು ಕ ಅ ಸಂ (ಮೈ)

(೫)

ಮಂಗಳ ಜಯ ರಾಜಲಿಂಗ ವೃಷಾಯ
ಶಿವನು ವೃಷಾಯ ಶಿವನು ವೃಷಾಯ
ಗಂಗಾಜಟಾವೃತ ಸಂಗ ನಿರ್ಮಾಯ ॥ ಪಲ್ಲ॥
ಕರಿ ಚರ್ಮ ಚೇಲ ಸುರಜನ ಪಾಲ
ಸ್ಮರಿತ ಸಜ್ಜನ ಮುನಿಸ್ತುತ್ಯ ಸುಶೀಲ - 1

ಅಂಗಧವಲ ಛಾಯ ಲಿಂಗ ಪ್ರಮಥ ಗೇಯ
ಮಂಗಳ ಭಾಸ್ಕರ ಕೋಟಿ ಉತ್ತುಂಗಕಾಯ -2

ರಾಜಪುರೀಶ ತೇಜವಿಲಾಸ
ಮೂಜಗನುತ ಚನ್ನವೃಷಭ ರಾಜೇಶ -3

ಆಕರ : (೬) ಕೆ. 1762 (ಕೊನೆಗರಿ) ಕು ಕ ಅ ಸಂ (ಮೈ)

(೬)

ಪಾಪ ಕೂಪದ ಭವದ ಕೂಪದೊಳು ಬಿದ್ದೆನ್ನ
ಆಪತ್ತ ಪರಿಹರಿ ಸೋ ಬಸವ ಅಯ್ಯಯ್ಯ
ಕೋಪಿ ದುರ್ಮಾರ್ಗಿ ದುರ್ವಿತನೆನಿಸ (ದಿರೆ) ನ್ನ ಪಾಲಿಸೊ ಬಸವ ॥ ಪಲ್ಲ॥

ಜನನ ಮರಣದ ಸ್ತಿ(ತಿ)ಗಳೊಳು ಸಿಲ್ಕಿ ಸಂಸಾರವನು
ಕೂಡಿಕೊಂಡಿರ್ದೆನೈ ಬಸವ ಅಯ್ಯಯ್ಯ
ಸನುಮತದಿ ಸಂಸಾರವೆನಗೆ x x x ನಂಬಿದೆನು
ಚಿನುಮಂತುಗೆ ಪಾಲಿಸೊ ಬಸವ
ಬಿನುಗುಬುದ್ಧಿಯ ಕಾಮ ಕ್ರೋಧ ವಿಷಯದಿ ಸಿಲುಕಿ
ರ್ದೆ ನಾನಿದೆಂತೊ ಬಸವ ಅಯ್ಯಯ್ಯ
ಕನಲಿ ಕಂಗೆಟ್ಟು ಭವದೊಳು
ಜಿನುಗುತಿಹೆ ನಾಂ ಚೆನ್ನಬಸವ - 1

ಆಶೆಪಾಶದಿ ಸೊಕ್ಕಿ ಕೋಪ ವಿಷಯದಿ ಸಿಲ್ಕಿ
ಗಾಸಿಯಾದೆನು ನಾನು ಬಸವ ಅಯ್ಯಯ್ಯ
ಮೋಸವೋದೆನು ಅಷ್ಟಮದ ಸಪ್ತವ್ಯಸನಗಳೊ
ಳೀಶ ಭಕ್ತರ ಭಕ್ತ ಬಸವ ಅಯ್ಯಯ್ಯ
ಹೇ ಸಿಮನದವ ಪಶುಪಾಶ ಜೀವಿಯು ನಿಮ್ಮ
ವಾಸವಾಗಿರಿಸೊ ಚನ್ನಬಸವ - 2

ಕುಂದಿ ಕುಸಿವುತ ತಗ್ಗಿ ಮುನ್ನೆ ಬಂದೆನು ಬಸವ
ಬಂಧನದಿ ನೊಂದೆ ನಾಂ ಬಸವ ಅಯ್ಯಯ್ಯ
ತಂದೆ ನೀ ಬಂದು ಕಂದ ನೊಂದೆಯಾ ಕಂದ ಬಾ
ರೆಂದು ಸಲಹಯ್ಯ ಬಸವ
ಇಂದುಧ(ರ)ನಾದಿಯ ನು ಒಂದು ದಿನ ಮರಸದೆ
ಮಂದಮತಿಯಾದೆ ನಾಂ ಬಸವ ಅಯ್ಯಯ್ಯ
ಇಂದು ಶ್ರೀ ಗುರು ಶಾಂತಮಲ್ಲೇಶನಾಗಿ
ಬಂದೆನ್ನ ಸಲಹಯ್ಯ ಬಸವ -3

ಮತ್ಸ್ಯೇಂದ್ರ ನಾಥನ ಕುರಿತಾದ ಕಥಾನಕಗಳು

- ಡಾ. ಪಿ. ಎಂ. ದಿನೇಶ

ಮತ್ಸ್ಯೇಂದ್ರನಾಥನಿಗೆ ಸಂಬಂಧಿಸಿದ ಮುಖ್ಯ ಕಥೆಗಳನ್ನು ಈ ಕೆಳಗೆ ಸಂಗ್ರಹಿಸಲಾಗಿದೆ.

1. **ಕಾಲಜ್ಞಾನ ನಿರ್ಣಯ** (16-29-36) ಭೈರವ ಮತ್ತು ಭೈರವೀ ಚಂದ್ರದ್ವೀಪಕ್ಕೆ ಹೋಗಿದ್ದರು. ಕಾರ್ತಿಕೇಯನು ಅವರ ಶಿಷ್ಯನಾಗಿ ಅಲ್ಲಿಗೆ ತಲುಪಿದನು. ಅಜ್ಞಾತವಶಾತ್ ಅವನು ಮಹತ್ವವಾದ ಕುಲಾಗಮ ಶಾಸ್ತ್ರವನ್ನು ಸಮುದ್ರಕ್ಕೆಸೆದನು. ಆಗ ಭೈರವನು ಸಮುದ್ರವನ್ನಿಳಿದು ಮತ್ಸ್ಯದ ಉದರವನ್ನು ಬಗೆದು ಆ ಶಾಸ್ತ್ರವನ್ನು ಉಳಿಸಿದನು. ಇದರಿಂದ ಕಾರ್ತಿಕೇಯನು ಕ್ರುದ್ಧನಾದನು. ಅವನು ಒಂದು ಕಂದರವನ್ನು ತೆಗೆದು ಬಚ್ಚಿಟ್ಟುಕೊಂಡು ಮತ್ತೆ ಆ ಶಾಸ್ತ್ರವನ್ನು ಪುನಃ ಸಮುದ್ರದಲ್ಲಿ ಎಸೆದನು. ಸಮುದ್ರದಲ್ಲಿರುವ ಪ್ರಚಂಡ ಮೀನೊಂದು ಅದನ್ನು ತಿಂದು ಹಾಕಿತು. ಭೆರ್ಯವನು ತನ್ನ ತೇಜಃಶಕ್ತಿಯಿಂದ ಬಲೆಯೊಂದನ್ನು ಹೆಣೆದು ಆ ಮೀನನ್ನು ಹಿಡಿಯಲೆತ್ನಿಸಿದನು. ಆದರೆ ಅದು ಭೈರವನಷ್ಟೇ ಶಕ್ತಿ ಸಂಪನ್ನವಾಗಿತ್ತು. ಬೇರೆ ದಾರಿ ಕಾಣದೇ ಭೈರವನು ಬ್ರಾಹ್ಮಣ ವೇಷವನ್ನು ತ್ಯಜಿಸಿ ಆ ಮೀನದ ಉದರವನ್ನು ಬಗೆದು ಕುಲಾಗಮ ಶಾಸ್ತ್ರವನ್ನು ಉದ್ಧರಿಸಿದನು.

2. **ಬಂಗಾಲದಲ್ಲಿ ಮೀನನಾಥ** : ಮತ್ಸ್ಯೇಂದ್ರನಾಥನ ಉದ್ಧಾರದ ಕುರಿತಾಗಿ ಎರಡು ಗ್ರಂಥಗಳು ಲಭ್ಯವಿದೆ. 1. ಫಯಜುಲ್ಲನ ಗೋರಕ್ಷ ವಿಜಯ 2. ಶ್ಯಾಮ ವಾಸನ ಮೀನಚೇತನ. ವಾಸ್ತವಿಕವಾಗಿ ಈ ಎರಡೂ ಪುಸ್ತಕಗಳು ಒಂದು ಆಗಿವೆ. ಇದರಲ್ಲಿ ಕೊಟ್ಟಂತಹ ಕಥೆಯನ್ನು ಶ್ರೀ ಸುಕುಮಾರಸೇನನ ಬಂಗಾಳಿ ಸಾಹಿತ್ಯದ ಇತಿಹಾಸದ ಪುಟ 837ರಿಂದ ಸಂಗ್ರಹಿಸಲಾಗಿದೆ.

ಆದ್ಯ ಮತ್ತು ಆದ್ಯಾ ಎನ್ನುವವರು ದೇವತೆಗಳನ್ನು ಸೃಜಿಸಿದರು. ನಂತರ ನಾಲ್ಕು ಜನ ಸಿದ್ಧರ ಪ್ರಾದುರ್ಭಾವವಾಯಿತು. ನಂತರ ಒಬ್ಬ ಕನ್ಯೆಯ ಉತ್ಪತ್ತಿಯೂ ಆಯಿತು ಮತ್ತು ಗೌರಿ ಎಂಬ ಹೆಸರನ್ನು ನಾಮಕರಣ ಮಾಡಲಾಯಿತು. ಆದ್ಯನ ಆದೇಶದಂತೆ ಶಿವನು ಗೌರಿಯೊಡನೆ ವಿವಾಹವಾದನು ಮತ್ತು ಪೃಥ್ವಿಗೆ ಇಳಿಯಬಂದನು.

ಮೀನನಾಥ, ಗೋರಕ್ಷನಾಥ ಹಾಡಿಫಾ (ಜಾಲಂಧರಿನಾಥ) ಮತ್ತು ಕಾನಫಾ (ಕಾನೂಪಾ ಕೃಷ್ಣಪಾದ) ಎಂಬ ನಾಲ್ವರು ಸಿದ್ಧರು ಆಹಾರವನ್ನಾಗಿ ಕೇವಲ ವಾಯುವನ್ನಾಗಿ ಸ್ವೀಕರಿಸಿ ಯೋಗಾ ಭ್ಯಾಸವನ್ನು ಪ್ರಾರಂಭಿಸಿದರು. ಗೋರಕ್ಷನಾಥನು ಮೀನನಾಥನ ಸೇವಕನಾದರೆ ಕಾನಪಾನು ಹಾಡಿಫಾನ ಸೇವಕನಾದನು. ಒಂದು ದಿನ ಗೌರಿಯು ಶಿವನ ಕೊರಳಿನ ಮುಂಡಮಾಲೆಯನ್ನು ನೋಡಿ ಅವಕ್ಕೆ ಕಾರಣವನ್ನು ಕೇಳಿದಳು. ಆದಕ್ಕೆ ಶಿವನು ಆ ಮುಂಡವು ಗೌರಿಯದೇ ಆಗಿದೆ ಎಂದನು. ಗೌರಿಯು ಇದರಿಂದ ಗಾಭರಿಗೊಂಡು ಶಿವನಿಗೆ ಸಾವಿಲ್ಲದಿರುವುದಕ್ಕೂ, ಗೌರಿಯು ಮೇಲಿಂದ ಮೇಲೆ ಮರಣ ಚಕ್ರದಲ್ಲಿ ಸಿಲುಕುವುದಕ್ಕೂ ಕಾರಣವೆನಿಸಿರಬಹುದೆಂದು ಗೌರಿಯು ತಿಳಿಯಲಿಚ್ಛಿಸಿದಾಗ, ಅದಕ್ಕೆ ಶಿವನು ಇದೊಂದು ಗುಪ್ತರಹಸ್ಯವಾಗಿದ್ದು ಬೇರಾರಿಗೂ ಇದನ್ನು ತಿಳಿಸಲು ಸಾಧ್ಯವಿಲ್ಲ ಅದ್ದರಿಂದ ನಾವು ಕ್ಷೀರಸಾಗರದ ಮಧ್ಯೇ ದೋಣಿಯಲ್ಲಿ ಕುಳಿತು ಈ ರಹಸ್ಯವನ್ನು ಮಾತನಾಡಬಹುದೆಂದನು. ಇಬ್ಬರೂ ಕ್ಷೀರಸಾಗರವನ್ನು ತಲುಪಿದರು. ಅವರಿಬ್ಬರೂ ಇದ್ದ ದೋಣಿಯ ತಳಭಾಗದಲ್ಲಿ ಮೀನಿನ ರೂಪವನ್ನು ಮೀನನಾಥನು ಅಡಗಿ ಕುಳಿತುಗೊಂಡನು. ಶಿವನ ಕಥೆಯನ್ನು ಕೇಳುತ್ತ ಗೌರಿಗೆ ನಿದ್ರೆ ಬಂದಿತು. ಆದರೆ ಮೀನನಾಥನು ಶಿವನು ಹೇಳುತ್ತಿದ್ದ ಕಥೆಗೆ ಶಿವನಿಗೆ ಗೊತ್ತಾಗದಂತೆ ಹೂಂ ಗುಡುತ್ತಿ ದ್ದನು. ಈ ಶಬ್ದವನ್ನು ಕೇಳಿದ ಗೌರಿಯು ನಿದ್ರೆಯಿಂದೆದ್ದು ಶಿವನನ್ನು ಕುರಿತು ''ನಾವು ನೀವು ಹೇಳಿದ ಗುಪ್ತರಹಸ್ಯದ ಮಾತನ್ನು ಕೇಳಲೇ ಇಲ್ಲ'' ಎಂದಳು. ಆಗ ಶಿವನು ತಾನು ಕಥೆಯನ್ನು ಹೇಳುತ್ತಿರುವಾಗ ಆದ ಹುಂಕಾರದ ಶಬ್ದವು ಯಾರದ್ದಿರಬಹುದು ಎಂದು ಯಾಚನೆ ಮಾಡತೊಡಗಿದನು. ಕೊನೆಗೆ ದೋಣಿಯ ಅಡಿಯಲ್ಲಿ ಮೀನನಾಥನಿದ್ದದ್ದು ಅರವಿಗೆ ಬಂದಿತು. ಇದರಿಂದ ಕ್ರುದ್ಧನಾದ ಶಿವನು ''ನೀನು ಈ ಮಹಾಜ್ಞಾನವನ್ನು ಒಂದಲ್ಲ ಒಂದು ದಿನ ಮರೆತುಬಿಡುವೆ'' ಎಂದು ಮೀನನಾಥವನ್ನು ಶಪಿಸಿದನು.

ನಂತರದಲ್ಲಿ ಶಿವನು ಕೈಲಾಸಪರ್ವತಕ್ಕೆ ತೆರಳಿ ಅಲ್ಲಿಯೇ ಉಳಿಯತೊಡಗಿದನು. ಸಿದ್ಧರುಗಳಿಗೆ ವಿವಾಹ ಮಾಡಿ ವಂಶವೃದ್ಧಿಗಾಗಿ ಆದೇಶ ನೀಡಬೇಕೆಂದು ಗೌರಿಯು ಶಿವನನ್ನು ಮೇಲಿಂದ ಮೇಲೆ ಆಗ್ರಹಪಡಿಸಿದಳು. ಸಿದ್ಧರುಗಳಲ್ಲಿ ಕಾಮವಿಕಾರ ವಿರುವುದಿಲ್ಲವಾದ್ದರಿಂದ ಮದುವೆಯ ಪ್ರಶ್ನೆಯಿಲ್ಲ? ಎಂಬುದು ಶಿವನ ವಾದವಾಗಿತ್ತು. ಆಗ ಗೌರಿಯು ಮನುಷ್ಯನ ಶರೀರದಲ್ಲಿ ಕಾಮವಿಕಾರ ಇಲ್ಲದಿರಬಹುದು. ಆದರೆ ತಾವು ಅಪ್ಪಣೆ ನೀಡಿದರೆ ನಾನು ಅವರ ಸತ್ತ್ವ ಪರೀಕ್ಷೆ ಮಾಡುತ್ತೇನೆ ಎಂದಾಗ ಶಿವನು ಅದಕ್ಕೆ ಸಮ್ಮತಿಯಿತ್ತನು. ನಾಲ್ವರು ಸಿದ್ಧರು ನಾಲ್ಕು ದಿಕ್ಕುಗಳಲ್ಲಿ ತಪಸ್ಸನ್ನಾಚರಿಸುತ್ತಿದ್ದರು. ಪೂರ್ವ ದಿಕ್ಕಿನಲ್ಲಿ ಹಾಥಿ ಫಾನು, ದಕ್ಷಿಣದಲ್ಲಿ ಕಾನಪಾನು, ಪಶ್ಚಿಮದಲ್ಲಿ ಗೋರಕ್ಷನು ಮತ್ತು ಉತ್ತರದಲ್ಲಿ ಮೀನನಾಥನು ತಪಸ್ಸಿನಲ್ಲಿ ತಲ್ಲೀನರಾಗಿದ್ದರು. ಪರೀಕ್ಷೆಗೆ ಅವಕಾಶವನ್ನು ದೇವಿಗೆ ಒದಗಿಸಿಕೊಡುವುದಕ್ಕಾಗಿ ಶಿವನು ತನ್ನ ಧ್ಯಾನಬಲದಿಂದ

ನಾಲ್ಕೂ ಜನ ಸಿದ್ಧರನ್ನು ತಾನಿದ್ದಲ್ಲಿಗೆ ಆಹ್ವಾನಿಸಿದನು. ನಾಲ್ವರೂ ಅವನ ಮುಂದೆ ಉಪಸ್ಥಿತರಾದರು. ದೇವಿಯು ಮೋಹಿನಿ ರೂಪವನ್ನು ಧರಿಸಿ ಸಿದ್ಧರುಗಳಿಗೆ ಊಟ ಬಡಿಸಿದಳು. ದೇವಿಯ ಸೌಂದರ್ಯಕ್ಕೆ ಗೋರಕ್ಷನಾಥನನ್ನು ಬಿಟ್ಟು ಉಳಿದ ಮೂವರು ಸಿದ್ಧರು ಮರುಳಾದರು. ಆದರೆ ಗೋರಕ್ಷನಾಥನು ದೇವಿಯು ತನ್ನ ತಾಯಿಯಾಗಬೇಕೆಂದು ಬಯಸಿದ್ದರಿಂದ ಅವನು ಸತ್ವ ಪರೀಕ್ಷೆಯಲ್ಲಿ ಗೆದ್ದನು. ಉಳಿದ ಮೂವರು ಸಿದ್ಧರು ತಮ್ಮ ತಮ್ಮ ಶಾಪಕ್ಕನುಸಾರವಾಗಿ ಆಯಾ ಸ್ಥಳಕ್ಕೆ ತೆರಳಿ ಫಲವನ್ನು ಅನುಭವಿಸತೊಡಗಿದರು. ದೇವಿಯು ಗೋರಕ್ಷನನ್ನು ಕಠಿಣ ಪರೀಕ್ಷೆಗೆ ಒಳಪಡಿಸಲು ಸಂಕಲ್ಪಿಸಿದಳು. ಗೋರಕ್ಷನಾಥನು ಒಮ್ಮೆ ಬಕುಲ ವೃಕ್ಷದ ಕೆಳಗೆ ಸಮಾಧಿಸ್ಥನಾಗಿ ಕುಳಿತಿದ್ದನು. ದೇವಿಯು ಅವನನ್ನು ಯೋಗಭ್ರಷ್ಟನನ್ನಾಗಿಸಲು ನಾನಾವಿಧದಿಂದ ಪ್ರಯತ್ನಿಸಿದಳು. ಇದಾವುದ ರಿಂದಲೂ ಅವನು ವಿಚಲಿತನಾಗಲಿಲ್ಲ. ಅಂತಿಮವಾಗಿ ದೇವಿಯು ಅವನನನ್ನು ಪೀಡಿಸಲು ನೊಣವಾಗಿ ಆತನ ಹೊಟ್ಟೆಯನ್ನು ಪ್ರವೇಶಸಿ ತೊಂದರೆ ಕೊಡಲಾರಂಭಿಸಿದಳು. ಆಗ ಗೋರಕ್ಷನು ಶ್ವಾಸವನ್ನು ಸ್ತಂಭನಗೊಳಿಸಿ ಆ ನೊಣಕ್ಕೆ ಹೊಟ್ಟೆಯಲ್ಲಿಯೇ ತೊಂದರೆಕೊಟ್ಟನು. ಕೊನೆಯಲ್ಲಿ ದೇವಿಯು ರಾಕ್ಷಸಿಯಾಗಿ ಮನುಷ್ಯನ ಬಲಿಯನ್ನು ಪಡೆಯಲಾರಂಭಿಸಿದಳು. ಗೋರಕ್ಷನು ಶಿವನ ಆಜ್ಞಾನುಸಾರ ದೇವಿಯನ್ನು ಉದ್ಧಾರಮಾಡಿ, ಆ ಸ್ಥಾನದಲ್ಲಿ ಒಂದು ಮೂರ್ತಿಯನ್ನು ಪ್ರತಿಷ್ಠಾಪಿಸಿದನು. ಕಲಕತ್ತಾದಲ್ಲಿ ಈಗಲೂ ಕೂಡ ಆ ಮೂರ್ತಿಯೇ ಕಾಳಿಯ ರೂಪದಲ್ಲಿ ಪೂಜಿಸಲ್ಪಡುತ್ತಿದೆ ಎಂಬ ಪ್ರತೀತಿ ಇದೆ. ಗೋರಕ್ಷನಾಥನಿಗೆ ದೇವಿಯು ಪ್ರಸನ್ನಳಾಗಿ ಸುಂದರ ಸ್ತ್ರೀಯನ್ನು ಪಡೆಯುವ ವರವನ್ನು ಅನುಗ್ರಹಿಸಿದಳು. ದೇವಿಯ ವರದ ಫಲಪ್ರಾಪ್ತಿ ಗಾಗಿ ಶಿವನು ತನ್ನ ಮಾಯೆಯಿಂದ ಒಂದು ಕನ್ಯೆಯನ್ನು ಸೃಷ್ಟಿಸಿದನು. ಆ ಕನ್ಯೆಯನ್ನು ಗೋರಕ್ಷನಾಥನನ್ನು ವರಿಸಿದಳು. ಗೋರಕ್ಷನಾಥನು ಅವಳ ಮನೆಗೆ ತೆರಳಿ 6 ತಿಂಗಳ ಬಾಲಕನಾದನು. ಕನ್ಯೆಯು ದೊಡ್ಡ ತೊಂದರೆಯಲ್ಲಿ ಸಿಲುಕಿಗೊಂಡಾಗ, ಅವಳನ್ನು ಕುರಿತು ಗೋರಕ್ಷನಾಥನು ಈ ರೀತಿಯಾಗಿ ಹೇಳಿದನು -''ನನ್ನಲ್ಲಿ ಕಾಮವಿಕಾರಗಳಾಗದೇ ಇರಬಹುದು. ಆದರೆ ನೀನು ಸಂತಾನವನ್ನು ಇಚ್ಛಿಸುವಿಯಾದರೆ ನನ್ನ 'ಕ್ರೋಪಿನ' ಇಲ್ಲವೆ 'ಕರಪಟಿಯನ್ನು' ತೊಳೆದು ಆ ಜಲವನ್ನು ಪಾನ ಮಾಡಿದರೆ ನಿನಗೆ ಪುತ್ರ ಸಂತಾನವಾಗುವುದು'' ಎಂದಾಗ, ಅವನ ಆದೇಶದಂತೆ ಕ್ರೋಪಿನ ತೊಳೆದು ಜಲಪಾನ ಮಾಡಿದ್ದರಿಂದ ಹುಟ್ಟಿದ ಮಗನಿಗೆ ಕರ್ಪಟನಾಥ ಎಂಬ ಹೆಸರು ಬಂದಿತು.

ನಂತರ ಒಂದು ಬಕುಲವೃಕ್ಷದ ಕೆಳಗೆ ಗೋರಕ್ಷನಾಥನು ಧ್ಯಾನಾಸಕ್ತನಾದನು. ಅದೇ ಸಮಯದಲ್ಲಿ ಕಾನಫಾನು ಆಕಾಶ ಮಾರ್ಗವಾಗಿ ಹೋಗುತ್ತಿದ್ದನು. ಅವನ ನೆರಳು ಗೋರಕ್ಷನಾಥನ ಮೇಲೆ ಬಿತ್ತು. ಇದರಿಂದ ಕುಪಿತನಾದ ಗೋರಕ್ಷನಾಥನು ತನ್ನ ಹಾವನ್ನು ಅವನ ಮೇಲೆ ಬಿಟ್ಟನು. ಅದು ಕಾನಪಾನನ್ನು ಹಿಡಿದು ತಂದಿತು. ತನ್ನ

ತಲೆಯ ಮೇಲೆ ಹಾದು ಹೋಗಿದ್ದರ ಪರಿಣಾಮವೇನೆಂಬುದನ್ನು ಗೋರಕ್ಷನು ಕಾನಫಾನಿಗೆ ಹೇಳಿದನು. ಆದರೆ ಕಾನಫಾನು ವ್ಯಂಗ್ಯವಾಗಿ ಗೋರಕ್ಷನನ್ನು ಕುರಿತು ಈ ರೀತಿಯಾಗಿ ನುಡಿದನು. ನೀನಂತು ದೊಡ್ಡ ಸಿದ್ಧನಾಗಿರುವಿ, ಆದರೆ ನಿನ್ನ ಗುರು ಎಲ್ಲಿದ್ದಾನೆಂಬುದನ್ನು ತಿಳಿದಿರುವಿಯಾ? ತನ್ನ ಮಹಾಜ್ಞಾನವನ್ನೆಲ್ಲವನ್ನೂ ಮರೆತು ಕದರೀ ದೇಶದಲ್ಲಿ ಸ್ತ್ರೀಯರೊಡನೆ ವಿಹರಿಸುತ್ತಿರುವನು. ಅವನ ಶಕ್ತಿಯೆಲ್ಲ ಮುಗಿದಿದೆ. ಅವನ ಆಯುಸ್ಸು ಮೂರೇ ದಿವಸವಿರುವುದೆಂದು ಯಮರಾಜನ ಕಾರ್ಯಾಲಕ್ಕೆ ಹೋಗಿ ಖಚಿತಪಡಿಸಿಕೊಂಡು ಬಂದಿರುವೆನು. ನೀನು ನಿಜವಾಗಿ ದೊಡ್ಡ ಸಿದ್ಧನೇ ಆಗಿರುವೇ ಆದರೆ ನಿನ್ನ ಆ ಗುರುವನ್ನು ರಕ್ಷಿಸು''. ಈ ಮಾತಿಗೆ ಗೋರಕ್ಷನಾಥನು ''ನನಗೆ ನೀನು ತಿಳಿಹೇಳುವೆಯಾ? ನಿನಗೆ ನಿನ್ನ ಗುರುವಿನ ಬಗ್ಗೆ ಗೊತ್ತೇನು? - ಮೇಡರ ಕುಲದ ರಾಣಿ ಮಯನಾಮತಿಯ ಪುತ್ರನಾದ ಗೋಪಿಚಂದನು ನಿನ್ನ ಗುರುವನ್ನು ಮಣ್ಣಿನಲ್ಲಿ ಅಡಗಿಸಿಟ್ಟಿದ್ದಾನೆಂಬ ವಿಷಯವು ನಿನಗೆ ಗೊತ್ತೆ?'' ಎಂದು ನುಡಿದನು. ಇಬ್ಬರೂ ತಮ್ಮ ತಮ್ಮ ಗುರುಗಳನ್ನು ರಕ್ಷಿಸಲು ಮುಂದಾದರು. ಮೊಟ್ಟ ಮೊದಲು ಗೋರಕ್ಷನಾಥನು ಯಮನ ಸಮೀಪಕ್ಕೆ ಹೋಗಿ ಗುರುವಿನ ಆಯುಸ್ಸು ಕ್ಷೀಣಿಸುತ್ತಿರುವುದನ್ನು ತಪ್ಪಿಸಿದನು. ನಂತರ ತನ್ನ ಸ್ಥಳಕ್ಕೆ ಹೋಗಿ ಲಂಗ ಮತ್ತು ಲಂಗ ಎಂಬ ಇಬ್ಬರು ಶಿಷ್ಯರನ್ನು ಕರೆದು ಕೊಂಡು ಗುರಿವಿನ ಉದ್ಧಾರಕ್ಕಾಗಿ ಕದಲೀವನ ಪ್ರವೇಶಿಸಿದನು. ಬ್ರಾಹ್ಮಣ ವೇಷಧಾರಿಯಾದ ಗೋರಕ್ಷನಾಥನನ್ನು ಕಂಡು ಜನರೆಲ್ಲರೂ ಅವನಿಗೆ ಪ್ರಣಾಮ ಮಾಡಿ ಆಶೀರ್ವಾದ ಪಡೆಯಲಾರಂಭಿಸಿದರು. ಆದರೆ ಈ ಆಶೀರ್ವಾದ, ವೇಷಧಾರಿಯಾದ ಬ್ರಾಹ್ಮಣನಾಗಿರದೇ ಸ್ವತಃ ಗೋರಕ್ಷನಾಥನ ಬಾಯಿಯಿಂದ ಬರುವುದರಿಂದಾಗಿ ಎಲ್ಲ ಪಾಪಿಗಳೂ ಪಾಪಮುಕ್ತರಾದರು. ಇದರಿಂದ ಗೋರಕ್ಷನಾಥನು ಈ ವೇಷವು ತನಗೆ ಸರಿಯಲ್ಲವೆಂದು ತಿಳಿದು ಯೋಗಿಯ ವೇಷ ಧರಿಸಿ ಕದಲೀ ದೇಶದ ಸರೋವರದ ದಂಡೆಯಲ್ಲಿರುವ ಒಂದು ಬಕುಲ ವೃಕ್ಷದ ಕೆಳಗೆ ಕುಳಿತನು. ಆ ಸರೋವರದ ಕಡೆಗೆ ಬರುತ್ತಿದ್ದ ಕದಲೀ ನಾರಿಯು ಅಲ್ಲಿ ಆಸೀನನಾಗಿದ್ದ ಗೋರಕ್ಷನನ್ನು ನೋಡಿ ಮೋಹಿತಳಾದಳು. ಗೋರಕ್ಷನು ಕದಲೀ ನಾರಿಯಿಂದ ಅನೇಕ ವಿಷಯಗಳನ್ನು ತಿಳಿದುಕೊಂಡನು. ಅವನ ಗುರುವಾದ ಮೀನನಾಥನು ಮಂಗಲಾ ಮತ್ತು ಕಮಲಾ ಎಂಬ ಪಟ್ಟದರಸಿಯರೊಡನೆ ವಿಹರಿಸುತ್ತಿರುವ ವಿಷಯವನ್ನು ತಿಳಿದವನಾಗಿ ಅಲ್ಲಿ ಯೋಗಿಗಳಿಗೆ ಪ್ರವೇಶ ನಿಷಿದ್ಧವಾಗಿದ್ದರಿಂದ ನರ್ತಕಿಯ ವೇಷವನ್ನು ಧರಿಸಿ ಮೀನನಾಥನನ್ನು ಸಮೀಪಿಸಿದನು. ಅಲ್ಲಿ ಗುರುವಿಗೆ ಪೂರ್ವವರ್ತಿ ವಿಷಯವನ್ನು ನೆನಪಿಸಿ ಮಹಾಜ್ಞಾನದ ಉಪದೇಶವನ್ನು ಮಾಡಿದನು. ಇದನ್ನು ಕೇಳಿದ ಮೀನನಾಥನ ಮೈ ಪುಳಕಿತಗೊಂಡಿತು. ಇದನ್ನು ತಿಳಿದ ರಾಣಿಯರು ಬಂದು ಪುತ್ರನನ್ನು ಹಿಡಿದುಕೊಂಡು ಗೋಳಾಡುತ್ತ ಮೀನನಾಥನನ್ನು ವಿಚಲಿತಗೊಳಿಸಲೆತ್ನಿಸಿದರು. ಆಗ ಗೋರಕ್ಷನಾಥನು ಬಿಂದುನಾಥನನ್ನು ಸಾಯಿಸಿ ಪುನಃ ಅವನಿಗೆ ಜೀವದಾನವನ್ನು ನೀಡಿ ತತ್ತ್ವಜ್ಞಾನವನ್ನು ಬೋಧಿಸಿದನು. ಕದಲೀನಾರಿಯರು ಗೋರಕ್ಷನಾಥನ ವಿರುದ್ಧ ಷಡ್‌ಯಂತ್ರ ರಚಿಸಿ

ಅವನನ್ನು ಕೊಲ್ಲಲೆತ್ನಿಸಿದರು. ಇದನ್ನು ತಿಳಿದ ಗೋರಕ್ಷನು ಸಿಟ್ಟಿಗೆದ್ದು ಅವರಿಗೆ ಕಣ್ಣು ಕಪ್ಪಡಿಗಳಾಗಿರೆಂದು ಶಪಿಸಿದನು. ನಂತರ ಗುರು ಮತ್ತು ಬಿಂದುನಾಥನನ್ನು ಕರೆದು ಕೊಂಡು ಗೋರಕ್ಷನಾಥನು ತನ್ನ ಸ್ಥಳವಾದ ವಿಜಯ ನಗರಕ್ಕೆ ಬಂದನು.

3. **ಲೇವೀನೇಲ ನೇಪಾಳ** : - ಭಾಗ 1 ಪುಟ 307 - 355 ರಲ್ಲಿ ನೇಪಾಳದಲ್ಲಿ ಪ್ರಚಲಿತವಿರುವ ಎರಡು ಕಥೆಗಳನ್ನು ಸಂಗ್ರಹಿಸಲಾಗಿದೆ. ಗ್ರಿಯರ್ಸನ್‌ನು ಇ.ರೇ. ಎ.ದಲ್ಲಿ ಮತ್ತು ಬಾಗಚೀಯು ಕೌಲಜ್ಞಾನ ನಿರ್ಣಯದ ಭೂಮಿಕೆಯಲ್ಲಿ ಈ ಕಥೆಗಳ ಸಾರವನ್ನು ಕೊಟ್ಟಿದ್ದಾರೆ. 'ಯೋ. ಸಂ. ಆಂ.'ದಲ್ಲಿಯೂ ಕೂಡಾ ಈ ಕಥೆಯು ಸ್ವಲ್ಪ ಪರಿವರ್ತಿತ ರೂಪದಲ್ಲಿ ಕಾಣಸಿಗುವುದು . ಈ ಮೂರು ಕಥೆಗಳನ್ನು ಸಂಗ್ರಹರೂಪವಾಗಿ ಈ ಕೆಳಗೆ ಕೊಡಲಾಗಿದೆ.

(i) **ನೇಪಾಳದಲ್ಲಿ ಪ್ರಚಲಿತವಿರುವ ಬೌದ್ಧ ಕತೆ** : - ಬೌದ್ಧಕತೆಗಳಲ್ಲಿ ಮತ್ಸೇಂದ್ರ ನಾಥನನ್ನು ಅವಲೋಕೇಶ್ವರನೆಂದು ಕರೆಯಲಾಗಿದೆ. ಮತ್ಸೇಂದ್ರನಾಥನು ಒಂದು ಪರ್ವತದ ಮೇಲೆ ವಾಸಿಸುತ್ತಿದ್ದನು. ಆ ಪರ್ವತದ ಎತ್ತರಕ್ಕೆ ಹೋಗುವ ಮಾರ್ಗ ಬಹಳೇ ದುರ್ಗಮವಗತ್ತು. ಗೋರಕ್ಷನಾಥನು ಒಮ್ಮೆ ಅವನ ದರ್ಶನಕ್ಕೆ ಹೋದಾಗ ಆ ಪರ್ವತವನ್ನು ಏರುವುದು ಬಹುಕಷ್ಟವೆಂದು ತಿಳಿದು ಒಂದು ಚಮತ್ಕಾರವನ್ನು ಮಾಡಿದನು. 9 ಸರ್ಪಗಳನ್ನು ಸುತ್ತಿಕೊಂಡು ಅವನು ಅಲ್ಲಿಯೇ ಕುಳಿತಿದ್ದನಾದ್ದರಿಂದ ನೇಪಾಳದಲ್ಲಿ 12 ವರ್ಷಗಳವರೆಗೆ ಮಳೆಯಾಗಲಿಲ್ಲ. ರಾಜನಾದ ನರೇಂದ್ರದೇವನ ಗುರುವಾದ ಬುದ್ಧದತ್ತನು ಇದಕ್ಕೆ ಕಾರಣವನ್ನು ತಿಳಿದವನಾಗಿ ಅವಲೋಕಿತೇಶ್ವರನನ್ನು ಕರೆತರುವ ಸಂಕಲ್ಪ ತೊಟ್ಟು ಕಪೋಲಕ ಪರ್ವತದ ಬಳಿ ನಡೆದನು. ಇವನ ಸೇವೆಯಿಂದ ಪ್ರಸನ್ನನಾದ ಅವಲೋಕಿ ತೇಶ್ವರನು ಅವನಿಗೆ ಒಂದು ಮಂತ್ರವನ್ನು ಹೇಳಿಕೊಡುತ್ತ ಇದನ್ನು ಜಪಿಸುವುದರಿಂದ ಆಕರ್ಷಿತನಾಗಿ ನಾನು ಜಪಕರ್ತನೆಡೆಗೆ ಬರುವೆನು ಎಂದು ಹೇಳಿದನು. ಮನೆಗೆ ಹಿಂತಿರುಗಿ ಬುದ್ಧದತ್ತನು ಮಂತ್ರವನ್ನು ಜಪಿಸತೊಡಗಿದನು. ಮಂತ್ರಶಕ್ತಿಯಿಂದ ಆಕರ್ಷಿತನಾಗಿ ಅವಲೋಕೇಶ್ವರನು ಮೃಗವಾಗಿ ಕಮಂಡಲುವಿನಲ್ಲಿ ಪ್ರವೇಶಿಸಿದನು. ಆ ಸಮಯದಲ್ಲಿ ರಾಜನಾದ ನರೇಂದ್ರನು ಮಲಗಿದ್ದನು. ಆಗ ಬುದ್ಧದತ್ತನು ಅವನನ್ನು ಎಚ್ಚರಿಸಿ ಕಮಂಡಲುವಿನ ದ್ವಾರ ವನ್ನು ಮುಚ್ಚುವಂತೆ ಸೂಚಿಸಿದನು. ಹೀಗೆ ಮಾಡಿದ್ದರಿಂದ ಅವಲೋಕಿತೇಶ್ವರನು ನೇಪಾಳದಲ್ಲಿ ಬಂಧಿತನಾದನು. ಇದರಿಂದ ನೇಪಾಳದಲ್ಲಿ ಸಾಕಷ್ಟು ಮಳೆ ಯಾಯಿತು. ಅಲ್ಲಿಂದ ಮುಂದೆ ಬುಗಮ ಎಂಬ ಹೆಸರಿನ ಸ್ಥಳದಲ್ಲಿ ಇಂದಿಗೂ ಕೂಡಾ ಮತ್ಸೇಂದ್ರನಾಥನ ಜಾತ್ರೆ ನಡೆಯುತ್ತಿದೆ.

(ii) **'ಬುದ್ಧಪುರಾಣ ಗ್ರಂಥದಲ್ಲಿ ಬ್ರಾಹ್ಮಣದಲ್ಲಿ ಪ್ರಚಲಿತವಿರುವ ಕಥೆ'** : - ಶಿವನು ಒಂದು ಸಲ ಪುತ್ರಾಭಿಲಾಷಿಯಾದ ಸ್ತ್ರೀಯೊಬ್ಬಳಿಗೆ ವಿಭೂತಿಯನ್ನು ಸೇವಿಸುವಂತೆ ಕೊಟ್ಟನು. ಸಂಶಯಗೊಂಡ ಆ ಸ್ತ್ರೀಯು ಆ ಭಸ್ಮವನ್ನು ಸೇವಿಸದೇ ಬೂದಿಯಲ್ಲಿ ಗೊಬ್ಬರದಲ್ಲಿ ಎಸೆದಳು. 12 ವರ್ಷಗಳ ತರುವಾಯ ಶಿವನು ಆ ಸ್ಥಳಕ್ಕೆ ಹಿಂತಿರುಗಿದಾಗ ವಿಭೂತಿಯ ಫಲ ಮತ್ತು ಪುತ್ರಸಂತಾನದ ವಿಷಯವಾಗಿ ಆ ಸ್ತ್ರೀಯಲ್ಲಿ ಕೇಳಿದನು. ಆಗ ಸ್ತ್ರೀಯು ತಾನು ಆ ವಿಭೂತಿಯನ್ನು ಎಸೆದಿರುವುದಾಗಿ ಹೇಳಿದಳು. ನಂತರ ಆ ವಿಭೂತಿಯನ್ನು ಎಸೆದ ಸ್ಥಳಕ್ಕೆ ಹೋಗಿ ನೋಡಲಾಗಿ 12 ವರ್ಷ ಸುಂದರ ಬಾಲಕನು ಆಟವಾಡುತ್ತಿರುವುದು ದೃಶ್ಯ ಗೋಚರವಾಯಿತು. ಶಿವನೇ ಮತ್ಸೇಂದ್ರನಾಗಿದ್ದು ಆ ಬಾಲಕನು ಗೋರಕ್ಷನಾಥನಾಗಿದ್ದನು. ಮತ್ಸೇಂದ್ರನು ಅವನನ್ನು ಶಿಷ್ಯನನ್ನಾಗಿ ಜೊತೆ ಯಲ್ಲಿಯೇ ಇಟ್ಟುಕೊಂಡನು. ಒಮ್ಮೆ ಗೋರಕ್ಷನಾಥನು ನೇಪಾಳಕ್ಕೆ ಹೋದಾಗ ಅಲ್ಲಿಯ ಜನರು ಅವನಿಗೆ ಸರಿಯಾದ ಗೌರವವನ್ನು ಕೊಡದ ಕಾರಣ ಗೋರಕ್ಷನಾಥನು ಸಿಟ್ಟಿಗೆದ್ದು ಮೋಡಗಳನ್ನೆಲ್ಲ ಬಂಧಿಸಿ ಕುಳಿತುಕೊಂಡನು. ಇದರಿಂದಾಗಿ ನೇಪಾಳದಲ್ಲಿ12 ವರ್ಷಗಳ ಭೀಕರ ಬರಗಾಲ ಬಿದ್ದಿತು. ಇಂಥ ಸಮಯದಲ್ಲಿ ನೇಪಾಳದ ಸೌಭಾಗ್ಯವೇನೋ ಎಂಬಂತೆ ಮತ್ಸೇಂದ್ರನಾಥನು ಅಲ್ಲಿಗೆ ಆಗಮಿಸಿದಾಗ ಸಂತೋಷಗೊಂಡ ಗೋರಕ್ಷನಾಥನು ಮೇಲೇಳುತ್ತಲೇ ಮೋಡ ಸರಿದು ಮಳೆ ಸುರಿಯುತ್ತಾ ತತ್‌ಕಾರಣವಾಗಿ, ಮತ್ಸೇಂದ್ರನಾಥನ ಈ ಉಪಕಾರದ ಸ್ಮರಣೆಗಾಗಿ ಅಲ್ಲಿಂದ ಮುಂದೆ ಉತ್ಸವವು ಪ್ರಚಲಿತವಾಯಿತು.

'ಯೋಗಿ ಸಂಪ್ರದಾಯ ವಿಷ್ಕೃತಿ' ಯಲ್ಲಿ ಈ ಕಥೆಯ ಮೊದಲಭಾಗವನ್ನು (ಅಧ್ಯಾಯ 3ರಲ್ಲಿ) ಕೆಲವು ಬದಲಾವಣೆಯೊಂದಿಗೆ ಕೊಡಲಾಗಿದೆ . ಗೋದಾವರೀ ಮತ್ತು ಗಂಗಾನದಿಯ ಸಮೀಪದಲ್ಲಿರುವ ಚಂದ್ರಗಿರಿಯಲ್ಲಿ ಸುರಾಜ ಎಂಬ ಬ್ರಾಹ್ಮಣನು ವಾಸಿಸುತ್ತಿದ್ದನು. ಸುರಾಜನ ಹೆಂಡತಿಯು ಸರಸ್ವತಿಯು ಮಹಾದೇವನು ಕೊಟ್ಟ ವಿಭೂತಿಯನ್ನು ಸೇವಿಸಿದ್ದರಿಂದಾಗಿ ಗೋರಕ್ಷನಾಥನು ಅವಳಲ್ಲಿ ಜನಿಸಿದನು. ಕಥೆಯ ಎರಡನೇಯಭಾಗದಲ್ಲಿ ಸ್ವಲ್ಪ ಪರಿವರ್ತನೆ ಆದದ್ದು ಕಂಡುಬಂದಿತು. (ಅಧ್ಯಾಯ 49) ಈ ಗ್ರಂಥಾನುಸಾರವಾಗಿ ನೇಪಾಳದಲ್ಲಿ ಮತ್ಸೇಂದ್ರೀ ಜನಾಂಗವು ನೆಲೆಸಿತ್ತು. ಈ ಜನಾಂಗವು ಗೋರಕ್ಷನ ಗುರುವಾದ ಮತ್ಸೇಂದ್ರನಾಥನ ಆರಾಧಕರಾಗಿದ್ದರು. ಈ ಜನಾಂಗಕ್ಕೆ ರಾಜ ಮತ್ತು ರಾಜಪುರುಷರು ತೊಂದರೆಕೊಟ್ಟರು. ಈ ಕರುಣಾಜನಕ ಸ್ಥಿತಿಯನ್ನು ಕಂಡ ಗೋರಕ್ಷನಾಥನು ನೇಪಾಳದ ರಾಜನನ್ನು ಶಿಕ್ಷಿಸಲು ಮೂರು ವರ್ಷಗಳವರೆಗೆ ಬರಗಾಲವನ್ನು ಸೃಷ್ಟಿಸಿದನು. ರಾಜನು ತನ್ನ ತಪ್ಪನ್ನು ಒಪ್ಪಿಕೊಂಡಿದ್ದ ರಿಂದ ಮತ್ತು ಮತ್ಸೇಂದ್ರೀ ಜನಾಂಗದವರಿಗೆ ಯಾವುದೇ ತೆರನಾದ ತೊಂದರೆ ಕೊಡುವುದಿಲ್ಲವೆಂದು ಆಶ್ವಾಸನೆ ಕೊಟ್ಟ ನಂತರ ಗುರುವಾದ ಗೋರಕ್ಷನ ಕೃಪೆಯಿಂದ

ಮಳೆಯಾಯಿತು ನಂತರ ರಾಜನು ಮತ್ಸೇಂದ್ರನಾಥನ ಗೌರವಾರ್ಥವಾಗಿ ಜಾತ್ರೆಯನ್ನು ಪ್ರಾರಂಭಿಸಿದನು. ಆದರೆ ಅದು ತೋರಿಕೆಯಷ್ಟೇ ಆಗಿತ್ತು. ಆ ರಾಜನು ತನ್ನ ಹಿಂದಿನ ದುಷ್ಕೃತ್ಯಗಳನ್ನು ಪುನರಾವರ್ತಿಸುತ್ತಲೇ ಇದ್ದನು. ಇದರಿಂದ ವಿವಶನಾದ ಗೋರಕ್ಷನಾಥನು ವಸಂತನೆಂಬ ತನ್ನ ಶಿಷ್ಯನಿಗೆ ಮಣ್ಣಿನ ಮೂರ್ತಿಯೊಂದನ್ನು ಮಾಡಲು ಆದೇಶಿಸಿದನು. ಗುರುಕೃಪೆಯಿಂದಾಗಿ ಆ ಮಣ್ಣಿನ ಮೂರ್ತಿಯು ಜೀವಂತ ಸೈನಿಕನಾಗಿ ಪರಿವರ್ತಿತವಾಯಿತು. ಆ ಸೈನಿಕನನ್ನು ಕರೆದುಕೊಂಡು ವಸಂತನು ರಾಜನಾದ ಮಹೀಂದ್ರದೇವನ ಮೇಲೆ ಎರಗಿದನು. ಇದರಿಂದ ಪರಾಜಿತನಾದ ಮಹೀಂದ್ರದೇವನು ವಸಂತನನ್ನು ಆ ರಾಜ್ಯದ ಉತ್ತರಾಧಿಕಾರಿಯೆಂದು ಘೋಷಿಸಿದನು. ಈ ರೀತಿಯಾಗಿ ಸಂವತ್ಸರ 420ರಲ್ಲಿ ಗೋರಖಾ ಎಂಬ ರಾಜ್ಯವು ಸ್ಥಾಪಿತವಾಯಿತು.

4. **ಯೋಗಿಸಂಪ್ರದಾಯಾ ವಿಷ್ಕೃತಿಯಲ್ಲಿ ಮತ್ಸೇಂದ್ರನಾಥನ ಕುರಿತಾದ ಕಥೆಗಳು:-** ನಾರದನಿಂದ ಪಾರ್ವತಿಗೆ ಶಿವನಿಗೆ ಅಮರತ್ವದ ರಹಸ್ಯವು ತಿಳಿದಿದೆ ಎಂಬ ವಿಷಯವು ತಿಳಿಯಿತು. ಶಿವನು ತನ್ನ ಕೊರಳಲ್ಲಿ ಧರಿಸುವ ಮುಂಡಮಾಲೆಯು ಅವನ ಪೂರ್ವಜನ್ಮದ ಕಪಾಲವಾಗಿದೆ. ಅಮರತ್ವದ ಕತೆಯನ್ನು ತಿಳಿಯದವರು ಜನನ ಮರಣದಲ್ಲಿ ಸಿಲುಕುತ್ತಾರೆ. ಆದರೆ ಅಮರಕಥೆಯನ್ನು ತಿಳಿದ ಶಿವನು ಅಮರನಾಗಿದ್ದಾನೆ. ಪಾರ್ವತಿಯ ಆಗ್ರಹದ ಮೇರೆಗೆ ಶಿವನು ಅಮರಕಥೆಯನ್ನು ಹೇಳುವುದಕ್ಕಾಗಿ ನಿರ್ಜನಸ್ಥಾನವಾದ ಸಮುದ್ರವನ್ನು ಗೊತ್ತು ಮಾಡಿದನು. ಕವಿ ನಾರಾಯಣನು ಮತ್ಸೇಂದ್ರನಾಥನ ರೂಪದಲ್ಲಿ ಒಬ್ಬ ಭೃಗುವಂಶೀಯ ಬ್ರಾಹ್ಮಣನ ಮನೆಯಲ್ಲಿ ಅವತರಿಸಿದನು. ಆದರೆ ಆತನು ಕೆಟ್ಟಗಳಿಗೆಯಲ್ಲಿ ಹುಟ್ಟಿದ್ದರಿಂದ ಸಮುದ್ರದಲ್ಲಿ ಎಸೆಯಲ್ಪಟ್ಟನು. ಸಮುದ್ರದ ಒಂದು ಮೀನು ಆ ಮಗುವನ್ನು 12 ವರ್ಷಗಳವರೆಗೂ ತನ್ನ ಹೊಟ್ಟೆಯಲ್ಲಿ ನುಂಗಿಕೊಂಡಿತ್ತು ಅಲ್ಲಿಯೇ ಆ ಶಿಶುವು ವೃದ್ಧಿಯಾಗತೊಡಗಿತು. ಶಿವನು ಪಾರ್ವತಿಗೆ ಹೇಳುತ್ತಿರುವ ಅಮರ ಕಥೆಯನ್ನು ಮೀನಿನ ಹೊಟ್ಟೆಯಿಂದಲೇ ಆ ಮಗುವು ಕೇಳಿಸಿಕೊಂಡಿತು. ಆ ಮಗುವೇ ಶಿವನಿಂದ ಅನುಗ್ರಹಿತವಾಗಿ ಮುಂದೊಂದು ದಿನ ಮಹಾಸಿದ್ಧನಾದನು. ಈ ಬಾಲಕನಾದ ಮತ್ಸೇಂದ್ರನು ತನ್ನ ಅಪೂರ್ವವಾದ ಸಿದ್ಧಿಯ ಬಲದಿಂದ ಹನುಮಂತ, ವೀರಭದ್ರ, ಭದ್ರಕಾಲೀ, ವನೀರಬೇತಾಳ, ಚಾಮುಂಡಾ ದೇವಿಯರನ್ನು ಸೋಲಿಸಿದನು, ಆದರೆ ಎರಡು ಸಲ ದಾಂಪತ್ಯ ಜೀವನದಲ್ಲಿ ಸಿಲುಕಿಕೊಂಡವನಾದನು.

ಪ್ರಯಾಗ ರಾಜ್ಯದ ರಾಜನ ಮರಣದಿಂದಾಗಿ ಆತನ ಜನರೆಲ್ಲರೂ ದುಃಖಿಸುತ್ತಿದ್ದರು. ಇದನ್ನು ಕಂಡ ಗೋರಕ್ಷನಾಥನು, ರಾಜನ ಮೃತಶರೀರದಲ್ಲಿ ಪ್ರವೇಶಿಸಿ ಜನರನ್ನು ಸಂತುಷ್ಟಗೊಳಿಸುವಂತೆ ಮತ್ಸೇಂದ್ರೇನನ್ನು ಪ್ರೇರೇಪಿಸಿದನು.

ಮತ್ಸೇಂದ್ರನು ತನ್ನ ಶರೀರವನ್ನು 12 ವರ್ಷಗಳವರೆಗೆ ರಕ್ಷಿಸಿಡುವಂತೆ ಆಜ್ಞಾಪಿಸಿ, ರಾಜನ ಶರೀರದಲ್ಲಿ ಪ್ರವೇಶಿಸಿದನು. ಹನ್ನೆರಡು ವರ್ಷ ರಾಜನ ಶರೀರದಲ್ಲಿದ್ದು ಆನಂದದಿಂದ ಗೃಹಸ್ಥ ಜೀವನದಲ್ಲಿ ಕಾಲಕಳೆಯತೊಡಗಿದನು. ಆದರೆ ಹೇಗೋ ರಾಣಿಯರಿಗೆ ಈ ರಹಸ್ಯದ ಅರಿವಾಯಿತು. ಆಗ ರಾಣಿಯರು ಮತ್ಸೇಂದ್ರನ ಮೃತ ಶರೀರವನ್ನು ನಾಶಗೊಳಿಸಲು ಇಚ್ಚೆಪಟ್ಟರು. ಪರಂತು ವೀರಭದ್ರನು ಆತನ ಶರೀರ ವನ್ನು ರಕ್ಷಿಸುವ ಜವಾಬ್ದಾರಿಯನ್ನು ತನ್ನ ವಶಕ್ಕೆ ತೆಗೆದುಕೊಂಡಿರುವುದರಿಂದಾಗಿ ಮೃತ ಶರೀರದ ರಕ್ಷಣೆಯಾಯಿತು. ಆದರೆ ತನ್ನ ಹಿಂದಿನ ವೈರತ್ವದ ಕಾರಣದಿಂದಾಗಿ ವೀರಭದ್ರನು ಆ ಶರೀರವನ್ನು ಹಿಂತಿರುಗಿಸಲು ಬಯಸಲಿಲ್ಲ. ಕೊನೆಗೂ ಗೋರಕ್ಷ ನಾಥನ ಅದ್ಭುತ ಶಕ್ತಿಯ ಮುಂದೆ ಅವನು ತಲೆ ತಗ್ಗಿಸಬೇಕಾಯಿತು. ಇದರಿಂದಾಗಿ ಮತ್ಸೇಂದ್ರನಾಥನಿಗೆ ತನ್ನ ಶರೀರ ಪ್ರಾಪ್ತಿಯಾಯಿತು. ಅದೇ ಸಮಯಯದಲ್ಲಿ ಮತ್ಸೇಂದ್ರನಾಥನಿಗೆ ಮಣಿಕನಾಥನೆಂಬ ಪುತ್ರನು ಜನಿಸಿದನು. ಈತನು ಮುಂದೆ ದೊಡ್ಡ ಯೋಗಿಯಾದನು.

ಇನ್ನೊಂದು ಸಲ ಸಿಂಹಲದೇಶದ ರಾಣಿಯು ತನ್ನ ರೋಗಗ್ರಸ್ಥ ಪತಿಯಿಂದ ಅಸಂತುಷ್ಟಳಾಗಿ ಬೇರೊಬ್ಬ ಪುರುಷನನ್ನು ಹುಡುಕುತ್ತಾ ಹನುಮಂತನ ಬಳಿಗೆ ಬಂದಳು. ಆದರೆ ಹನುಮಂತನು ಗೃಹಸ್ಥ ಜೀವನದ ಬಂಧನದಲ್ಲಿ ಸಿಲುಕಲು ಹಿಂಜರಿದು, ಆಕೆಗೆ ಮತ್ಸೇಂದ್ರನ ಬಳಿಗೆ ಹೋಗಲು ತಿಳಿಸಿದನು. ಆ ರಾಜ್ಯದ ರಾಣಿಯರು ತಮ್ಮ ರಾಜ್ಯದಲ್ಲಿ ಯೋಗಿಗಳ ಪ್ರವೇಶವನ್ನು ನಿಷೇಧಿಸಿದ್ದರು. ಗೋರಕ್ಷನಾಥನು ಗುರುವಿನ ಉದ್ಧಾರ ಮಾಡಲು ಬಂದಾಗ ಹನುಮಾನನು ಅಡ್ಡಿಮಾಡಲಾರಂಭಿಸಿದನು. ಆಗ ಗೋರಕ್ಷನಾಥನು ವ್ಯರ್ಥವಾಗಿ ಜಗಳದಲ್ಲಿ ಕಾಲಕಳೆಯದೇ ಬಾಲವೇಷಧಾರಿಯಾಗಿ ರಾಜ್ಯವನ್ನು ಪ್ರವೇಶಿಸಿದನು. ಅದೇ ಸಮಯದಲ್ಲಿ ಕಲಿಂಗಾ ಎಂಬ ಹೆಸರಿನ ಸುಂದರ ವೇಶ್ಯಾನರ್ತಕಿಯು ನರ್ತನಕ್ಕಾಗಿ ಮತ್ಸೇಂದ್ರನಾಥನ ಅಂತಃಪುರದತ್ತ ತೆರಳುತ್ತಿದ್ದಳು. ಗೋರಕ್ಷನಾಥನು ಅವಳೊಂದಿಗೆ ಹೋಗಲಿಚ್ಛಿಸಿದನು. ಸ್ತ್ರೀವೇಷಧಾರಿಯಾಗುವ ತನ್ನ ತಲೆಯನ್ನು ಮತ್ತು ತಬಲಾವಾದನ ಕಲೆಯಲ್ಲಿ ತನ್ನ ನಿಪುಣತೆಯನ್ನು ವ್ಯಕ್ತಪಡಿಸಿ ಆಕೆಯೊಂದಿಗೆ ತೆರಳಲು ರಾಜಿಮಾಡಿಕೊಂಡನು. ಇಡೀ ರಾತ್ರಿ ಅಂತಃಪುರದಲ್ಲಿ ಕಲಿಂಗಾಳ ಸುಂದರ ನೃತ್ಯವೈಭವ ನಡೆಯಿತು. ಮತ್ಸೇಂದ್ರನಾಥನು ಅವಳ ನೃತ್ಯಕ್ಕೆ ಮರುಳಾದನು. ಅಷ್ಟರಲ್ಲಿಯೇ, ಗೋರಕ್ಷನಾಥನು ತನ್ನ ಮಂತ್ರಶಕ್ತಿಯಿಂದ ತಬಲಾ ವಾದಕನ ಉದರದಲ್ಲಿ ತೊಂದರೆಯನ್ನುಂಟು ಮಾಡಿದನು. ಇದರಿಂದ ಬೇರೆದಾರಿ ಕಾಣದ ಕಳಿಂಗಾಳು ಗೋರಕ್ಷನಾಥನನ್ನೇ ತಬಲ ಬಾರಿಸುವಂತೆ ಕೇಳಿಕೊಂಡಳು. ಈ ಸದವಕಾಶವನ್ನು ಉಪಯೋಗಿಸಿಕೊಂಡ ಗೋರಕ್ಷನಾಥನು "ಎಚ್ಚರಾಗಿರಿ, ಬಂದಿಹನು ಗೋರಖನು" (ಜಾಗೋ ಗೋರಖನಾಥ आगया) ಎಂದು ತಬಲಾದಿಂದಲೇ ಧ್ವನಿ ಯನ್ನು ಹೊರಡಿಸಿದನು ಮತ್ತು ತನ್ನ ಗುರುವಿಗೆ ಚೈತನ್ಯವನ್ನು ತುಂಬಿದನು. ರಾಣಿಯು

ಅನೇಕ ತೆರನಾಗಿ ಗೋರಕ್ಷನಾಥನನ್ನು ವಶಪಡಿಸಕೊಳ್ಳಲು ಪ್ರಯತ್ನಿಸಿದಳು. ಇತ್ತ ಮತ್ಸೇಂದ್ರನೂ ಸಹ ಅಲ್ಲಿಯ ಸುಖೋಪಭೋಗಗಳನ್ನು ಬಿಟ್ಟು ಬೇರೆ ಕಡೆ ಹೋಗಲು ಬಹಳ ಪ್ರಯಾಸತೊಡಗಿದನು. ಆದರೂ ಕೊನೆಗೂ ಗೋರಕ್ಷನಾಥನು ಕ್ಷಣಭಂಗುವ ವಾದ ವಿಷಯ ಸುಖದಿಂದ ಅವನನ್ನು ಮುಕ್ತ ಗೊಳಿಸುವಲ್ಲಿ ಸಫಲನಾದನು. ಇದೇ ಸಮಯದಲ್ಲೇ ಮತ್ಸೇಂದ್ರನಾಥನಿಗೆ ಪಾಶುರಾಮ ಮತ್ತು ಮನೀರಾಮ ಎಂಬ ಇಬ್ಬರು ಪುತ್ರರ ಜನನನಾಯಿತು. ಇವರಿಬ್ಬರೂ ಮುಂದೆ ದೊಡ್ಡ ಸಿದ್ಧರಾದರು. ಈ ಕಥೆಯನ್ನೇ 'ಸುಧಾಕರ ಚಂದ್ರಿಕಾ'ದಲ್ಲಿ ಸಂಕ್ಷಿಪ್ತರೂಪದಲ್ಲಿ ಕೊಡಲಾಗಿದೆ. ಸುಧಾಕರ ಚಂದ್ರಿ ಕಾದಲ್ಲಿ ಉಕ್ತವಾದಂತೆ ಗೋರಕ್ಷನಾಥನು "ಎಚ್ಚರಾಗು ಮಛೇಂದರ, ಗೋರಖನು ಬಂದಿಹನು. (ಜಾಗೋ ಮಛಂದರ ಗೋರಖ ಆಗಯಾ)" ಎಂದು ತಬಲೆಯ ಧ್ವನಿ ಮಾಡಿದ್ದನು.

5. **ನಾಥಚರಿತ್ರೆಯ ಕಥೆ** :-ಪಂಡಿತ ವಿಶ್ವೇಶ್ವರನಾಥರು ಸರದರ್ ಮ್ಯೂಜಿಯಂ, ಜೋಧಪುರದಲ್ಲಿ 1937ರಲ್ಲಿ ನಾಥಚರಿತ್ರೆ, 'ನಾಥಪುರಾಣ' ಮತ್ತು 'ಮೇಘ ಮಾಲಾ' ಎಂಬ ಹೆಸರಿನ ಪುಸ್ತಕಗಳನ್ನು ಆಧಾರವಾಗಿಟ್ಟುಕೊಂಡು ತೆಗೆದ ಚಿತ್ರ ಗಳಿಂದ ನಾಥ ಸಂಪ್ರದಾಯದ ಕೆಲವೊಂದು ಕಥೆಗಳನ್ನು ಸಂಗ್ರಹಿಸಿದ್ದಾರೆ. ನಾಥ ಚರಿತ್ರೆ ಎಂಬ ಹೆಸರಿನ ಗ್ರಂಥವನ್ನು ಇಂದಿನ ಸುಮಾರು 100-125 ವರ್ಷಗಳ ಮುಂಚೆ ಮಾನಸಿಂಹ ಮಹಾರಾಜನ ಸಮಯದಲ್ಲಿ ಸಂಗ್ರಹಿಸಲಾಗಿತ್ತು. ಈ ಗ್ರಂಥದ ಮೇಲೆ ಮಹಾರಾಜ ಮಾನಸಿಂಗನ ಒಂದು ಸಂಸ್ಕೃತಿ ಟೀಕೆಯು ಉಪ ಲಬ್ಧವಾಗಿತ್ತು. ಮೊದಲ ಎರಡೂ ಗ್ರಂಥಗಳು ಮಾರವಾಡೀ ಭಾಷೆಯಲ್ಲೂ ಮತ್ತು ಕೊನೆಯದು ಸಂಸ್ಕೃತದಲ್ಲೂ ಇವೆ. ಈ ಸಂಗ್ರಹದ ಮೇಲಿಂದ ಮತ್ಸೇಂದ್ರ ನಾಥನ ಕುರಿತಾದ ಎರಡು ಕಥೆಗಳನ್ನು ಉಲ್ಲೇಖಿಸಲಾಗುತ್ತಿದೆ.

1. ಒಮ್ಮೆ ಮತ್ಸೇಂದ್ರನು ಪರ್ಯಟನೆಗಾಗಿ ಹೊರಟು ಮಾರ್ಗಮಧ್ಯದಲ್ಲಿ ಎದುರಾದ ಒಂದು ನಗರವನ್ನು ಪ್ರವೇಶಿಸಿದನು. ಅದೇ ಸಮಯದಲ್ಲಿ ಅಲ್ಲಿಯ ರಾಜನು ಮರಣಹೊಂದಿದನು ಮತ್ತು ಅವನ ಸೇವಕರು ಆ ರಾಜನ ಮೃತ ಶರೀರವನ್ನು ಅಗ್ನಿ ಸಂಸ್ಕಾರಮಾಡಲು ಸ್ಮಶಾನಕ್ಕೆ ಕೊಂಡೊಯ್ಯುತ್ತಿದ್ದರು. ಆಗ ಮತ್ಸೇಂದ್ರನು ತನ್ನ ಶರೀರ ರಕ್ಷಣೆಯ ಜವಾಬ್ದಾರಿಯನ್ನು ತನ್ನ ಶಿಷ್ಯರಿಗೆ ಒಪ್ಪಿಸಿ, 'ಪರಕಾಯ ಪ್ರವೇಶ' ವಿದ್ಯೆಯ ಬಲದಿಂದ ಮೃತರಾಜನ ಶರೀರದಲ್ಲಿ ಪ್ರವೇಶಿಸಿದನು. ಇದರಿಂದ ರಾಜನು ಜೀವಂತನಾದನು. ಇದರಿಂದ ಅವನ ಸೇವಕರೆಲ್ಲರೂ ಹರ್ಷಿತರಾದರು. ಈ ರೀತಿಯಾಗಿ ರಾಜನ ಶರೀರದಲ್ಲಿ ವಾಸ ಮಾಡಿ ಮತ್ಸೇಂದ್ರನಾಥನು ಬಹಳ ಕಾಲದವರೆಗೆ ಭೋಗವಿಲಾಸದ ಆನಂದವನ್ನು ಪಡೆದನು. ಏತ್ಮಧ್ಯೆ ಯಾವುದೋ ವಿಶೇಷದಿನದ ಕಾರಣದಿಂದಾಗಿ ಹರಿದ್ವಾರ ದಲ್ಲಿ ಯೋಗಿಗಳು ಜಮಾಯಿಸಿದರು. ಅಲ್ಲಿ ಮತ್ಸೇಂದ್ರನಾಥನ ಶಿಷ್ಯ ಗೋರಕ್ಷ

ನಾಥ ಮತ್ತು ಕನಿಪಾವರವರ ನಡುವೆ ವಿವಾದವೇರ್ಪಟ್ಟಿತು. ಆಗ ಕನಿಪಾವನು ಗೋರಕ್ಷನಿಗೆ ಆತನ ಗುರು ಮತ್ಸೇಂದ್ರನಾಥನು ಭೋಗವಿಲಾಸದಲ್ಲಿ ಸಿಲುಕಿದ್ದನ್ನು ಸೂಚಿಸಿದನು. ಇದನ್ನು ತಿಳಿದ ಗೋರಕ್ಷನಾಥನು ರಾಜನ ಶರೀರದಲ್ಲಿ ನೆಲೆಸಿದ ಮತ್ಸೇಂದ್ರನ ಹತ್ತಿರ ಹೋಗಿ ಆ ರಾಜನ ಶರೀರದಿಂದ ಹೊರಬರಲು ಒಪ್ಪಿಸಿದನು. ಈ ಬೆಳವಣಿಗೆಯನ್ನು ಕಂಡ ವಿಮಲಾದೇವಿಯ ಅವತಾರವಾಗಿದ್ದ ರಾಣಿ ಪರಿಮಳಾದೇವಿಯು ಚಿಂತೆಗೊಳಪಟ್ಟಳು. ಆಗ ಮತ್ಸೇಂದ್ರನು ರಾಣಿಗೆ ತಾನು ಪುನಃ ಭೇಟಿ ಯಾಗುವುದಾಗಿ ಮಾತುಕೊಟ್ಟನು. ಮತ್ಸೇಂದ್ರ ಮತ್ತು ಗೋರಕ್ಷರ ನಿರ್ಗಮನದ ನಂತರ ರಾಣಿಯು ಅಗ್ನಿ ಪ್ರವೇಶಿಸಿ ತನ್ನ ಶರೀರ ತ್ಯಾಗ ಮಾಡಿಕೊಂಡಳು ಮತ್ತು ಅಲ್ಪಕಾಲದಲ್ಲಿಯೇ ಒಬ್ಬ ರಾಜನ ಮಗಳಾಗಿ ಜಯಂತೀ ಎಂಬ ಹೆಸರಿನಿಂದ ಹುಟ್ಟಿದಳು. ಇವಳು ದೊಡ್ಡವಳಾಗುತ್ತಲೇ ಪೂರ್ವಪ್ರತಿಜ್ಞಾನುಸಾರ ಮತ್ಸೇಂದ್ರನು ಅವಳೊಂದಿಗೆ ವಿವಾಹವಾಗಿ ಕದಲೀ ವನದಲ್ಲಿ ಭೋಗವಿಲಾಸದಲ್ಲಿ ತೊಡಗಿದನು. ದೇವತೆಗಳು ಮತ್ತು ಸಿದ್ಧರುಗಳು ಅಲ್ಲಿಗೆ ತೆರಳಿ ಅವನನ್ನು ಸ್ತುತಿಸಿದರು. ಗೋರಕ್ಷನು ಪ್ರತ್ಯಕ್ಷವಾಗಿ ಮತ್ಸೇಂದ್ರ ಮತ್ತು ಜಯಂತಿಯರಿಗೆ ಆಶೀರ್ವದಿಸಿದನು.

2. ಒಮ್ಮೆ ಮತ್ಸೇಂದ್ರನಾಥನು ಕಾಮರೂಪವೆಂಬ ದೇಶಕ್ಕೆ ತೆರಳಿ ತಪಸ್ಸು ಮಾಡ ತೊಡಗಿದನು. ಆದರೆ ಅಲ್ಲಿಯ ರಾಜನ ಮರಣಾನಂತರ ಆ ರಾಜನ ಶರೀರವನ್ನು ಪ್ರವೇಶಿಸಿ ರಾಜನ ಹೆಂಡತಿಯಾಗಿದ್ದ ಮಂಗಳಾ ಎಂಬ ರಾಣಿಯೊಂದಿಗೆ ವಿಹರಿಸಿದನು. ಇಷ್ಟೇ ಅಲ್ಲದೆ ರಾಜನ ಇನ್ನಿತರ ರಾಣಿಯರೊಂದಿಗೆ ವಿಹರಿಸ ತೊಡಗಿದನು. ಕಾಲಕ್ರಮದಲ್ಲಿ ಆತನಿಗೆ ಇಬ್ಬರು ಮಕ್ಕಳಾದರು. ಸಮಯ ಕಳೆದಂತೆ ಮಂಗಳಾ ಇತ್ಯಾದಿ ರಾಣಿಯರು ಮತ್ಸೇಂದ್ರನಾಥನ ನಿಜಸ್ವರೂಪವನ್ನು ತಿಳಿದರು. ಅಂತ್ಯದಲ್ಲಿ ಗೋರಕ್ಷನಾಥನು ಅಲ್ಲಿಗೆ ತಲುಪಿ ತನ್ನ ಗುರುವಾದ ಮತ್ಸೇಂದ್ರನನ್ನು ಮತ್ತು ಆತನ ಇಬ್ಬರು ಪುತ್ರರನ್ನು ಅಲ್ಲಿಂದ ಕರೆದುಕೊಂಡು ಹೊರಟನು. ಆದರೆ ಬಹಳ ದಿವಸಗಳವರೆಗೆ ಭೋಗಾಸಕ್ತನಾಗಿದ್ದ ಮತ್ಸೇಂದ್ರನಿಗೆ ಸುವರ್ಣ ಮತ್ತು ರತ್ನಾದಿಗಳ ಮೇಲಿನ ಆಸೆ ಕಡಿಮೆಯಾಗಿರಲಿಲ್ಲ. ಇದನ್ನರಿತ ಗೋರಕ್ಷನು ಮಾರ್ಗಮಧ್ಯದಲ್ಲಿರುವ ಒಂದು ಪರ್ವತದ ಶರೀರವನ್ನು ತನ್ನ ಮಂತ್ರ ಜಲದ ಒಂದು ದನಿಯಿಂದ ಬಂಗಾರವನ್ನಾಗಿಸಿದನು. ತನ್ನ ಶಿಷ್ಯನ ಈ ಸಿದ್ಧಶಕ್ತಿಯನ್ನು ಕಂಡ ಮತ್ಸೇಂದ್ರನು ತನ್ನ ಕೊರಳಿನ ಆಭರಣ ಮುಂತಾದವುಗಳನ್ನು ತೆಗೆದು ಬಿಸುಟನು. ಸುವರ್ಣವನ್ನು ಕಲಹದ ಮೂಲವೆಂದು ತಿಳಿದು ಗೋರಕ್ಷನು ಮಂತ್ರಜಲದಿಂದ ಆ ಸುವರ್ಣ ಪರ್ವತವನ್ನು ಸ್ಫಟಿಕವನ್ನಾಗಿಸಿದನು. ಅದರಿಂದಲೂ ಅವನ ಮನಸ್ಸಿಗೆ ಸಂತೋಷವೆನಿಸಲಿಲ್ಲ. ಆದ್ದರಿಂದ ಮೂರನೇ ಸಲ ಮಂತ್ರಜಲದಿಂದ ಅವನ್ನು ಕಪ್ಪು ಮಣ್ಣಾಗಿಸಿದನು.

ಕಾಲಕಳೆದಂತೆ ಮತ್ಸ್ಯೇಂದ್ರನು ಒಂದು ದಿನ ತನ್ನ ಇಬ್ಬರೂ ಮಕ್ಕಳನ್ನು ಹತ್ತಿರದ ಒಂದು ಪಟ್ಟಣಕ್ಕೆ ಹೋಗಿ ಭಿಕ್ಷೆ ಬೇಡಿ ಬರುವಂತೆ ಕಳುಹಿಸಿದನು. ಅವರಲ್ಲಿ ಒಬ್ಬನಿಗೆ ಪವಿತ್ರವಾದ ಭಿಕ್ಷೆ ದೊರೆಯದ ಕಾರಣ ಬರಿಗೈಯಲ್ಲಿಯೇ ಹಿಂದಿರುಗಿದನು. ಇನ್ನೊಬ್ಬ ಚಮ್ಮಾರನ ಮನೆಯಿಂದ ಉತ್ತಮ ಭೋಜ್ಯ ಪದಾರ್ಥಗಳನ್ನು ತಂದನು. ಇದರಿಂದ ಸಿಟ್ಟಿಗೆದ್ದ ಮತ್ಸ್ಯೇಂದ್ರನು ಮೊದಲನೆಯವನಿಗೆ ಪಾರ್ಶ್ವನಾಥನಾಗುವಂತೆ ಮತ್ತು ಇನ್ನೊಬ್ಬನಿಗೆ ಶ್ವೇತಾಂಬರಿ ಜೈನನಾಗುವಂತೆಯೂ ಶಪಿಸಿದನು. ಇದಾದನಂತರ ಅವರೆಲ್ಲರೂ ಕದಲೀವನಕ್ಕೆ ತೆರಳಿದರು. ಅಲ್ಲಿ ಮತ್ಸ್ಯೇಂದ್ರ ಮತ್ತು ಗೋರಕ್ಷರ ನಡುವೆ ಅನೇಕ ವಿಷಯದ ಮೇಲೆ ಚರ್ಚೆ ನಡೆಯುತ್ತಿರುತ್ತಿತ್ತು.

ಉಪಸಂಹಾರ

ಗೋರಕ್ಷನಾಥ ಮತ್ತು ಮತ್ಸ್ಯೇಂದ್ರನಾಥರ ವಿಷಯವಾಗಿ ಈ ಎಲ್ಲ ಕಥೆಗಳ ಪರಿ ಶೀಲನೆಯಿಂದ ಕೆಲವೊಂದು ಮುಖ್ಯ ವಿಷಯಗಳನ್ನು ನಾವು ಅರಿಯಬಹುದಾಗಿದೆ. ಮೊಟ್ಟ ಮೊದಲನೆಯವನಾಗಿ ಮತ್ಸ್ಯೇಂದ್ರನಾಥ ಮತ್ತು ಜಾಲಂಧರನಾಥ ಇಬ್ಬರೂ ಸಮ ಕಾಲೀನರಾಗಿದ್ದರು. ಎರಡನೇದಾಗಿ ಮತ್ಸ್ಯೇಂದ್ರನಾಥನು ಗೋರಕ್ಷನ ಗುರುವಾಗಿದ್ದನು ಮತ್ತು ಜಾಲಂಧರನಾಥನು ಕಾನಪಾ ಅಥವಾ ಕೃಷ್ಣಪಾದನ ಗುರುವಾಗಿದ್ದನು. ಮೂರನೆ ಯದಾಗಿ ಮತ್ಸ್ಯೇಂದ್ರನಾಥನು ಯೋಗದ ಪ್ರವರ್ತಕನಾದಾಗ್ಯೂ ಸಂಪರ್ಕ ವಶದಿಂದ ಸ್ತ್ರೀಯರ ಸಹವಾಸವನ್ನು ಮಾಡಬೇಕಾಯಿತು ಬಹುಶಃ ಇದೊಂದು ವಾಮಾಚರ ಸಾಧನೆಯಾಗಿರಬಹುದು. ನಾಲ್ಕನೆಯದಾಗಿ ಪ್ರಾರಂಭದಿಂದಲೇ ಜಾಲಂಧರನಾಥ ಮತ್ತು ಕಾನಪಾರ ಸಾಧನೆಯ ಪದ್ಧತಿಯು ಮತ್ಸ್ಯೇಂದ್ರನಾಥ ಮತ್ತು ಗೋರಕ್ಷನಾಥರ ಸಾಧನಾ ಪದ್ಧತಿಗಿಂತ ಭಿನ್ನವಾಗಿತ್ತು. ಯಾವುದಾದರೂ ಒಬ್ಬ ಯೋಗಿಯ ಕಾಲದ ಬಗ್ಗೆ ತಿಳಿದರೆ ನಮಗೆ ಇನ್ನುಳಿದ ಯೋಗಿಗಳ ಕಾಲಗಣನೆಗೆ ಅನುಕೂಲವಾಗುತ್ತದೆ. ಕಾಲ ಗಣನೆಗೆ ಅನೇಕ ತರ್ಕ ಮಾಡಬಹುದು. ಅವುಗಳನ್ನು ಈ ಕೆಳಗಿನಂತೆ ಒಂದೊದಾಗಿ ಚರ್ಚಿಸೋಣ.

1. ಮೊಟ್ಟಮೊದಲನೆಯದಾಗಿ ಮತ್ಸ್ಯೇಂದ್ರನಾಥನಿಂದ ಬರೆಯಲ್ಪಟ್ಟ ಕಾಲಜ್ಞಾನ ನಿರ್ಣಯ ಗ್ರಂಥದ ಲಿಪಿಕಾಲವನ್ನು ಕಂಡುಕೊಂಡಿದ್ದರಿಂದ ಮತ್ಸ್ಯೇಂದ್ರನಾಥನು 11ನೇ ಶತಮಾನಕ್ಕಿಂತಲೂ ಪೂರ್ವದವನು ಎಂಬುದು ಸ್ಪಷ್ಟವಾಗುತ್ತದೆ.

2. ಈಗಾಗಲೇ ಮೇಲೆ ನಾವು ನೋಡಿದಂತೆ ಸುಪ್ರಸಿದ್ಧ ಕಾಶ್ಮೀರೀ ಆಚಾರ್ಯನಾದ ಅಭಿನವಗುಪ್ತನು ತನ್ನ ಗ್ರಂಥವಾದ 'ತಂತ್ರಾಲೋಕ'ದಲ್ಲಿ 'ಮಚ್ಛಂದ ವಿಭು'ವಿಗೆ ನಮಸ್ಕರಿಸಿದನು. ಈ ಮಚ್ಛರದ ವಿಭುವು ಮತ್ಸ್ಯೇಂದ್ರನಾಥನೇ ಎಂಬುದು ನಿಶ್ಚಿತ. ಅಭಿನವಗುಪ್ತನ ಸಮಯವನ್ನು ನಾವು ನಿಶ್ಚಿತವಾಗಿ ಹೇಳಬಹುದು.

ಅವನು "ಈಶ್ವರ ಪ್ರತ್ಯಭಿಜ್ಞಾ ಕೀ ಬೃಹತೀ ವೃತ್ತಿ" ಎಂಬ ಗ್ರಂಥವನ್ನು ಕ್ರಿ.ಶ. 1015 ರಲ್ಲಿಯೂ ಮತ್ತು 'ಕ್ರಮಸ್ತೋತ್ರ' ಎಂಬ ಗ್ರಂಥವನ್ನು ಕ್ರಿ.ಶ. 991 ರಲ್ಲಿಯೂ ರಚಿಸಿದ್ದನು. ಇದರಿಂದ ಅಭಿನವಗುಪ್ತನು ಕ್ರಿ.ಶ. 10ನೇ ಶತಮಾನದ ಕೊನೆಯಲ್ಲಿ ಮತ್ತು 11ನೇ ಶತಮಾನದ ಆದಿಯಲ್ಲಿ ಜೀವಿಸಿದ್ದನು ಎನ್ನುವುದು ತಿಳಿದುಬರುತ್ತದೆ. ಇದರಲ್ಲಿ ಮತೇಂದ್ರನ ಹೆಸರು ಉಲ್ಲೇಖಿತವಾದ್ದರಿಂದ ಮತ್ಸ್ಯೇಂದ್ರನು ಇದಕ್ಕೂ ಮೊದಲೇ ಜೀವಿಸಿದ್ದನು ಎಂದು ಅನುಮಾನಿಸಬಹುದು.

3. ಪಂಡಿತ ರಾಹುಲ ಸಾಂಕೃತ್ಯಾಯನನು 'ಗಂಗಾ ಕೇ ಪುರಾತತ್ವಾಂಕ'ದಲ್ಲಿ 84 ವಜ್ರ ಯಾನಿ ಸಿದ್ಧರ ಪಟ್ಟಿಯನ್ನು ಪ್ರಕಾಶಗೊಳಿಸಿರುವನು. ಈ ಪಟ್ಟಿಯ ಪರಿಶೀಲನೆಯಿಂದ ತಿಳಿದುಬರುವ ಅಂಶವೇನೆಂದರೆ ಮೀನಪಾ ಎಂಬ ಹೆಸರಿನ ಸಿದ್ಧನನ್ನು ಟಿಬೇಟಿ ಪರಂಪರೆಯಲ್ಲಿ ಮತ್ಸ್ಯೇಂದ್ರನ ತಂದೆಯೆಂದು ಕರೆಯ ಲಾಗಿದೆ. ಆದರೆ ವಾಸ್ತವಿಕವಾಗಿ ನೋಡಿದಾಗ ಅವನು ಮತ್ಸ್ಯೇಂದ್ರನಾಥನಿಂದ ಭಿನ್ನನಾಗಿದ್ದಾನೆ ಮತ್ತು ದೇವಪಾಲ ಎಂಬ ರಾಜನ ಕಾಲದಲ್ಲಿಯೇ ಆಗಿ ಹೋಗಿದ್ದಾನೆ. ದೇವಪಾಲನೆಯ ರಾಜನು ಕ್ರಿ.ಶ. 809-849 ರ ಅವಧಿಯಲ್ಲಿ ರಾಜ್ಯವನ್ನಾಳುತ್ತಿದ್ದನು. ಇದರಿಂದ ಮತ್ಸ್ಯೇಂದ್ರನಾಥನು 9ನೇ ಶತಮಾನದ ಮಧ್ಯ ಭಾಗದಲ್ಲಿ ಮತ್ತು ಹೆಚ್ಚೆಂದರೆ 9ನೇ ಶತಮಾನದ ಅಂತ್ಯ ಭಾಗದವರೆಗೆ ಜೀವಿಸಿದ್ದನು ಎಂಬುದು ವಿಧಿತವಾಗುವುದು.

4. ಗೋವಿಂದ್ರಚಂದ್ರ ಅಥವಾ ಗೋಪಿಚಂದ್ರನು ಜಾಲಂಧರಪಾದನೊಂದಿಗೆ ಸಂಬಂಧ ಹೊಂದಿದ್ದನೆಂದು ಹೇಳಲಾಗುತ್ತದೆ. ಅವನು ಕಾಲಪಾನ ಶಿಷ್ಯ ನಾದ್ದರಿಂದ ಜಾಲಂಧರಪಾದನ ಮೂರನೇ ಪೀಳಿಗೆಯಲ್ಲಿ ಬರುತ್ತಾನೆ. ಇತ್ತ ತಿರುಮಲಯನ ಶೈಲಿಲಿಪಿಯಿಂದ ತಿಳಿದುಬರುವ ಅಂಶವೇನೆಂದರೆ ದಕ್ಷಿಣದ ರಾಜನಾದ ರಾಜೇಂದ್ರಚೋಳನು ಮಾಣಿಕಚಂದ್ರನ ಪುತ್ರ ಗೋವಿಂದ ಚಂದ್ರನನ್ನು ಸೋಲಿಸಿದ್ದನು. ಬಂಗಾಳದಲ್ಲಿ ದೊರೆತ 'ಗೋವಿಂದಚಂದೇರ ಗಾನ 'ಎಂಬ ಹೆಸರಿನ ಗ್ರಂಥಾನುಸಾರವೂ ಸಹ ಗೋವಿಂದ್ರಚಂದ್ರನು ಯಾವುದೋ ದಕ್ಷಿಣದ ರಾಜನೊಂದಿಗೆ ಯುದ್ಧ ಮಾಡಿದ ವರ್ಣನೆಯನ್ನು ಹೇಳುತ್ತದೆ. ರಾಜೇಂದ್ರ ಚೋಳನ ಸಮಯ ಕ್ರಿ.ಶ. 1063 - 1112 ಆಗಿದೆ. ಇದರಿಂದ ಗೋವಿಂದ್ರಚಂದ್ರನು 11ನೇ ಶತಮಾನದ ಮಧ್ಯಭಾಗದಲ್ಲಿ ಜೀವಿಸಿದ್ದನು ಎಂದು ಊಹಿಸಬಹುದು. ಬಹುಶಃ ಒಂದು ವೇಳೆ ಜಾಲಂಧರ ಪಾದನು ಅವನಿಗಿಂತ ನೂರು ವರ್ಷ ಪೂರ್ವದವನಾಗಿದ್ದರೂ ಸಹ ಅವನ ಸಮಯ 10ನೇ ಶತಮಾನದ ಮಧ್ಯಭಾಗವೆಂದು ನಿರ್ಣಯಿಸಬಹುದು. ಮತ್ಸ್ಯೇಂದ್ರನಾಥನ ಸಮಯ ಇನ್ನೂ ಮುಂಚೆ ಎಂದು ನಿರ್ಣಯಿಸಲಾಗಿದೆ.

ಜಾಲಂಧರಪಾದನು ಅವನ ಸಮಕಾಲೀನನಾಗಿದ್ದನು . ಈ ತೆರನಾಗಿ ಅವನ ಕುರಿತಾಗಿ ಎಷ್ಟೇ ಕಲ್ಪನೆ ಮಾಡದರೂ ಸಹ ನಿಜಸಂಗತಿಯನ್ನು ನಿರ್ಣಯಿಸುವುದು ಅಸಂಭವವಾಗಿದೆ.

5. ವಜ್ರಯಾನಿ ಸಿದ್ಧ ಕಣ್ಹಪಾನು ಸ್ವಯಂರಚಿತ ಗೀತೆಯೊಂದರಲ್ಲಿ ಜಾಲಂಧರ ಪಾದನ ಹೆಸರನ್ನು ಉಲ್ಲೇಖಿಸಿದ್ದಾನೆ. ಟಿಬೇಟಿಯನ್ ಪರಂಪರೆಯ ಅನುಸಾರ ಇವನು ದೇವಪಾಲ ರಾಜನ (809-849) ಸಮಕಾಲೀನನಾಗಿದ್ದನು. ಇದರಿಂದ ಜಾಲಂಧರಪಾದನ ಸಮಯ ಇವನಿಗಿಂತ ಸ್ವಲ್ಪ ಪೂರ್ಣಕಾಲ ಎನ್ನಬಹುದು.

6. ಕಂಥಡೀ ಎಂಬ ಹೆಸರಿನ ಒಬ್ಬ ಸಿದ್ಧನೊಂದಿಗೆ ಗೋರಕ್ಷನಾಥನ ಸಂಬಂಧ ವಿರುವುದನ್ನು ಹೇಳಲಾಗುತ್ತದೆ. 'ಪ್ರಬಂಧ ಚಿಂತಾಮಣಿ'ಯಲ್ಲಿ ಬರುವ ಒಂದು ಕಥೆಯ ಪ್ರಕಾರ ಚಾಲುಕ್ಯರಾಜನಾದ ಮೂಲದೇವನು ಮೂಲೇಶ್ವರ ಎಂಬ ಹೆಸರಿನ ಶಿವಮಂದಿರವನ್ನು ಕಟ್ಟಿಸಿದ್ದನು. ಸೋಮನಾಥನು ರಾಜನ ನಿತ್ಯ - ನಿಯಮಿತ ಪೂಜೆಯಿಂದ ಸಂತುಷ್ಟನಾಗಿ ಅಣಹಿಲ್ಲಪುರದಲ್ಲಿ ಅವತರಿಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದನು. ಇದರ ಫಲವಾಗಿ ರಾಜನು ಅಲ್ಲಿ ತ್ರಿಪುರುಷ ಪ್ರಸಾದ ಎಂಬ ಹೆಸರಿನ ಮಂದಿರವನ್ನು ಕಟ್ಟಿಸಿದನು. ಆ ವ್ಯವಸ್ಥೆಗಾಗಿ ರಾಜನು ಕಂಥಡಿ ಎಂಬ ಹೆಸಿರನ ಶೈವಸಿದ್ಧನಲ್ಲಿ ಪ್ರಾರ್ಥನೆ ಮಾಡಿದನು. ಆ ಸಿದ್ಧನನ್ನು ಭೆಟ್ಟಿಯಾಗಲು ಹೋದಾಗ ಆ ಸಿದ್ಧನಿಗೆ ಜ್ವರ ತಗುಲಿತ್ತು. ಆದರೆ ಅವನು ಆ ಜ್ವರವನ್ನು ಬಟ್ಟೆಯಲ್ಲಿ ಸಂಗ್ರಹಿಸಿದ್ದನು. ಬಟ್ಟೆಯು ಅಲ್ಲಾಡಲಾರಂಭಿಸಿತು. ರಾಜನು ಕಾರಣಕೇಳಲಾಗಿ ಅವನು ಆ ಚಿಂದಿಬಟ್ಟೆಯಲ್ಲಿ ಆ ಜ್ವರವನ್ನು ಸಂಗ್ರಹಿಸಿರುವುದಾಗಿ ಹೇಳಿದನು. ನಂತರ ರಾಜನು ಆ ನಿರ್ಲೋಭಿ ತಪಸ್ಸಿಗೆ ಬಹಳ ಪ್ರಯಾಸಪಟ್ಟು ಮಂದಿರದ ವ್ಯವಸ್ಥೆ ಮಾಡಿದನು. ಈ ಕಥೆಯಲ್ಲಿ ಬರುವ ಈ ಸಿದ್ಧನ ಎಲ್ಲ ಲಕ್ಷಣಗಳೂ ನಾಥಪಂಥದ ಯೋಗಿಯದೇ ಆಗಿದೆ. ಆದ್ದರಿಂದ ಈ ಕಂಥಡಿ ಎಂಬ ಸಿದ್ಧನು ಗೋರಖನಾಥನ ಶಿಷ್ಯನೆಂದು ನಿಶ್ಚಿತವಾಗುತ್ತದೆ. 'ಪ್ರಬಂಧ ಚಿಂತಾಮಣಿ'ಯ ಎಲ್ಲ ಗ್ರಂಥ ಸಂಸ್ಕರಣಗಳಲ್ಲಿ ಮೂಲ ರಾಜನು ಸಂ.993ರ ಆಷಾಢ ಪೂರ್ಣಿಮೆಯಂದು ಸಿಂಹಾಸೇನವನ್ನೇರಿದನು ಎಂಬ ಉಲ್ಲೇಖವು ಸಿಗುತ್ತದೆ. ಈ ಗ್ರಂಥದ ಮೇಲಿಂದ ನಾವು ಊಹಿಸುವ ಕಾಲವು ಪೂರ್ವವರ್ತಿ ಪ್ರಮಾಣಗಳಿಂದ ನಿರ್ಧರಿಸಲ್ಪಟ್ಟ ಕಾಲಗಣನೆಗೆ ಪುಷ್ಟಿ ಒದಗಿಸುವುದು. ಗೋರಕ್ಷನಾಥ ಅಥವಾ ಮತ್ಸೇಂದ್ರನ ಕಾಲ ನಿರ್ಣಯಿಸುವಲ್ಲಿ ಇದೊಂದು ಐತಿಹಾಸಿಕ ಅಥವಾ ಅರ್ಧ ಐತಿಹಾಸಿಕ ಆಧಾರವಾಗಿದೆ. ಆದರೆ ಹೆಚ್ಚಾಗಿ ದಂತಕಥೆಗಳ ಮೇಲಿಂದ ಮತ್ತು ಸಾಂಪ್ರದಾಯಿಕ ಪರಂಪರೆಯ ಮತ್ತು ಸಾಂಪ್ರದಾಯಿಕ ಪಂರಪರೆಯ ಆಧಾರದ ಮೇಲಿಂದಲೂ ಕಾಲ ನಿರ್ಣಯಿಸುವ

ಪ್ರಯತ್ನ ಮಾಡಲಾಗುತ್ತದೆ. ಬಹಳಷ್ಟು ಸಲ ಈ ದಂತಕಥೆಗಳಿಗೆ ಸಂಬಂಧಪಟ್ಟ ಐತಿಹಾಸಿಕ ವ್ಯಕ್ತಿಗಳ ಕಾಲ ತಿಳಿದಿರುವುದು ಕಂಡುಬರುತ್ತದೆ. ಬಹಳಷ್ಟು ಐತಿಹಾಸಿಕ ವ್ಯಕ್ತಿಗಳನ್ನು ಗೋರಕ್ಷನಾಥನ ಶಿಷ್ಯರೆಂದೇ ತಿಳಿಲಾಗುತ್ತದೆ. ಇಂಥ ಐತಿಹಾಸಿಕ ವ್ಯಕ್ತಿಗಳ ಸಹಾಯದಿಂದ ಗೋರಕ್ಷನಾಥನ ಜೀವಿತದ ಕಾಲವನ್ನು ಅಂದಾಜು ಮಾಡಬಹುದಾಗಿದೆ. ಬ್ರಿಗ್ಸ ಎನ್ನುವವನು ಈ ದಂತಕಥೆಗಳನ್ನಾಧರಿಸಿದ ಕಾಲವನ್ನು 4 ಉಪಭಾಗಗಳಲ್ಲಿ ವಿಂಗಡಿಸಲಾಗಿದೆ.

(i) ಕಬೀರ, ಗುರುನಾನಕ ಮೊದಲಾದವರೊಂದಿಗೆ ಗೋರಕ್ಷನಾಥನ ಸಂವಾದ ನಡೆನಡೆದಿತ್ತು ಎಂಬುದರ ಬಗ್ಗೆ ದಂತಕಥೆಗಳೂ ಇವೆ ಮತ್ತು ಅನೇಕ ಗ್ರಂಥಗಳೂ ಬರೆಯಲ್ಪಟ್ಟಿವೆ. ಈ ಕಾರಣದಿಂದಾಗಿ ನಾವು ಇವುಗಳ ಆಧಾರದ ಮೇಲಿಂದ ಗೋರಕ್ಷನಾಥನ ಕಾಲವನ್ನು ನಿರ್ಣಯಿಸಬಹುದು. ಅನೇಕ ಪಂಡಿತರು ಈ ರೀತಿಯಾಗಿಯೇ ಕಾಲ ನಿರ್ಣಯ ಮಾಡಿದ್ದಾರೆ. ಹಾಗಾದಾಗ ಅವನ ಕಾಲವು ಕ್ರಿ.ಪೂ. 14ನೇ ಶತಮಾನ ಅಥವಾ ಅದರ ಮಧ್ಯಭಾಗವೆಂದು ನಿರ್ಣಯಿಸಬಹುದು.

(ii) ಗೂಂಗಾದೇವಿಯ ಕಥೆ, ಪಶ್ಚಿಮದ ಕಡೆಯ ನಾಥರ ಅನುಶ್ರುತಿ , ಬಂಗಾಲದ ಶೈವ ಪರಂಪರೆ ಮತ್ತು ಧಾರ್ಮಿಕ ಪೂಜಾ ಸಂಪ್ರದಾಯ , ದಕ್ಷಿಣ ಪುರಾತತ್ತ್ವದ ಪ್ರಮಾಣ, ಜ್ಞಾನೇಶ್ವರರ ಪರಂಪರೆ ಇತ್ಯಾದಿಗಳನ್ನು ನಾವು ಪ್ರಮಾಣವೆಂದು ಗಣಿಸಿದ್ದಾದರೆ ಈತನ ಕಾಲ 1200 ಇಸ್ವಿಯ ಹತ್ತಿರವೇ ಹೋಗುವುದು. 13ನೇ ಶತಮಾನದಲ್ಲಿ ಗೋರಖಪುರದ ಮಠವನ್ನು ನಾಶಗೊಳಿಸಲಾದುದರ ಬಗ್ಗೆ ಐತಿಹಾಸಿಕ ಆಧಾರವಿದೆ. ಆದ್ದರಿಂದ ಗೋರಖನಾಥನು 1200 ಕ್ಕಿಂತ ಮೊದಲೇ ಆಗಿಹೋಗಿದ್ದಾನೆಂದು ನಿಶ್ಚಿತವಾಗಿ ಹೇಳಬಹುದು. ಈ ಘಟನೆ ನಡೆದ ಕನಿಷ್ಠ ಒಂದು ನೂರು ವರ್ಷ ಮೊದಲೇ ಈತನ ಕಾಲವನ್ನು ಊಹಿಸಬಹುದು.

(iii) ನೇಪಾಳದ ಶೈವ, ಬೌದ್ಧ ಪರಂಪರೆಯ ನರೇಂದ್ರದೇವ, ಉದಯಪುರದ ಬಾಪ್ಪಾ ರಾವಲ, ಉತ್ತರ ಪಶ್ಚಿಮದ ರಾಸಾಲೂ ಮತ್ತು ಹೋದೀ, ನೇಪಾಳದಲ್ಲಿ ಪೂರ್ವದಲ್ಲಿ ಶಂಕರಾಚಾರ್ಯರೊಂದಿಗೆ ಭೇಟಿಯಾದ ವಿಷಯವನ್ನು ಆಧರಿಸಿದ ಮೇಲೆ 8ನೇ ಶತಮಾನದಿಂದ ಹಿಡಿದು 9ನೇ ಶತಮಾನದವರೆಗೆ ಅವನ ಕಾಲವೆಂದು ಹೇಳಬಹುದು.

(iv) ಇನ್ನು ಕೆಲವೊಂದು ಪರಂಪರೆಗಳು ಇದಕ್ಕಿಂತಲೂ ಪೂರ್ವವರ್ತಿ ದಿನಾಂಕದ ಕಡೆಗೆ ತೋರಿಸುವುವು. ಬ್ರಿಗ್ಸನು 2ನೇ ಉಪಭಾಗದಲ್ಲಿ ಪ್ರಮಾಣವನ್ನಾಧರಿಸಿದ

ಕಾಲವನ್ನು ಒಪ್ಪುವವನಾದರೂ ಅದರ ಜೊತೆಗೆ ಅದೇ ಅಂತಿಮ ನಿರ್ಣಯ ವಲ್ಲ ಎಂಬ ಮಾತನ್ನು ಉಸುರುತ್ತಾನೆ. ಎಲ್ಲಿಯವರೆಗೆ ಅವನ ವಿಷಯವಾಗಿ ಮತ್ತ್ಯಾವ ಸರಿಯಾದ ಪ್ರಮಾಣ ಸಿಗುವುದಿಲ್ಲವೋ ಅಲ್ಲಿಯವರೆಗೆ ಗೋರಕ್ಷನ ವಿಷಯವಾಗಿ ಆತನು 1200 ಕ್ಕಿಂತ ಮೊದಲು ಬಹುಶಃ 11ನೇ ಶತಮಾನದ ಆರಂಭದಲ್ಲಿ ಪೂರ್ವಬಂಗಾಲದಲ್ಲಿ ಜನಿಸಿದ್ದನು ಎಂದಿಷ್ಟೇ ಅವರು ಹೇಳುತ್ತಾರೆ. ಮತ್ತು ತಾವು ಸೂಚಿಸಿದ ಕಾಲವು ಅನ್ಯಪ್ರಮಾಣಗಳಿಗೆ ಹೋಲಿಸಿದಾಗ ಹೇಗೆ ಯುಕ್ತಿಗತವಾದದ್ದು ಎಂಬುದನ್ನು ಸಹ ಅವರು ತಿಳಿಸುವುದಿಲ್ಲ.

ನಮಗೆ ಈ ಮೇಲಿನ ಪ್ರಮಾಣಗಳ ಆಧಾರದಿಂದ ನಾಥಪಂಥದ ಆದಿ ಪ್ರವರ್ತಕನ ಸಮಯ 9ನೇಯ ಶತಮಾನದ ಮಧ್ಯಭಾಗವೇ ಸರಿಯಾದುದು ಎಂದೆನಿಸುತ್ತದೆ. ಈ ಪಂಥದಲ್ಲಿ ಈತನ ಪೂರ್ವವರ್ತಿ ಸಿದ್ಧರು ಕೂಡಿಕೊಂಡಿದ್ದರಿಂದ ಗೋರಕ್ಷನ ವಿಷಯವಾಗಿ ವಿಭಿನ್ನ ದಂತಕಥೆಗಳು ಹುಟ್ಟಿಕೊಂಡವು. ಇವೆಲ್ಲವುಗಳನ್ನು ಐತಿಹಾಸಿಕ ಸತ್ಯವೆಂದು ತಿಳಿದಿದ್ದಾದರೆ ಕಾಲದ ವಿಷಯವಾಗಿ ವಿವಾದ ಹುಟ್ಟಿಕೊಳ್ಳು ತ್ತವೆ.

ಮತ್ಸೇಂದ್ರನು ತನ್ನ ಆಚಾರವನ್ನು ಬಿಟ್ಟು ಬೇರೆ ಆಚಾರದಲ್ಲಿ ಸಿಲುಕಿಕೊಂಡು ಕದಲೀದೇಶ ಅಥವಾ ಸ್ತ್ರಿದೇಶವೆಂಬುದು ಎಲ್ಲಿದೆ? 'ಮೀನಚೇತನ' ಮತ್ತು 'ಗೋರ ಕ್ಷವಿಜಯ' ಎಂಬ ಗ್ರಂಥಗಳಲ್ಲಿ ಅದನ್ನು ಕದಲೀ ದೇಶವೆಂದು ಕರೆದಿದೆ. 'ಯೋಗಿ ಸಂಪ್ರದಾಯಾವಿಷ್ಕೃತಿ'ಯಲ್ಲಿ 'ತ್ರಿಯಾದೇಶ'ವೆಂದರೆ ಸಿಂಹಳದ್ವೀಪವೆಂದು ಕರೆಯಲಾಗಿದೆ. ಸಿಂಹಳದ್ವೀಪವೆಂಬುದು ಗ್ರಂಥಕರ್ತನ ವ್ಯಾಖ್ಯಾನವಾಗಿದೆ. ಭರತ ಖಂಡದಲ್ಲಿ ಸ್ತ್ರೀದೇಶವೆಂಬ ಹೆಸರಿನ ಒಂದು ಸ್ತ್ರೀ ಪ್ರಧಾನ ದೇಶವು ಬಹಳ ಹಳೆಯ ಕಾಲದಲ್ಲಿ ಇದ್ದಿರಬಹುದು. ಇದನ್ನು ಗುರುತಿಸಲು ವಿಭಿನ್ನ ಸ್ಥಾನಗಳೊಂದಿಗೆ ಹೋಲಿಸಿ ನೋಡಲಾಗುತ್ತಿದೆ. ಹಿಮಾಲಯ ಪರ್ವತದ ಅಂಚಿನಲ್ಲಿ ಬ್ರಹ್ಮಪುರದ ಉತ್ತರದಿಕ್ಕಿ ನಲ್ಲಿರುವ ಇಂದಿನ ಗಡವಾಲ ಮತ್ತು ಕುಮಾಯೂ ಇವುಗಳ ನಡುವಿನ ಪ್ರದೇಶವೇ ಹಿಂದಿನ ಸ್ತ್ರೀರಾಜ್ಯವೆಂದು ಹೇಳಲಾಗುತ್ತದೆ. 7ನೇ ಶತಮಾನದಲ್ಲಿ ಇದನ್ನು 'ಸುವರ್ಣ - ಗೋತ್ರ' ವೆಂದು ಕರೆಯಲಾಗುತ್ತಿತ್ತು. ಈ ದೇಶದ ರಾಣಿಯಾದ ಪ್ರಮಿಲಾ ಎನ್ನುವವಳು ಅರ್ಜುನನೊಂದಿಗೆ ಯುದ್ಧಮಾಡಿದ್ದಳು (ಜೈಮಿನಿ ಭಾರತ, ಅಧ್ಯಾಯ 22).ಕೆಲವೊಮ್ಮೆ ಕುಲೂತ ದೇಶವನ್ನು ಸ್ತ್ರೀ ದೇಶವೆಂದು ಹೇಳಲಾಗುತ್ತಿದೆ. ಹುಯೆನ್ ತ್ಸಾಂಗನು ಸತಲಜ ನದಿಯ ಉಗಮ ಸ್ಥಾನದ ಹತ್ತಿರದ ಯಾವುದೋ ಒಂದು ಸ್ತ್ರೀ ದೇಶಕ್ಕೆ ಭೇಟಿ ನೀಡಿದ್ದನು. ಆಟ್‌ಕಿನ್ಸನು ಬರೆದು 'ಹಿಮಾಲಯನ್ ಡಿಸ್ಟಿಕ್ಟ್' ಎಂಬ ಗ್ರಂಥದಿಂದಲೂ ಈ ವಿಷಯಕ್ಕೆ ಪುಷ್ಟಿ ಸಿಗುತ್ತದೆ. ಇನ್ನು ಕೆಲವು ಪಂಡಿತರು ಕಾಮ ರೂಪ ಪ್ರವೇಶವನ್ನೇ ಸ್ತ್ರೀದೇಶವೆನ್ನುತ್ತಾರೆ. ಕೋರ್ ಎನ್ನುವವನು 'ವೆಸ್ಟರ್ನ್

ಟಿಬೇಟ್'(ಪುಟ. 338) ಎಂಬ ಗ್ರಂಥದಲ್ಲಿ ಟಿಬೇಟಿನ ಪೂರ್ವಗಡಿಯಲ್ಲಿ ಸ್ಥಾಪನೆಗೊಂಡ ಸ್ತ್ರೀರಾಜ್ಯವೊಂದನ್ನು ಉಲ್ಲೇಖಿಸಿದ್ದಾನೆ. ಅಲ್ಲಿಯ ಸಮಾಜವು ಸ್ತ್ರೀಯರನ್ನೇ ತಮ್ಮ ರಾಜ್ಯದ ಮುಂದಾಳುವನ್ನಾಗಿ ಆರಿಸುತ್ತವೆ. ಗಮನಿಸಬೇಕಾದ ಇನ್ನೊಂದು ಅಂಶವೇನೆಂದರೆ 'ಗೋರಕ್ಷವಿಜಯ'ದಲ್ಲಿ ಸ್ತ್ರೀದೇಶದ ಬದಲಾಗಿ ಕದಲೀ ದೇಶವೆಂದು ಉಲ್ಲೇಖಿಸಿದೆ. ಮಹಾಭಾರತದಲ್ಲಿ ಒಂದು ಕಡೆ ಕದಲೀವನದ ಉಲ್ಲೇಖವು ಬರುವುದು (ವನಪರ್ವ, ಅ. 146) ಈ ಕದಲೀದೇಶದಲ್ಲಿ ಸಪ್ತ ಚಿರಂಜೀವಿಗಳೆಂದು ಹೆಸರಾದ ಅಶ್ವತ್ಥಾಮ, ಬಲಿ, ವ್ಯಾಸ, ಹನುಮಾನ್, ವಿಭೀಷಣ , ಕೃಪಾಚಾರ್ಯ ಮತ್ತು ಪರಶುರಾಮ ಇವರುಗಳು ವಾಸಿಸುತ್ತಿದ್ದರು ಎಂದು ಹೇಳಲಾಗುತ್ತದೆ. ಕದಲೀ ದೇಶದ ನಂತರ 'ದುರಾರೋಹ' ಎಂಬ ಪರ್ವತವಿದ್ದು ಅಲ್ಲಿಗೆ ಸಿದ್ಧರುಗಳಷ್ಟೇ ಹೋಗಲು ಸಾಧ್ಯ ಎಂಬ ವಿಷಯವು ಹನುಮಾನ್ ಮತ್ತು ಭೀಮಸೇನರ ಸಂವಾದದಿಂದ ತಿಳಿದು ಬರುತ್ತದೆ. (ವನಪರ್ವ 146, 92-93). ಪಂಡಿತ ಸುಧಾಕರ ದ್ವಿವೇದಿಯವರು ಬರೆದ ಪ್ರಕಾರ ಡೆಹರಾಡೂನದಿಂದ ಹೃಷಿಕೇಶ ಬದರೀಕಾಶ್ರಮ ಮತ್ತು ಅದರ ಉತ್ತರದ ಹಿಮಾಲಯ ಪ್ರಾಂತ ಇವೆಲ್ಲವೂ ಕಜರೀವನ (ಕದಲೀವನ) ಎಂದು ಕರೆಯಲ್ಪಡುತ್ತದೆ. ಗೋಪಿಚಂದನು ಯೋಗಿಯಾಗಿ ಕದಲೀವನಕ್ಕೆ ಹೋದ ವಿಷಯ 'ಪದಮಾವತ' ಎಂಬ ಗ್ರಂಥದಲ್ಲಿ ಹೇಳಲಾಗಿದೆ.

ಈ ಎಲ್ಲ ಹೇಳಿಕೆಗಳಿಂದ ಸಿದ್ಧವಾಗುವ ಅಂಶವೇನೆಂದರೆ ಇದು ಹಿಮಾಲಯದ ತಟವರ್ತಿ ಪ್ರದೇಶದಲ್ಲಿರುವ ಕುಮಾಯೂ - ಗಢವಾಲ ಇವುಗಳ ನಡುವೆ ಬರುವ ಪ್ರದೇಶವಾಗಿದೆ. 'ಯೋಗಿ ಸಂಪ್ರದಾಯ ವಿಷ್ಕೃತಿ' ಎಂಬ ಗ್ರಂಥದಲ್ಲಿ ಬರುವ ಸಿದ್ಧ ಸಂಪ್ರದಾಯದಲ್ಲಿಯೂ ಸಹ ಹನುಮಂತನ ಹೆಸರು ಉಲ್ಲೇಖಿತವಾಗಿದೆ. ಹನುಮಾನನು ಕದಲೀ ವನದಲ್ಲಿಯೇ ವಾಸಿಸುವವನಾಗಿದ್ದಾನೆ. ಆದ್ದರಿಂದ ಈ ಕದಲೀ ವನವನ್ನು ಅಲ್ಲಿ ತಪ್ಪಾಗಿ ಸಿಂಹಲದ್ವೀಪ ಎಂದು ತಿಳಿಯಲಾಗಿದೆ. ಆದರೆ ತ್ರಿಯಾದೇಶ ಎಂದು ಹೇಳಿರುವುದರಿಂದ ಅಲ್ಲಿ ಸಂದೇಹಕ್ಕೆ ಹೆಚ್ಚಿನ ಅವಕಾಶವಿಲ್ಲ. ಇನ್ನೊಂದು ವಿಷಯವೇನೆಂದರೆ ಸ್ತ್ರೀದೇಶವೆನ್ನುವುದು 'ಕಾಮರೂಪ' ಆಗಿದೆ. 'ಕಾಮಸೂತ್ರದ ಜಯಮಂಗಲಾ ಟೀಕೆಯಲ್ಲ' ವಜ್ರಾಪತಂಸ ದೇಶದ ಪಶ್ಚಿಮದಲ್ಲಿ ಸ್ತ್ರೀರಾಜ್ಯವಿದೆ ಎಂದು ಉಲ್ಲೇಖಿಸಲಾಗಿದೆ. ಪಂಡಿತ ತನಸುಖರಾಮನು 'ನಗರಸರ್ವಸ್ವ' ಎನ್ನುವ ಬೌದ್ಧ ಕಾಮಶಾಸ್ತ್ರಿಯ ಗ್ರಂಥದ ಟಿಪ್ಪಣಿಯಲ್ಲಿ ಈ ಪ್ರದೇಶವು ಭೂತಸ್ಥಾನ ಅಂದರೆ ಭೂತಾನ್‌ದ ಸಮೀಪದಲ್ಲಿ ಇರುವುದಾಗಿ ಉಲ್ಲೇಖಿಸಿದ್ದಾನೆ. ಇದರ ಮೇಲಿಂದಲೂ ಕದಲೀ ದೇಶವು ಆಸ್ಸಾಮಿನ ಉತ್ತರದಲ್ಲಿದೆ ಎಂಬ ನಮ್ಮ ಸಂಶಯಕ್ಕೆ ಪುಷ್ಟಿ ಸಿಗುವುದು. ಮತ್ಸ್ಯೇಂದ್ರನಾಥನು ಕಾಮರೂಪದಲ್ಲಿಯೇ ಕೌಲ ಸಾಧನೆ ಮಾಡಿದ್ದಾನೆಂಬುದು ತಂತ್ರಾಲೋಕದ ಟೀಕೆ ಮತ್ತು ಕಾಲಜ್ಞಾನ ನಿರ್ಣಯದಿಂದ ಸ್ಪಷ್ಟವಾಗುತ್ತದೆ. ಆದ್ದರಿಂದ ಕದಲೀವನ ಅಥವಾ ಸ್ತ್ರೀದೇಶವೆನ್ನುವುದು ಕಾಮರೂಪವೇ ಆಗಿದೆ. ಬಹಳಷ್ಟು ಗ್ರಂಥ

ಕಾರರು ಕುಲೂತ, ಸುವರ್ಣ, ಗೋತ್ರ, ಭೂತಸ್ಥಾನ, ಕಾಮರೂಪ ಪ್ರದೇಶಗಳನ್ನು ಸ್ತ್ರೀ ರಾಜ್ಯವಿರಬಹುದೆಂದು ಊಹಿಸುವುದರಿಂದ, ಹಿಂದೊಂದು ಕಾಲದಲ್ಲಿ ಹಿಮಾಲಯದ ಪಶ್ಚಿಮದಿಂದ ಪೂರ್ವದವರೆಗಿನ ತಪ್ಪಲು ಪ್ರದೇಶದಲ್ಲಿ ಸ್ತ್ರೀಪ್ರಾಧಾನ್ಯವಿರುವ ಒಂದು ವಿಶಾಲವಾದ ಪ್ರದೇಶವಿತ್ತೆಂಬ ಅಂಶ ಸಾಬೀತಾಗುತ್ತದೆ. ಇಂದಿಗೂ ಕೂಡ ಉತ್ತರ ಭಾರತದೊಂದಿಗೆ ತುಲನೆ ಮಾಡಿದರೆ ಈ ಮಾತು ಸತ್ಯವೆನಿಸುತ್ತದೆ.

ಈ ಎಲ್ಲ ಚರ್ಚೆಯ ಸಾರಾಂಶವೇನೆಂದರೆ ಮತ್ಸ್ಯೇಂದ್ರನು ಕಾಮರೂಪಕ್ಕೆ ಸಮೀಪವರ್ತಿಯಾದ ಚಂದ್ರಗಿರಿ ಎಂಬ ಪ್ರದೇಶದಲ್ಲಿ ಜನಿಸಿದ್ದು, ಅದು ಬಂಗಾಲ ಸಾಗರದ ತಟವರ್ತಿ ಪ್ರದೇಶವಾಗಿದ್ದು ಟಿಬೇಟಿಯನ್ ಪರಂಪರಾಗತ ಹೇಳಿಕೆಯಂತೆ ಅದೊಂದು ಬ್ರಹ್ಮಪುತ್ರ ನದಿಯಿಂದ ಹೊರಬಿದ್ದು ಉಂಟಾದ ದ್ವೀಪಾಕಾರದ ಪ್ರವೇಶವಾಗಿತ್ತು. ಈ ಪ್ರದೇಶವು ಪೂರ್ವಕಾಲದ ಭರತಖಂಡದ ಕಾಮರೂಪ ಪ್ರದೇಶದ ಹತ್ತಿರದಲ್ಲಿ ಇರಬೇಕು ಎಂದು ನಿಶ್ಚಯವಾಗಿ ಹೇಳಬಹುದು. ಈತನು 9ನೇ ಶತಮಾನದಲ್ಲಿ ಜನಿಸಿದ್ದನು. ಪ್ರಾರಂಭದ ಹಂತದಲ್ಲಿ ಈತನು ಒಂದು ರೀತಿಯ ಸಾಧನಾ ವ್ರತವನ್ನು ಆಚರಿಸುತ್ತಿದ್ದನು, ಆದರೆ ನಂತರ ಅಧಿಕ ಸ್ತ್ರೀ ಸಾಹಚರ್ಯವಿರುವ ಆಚಾರದಲ್ಲಿ ಸಿಲುಕಿಕೊಂಡನು. ಮತ್ತು ಇದು ಬ್ರಹ್ಮಚರ್ಯದ ಒಂದು ಪರಿ ಪಂಥಿಯಾಗಿತ್ತು. ಅವನು ಈ ಆಚಾರದಲ್ಲಿ ವ್ರತಸ್ಥನಾದ ಪ್ರದೇಶವು ಸ್ತ್ರೀ ದೇಶ ಅಥವಾ ಕದಲೀ ದೇಶವೆಂಬುದು ಕಾಮರೂಪ ಪ್ರದೇಶವಾಗಿರಬಹುದು. ಈತನ ಶಿಷ್ಯನಾದ ಗೋರಕ್ಷನು ಈತನನ್ನು ಆ ಮಾಯಾಜಾಲದಿಂದ ಮೇಲೆತ್ತಿದನು. ಇದ ರಿಂದಾಗಿ, ಮತ್ಸ್ಯೇಂದ್ರನು ನಂತರ ಪುನಃ ತನ್ನ ಮೊದಲ ಸಾಧನಾ ಮಾರ್ಗಕ್ಕೆ ಹಿಂತಿರುಗಿದವನಾದನು.

ಆಕರ ಗ್ರಂಥಗಳು

1. ನಾಥ ಸಂಪ್ರದಾಯ
2. ನಾಥ ಸಂಪ್ರದಾಯ - ಉದಯ ಮತ್ತು ವಿಸ್ತಾರ
3. ಸಿದ್ಧ ಸಾಹಿತ್ಯ
4. ತಂತ್ರಾಲೋಕ

ಬೀದಿ ನಾಟಕಗಳು

ಡಾ. ವಿಜಯಶ್ರೀಸಬರದ

ರಂಗಭೂಮಿಯ ಹಿನ್ನೆಲೆ

ನಾಟಕ ಸಾಹಿತ್ಯ ಮತ್ತು ರಂಗಭೂಮಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಕನ್ನಡದಲ್ಲಿ ಆಧುನಿಕ ಸಾಹಿತ್ಯ ಚಳುವಳಿಗಳೊಂದಿಗೆ ಆಧುನಿಕ ರಂಗಭೂಮಿಯ ಚಳುವಳಿಗಳು ಪ್ರಾರಂಭವಾದವು. ವಿದ್ವಾಂಸರು ಆಧುನಿಕ ಕನ್ನಡ ನಾಟಕದ ಬೆಳವಣಿಗೆಯನ್ನು ಹಾಗೂ ಆಧುನಿಕ ಕನ್ನಡ ರಂಗಭೂಮಿಯ ವಿಕಾಸವನ್ನು ಮೂರು ಹಂತಗಳಲ್ಲಿ ಗುರುತಿಸಿದ್ದಾರೆ. ನವೋದಯ ರಂಗಭೂಮಿ, ನವ್ಯ ರಂಗಭೂಮಿ, ಸಾಮಾಜಿಕ ರಂಗಭೂಮಿ ಎಂದು ಮೂರು ಹಂತಗಳಲ್ಲಿ ಗುರುತಿಸಲ್ಪಟ್ಟ ಆಧುನಿಕ ಕನ್ನಡ ರಂಗಭೂಮಿ ಚಳವಳಿಗಳು ಚರಿತ್ರೆ ದೃಷ್ಟಿಯಿಂದ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಗಮನಾರ್ಹವಾಗಿವೆ.

ನವೋದಯ ರಂಗಭೂಮಿ ವೃತ್ತಿರಂಗಭೂಮಿಗೆ ಪ್ರತಿಕ್ರಿಯೆಯಾಗಿ ಅದರ ಪರಿಕರಗಳನ್ನು ವಿರೋಧಿಸುತ್ತಾ ಭಿನ್ನವಾದ ನೆಲೆಯಲ್ಲಿ ಸರಳವಾದ ರೀತಿಯಲ್ಲಿ ಹುಟ್ಟಿಕೊಂಡಿತು. ನವೋದಯ ಸಾಹಿತ್ಯ ಸಂದರ್ಭದಲ್ಲಿ ರಚನೆಗೊಂಡ ನಾಟಕಗಳು ಸಾಮಾಜಿಕ ವಸ್ತುವಿಗೆ ಹೆಚ್ಚಿನ ಮಹತ್ವವನ್ನು ನೀಡಿದವು. ಸಾಮಾಜಿಕ ಮತ್ತು ರಾಜಕೀಯ ನೆಲೆಯಿಂದ ಬದುಕನ್ನು ವಿಶ್ಲೇಷಿಸುವ ದೃಷ್ಟಿಯನ್ನು ಶೋಕ-ಚಕ್ರ, ಕೇಳು ಜನಮೇಜಯ, ತುಘಲಕ್‌ದಂತಹ ನಾಟಕಗಳಲ್ಲಿ ಕಾಣಬಹುದು. ಕೈಲಾಸಂ, ಶ್ರೀರಂಗರು, ಸಂಸ, ಶಿವರಾಮಕಾರಂತ, ಕುವೆಂಪು, ಮಾಸ್ತಿ ಪು.ತಿ.ನ ಈ ಮೊದಲಾದ ಲೇಖಕರು ನವೋದಯ ರಂಗಭೂಮಿಯ ಪ್ರಮುಖ ನಾಟಕಕಾರರು. ಸಾಮಾಜಿಕ ವಾಸ್ತವತೆಯನ್ನು ಯಥಾವತ್ತಾದ ರೀತಿಯಲ್ಲಿ ಪ್ರತಿಬಿಂಬಿಸಿದರೆ ಸಾಲದು ನಾಟಕಗಳಲ್ಲಿ ಕಲಾತ್ಮಕತೆ, ಪ್ರಯೋಗಾತ್ಮಕತೆ ಇರಬೇಕೆಂಬ ಉದ್ದೇಶದಿಂದ ನವ್ಯರಂಗಭೂಮಿಯು ನವೋದಯ ರಂಗಭೂಮಿಗೆ ಪ್ರತಿಕ್ರಿಯೆಯಾಗಿ ಹುಟ್ಟಿಕೊಂಡಿತು. ಅಸ್ತಿತ್ವವಾದದ ತಾತ್ವಿಕ ವಿಚಾರಗಳ ನೆಲೆಯಲ್ಲಿ ಹಾಗೂ ಜಾನಪದ ರಂಗಭೂಮಿಯ ತಂತ್ರಗಳನ್ನು ಬಳಸಿ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ನವ್ಯ ನಾಟಕಗಳು ರಚನೆಗೊಂಡವು. ಈ ನಿಟ್ಟಿನಲ್ಲಿ ಶ್ರೀರಂಗ, ಗಿರೀಶ ಕಾರ್ನಾಡ, ಲಂಕೇಶ, ಜಿ.ಬಿ. ಜೋಷಿ, ಚಂದ್ರಶೇಖರ ಕಂಬಾರ, ಚಂದ್ರಶೇಖರ

ಪಾಟೀಲ ಮೊದಲಾದವರು ಪ್ರಮುಖ ನಾಟಕಕಾರರು ನಾಟಕಗಳನ್ನು ರಚಿಸಿದರು. ಇಂಗ್ಲಿಷಿನ ಅಬ್ಸರ್ಡ್‌ಡ್ರಾಮದ ಪ್ರಭಾವ ಪ್ರೇರಣೆಯಿಂದಾಗಿ ನವ್ಯ ಸಾಹಿತ್ಯ ಸಂದರ್ಭದಲ್ಲಿ ಅಸಂಗತ ನಾಟಕಗಳೂ ರಚನೆಗೊಂಡವು. ಚಂದ್ರಶೇಖರ ಪಾಟೀಲ, ನಾ. ರತ್ನ ಚಂದ್ರಕಾಂತ ಕುಸನೂರು, ಬಸವರಾಜ ಸಬರದ ಮೊದಲಾದ ಲೇಖಕರು ಅಸಂಗತ ನಾಟಕಗಳನ್ನು ಬರೆದಿದ್ದಾರೆ. ನವ್ಯ ನಾಟಕಗಳು ಮತ್ತು ಅಸಂಗತ ನಾಟಕಗಳು ಹವ್ಯಾಸ ರಂಗಭೂಮಿಯ ಮೇಲೆ ಪ್ರದರ್ಶನಗೊಳ್ಳುತ್ತಿದ್ದವು. ಬೌದ್ಧಿಕತೆ, ವೈಚಾರಿಕೆ ಮತ್ತು ಪ್ರಯೋಗತ್ವಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ, ಜನಸಾಮಾನ್ಯರಿಂದ ದೂರಾದ, ಮಧ್ಯಮವರ್ಗದ ಬುದ್ಧಿವಂತರಿಗೆ ಸಮೀಪದ ನವ್ಯರಂಗಭೂಮಿಗೆ ಪ್ರತಿಕ್ರಿಯೆಯಾಗಿ ಸಾಮಾಜಿಕ ರಂಗಭೂಮಿ ಹುಟ್ಟಿಕೊಂಡಿತು. ಈ ರಂಗಭೂಮಿಯು ಜನಸಾಮಾನ್ಯರ ಸಂವೇದನೆಗಳಿಗೆ ಸ್ಪಂದಿಸುವ, ಪ್ರಗತಿಪರವಾಗಿ ಆಲೋಚಿಸುವ, ಎಡಪಂಥೀಯ ಧೋರಣೆಗಳಿಗೆ ಹೆಚ್ಚು ಮಹತ್ವವನ್ನು ನೀಡುವ ಉದ್ದೇಶವನ್ನು ಹೊಂದಿತು.

ಬೀದಿನಾಟಕ ಪರಂಪರೆ

ದಲಿತ - ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಅಸಮಾನತೆಯ ವ್ಯವಸ್ಥೆಗೆ ಕನ್ನಡಿ ಹಿಡಿಯುವಂತಹ ನಾಟಕಗಳು ರಚನೆಗೊಂಡವು. ಸಮುದಾಯದಂತಹ ಎಡ ಪಂಥೀಯ ರಂಗಚಳುವಳಿಗಳು ಪ್ರಾರಂಭವಾದವು. ಅನೇಕ ನಾಟಕ ತಂಡಗಳು ಹುಟ್ಟಿ ಕೊಂಡವು. ಉನ್ನತ ಶಿಕ್ಷಣಮಟ್ಟದಲ್ಲಿ ನಾಟಕ ಸಾಹಿತ್ಯ ಮತ್ತು ರಂಗಭೂಮಿಯ ಕಲಿಕೆ ಪ್ರಾರಂಭವಾಯಿತು. ರಂಗಾಯಾಣ ಮತ್ತು ನಿನಾಸಂದಂತಹ ನಾಟಕ ಶಿಕ್ಷಣ ಸಂಸ್ಥೆಗಳು ಕಾಣಿಸಿಕೊಂಡವು.

ವೃತ್ತಿ ರಂಗಭೂಮಿಯ ನೀತಿಬೋಧನೆಗೆ, ಅದರ ಥಳಕು - ಬೆಳಕಿಗೆ ಮತ್ತು ಹವ್ಯಾಸಿ ರಂಗಭೂಮಿಯ ಬೌದ್ಧಿಕ - ತಾತ್ವಿಕ ತರ್ಕಗಳಿಗೆ ಜನರು ಬೇಸತ್ತು ಹೋಗಿದ್ದರು. ನಾಟಕಗಳನ್ನು ನೋಡುವ ಆಸಕ್ತಿಯನ್ನು ಕಳೆದುಕೊಂಡಿದ್ದರು. ಜನರು ಚಲನಚಿತ್ರ, ಟಿ.ವಿ.ಗಳಿಗೆ ಆಕರ್ಷಿತವಾಗಿದ್ದರು. ಇಂತಹ ಸಂದರ್ಭದಲ್ಲಿ ಮತ್ತೆ ಜನರಿಗೆ ನಾಟಕಗಳತ್ತ ಒಲವುಗಳನ್ನು ಮೂಡಿಸುವ ಪ್ರಯತ್ನಗಳಲ್ಲಿ ಬೀದಿ ನಾಟಕಗಳ ಪಾತ್ರ ಮಹತ್ವದ್ದಾಗಿದೆ. ಸಾಮಾಜಿಕ, ಆರ್ಥಿಕ, ರಾಜಕೀಯ ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಉದ್ದೇಶದಿಂದ ಬೀದಿನಾಟಕಗಳು ರಚನೆಗೊಂಡವು. ಸಾಂಪ್ರದಾಯಿಕ ರಂಗಭೂಮಿಯ ಪೊರೆಯನ್ನು ಕಳಚಿಕೊಂಡು ಗ್ರಾಮ - ನಗರ - ಪಟ್ಟಣಗಳ ರಸ್ತೆಗಳಲ್ಲಿ ಬೀದಿ ನಾಟಕಗಳು ಕಾಣಿಸಿಕೊಂಡವು. ಬೀದಿಯಲ್ಲಿ ಆಡುವ ನಾಟಕಗಳೇ ಬೀದಿನಾಟಕ ಗಳಾದವು. ಈ ನಾಟಕಗಳಿಗೆ ಬೀದಿಯೆ ರಂಗಭೂಮಿ. ಬೀದಿ ನಾಟಕಗಳು ಹೊಸ ರಂಗಭೂಮಿಯ ಸಾಧನವಾಗಿ ಪ್ರಯೋಗಗೊಂಡವು.

ಬೀದಿ ನಾಟಕದ ಪರಂಪರೆಯನ್ನು ಜಾನಪದ ವಾಕ್ ಸಂಪ್ರದಾಯದಲ್ಲಿ, ಜನಪದ ಕಲೆಗಳಲ್ಲಿ ಹಾಗೂ ಪ್ರಾಚೀನ ಕಾಲದ ಪಗರಣ ನಾಟಕಗಳಲ್ಲಿ ಕಾಣಬಹುದು. "ಕನ್ನಡ ನಾಡಿನಲ್ಲಿ ಪ್ರಾಚೀನ ಕಾಲದಲ್ಲಿ ಪಗರಣ ನಾಟಕಗಳನ್ನು ಆಡುತ್ತಿದ್ದರು. ಈ 'ಪಗರಣ' ಗಳೇ ಬೀದಿಯ ನಾಟಕಗಳೆಂದು" ಡಾ. ಚಂದ್ರಶೇಖರ ಕಂಬಾರರು ಸೂಚಿಸಿದ್ದಾರೆ. ಬೀದಿ ನಾಟಕದ ಬೇರು ಜನಪದ ರಂಗಭೂಮಿಯಲ್ಲಿದೆ ಎಂದು ಶ್ರೀ ಬೈರಮಂಗಲ ರಾಮೇಗೌಡರು ಗುರುತಿಸಿದ್ದಾರೆ. ಬೀದಿ ನಾಟಕಗಳ ರಚನೆಗೆ ಹಾಗೂ ಪ್ರಯೋಗಕ್ಕೆ ಜನಪದ ಕಲೆಗಳು, ಪ್ರಾಚೀನ ಕಾಲದ ಪಗರಣ ನಾಟಕಗಳು ಪ್ರೇರಣೆಯಾದಂತೆ ಆಧುನಿಕ ನಾಟಕಕಾರರಾದ ಶ್ರೀರಂಗ, ಗಿರೀಶಕಾರ್ನಾಡ, ಲಂಕೇಶರ ನಾಟಕಗಳು ಪ್ರೇರಣೆ ನೀಡಿವೆ. ಅಲ್ಲದೇ ಮಧ್ಯಯುಗದ ಇಂಗ್ಲೆಂಡಿನ ಸಂಚಾರೀ ನಾಟಕಗಳ ಪ್ರಬಾವವೂ ಆಗಿದೆ. ಇಂಗ್ಲೆಂಡಿನ ಸಂಚಾರೀ ನಾಟಕಗಳಂತೆ ಕನ್ನಡ ಬೀದಿ ನಾಟಕಗಳು ಕೂಡ ಜನರಲ್ಲಿದ್ದಲ್ಲಿಗೆ ಹೋಗಿ ನಾಟಕಗಳನ್ನು ಪ್ರದರ್ಶಿಸಬೇಕೆಂಬ ಉದ್ದೇಶವನ್ನು ಹೊಂದಿವೆ. ಕನ್ನಡ ನಾಡಿನಲ್ಲಿ ಬೀದಿನಾಟಕಗಳು ಪ್ರದರ್ಶನಗೊಳ್ಳುವ ಮೊದಲು ದೆಹಲಿ, ಬಂಗಾಳ, ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿ ಬೀದಿ ನಾಟಕಗಳು ಪ್ರದರ್ಶನ ಪ್ರಾರಂಭವಾಗಿತ್ತು. 'ಪ್ರಯೋಗ', 'ಜನನಾಟ್ಯಮಂಚ', 'ಸ್ತ್ರೀ ಸಂಘರ್ಷ' ಮತ್ತು ಜಗಸ್ ಮೊದಲಾದ ತಂಡಗಳು ಬೀದಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಕನ್ನಡ ನಾಡಿನಲ್ಲಿ ಬೀದಿನಾಟಕಗಳನ್ನು ಪ್ರದರ್ಶಿಸಿದ ಮೊದಲ ತಂಡಗಳೆಂದರೆ 'ಚಿತ್ರಾ ಗೆಳೆಯರ ಗುಂಪು' ತಂಡ ಮತ್ತು ಸಮುದಾಯ ತಂಡಗಳು. 1973ರ ಆಗಸ್ಟ್ ತಿಂಗಳಿನಲ್ಲಿ ಶ್ರೀ ಎ.ಎಸ್. ಮೂರ್ತಿಯವರ 'ಕಟ್ಟು' ನಾಟಕವನ್ನು ಚಿತ್ರಕಲಾ ತಂಡದವರು ಬೆಂಗಳೂರಿನಲ್ಲಿ ಆಡಿದರು . ಆನಂತರ ಈ ತಂಡದವರು ಡಾ. ವಿಜಯಾ ಅವರ 'ಬಂದರೋ , ಬಂದರೋ' 'ಉಳ್ಳವರ ನೆರಳು' ಕುವೆಂಪು ಅವರ 'ಧನವಂತರಿ ಚಿಕಿತ್ಸೆ ' ಕಥೆಯ ರೂಪಾಂತರ ಧನವಂತರಿ ಚಿಕಿತ್ಸೆ ನಾಟಕವನ್ನು ಆಡಿದರು. ಸಮುದಾಯ ತಂಡದವರು ಜಾಥಾಗಳ ಮೂಲಕ ಬೇರೆ ಬೇರೆ ಊರುಗಳಲ್ಲಿ 'ಬೆಲ್ಚಿ', 'ಪತ್ರ ಸಂಗಪ್ಪನ ಕೊಲೆ' ಮೊದಲಾದ ಬೀದಿನಾಟಕಗಳನ್ನು ಪ್ರದರ್ಶಿಸಿದರು. ಚಿತ್ರಾತಂಡದವರು ಆಡುವ ನಾಟಕಗಳನ್ನು ಎ.ಎಸ್. ಮೂರ್ತಿಯವರು ನಿರ್ದೇಶಿಸಿದ್ದಾರೆ. ಸಮುದಾಯ ತಂಡವರು ಆಡಿದ ನಾಟಕಗಳನ್ನು ಪ್ರಸನ್ನ ಅವರು ನಿರ್ದೇಶಿಸಿದ್ದಾರೆ. 'ರಾಗ್' ಕಲಾವಿದರು, ವಿಜ್ಞಾನ ಪರಿಷತ್ತಿನವರು ಜಾನಪದ ಕಲೆಗಳ ಮೂಲಕ ಜನರ ಮೂಢನಂಬಿಕೆಯನ್ನು ದೂರಮಾಡುವ,ವೈಜ್ಞಾನಿಕ ಭಾವವನ್ನು ಬೆಳೆಸುವ ಉದ್ದೇಶದಿಂದ ಬೀದಿನಾಟಕಗಳನ್ನು ಆಡಿದರು. ಹವ್ಯಾಸಿ ಕಲಾವಿದರೇ ಬೀದಿ ನಾಟಕಗಳಲ್ಲಿ ಅಭಿನಯಿಸುತ್ತಿದ್ದಾರೆ. ಬೀದಿನಾಟಕಗಳು ಒಂದು ಪ್ರಕಾರವಾಗಿ ರಂಗಭೂಮಿಯ ಸಾಧನವಾಗಿ ಸಾಮಾಜಿಕ ಸುಧಾರಣೆಯ ಅಂಗವಾಗಿ, ಚಳುವಳಿಯಾಗಿ ಪ್ರಾರಂಭವಾಯಿತು.

ನಗರದ, ಗ್ರಾಮದ ಬೀದಿ ಅಂಚಿನಲ್ಲಿ ಅಥವಾ ಆ ಊರಿನ ನಾಲ್ಕು ರಸ್ತೆಗಳು ಕೂಡುವ ಬಯಲು ಸ್ಥಳವೇ ಬೀದಿನಾಟಕಗಳಿಗೆ ರಂಗಭೂಮಿ. ಬೀದಿಯಲ್ಲಿ ಆಡುವ ನಾಟಕಗಳಿಗೆ ಬೀದಿ ನಾಟಕಗಳೆಂದು ಕರೆಯುತ್ತಾರೆ. ಶೋಷಿತ ವರ್ಗದ ಜನರ ಬದುಕಿನ ಸಮಸ್ಯೆಗಳು, ಶೋಷಕರ ಭ್ರಷ್ಟತೆ, ರಾಜಕೀಯ, ಆರ್ಥಿಕ, ಸಾಮಾಜಿಕ ಜ್ವಲಂತ ಸಮಸ್ಯೆಗಳು, ವರದಕ್ಷಿಣೆ, ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ, ಬಾಲಕಾರ್ಮಿಕರ ಸಮಸ್ಯೆ, ರೈತರ ಸಮಸ್ಯೆ, ಬೆಲೆ ಏರಿಕೆಯ ಸಮಸ್ಯೆ, ಕುಟುಂಬ ಯೋಜನೆ, ಪರಿಸರ ಮಾಲಿನ್ಯ, ಪರಿಸರ ರಕ್ಷಣೆ, ಏಡ್ಸ್ ಸಮಸ್ಯೆ, ಸಾಕ್ಷರತೆ, ಆರೋಗ್ಯದಂತಹ ಈ ಮೊದಲಾದ ವಿಚಾರಗಳು ಬೀದಿನಾಟಕದ ವಸ್ತುಗಳು. ಬೀದಿ ನಾಟಕಗಳ ಭಾಷೆ ಸಾಂಕೇತಿಕ ಅಥವಾ ಅಲಂಕಾರಿಕವಾಗಿರದೆ ಸರಳ , ಸುಲಲಿತ, ಸ್ಪಷ್ಟವಾಗಿರುತ್ತದೆ. ಬೀದಿ ನಾಟಕವನ್ನು ಆಡುವವರು ಆಯಾ ಬೀದಿಯ ಜನಾಂಗದ ಭಾಷೆಯನ್ನು ನಾಟಕಕ್ಕೆ ಬಳಸುತ್ತಾರೆ. ಭಾಷೆಯನ್ನು ಹಿತ-ಮಿತವಾಗಿ ಬಳಸುತ್ತಾರೆ. ನಾಟಕ ಆಡುವಾಗ ಪ್ರತ್ಯೇಕವಾದ ವೇಷಭೂಷಣಗಳನ್ನು ಬಳಸಿಕೊಳ್ಳದೆ ಉಟ್ಟಬಟ್ಟೆಯಲ್ಲಿ ನಾಟಕವನ್ನು ಆಡುತ್ತಾರೆ. ನಾಟಕದ ಕಥಾವಸ್ತುವಿನ ವಿವರಣೆಗೆ ತಕ್ಕಂತೆ ಹಾವಭಾವದ ಅಭಿನಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಇಲ್ಲಿ ವಾದ್ಯ, ಸಂಗೀತಕ್ಕಿಂತಲೂ ಸಂಭಾಷಣೆ, ಹಾಡುಗಳಿಗೆ ಪ್ರಾಧಾನ್ಯತೆ ಹೆಚ್ಚು. ನಾಟಕದ ಅವಧಿ ಒಂದು ಗಂಟೆಯಾಗಿರುತ್ತದೆ. ನಾಟಕ ಪ್ರಾರಂಭ ಆಗುವ ಪೂರ್ವದಲ್ಲಿ ಧ್ವನಿವರ್ಧಕದ ಮೂಲಕ ಅಥವಾ ತಮಟೆಯ ಸದ್ದು ಮಾಡುವುದರ ಮೂಲಕ ಪ್ರೇಕ್ಷಕರನ್ನು ಆಹ್ವಾನಿಸುತ್ತಾರೆ. ಒಮ್ಮೆ ಸಿದ್ಧವಾದ ಹಸ್ತ ಪ್ರತಿಯನ್ನು ಇಟ್ಟುಕೊಂಡು ನಾಟಕವನ್ನಾಡಿದರೆ ಕೆಲವೊಮ್ಮೆ ಆಗಿಂದಾಗಲೇ ಮಾಡಿ ನಾಟಕದ ವಸ್ತು ಆರಿಸಿಕೊಂಡು ತಂಡದ ಸದಸ್ಯರೆಲ್ಲರೂ ಸೇರಿ ಚರ್ಚೆ ನಾಟಕದ ರೂಪ ರೇಷೆ ಸಿದ್ಧವಾದ ಮೇಲೆ ತಂಡದ ಕೆಲವು ಸದಸ್ಯರು ಸೇರಿ ಹಸ್ತಪ್ರತಿಯನ್ನು ಸಿದ್ಧ ಮಾಡಿದಾನಂತರ ನಾಟಕವನ್ನಾಡುತ್ತಾರೆ. ಸಮಯ, ಸಂದರ್ಭಕ್ಕೆ ತಕ್ಕಂತೆ ಸಂಭಾಷಣೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುವಂತಹ ಸಾಮರ್ಥ್ಯ ಬೀದಿನಾಟಕದ ನಟರಿಗೆ ಇರುತ್ತದೆ. ಬೀದಿ ನಾಟಕಗಳಲ್ಲಿ ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಪಾತ್ರಗಳಿರುತ್ತವೆ. ಈ ಮೊದಲಾದ ಲಕ್ಷಣಗಳನ್ನು ಹೊಂದಿದ ಬೀದಿ ನಾಟಕದ ಉದ್ದೇಶ ಜನರನ್ನು ಜಾಗೃತಗೊಳಿಸುವುದು ಹಾಗೂ ಪ್ರಸ್ತುತ ಸಾಮಾಜಿಕ ಸಮಸ್ಯೆಗಳ ಬಗೆಗೆ ತಿಳುವಳಿಕೆಯನ್ನು ಮೂಡಿಸುವುದು ಮತ್ತು ಆ ಸಮಸ್ಯೆಗಳ ಪರಿಹಾರದ ಬಗೆಗೆ ಆಲೋಚಿಸುವುದಾಗಿದೆ.

ದಲಿತ - ಬಂಡಾಯ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಅನೇಕ ಲೇಖಕರು ಎಡಪಂಥೀಯ ಧೋರಣೆಗಳನ್ನುಳ್ಳ ನಾಟಕಗಳನ್ನು ಬರೆದಿದ್ದಾರೆ. ಕನ್ನಡದ ಅನೇಕ ಸಣ್ಣಕತೆಗಳನ್ನು, ಪತ್ರಿಕಾ ವರದಿಗಳನ್ನು ಕವಿತೆಗಳನ್ನು ಹಾಗೂ ಪ್ರಸ್ತುತ ಸಾಮಾಜಿಕ ಸಮಸ್ಯೆಗಳನ್ನು , ಘಟನೆಗಳನ್ನು ಆಧರಿಸಿ ನೂರಾರು ಬೀದಿ ನಾಕಗಳು ರಚನೆ

ಗೊಂಡಿವೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ನಾಟಕಗಳು ಪ್ರಕಟಗೊಂಡಿಲ್ಲ. ಡಾ. ವಿಜಯಾ ಅವರ 'ಏಳು ನಾಟಕಗಳು', ಕುವೆಂಪು ಅವರ 'ಧನವಂತರಿ ಚಿಕಿತ್ಸೆ', ಎ.ಎಸ್. ಮೂರ್ತಿ ಅವರ '10 ಬೀದಿ ನಾಟಕಗಳು', 'ಗಿರೀಶ ಕಾರ್ನಾಡ' ಅವರ ಕಿರು ನಾಟಕ 'ಮಾನಿಷಾದ', ಕವಿ ಸಿದ್ಧಲಿಂಗಯ್ಯನವರ 'ಪಂಚಮ', 'ನೆಲಸಮ', ಚಂದ್ರಶೇಖರ ಪಾಟೀಲ ಅವರ 'ಬುರಡೀ ಬಾಬಾನ ಲಕ್ಷಾಪಹರಣ ಪವಾಡ ; ವಿವಿಧ ಲೇಖಕರ ಬೀದಿ ನಾಟಕಗಳನ್ನೊಳಗೊಂಡ ಸಂಕಲನ 'ಸೂರಿಲ್ಲದ ರಂಗದಲಿ 12 ನಾಟಕಗಳು', ಮತ್ತು 'ಸೂರಿಲ್ಲದ ರಂಗದಲಿ 10 ನಾಟಕಗಳು', ಬಸವರಾಜ ಸಬರದ ಅವರ 'ಮೂರು ಬೀದಿ ನಾಟಕಗಳು' ಮತ್ತು 'ನಾಲ್ಕು ಬೀದಿನಾಟಕಗಳು', ಆರ್.ಕೆ. ಹುಡುಗಿ (ರಾಹು) ಅವರ 'ಅಕ್ಷರ - ಒರೆಗಲ್ಲು', - ಮೊದಲಾದ ಲೇಖಕರ ಬೀದಿನಾಟಕಗಳು ಪ್ರಕಟಗೊಂಡಿವೆ.

ಕೆಲವು ಬೀದಿ ನಾಟಕಗಳು

ಕನ್ನಡ ನಾಡಿನಲ್ಲಿ ಎ.ಎಸ್. ಮೂರ್ತಿಯವರಿಂದ ಪ್ರಾರಂಭವಾದ ಬೀದಿ ನಾಟಕ ಚಳುವಳಿ ಇಂದು ನಾಡಿನಾದ್ಯಂತ ವ್ಯಾಪಿಸಿರುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ, ಈ ಬೀದಿ ನಾಟಕ ಚಳುವಳಿಯು ರಂಗಮಾಧ್ಯಮದ ಒಂದು ಪ್ರಭೇದವಾಗಿ ಬೆಳೆದಿರುವುದು ಇದರ ವೈಶಿಷ್ಟ್ಯವಾಗಿದೆ. 1973ರಿಂದ ಇಂದಿನವರೆಗೂ ರಚನೆಗೊಂಡ ಬೀದಿನಾಟಕಗಳನ್ನು ಅವಲೋಕಿಸಿದಾಗ ಅವುಗಳ ನಾಡಿಮಿಡಿತ ಒಂದೇ ಎಂದೆನಿಸುತ್ತದೆ; ಅದು ಜನಜಾಗೃತಿ ಎಂದು ಹೇಳಬಹುದು. ಜನಪರಧೋರಣೆಯೊಂದಿಗೆ ರಚನೆ ಗೊಂಡ ಬೀದಿನಾಟಕಗಳ ವಸ್ತು ಹಾಗೂ ಶೈಲಿಯಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಕೆಲವು ನಾಟಕಗಳು ದೇಶದ, ನಾಡಿನ ಜ್ವಲಂತ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದರೆ, ಇನ್ನು ಕೆಲವು ನಾಟಕಗಳು ಪ್ರಾದೇಶಿಕ ಭಾಷೆ, ಸಂಸ್ಕೃತಿಯ ನೆಲೆ ಯಲ್ಲಿ ಪ್ರಸ್ತುತ ಸಮಸ್ಯೆಗಳನ್ನು ಕಲಾತ್ಮಕವಾಗಿ ಅನಾವರಣಗೊಳಿಸಲು ಪ್ರಯತ್ನಿಸಿವೆ. ಒಟ್ಟಿನಲ್ಲಿ ಬೀದಿ ನಾಟಕಗಳು ದೇವರು, ಧರ್ಮ, ಅಧಿಕಾರದ ಹೆಸರಿನಲ್ಲಿ ನಡೆಯುವ ಶೋಷಣೆಯ ಕುರಿತು ತಿಳುವಳಿಕೆಯನ್ನು ಮೂಡಿಸುವುದರೊಂದಿಗೆ ಆಲೋಚನೆಗೆ ಹಚ್ಚುತ್ತವೆ. ಬೀದಿ ನಾಟಕಗಳು ಜನವಿರೋಧಿ ವ್ಯವಸ್ಥೆಯ ಬದಲಾಗಿ ಜನಪರವಾದ ವ್ಯವಸ್ಥೆಯನ್ನು ಬಯಸುತ್ತವೆ. ಉದಾಹರಣೆಗಾಗಿ ಇಲ್ಲಿ ಕೆಲವು ನಾಟಕಗಳನ್ನು ನೋಡಬಹುದು. ಎ.ಎಸ್. ಮೂರ್ತಿ ಅವರ "ಕಟ್ಟು ಹಂಚಿಕಾಪ್ರಕರಣ, ಬಸ್‌ಸ್ಟಾಪ್, ಓ ನನ್ನ ಜನರೇ, ನಿಜವ ಹೇಳಬಲ್ಲಿರಾ?, ಹೇಳತೇನ ಕೇಳ, ಸಿದ್ಧ ಕೀಳರಿಮೆ ಏಕೆ?, ಬೆಳಗು, ನಾವು ಮನುಜರು, ಒಳ್ಳೇವ್ರಪ್ಪ ಒಳ್ಳೇವ್ರು" - ಈ ಮೊದಲಾದ ಬೀದಿ ನಾಟಕಗಳು ಅನೇಕ ಪ್ರಯೋಗಗಳನ್ನು ಕಂಡು ಜನಪ್ರಿಯತೆಯನ್ನು ಪಡೆದಿವೆ. ಬಿ.ಟಿ.ಎಸ್. ವ್ಯವಸ್ಥೆಯ ಕುರಿತು, ಜನಸಂಖ್ಯಾಸ್ಫೋಟದ ಕುರಿತು, ಕಲಾವಿದನಿಗೆ ಆಗುವ

ಅನ್ಯಾಯದ ಕುರಿತು, ಹೆಣ್ಣಿನ ಶೋಷಣೆಯ ಕುರಿತು, ಏಡ್ಸ್ ಕುರಿತು, ಸೀಮೆ ಎಣ್ಣೆ ಹಂಚಿಕೆಯ ಕುರಿತು - ಹೀಗೆ ಬದುಕಿನ ಹತ್ತು ಹಲವು ವಿಷಯಗಳನ್ನು ಎ.ಎಸ್.ಮೂರ್ತಿಯವರು ತಮ್ಮ ನಾಟಕಗಳಲ್ಲಿ ಲೀಲಾಜಾಲವಾಗಿ ಯಾವ ಬ್ರೇಕ್ ಇಲ್ಲದೆ ನೈಜ, ಸರಳವಾದ ಶೈಲಿಯಲ್ಲಿ ಪ್ರತಿಪಾದಿಸಿದ್ದಾರೆ. ಜನರ ಮನಸ್ಸನ್ನು ಮುಟ್ಟುವ, ತಟ್ಟುವ, ಬಡಿದೆಬ್ಬಿಸುವ ವಿಚಾರದಲ್ಲಿ ನಾಟಕಗಳು ಯಶಸ್ವಿಯಾಗಿ ಪ್ರಯೋಗ ಗೊಂಡಿವೆ.

ಕನ್ನಡದಲ್ಲಿ ಮಹಿಳೆಯರು ನಾಟಕಗಳನ್ನು ಬರೆದಿರುವುದು ಅಪರೂಪ. ಅಂತ ಹದರಲ್ಲಿ ಡಾ. ವಿಜಯಾ ಅವರು ಬೀದಿನಾಟಕಗಳನ್ನು ಬರೆದಿರುವುದು ಕನ್ನಡಿಗರು ಹೆಮ್ಮೆ ಪಡುವ ಸಂಗತಿಯಾಗಿದೆ. ಡಾ. ವಿಜಯಾ ಅವರ 'ಬಂದರೋ ಬಂದರು' ನಾಟಕ ರಾಜಕಾರಣಿಗಳ ಬಣ್ಣ ಬಯಲು ಮಾಡುವುದರ ಮೂಲಕ ನಯವಂಚಕರನ್ನು, ಭ್ರಷ್ಟರನ್ನು, ಖದೀಮರನ್ನು ವಿರೋಧಿಸುವ ನಿಲುವು ಅರ್ಥಪೂರ್ಣವಾಗಿದೆ. ಜನವಿರೋಧಿ ಪ್ರತಿಗಾಮಿ ಶಕ್ತಿಗಳ ವಿರುದ್ಧ ಸಿಡಿದು ನಿಲ್ಲುವಂತೆ ಪ್ರೇರೇಪಿಸುವ ನಾಟಕ 'ಮುಖವಿಲ್ಲದವರು' ಗಮನಾರ್ಹವಾಗಿದೆ. 'ಕೇಳ್ರಪ್ಪೋ ಕೇಳ್ರಿ' ನಾಟಕದಲ್ಲಿ ಎಂತಹ ನಾಯಕನನ್ನು ಆರಿಸಬೇಕೆನ್ನುವ ವಿಚಾರ ಹೇಳಲಾಗಿದೆ. 'ಎಲ್ಲಿದ್ದೇವೆ ನಾವು ಎಲ್ಲಿದ್ದೇವೆ?' ನಾಟಕದಲ್ಲಿ ಮಹಿಳೆ ತನ್ನ ಸ್ಥಾನಮಾನದ ಬಗ್ಗೆ ಆಲೋಚಿಸುತ್ತಲೇ ವರ್ಣ - ವರ್ಗ - ಲಿಂಗಭೇದವಿಲ್ಲದೆ ಪರಸ್ಪರ ಪ್ರೀತಿಯಿಂದ ಗೌರವದಿಂದ ಕಾಣಬೇಕೆನ್ನುವ ವಿಚಾರ ಆರೋಗ್ಯಕರವಾಗಿದೆ. ಅಸಮಾನತೆಯ ವ್ಯವಸ್ಥೆಯಲ್ಲಿ ಸಮಾನತೆಯನ್ನು ಕಾಣುವ ಲೇಖಕಿಯ ಕಾಳಜಿ ಜೀವಪರವಾಗಿದೆ.

ಲಿಂಗದೇವರು ಹಳೆಮನೆ ಅವರು ತಮ್ಮ 'ಚುನಾವಣಾ ವೃತ್ತಾಂತ' ನಾಟಕದಲ್ಲಿ ಅಕ್ಷರ ಕಲಿಕೆಯ ಮಹತ್ವವನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಚುನಾವಣೆಯಲ್ಲಿ ಓಟು ಹಾಕಬೇಕಾದರೆ ಅಥವಾ ಓಟು ಪಡೆಯಬೇಕಾದರೆ ಅಕ್ಷರಸ್ಥರಾಗುವುದು ತುಂಬಾ ಅಗತ್ಯವೆಂಬುದನ್ನು ಜನರಿಗೆ ಮನವರಿಕೆಯಾಗುವಂತೆ ತಿಳಿಸಿದ್ದಾರೆ. ಸಾಕ್ಷರತಾ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಲೇಖಕರು ಬೀದಿ ನಾಟಕಗಳನ್ನು ಬರೆದಿದ್ದಾರೆ. ಚೆನ್ನಣ್ಣವಾಲೀಕಾರ ಅವರು 'ಹೆಬ್ಬೆಟ್ಟಿನ ಸಹಿ ಬಾಳಿಗೆ ಕಹಿ' ಎನ್ನುವ ನಾಟಕದಲ್ಲಿ 'ಅಕ್ಷರವೇ ಸ್ವಾತಂತ್ರ್ಯವು ಅಕ್ಷರವೇ ಸಮತೆ ಅಕ್ಷರವೇ ಸುಖಸಮೃದ್ಧಿಯ ಸಂಪತ್ತು ಜನಕೆ'ಎಂದು ಹೇಳಿದ್ದಾರೆ. ಬಿ.ಆರ್. ಪೋಲೀಸ ಪಾಟೀಲ ವರು ತಮ್ಮ 'ಬೇಲಿ ದಾಟೋಣ' ನಾಟಕದ ಮೂಲಕ 'ಅಕ್ಷರವೊಂದೇ ಎಲ್ಲಕೂ ಕೀಲಿ, ಕೂಸ ಕುನ್ನಿಯೆಲ್ಲ ಕಲಿಬೇಕ ಸಾಲಿ' ಎಂದು ಜನರಿಗೆ ಕರೆ ಕೊಡುತ್ತಾರೆ. 'ಕಲಿಯಿರಿ ಕಲಿಸಿರಿ' ಎನ್ನುವ ಬಸವರಾಜು ಕುಕ್ಕರಹಳ್ಳಿಯವರ ನಾಟಕದಲ್ಲಿ ಅಕ್ಷರ ಕಲಿಯುವ ವಿಚಾರದೊಂದಿಗೆ ಪರಿಸರ ಮಾಲಿನ್ಯ ಹಾಗೂ ಕಾಡು ಸಂರಕ್ಷಿಸುವ ವಿಚಾರವು ವ್ಯಕ್ತವಾಗಿದೆ. ಎಸ್.

ತುಕಾರಾಮ ಅವರ ಪ್ರಹ್ಲಾದನ ಅಕ್ಷರ ಪ್ರಸಂಗ ನಾಟಕದಲ್ಲಿ ಸಾಕ್ಷರತೆಯ ಮಹತ್ವವನ್ನು ಪ್ರಹ್ಲಾದ ಪಾತ್ರದ ಮೂಲಕ ಲೇಖಕರು ತಿಳಿಸುವ ರೀತಿ ಮೆಚ್ಚುವಂತಹದಾಗಿದೆ. ರಾಕೆ ಅವರ 'ಕೋಶ ಓದು ದೇಶ ಸುತ್ತು' ನಾಟಕದಲ್ಲಿ ಅಕ್ಷರ ಕಲಿಯುವುದರಿಂದ ದೇಶದ ಆಗುಹೋಗುಗಳನ್ನು ತಿಳಿದುಕೊಳ್ಳಬಹುದು, ಮತ್ತೊಬ್ಬರಿಂದ ತಮಗಾದ ಅನ್ಯಾಯವನ್ನು ತಿಳಿದುಕೊಂಡು ಮುಂದಿನ ಕ್ರಮವನ್ನು ಕೈಕೊಳ್ಳಲು ಅನುಕೂಲ ವಾಗುವುದೆಂಬುದನ್ನು ತಿಳಿಸಲಾಗಿದೆ. ಮೊಗಳ್ಳಿ ಗಣೇಶ ಅವರು ತಮ್ಮ 'ಒತ್ತಪ್ಪ' ನಾಟಕದಲ್ಲಿ ಜನರು ಭಕ್ತಿಯಿಂದ ನಂಬುವ 'ದೇವಿ' ಪಾತ್ರದ ಮೂಲಕವೇ ಅಕ್ಷರ ಕಲಿಕೆಯ ಮಹತ್ವವನ್ನು ತಿಳಿಸುವ ರೀತಿಯಲ್ಲಿ ಹೊಸತನವಿದೆ. ನಾಟಕದ ಅಂತಿಮ ದೃಶ್ಯದಲ್ಲಿ ದೇವಿ ಹೇಳುವ ಮಾತುಗಳಲ್ಲಿ ಸಾಮಾಜಿಕ ಬದಲಾವಣೆಯ ಆಶಯವಿದೆ. ಜನರು ತಮ್ಮ ಅಜ್ಞಾನದ ಕೂಪದಿಂದ ಹೊರಬಂದು ಅಕ್ಷರ ಕಲಿತು ಪರಸ್ಪರ ಪ್ರೀತಿಯಿಂದ ಗೌರವದಿಂದ ಕಾಣುವ, ಅನ್ಯಾಯದ ವಿರುದ್ಧ ಹೋರಾಡುವ ಮನೋ ಭಾವವಿದೆ. ಉಮೇಶ ಅವರ 'ಪ್ರಹ್ಲಾದ' ಭಕ್ತಿ ನಾಟಕದಲ್ಲಿ ಚಿತ್ರಣಗೊಂಡ, 'ಪ್ರಹ್ಲಾದ' ಪಾತ್ರವು ಗಮನ ಸೆಳೆಯುವಂತಹುದಾಗಿದೆ . ಆರ್.ಕೆ. ಹುಡುಗಿ (ರಾಹು) ಅವರ 'ಅಕ್ಷರ , 'ಒರೆಗಲ್ಲು' ಬೀದಿನಾಟಕಗಳು ನೂರಾರು ಪ್ರಯೋಗಗಳನ್ನು ಕಂಡಿವೆ. ಲೇಖಕರು 'ಅಕ್ಷರ' ನಾಟಕದಲ್ಲಿ ಶತಮಾನಗಳಿಂದ ಅಕ್ಷರಜ್ಞಾನ ಕೆಲವರ ಸೊತ್ತಾಗಿತ್ತೆಂಬ ಸತ್ಯ ಸಂಗತಿಯನ್ನು ದೃಷ್ಟಾಂತಗಳ ಮೂಲಕ ಮಾರ್ಮಿಕವಾಗಿ ಹೇಳಿದ್ದಾರೆ. ಹೀಗೆ ಸಾಕ್ಷರತಾ ವಿಷಯದ ಬಗೆಗೆ ಕಲಾತ್ಮಕವಾಗಿ ರಚನೆಗೊಂಡ ಬೀದಿ ನಾಟಕಗಳು ಸಾಕ್ಷರತಾ ಆಂದೋಲನದಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ. ಮೋಹನ ಎಚ್.ಎಲ್. ಅವರ 'ಸೀತಾ' ನಾಟಕದಲ್ಲಿ ಹೆಣ್ಣಿನ ಶೋಷಣೆಯ ಕುರಿತು ವಿವೇಚಿಸಲಾಗಿದೆ.

ಬಸವರಾಜ ಸಬರದ ಅವರ ಮೂರು ಬೀದಿ ನಾಟಕಗಳು ಕೃತಿಯು ಅಧಿಕಾರ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಅನ್ಯಾಯ, ದೌರ್ಜನ್ಯ, ಭ್ರಷ್ಟತೆಯನ್ನು ಪ್ರತಿಬಿಂಬಿಸುತ್ತದೆ. ಅಸಮಾನತೆಯ ವ್ಯವಸ್ಥೆಯನ್ನು ಪ್ರತಿಭಟಿಸುವ ವಿಚಾರವಿದೆ. ರಾಜಕೀಯ ವಿಡಂಬನೆ ಯಿದೆ. ಜನರಿಗೆ ಹೋರಾಟದ ಹಾಡನ್ನು ಕಲಿಸುತ್ತದೆ. ಮಾನವೀಯತೆ, ಸಮಾನತೆ, ಸ್ವತಂತ್ರತೆಯ ಬೀಜವನ್ನು ಬಿತ್ತುತ್ತದೆ. ಪೋಲಿಯೋ, ಏಡ್ಸ್‌ದಂತಹ ರೋಗಗಳ ಬಗೆಗೆ ತಿಳಿಸುತ್ತದೆ. ಸಬರದ ಅವರ ಮತ್ತೊಂದು ಕೃತಿ 'ನಾಲ್ಕು ಬೀದಿ ನಾಟಕಗಳು', ಇವರ ಮೊದಲನೆಯ ಕೃತಿಯಲ್ಲಿರುವ 'ರೇಣುಕಾ ಮೇಡಂ' ನಾಟಕವು ಜನರಲ್ಲಿರುವ ಮೂಢನಂಬಿಕೆಯನ್ನು ಹೋಗಲಾಡಿಸಿ ವೈಚಾರಿಕತೆಯನ್ನು ಬೆಳೆಸುತ್ತದೆ. ಎರಡನೆಯ ಕೃತಿಯಲ್ಲಿರುವ 'ಹುಲಿಗೆಮ್ಮ' ನಾಟಕವು ವೈಜ್ಞಾನಿಕ, ಶೈಕ್ಷಣಿಕ ನೆಲೆಯಲ್ಲಿ ಸಾಮಾಜಿಕ ಸುಧಾರಣೆಯನ್ನು ಬಯಸುತ್ತದೆ. ಜನರನ್ನು ಅಂಧಶ್ರದ್ಧೆಯಿಂದ, ಮೂಢನಂಬಿಕೆಯಿಂದ ಎಚ್ಚರಿಸುತ್ತದೆ. ಬಲಿಕೊಡುವ, ಬಸವಿ ಬಿಡುವಂತಹ ಮೊದಲಾದ ಅಮಾನುಷ ಪದ್ಧ ತಿಗಳನ್ನು ವಿರೋಧಿಸುವ ವಿಚಾರ ಪ್ರಗತಿಪರವಾಗಿದೆ. ಹುಲಿಗೆಮ್ಮ ಕಾಣುವ ಕನಸಿನ

ಲ್ಲಿ 'ಹುಲಿಗೆಮ್ಮ' ನಾಟಕದ ವೈಶಿಷ್ಟತೆಯಿದೆ. ಸಬರದವರ ನಾಟಕಗಳಲ್ಲಿ ರೇಣುಕಾ ಅಥವಾ ಹುಲಿಗೆಮ್ಮದಂತಹ ಪೌರಾಣಿಕ ಪಾತ್ರಗಳು ಸಾಂಪ್ರದಾಯಿಕ ಸ್ವರೂಪವನ್ನು ಕಳಚಿಕೊಂಡು ವೈಜ್ಞಾನಿಕ ಮನೋಧರ್ಮದ, ವೈಚಾರಿಕ ಕವಚವನ್ನು ತೊಟ್ಟುಕೊಂಡು ನಳನಳಿಸುತ್ತವೆ. ಆಧುನಿಕ ವಾತಾವರಣದಲ್ಲಿ ಉಸಿರಾಡಲು ಬಯಸುತ್ತವೆ. ಈ ರೀತಿಯ ಪಾತ್ರ ಚಿತ್ರಣದಲ್ಲಿ ಲೇಖಕರ ಸೃಜನಶೀಲತೆಗೆ ಗರಿಮೂಡಿದೆ. 'ಸಾಲದ ಹೆಣ' ನಾಟಕದಲ್ಲಿ ಪ್ರಸ್ತುತ ಸಾಮಾಜಿಕ ಬದುಕಿನ ವಾಸ್ತವ ಚಿತ್ರಣವಿದೆ. ಈ ನಾಟಕವು ಬಡವರ, ರೈತರ ಹಾಗೂ ಜಾಗತೀಕರಣದ ಸಮಸ್ಯೆಗಳನ್ನು ಪ್ರಸ್ತಾಪಿಸುವುದರ ಮೂಲಕ ಪ್ರೇಕ್ಷಕರನ್ನು ಚಿಂತನೆಗೆಡೆ ಮಾಡಿಕೊಡುತ್ತದೆ. 'ಎಲೆ ಮರೆಯ ಹೂಗಳು' ನಾಟಕವು ಇಂದಿನ ಸಮಾಜಕ್ಕೆ ಅಗತ್ಯವಿರುವ ಹೊಸ ಶಿಕ್ಷಣ ಪದ್ಧತಿಯ ಅಗತ್ಯವನ್ನು ಹೇಳುತ್ತದೆ. ಸಬರದವರ ಬೀದಿ ನಾಟಕಗಳು ಕೇವಲ ಅಕ್ಷರಕಲಿಕೆಯ ಮಹತ್ವವನ್ನು ಸಾರಿ ಹೇಳಲಾರದೆ ಪರಿಸರ ಮಾಲಿನ್ಯ, ಪರಿಸರ ರಕ್ಷಣೆ, ಆರೋಗ್ಯದಂತಹ ವಿಷಯ ಗಳ ಬಗೆಗೆ ಆಲೋಚಿಸಲು ಹಚ್ಚುತ್ತವೆ. ಪ್ರಸ್ತುತ ಸಾಮಾಜಿಕ, ಜಾನಪದ ಕಥಾವಸ್ತುವಿನ ಮೂಲಕ ಹಾಗೂ ಆಕರ್ಷಕ ಶೈಲಿಯಿಂದ ಮನಸ್ಸನ್ನು ತಿಳಿಗೊಳಿಸುತ್ತವೆ. ಒಟ್ಟಿನಲ್ಲಿ ಸಬರದವರ ಬೀದಿ ನಾಟಕಗಳು ಒಂದಿಲ್ಲೊಂದು ರೀತಿಯಲ್ಲಿ ಜನರ ಮೇಲೆ ಪ್ರಭಾ ವವನ್ನು ಬೀರುತ್ತವೆ. ವೈಚಾರಿಕತೆಯನ್ನು ಬೆಳೆಸುತ್ತವೆ. ಅರಿವಿನ ಬೆಳಕನ್ನು ನೀಡುತ್ತವೆ. ಹೋರಾಟದ ಬದುಕನ್ನು ಕಲಿಸುತ್ತವೆ. ಲೇಖಕರ ಆಶಾವಾದಿಯ ನಿಲುವು, ಅಸಮಾನತೆ - ಅನ್ಯಾಯದ ವಿರುದ್ಧ ಹೋರಾಡುವ, ಮಾನವಿಯತೆಯನ್ನು ಪ್ರತಿಪಾದಿಸುವ, ವೈಜ್ಞಾನಿಕವಾಗಿ ಆಲೋಚಿಸುವ, ಈ ಮೊದಲಾದ ವಿಚಾರಗಳು ನಾಟಕಗಳಲ್ಲಿ ದಟ್ಟ ವಾಗಿ ಮೂಡಿವೆ.

ರಮೇಶ ಎಸ್. ಆರ್ ಅವರ 'ತಾಳಿ, ಸ್ವಲ್ಪ ಯೋಚ್ನೆ ಮಾಡಿ' ನಾಗಣ್ಣನವರ 'ಅಕ್ಕ ತಮ್ಮ' , ಮುದ್ದು ಕೃಷ್ಣ ಅವರ 'ಅಲ್ಲಾವುದ್ದೀನ ಅಕ್ಷರ ದೀಪ', ಶಶಿಧರ ಬಾರಿ ಘಾಟ ಅವರ 'ಗೊಂಬೆ ಹೇಳಿದ ಕಥೆ', ಕುಕ್ಕರ ಹಳ್ಳಿ ಬಸವರಾಜು ಅವರ 'ದಿಕ್ಕಿಲ್ಲದವರು' - ಈ ಮೊದಲಾದ ನಾಟಕಗಳಲ್ಲಿ ಲೇಖಕರು ಬದುಕಿನ ಅನೇಕ ಸಂಗತಿಗಳನ್ನು ಜನರಿಗೆ ತಿಳಿಸಲು ಪ್ರಯತ್ನಿಸಿದ್ದಾರೆ. ಸಮಸ್ಯೆಗಳನ್ನು ಯಥಾವತ್ತಾಗಿ ಚಿತ್ರಿಸದೆ ಕಲಾತ್ಮಕವಾಗಿ ಚಿತ್ರಿಸಿದ್ದಾರೆ. ಎಲ್ಲಾ ಲೇಖಕರು ತಮ್ಮ ಬೀದಿನಾಟಕಗಳಲ್ಲಿ ಹಾಡುಗಳನ್ನು ಸಂದರ್ಭೋಚಿತವಾಗಿ ಬಳಸಿದ್ದಾರೆ. ಬೀದಿ ನಾಟಕಗಳ ಜೀವನಾಡಿ ಯೆಂದರೆ ಹಾಡುಗಳು, ಸರಳವಾದ ಸಂಭಾಷಣೆಗಳು, ವಾಸ್ತವಚಿತ್ರಣ, ಕಲಾತ್ಮಕತೆ ಎಂದು ಹೇಳಬಹುದು.

ಬೀದಿ ನಾಟಕ ಚಳುವಳಿಯ ಆಶಯಕ್ಕನುಗುಣವಾಗಿ ಕೆಲವು ಬೀದಿನಾಟಕಗಳು ರಚನೆಗೊಂಡರೆ ಇನ್ನು ಕೆಲವು ಬೀದಿ ನಾಟಕಗಳು ಚಳುವಳಿಯ ಆಶಯವನ್ನು ಅರಗಿಸಿ

ಕೊಂಡು ಮತ್ತೊಂದು ಸಂಸ್ಕೃತಿಯ ಹುಟ್ಟಿಗೆ ಕಾರಣವಾಗುವ ನಿಟ್ಟಿನಲ್ಲಿ ರಚನೆಗೊಂಡಿವೆ. ರಂಗಮಾಧ್ಯಮದಲ್ಲಿಯೇ ಸ್ವಲ್ಪ ಸಮಯದಲ್ಲೇ ಜನಮನವನ್ನು ಆಕರ್ಷಿಸಿದ ಬಲವಾದ ಮಾಧ್ಯಮವೆಂದರೆ ಬೀದಿ ನಾಟಕಗಳು. ಬೀದಿ ನಾಟಕಗಳು ಒಂದು ರೀತಿಯಲ್ಲಿ ಬೀದಿಯಲ್ಲಿ ಆ ಕ್ಷಣಕ್ಕೆ ಹುಟ್ಟಿದ ಪಾಠಶಾಲೆಗಳು ಎಂದು ಹೇಳಬಹುದು. ಬೀದಿನಾಟಕಗಳು ಭೂತ - ಭವಿಷ್ಯತ್ ಬದುಕಿನ ಬಗೆಗೆ ಆಲೋಚಿಸದೆ ವರ್ತಮಾನದ ಬದುಕಿನ ಬಗೆಗೆ ಆಲೋಚಿಸುತ್ತವೆ. ರಂಗಮಾಧ್ಯಮದ ಪ್ರಭಾವ, ಪರಿಣಾಮದ ದೃಷ್ಟಿಯಿಂದ ಬೀದಿ ನಾಟಕಗಳ ಸಾಧನೆ ಗಮನಾರ್ಹವಾಗಿದೆ. ಬೀದಿ ನಾಟಕದ ಅನೇಕ ಸಾಧ್ಯತೆಗಳ ನಡುವೆಯೂ ಅದರ ಮಿತಿಗಳನ್ನು ಮರೆಯುವಂತಿಲ್ಲ. ಬೀದಿನಾಟಕ ರಂಗಮಾಧ್ಯಮದ ಪ್ರಭೇದವಾಗಿ ಬೆಳೆದರೂ ಒಂದು ಸಾಹಿತ್ಯ ಚಳುವಳಿಯ ಪ್ರಕಾರವಾಗಿ ಬೆಳೆಯಿತೆಂಬುದನ್ನು ಅಲ್ಲಗಳೆಯುವಂತಿಲ್ಲ. ಒಂದು ಉದ್ದೇಶಕ್ಕಾಗಿ ಹುಟ್ಟಿಕೊಳ್ಳುವ ಕಲೆಯಾಗಿರಲಿ ಅಥವಾ ಪ್ರಕಾರವಾಗಿರಲಿ ಬಹಳ ಕಾಲದವರೆಗೆ ನಿಲ್ಲುವುದಿಲ್ಲ. ಈ ವಿಚಾರವು ಬೀದಿ ನಾಟಕಗಳಿಗೆ ಅನ್ವಯಿಸಿ ನೋಡಿದರೆ ಬೀದಿರಂಗಭೂಮಿಯ ವಿಫಲತೆ ಕಂಡುಬರುತ್ತದೆ. ಇಂದು ಸಾಹಿತ್ಯ ಚಳುವಳಿ ನಿಷ್ಕ್ರಿಯೆಗೊಂಡಂತಹ ಸಂದರ್ಭದಲ್ಲಿ ಬೀದಿ ನಾಟಕಗಳ ರಚನೆಯ ಪ್ರಮಾಣವೂ ಕಡಿಮೆಯಾಗಿದೆ. ಆದರೂ ಬೀದಿ ರಂಗಭೂಮಿಯೂ ಕಲೆಯನ್ನು ಅಭಿವ್ಯಕ್ತಗೊಳಿಸುವ ಒಂದು ಉತ್ತಮ ವಿಧಾನ ಎನ್ನುವ ದೃಷ್ಟಿಯಿಂದ ಬೀದಿನಾಟಕಗಳ ಅಧ್ಯಯನ ನಡೆಯಬೇಕಾಗಿದೆ.

ರೇಣುಕಾ ಎಲ್ಲಮ್ಮ

(ಅಂತಸ್ಥಗೊಂಡ ಮಾನವ ಚರಿತ್ರೆ)

- ನಾರಾಯಣಸ್ವಾಮಿ ಕೆ.ವೈ.

ಈ ಸಂಕಲನವನ್ನು ಸಂಗ್ರಹಿಸಿ ಸಿದ್ಧಪಡಿಸಿದವರು ಡಾ. ಕೃಷ್ಣಮೂರ್ತಿ ಹನೂರು. ಈ ಪುಸ್ತಕವು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಬೆಳ್ಳಿ ಬಿಟ್ಟ ಬಳ್ಳಿ ಮಾಲಿಕೆಯ ಮೂಲಕ ಬೆಳಕು ಕಂಡಿದೆ. ಪುರಾಣ, ಬಲಿದಾನ, ತ್ಯಾಗ, ಪಾತಿವ್ರತ್ಯ, ಮೌಲ್ಯಗಳನ್ನು ಗುರುತ್ವ ಕೇಂದ್ರವಾಗಿವುಳ್ಳ ಸ್ತ್ರೀ ಪ್ರಧಾನ ಕಥನಗಳು ಅನನ್ಯ ಸಂಕಲನ ಇದಾಗಿದೆ. ಈ ಸಂಕಲನದಲ್ಲಿರುವ ಎಲ್ಲಮ್ಮ ರೇಣುಕಾ ಕಥನವು ಅನೇಕ ಕಾರಣಗಳಿಂದ ಅತ್ಯಂತ ಅಚ್ಚರಿಯನ್ನು, ಅಪೂರ್ವ ಒಳನೋಟಗಳನ್ನು, ಅಕ್ಷರ ಚರಿತೆಯೂ ದಾಖಲಿಸದ, ಚರಿತ್ರೆಯಲ್ಲಿ ನಡೆದ ಅತ್ಯಂತ ಸೂಕ್ಷ್ಮ ಸಂಘರ್ಷಗಳನ್ನು, ಸಾಂಸ್ಕೃತಿಕವಾಗ್ವಾದವನ್ನು, ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಯನ್ನು ದಾಖಲಿಸಿದೆ. ಸಮಾಜವೊಂದರಲ್ಲಿ ಉಂಟಾಗುವ ಮೌಲ್ಯ ಪಲ್ಲಟಗಳಿಗೆ, ಪ್ರಧಾನ - ಅಧೀನ ಶಕ್ತಿಗಳ ನಡುವಿನ ಘರ್ಷಣೆಗಳಿಗೆ, ಜನಪದ ಸಮಷ್ಟಿ ಪ್ರಜ್ಞೆ ಪ್ರತಿಕ್ರಿಯಿಸಿರುವ ಕ್ರಮವನ್ನು ಈ ಕಥನ ಮಂಡಿಸುತ್ತದೆ. ಭಾರತೀಯ ಸಂಸ್ಕೃತಿ ಮತ್ತು ಸಮಾಜದ ಕೆಲ ಸಂಕೀರ್ಣ ಸಮಸ್ಯೆಗಳನ್ನು ಜನಪದ ಸಂಸ್ಕೃತಿಯ ಸಂದುಕಟ್ಟಿನಲ್ಲಿ ವಿವರಿಸಿಕೊಳ್ಳುವ ಅಗತ್ಯವನ್ನು ಈ ಕಥನದ ಓದು , ಅಧ್ಯಯನಗಳು ದೃಢಪಡಿಸುತ್ತವೆ. ಇಂದು ಜನಪದದ ಎಲ್ಲ ಕಲೆ, ಜೀವನ, ಮೌಲ್ಯ ಮುಂತಾದ ಪರಿಕರಗಳನ್ನು ವಿಶ್ಲೇಷಿಸಲು, ವೈಜ್ಞಾನಿಕ ಅಧ್ಯಯನದ ಹೆಸರಿನಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿರುವ ಎಲ್ಲಾ ಜ್ಞಾನಶಾಖೆಗಳಿಂದ ಪಾರಿಭಾಷಿಕಗಳನ್ನು ಎರವಲು ತಂದು ಅಧ್ಯಯನ ನಡೆಸುತ್ತಿರುವುದು ನಿಜದ ಸಂಗತಿಯೇ ಆಗಿದೆ. ಆದರೆ ಇಲ್ಲಿ ಉಲ್ಲೇಖಿಸಬೇಕಿರುವ ಮುಖ್ಯವಾದ ವಿಷಯವೊಂದಿದೆ. ಜನಪದ ಪರಿಕರಗಳಲ್ಲಿಯೇ ಅಂತಸ್ಥಗೊಂಡಿರುವ ಚರಿತ್ರೆ, ಸಮಾಜ , ಧರ್ಮ, ವಿಜ್ಞಾನದಂಥ ಜ್ಞಾನಮೂಲಗಳಿಂದ ಇಂದು ನಮ್ಮ ಸಾಂಸ್ಕೃತಿಕ ಚರಿತ್ರೆಯನ್ನು, ಸಾಮಾಜಿಕ ಜೀವನವನ್ನು, ಧಾರ್ಮಿಕ ಮೌಲ್ಯಗಳನ್ನು ಪುನರ್ ರಚಿಸಿಕೊಳ್ಳಬೇಕಿದೆ. ಈ ಬಗೆಯ ಆತ್ಮ ಪರಿವೀಕ್ಷಣೆಯ ಮಾದರಿಯ ಶೋಧ, ಇವೊತ್ತಿನ ಜರೂರು, ಅನಿವಾರ್ಯತೆ ಆಗಿದೆ. ಎಲ್ಲಮ್ಮ ರೇಣುಕಾ ಕಥನವನ್ನು ಕುರಿತ ಟಿಪ್ಪಣಿ ಈ ಬಗೆಯದಾಗಿದೆ. ಜಾನಪದ ಕಥನವೊಂದು ತನ್ನಲ್ಲಿ ಬಚ್ಚಿಟ್ಟುಕೊಂಡಿರುವ ಚರಿತ್ರೆಯ ಗುಟ್ಟುಗಳನ್ನು ಹೊರಗೆಳೆಯುವುದು ಈ ಟಿಪ್ಪಣಿಯ ಮುಖ್ಯ ಉದ್ದೇಶವಾಗಿದೆ.

ವೈದಿಕ ಹಿನ್ನೆಲೆ

ಎಲ್ಲಮ್ಮ ಅಥವಾ ರೇಣುಕಾದೇವಿ, ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಅತ್ಯಂತ ಪ್ರಬಲ ಮಾತೃದೇವತೆ. ಬೆಳಗಾಂ ಜಿಲ್ಲೆಯ ಸವದತ್ತಿಯಲ್ಲಿ ಈಕೆಯ ಶಕ್ತಿ ಕೇಂದ್ರವಿದೆ. ಇಲ್ಲಿ ಪ್ರತಿ ವರ್ಷ ಲಕ್ಷಾಂತರ ಭಕ್ತರು ನಾಡಿನ ಎಲ್ಲಾ ಕಡೆಯಿಂದ ಬಂದು ಜಾತ್ರೆ ಜರುಗಿಸಿ, ಪೂಜೆ ಸಲ್ಲಿಸಿ ಹೋಗುತ್ತಾರೆ. ಈ ಎಲ್ಲಮ್ಮ ದೇವತೆಯಾಗಿ ನೆಲೆಗೊಳ್ಳುವ ಮೊದಲು ಜಮದಗ್ನಿ ಎಂಬ ಋಷಿಯ ಪತ್ನಿಯಾಗಿದ್ದಳು. ಈಕೆ ಜನಪದ ಮಾತೃದೇವತೆಯಾಗಿ ರೂಪಾಂತರಗೊಂಡಿದ್ದು ಪ್ರಬಲ ಸ್ತ್ರೀ ದೇವತೆಯಾಗಿ ನೆಲೆಗೊಂಡಿದ್ದರ ಹಿನ್ನೆಲೆಯನ್ನು. ಶಕ್ತಿಯುತ ದೇವತೆಯಾಗಿ ನೆಲೆಗೊಂಡ ಘಟನೆಗಳನ್ನು ಜನಪದ ಜಗತ್ತು ಮಾತೃಪ್ರಧಾನ ಹಿನ್ನೆಲೆಯಲ್ಲಿ ವಿವರಿಸಿದ್ದರೆ, ಶಿಷ್ಟಪುರಾಣಗಳು ರೇಣುಕಾದೇವಿಯ ಪತನವನ್ನು ನಿರಾಕರಣೆ ಅಥವಾ ಬಹಿಷ್ಕಾರವನ್ನು, ಪಿತೃಪ್ರಧಾನ ಹಿನ್ನೆಲೆಯಲ್ಲಿ ನಿರೂಪಿಸಿವೆ. ಶಿಷ್ಟ ಪುರಾಣಗಳು ಪ್ರಸ್ತಾಪಿಸುವ ಜಮದಗ್ನಿ ಋಷಿಯ ಕಥೆಯೊಳಗೆ ರೇಣುಕಾ ದೇವಿ ಓರ್ವ ಸಾಮಾನ್ಯ ಗೃಹಿಣಿ. ಆಕೆ ತ್ರಿಕರಣ ಶುದ್ಧಿಯಾಗಿ ಗಂಡನನ್ನು ಭೂಲೋಕ ದೇವರೆಂದು ನಂಬಿದವಳು. ಈಕೆ ಎಂಥ ಪವಿತ್ರತೆ ಎಂದರೆ, ಪ್ರತಿದಿನವು ನದಿಗೆ ಹೋಗಿ ಮಡಿಯಾಗಿ ತನ್ನ ಪಾತಿವ್ರತ್ಯದ ಬಲದಿಂದ ಮರಳಲ್ಲಿ ಗಡಿಗೆಯನ್ನು ಮಾಡಿಕೊಂಡು, ಸರ್ಪವನ್ನು ಸಿಂಬೆಯಾಗಿಸಿಕೊಂಡು ನೀರನ್ನು ತಂದು ಗಂಡನ ಸೇವೆ ಮಾಡಿಕೊಂಡು ಇದ್ದವಳು. ಆದರೆ ಒಂದು ದಿನ ಈಕೆ ನದಿಗೆ ಹೋದಾಗ ಅಲ್ಲಿ ಚಿತ್ರ ರಥ ಎಂಬ ಗಂಧರ್ವ ತನ್ನ ಸತಿಯೊಡನೆ ಜಲಕ್ರೀಡೆಯಾಡುತ್ತಿದ್ದನಂತೆ. ಆ ದೃಶ್ಯವನ್ನು ಕಂಡು ರೇಣುಕೆ ಒಂದರಗಳಿಗೆ ಚಿತ್ರರಥದಲ್ಲಿ ಅನುರಕ್ತಳಾದಳಂತೆ. ಹೀಗೆ ಮಾನಸಿಕವಾಗಿ ವಿಕಲ್ಪಳಾದ ರೇಣುಕಾದೇವಿ ಮರಳ ಗಡಿಗೆ ಮಾಡಲಾಗದೆ, ಸರ್ಪವನ್ನು ಸೋಕಲಾರದೆ ಆಶ್ರಮಕ್ಕೆ ಹಿಂದುರುಗಿದಳು. ತನ್ನ ತಪೋಬಲದಿಂದ ನಡೆದ ಘಟನೆಯನ್ನು ಅರಿತ ಜಮದಗ್ನಿ ಆಕೆ ಪಾತಿವ್ರತ್ಯ ನಷ್ಟಗೊಂಡ ಪತಿತಳೆಂದು ತಿರಸ್ಕರಿಸುತ್ತಾನೆ. ಅಲ್ಲದೆ ತನ್ನ ಐದು ಜನ ಮಕ್ಕಳನ್ನು ಕರೆದು ತಾಯಿಯ ಶಿರ ಕಡಿವಂತೆ ಆಜ್ಞೆ ವಿಧಿಸುತ್ತಾನೆ. ಯಾರೂ ಮುಂದು ಬಾರದಿದ್ದಾಗ ಕಿರಿಮಗ ಪರಶುರಾಮ ತಂದೆ ಆಜ್ಞೆಯಂತೆ ತಾಯಿಯ ತಲೆ ಕಡಿಯುತ್ತಾನೆ. ಇದರಿಂದ ಸಂತೋಷಗೊಂಡ ಜಮದಗ್ನಿ ಪರಶುರಾಮನಿಗೆ ವರ ಬೇಡುವಂತೆ ಕೇಳುತ್ತಾನೆ. ಆಗ ಪರಶುರಾಮ ತನ್ನ ತಾಯ ಬದುಕಿಸು ಎಂದು ವರ ಪಡೆದು ರೇಣುಕೆಗೆ ಜೀವದಾನ ಮಾಡುತ್ತಾನೆ. ಆದರೆ ಇದರಿಂದ ಪರಶುರಾಮನಿಗೆ ತಾಯಿ ಸಿಕ್ಕಳೆ ಹೊರತು ರೇಣುಕೆಗೆ ಜಮದಗ್ನಿಯ ಪತ್ನಿತ್ವ ಮರಳಿ ಸಿಕ್ಕಲಿಲ್ಲ. ಆಕೆಯ ಮೇಲಿನ ಪಾತಿವ್ರತ್ಯ ಭಂಗದ ಆಪಾದನೆಯ ಅಪವಾದವು ಅಳಿಸಲಿಲ್ಲ. ಈ ಕಥೆಯಲ್ಲಿ ಹೆಣ್ಣು ಮಾನಸಿಕವಾಗಿಯೂ ಪರಪುರುಷನನ್ನು ಕಲ್ಪಿಸಿಕೊಳ್ಳುವುದು ಪತಿವ್ರತಾ ಧರ್ಮಕ್ಕೆ ವಿರುದ್ಧವೆಂದು ಲೋಕಕ್ಕೆ ಸಾರಿ ಹೇಳುವ ಪುರುಷ ಹಿತಾಸಕ್ತಿಯನ್ನು ಕೊಂಡಾಡುವ ವಿವರಗಳೇ ತುಂಬಿ ಹೋಗಿವೆ. ಇದೇ ಬಗೆಯ ಸೀತೆ, ಅಹಲ್ಯೆ,

ದ್ರೌಪದಿ ಮುಂತಾದ ನೂರಾರು ಉದಾಹರಣೆಗಳು ವೈದಿಕ ಸಾಹಿತ್ಯದ ತುಂಬಾ ಸಿಗುತ್ತವೆ.

ಜನಪದ (ಕಥನ) ಹಿನ್ನೆಲೆ

ಎಲ್ಲಮ್ಮ ರೇಣುಕಾ ಕಥನದಲ್ಲಿ ಎಲ್ಲಮ್ಮ ಆದಿಶಕ್ತಿ ಪಡೆದ ಸಂಪನ್ನೆ. ಈಕೆ ಕಾರ್ತಿಕ ರಾಜರಾದ ಏಳು ಜನ ಅಣ್ಣಂದಿರಿಗೆ ತಂಗಿ. ಈಕೆಗೆ ಮದುವೆಯ ವಯಸ್ಸು ಪ್ರಾಪ್ತವಾಗಲು ಎಲ್ಲ ಕಡೆಗಳಿಂದ ವರರ ಭಾವಚಿತ್ರಗಳನ್ನು ತರಿಸುತ್ತಾರೆ. ಮುರಿದ ಮುಗುತಿ ತೊಡಲಾರೆ. ಸಾಯುವ ಗಂಡನ ವರಸಲಾರೆ ಎಂದು ಆ ಎಲ್ಲಾ ವರರನ್ನು ಎಲ್ಲಮ್ಮ ತಿರಸ್ಕರಿಸುತ್ತಾಳೆ. ತನಗೆ ತಕ್ಕ ವರನನ್ನು ಆಯ್ಕೆ ಮಾಡಿಕೊಳ್ಳಲು ಮನೆ ಬಿಟ್ಟು ಹೊರಡುತ್ತಾಳೆ. ಹಾದಿಯಲ್ಲಿ ಭೇಟಿಯಾದ ಕೊರವಂಜಿಯ ಸಲಹೆಯಂತೆ ಗೋಕರ್ಣದ ಬೆಟ್ಟದಲ್ಲಿ ತಪಸ್ಸು ಮಾಡುತ್ತಿದ್ದ ಜಮದಗ್ನಿಯನ್ನು ವಿವಾಹವಾಗುವಂತೆ ಕೇಳುತ್ತಾಳೆ. ಆತ ಮದುವೆಗೆ ಕೆಲ ಷರತ್ತುಗಳನ್ನು ಒಡ್ಡುತ್ತಾನೆ. ಆ ಷರತ್ತುಗಳನ್ನು ಒಪ್ಪಿ ಎಲ್ಲಮ್ಮ ಆತನನ್ನು ವಿವಾಹವಾಗುತ್ತಾಳೆ. ಆದರೆ ಈ ದಾಂಪತ್ಯವು ಫಲಿಸದೆ ರೇಣುಕಾ ಗರ್ಭವತಿಯಾಗದೆ *ಬಂಜೆ* ಎಂಬ ಸಮಾಜದ ನಿಂದನೆಗೆ ಗುರಿಯಾಗುತ್ತಾಳೆ. ಆದರೆ ರೇಣುಕಾ ತಾನು ಬಂಜೆ ಎನ್ನುವುದನ್ನು ನಂಬಲು ಸಿದ್ಧಳಿಲ್ಲ. ಗಂಡನ ಮನೆ ಬಿಟ್ಟು ಹೊರ ನಡೆಯುತ್ತಾಳೆ. ಕಾಡಿನಲ್ಲಿ ಘೋರ ಶೋಕವ ಮಾಡಿ ತ್ರಿಮೂರ್ತಿಗಳನ್ನು ಪ್ರಸನ್ನಗೊಳಿಸಿಕೊಂಡು ಅವರಿಂದ ಗಜನಿಂಬೆ ಹಣ್ಣು ಪಡೆದು ಬಸಿರಾಗುತ್ತಾಳೆ. ಈಕೆಗೆ ಬಯಕೆಗಳು ಶುರವಾಗಿ, ಅವುಗಳನ್ನು ತೀರಿಸಿಕೊಳ್ಳುವ ಸಲುವಾಗಿ ಊರಿಂದ ಊರಿಗೆ ಸಂಚರಣೆ ಕೈಕೊಂಡು ನೆಲ, ಜಲಗಳನ್ನು ಅಕ್ರಮವಾಗಿ ವಶಪಡಿಸಿಕೊಂಡು, ಆಸ್ತಿಯಾಗಿಸಿಕೊಂಡಿದ್ದ ಪುರುಷರ ಗರ್ವಭಂಗ ಮಾಡಿ ಭೂಮಿ ಮತ್ತು ಜಲಗಳ ಸೆರೆ ಬಿಡಿಸುತ್ತಾಳೆ. ಅದೇ ಸಮಯಕ್ಕೆ ತಿಂಗಳು ತುಂಬಿ ಹೆರಿಗೆಯ ಬೇನೆ ಶುರುವಾಗಿ ಚಂದ್ರಗುತ್ತಿಯಲ್ಲಿ ತಂಗುತ್ತಾಳೆ. ಮೊದಲ ಸೂಲು ಆದ್ದರಿಂದ ತವರು ಮನೆಗೆ ಕರೆ ಹೋಗುತ್ತದೆ. ಅಣ್ಣಂದಿರಿಗೆ ಅದೇ ಸಮಯಕ್ಕೆ ತಂಗಿಗೆ ಮಗ ಹುಟ್ಟಿ ತಮ್ಮನ್ನು ಕೊಂದು ರಾಜ್ಯ ಕಿತ್ತುಕೊಂಡಂತೆ ಕನಸಾಗುತ್ತದೆ. ಆಗ ಅಣ್ಣಂದಿರು ತಂತ್ರ ಹೂಡಿ ಹೆಣ್ಣು ವೇಷದ ಗಂಡು, ಬಜ್ಜಣ್ಣ ಎಂಬುವವನ್ನು ಸೂಲಗಿತ್ತಿಯಾಗಿ ಕಳುಹಿಸಿಕೊಡುತ್ತಾರೆ. ಹೆಣ್ಣು ಹುಟ್ಟಿದರೆ ಉರಿಕೊಯ್ದು ಬಾ, ಗಂಡು ಹುಟ್ಟಿದರೆ ಶಿರಕೊಯ್ದು ಬಾ ಎಂದು ಆದೇಶಿಸಿ ಕಳುಹಿಸುತ್ತಾರೆ. ಆದರೆ ಈ ವೇಷಧಾರಿ ಸೂಲಗಿತ್ತಿಯ ಮೋಸವನ್ನು ಅರಿತ ಎಲ್ಲಮ್ಮ ಅವನನ್ನು ಷಂಡನಾಗುವಂತೆ ಶಪಿಸುತ್ತಾಳೆ. ಪರಶುರಾಮ ಅವನನ್ನು ಕೊಲ್ಲುತ್ತಾನೆ.

ಹುಟ್ಟಿನಿಂದಲೇ ತಂದೆಯ ಗುರುತಿಲ್ಲದ ಬಾಲಕ ಪರಶುರಾಮ ಸಮಾಜದಲ್ಲಿ ಅಕ್ರಮ ಶಿಶುವೆಂಬ ಅಪವಾದಕ್ಕೆ, ಅವಮಾನಕ್ಕೆ ಗುರಿಯಾಗಬೇಕಾಗುತ್ತದೆ. ಸಮಾಜದ ನಿಂದೆ ಬಲವಾದಂತೆ ಪರಶುರಾಮ ತನ್ನ ತಂದೆ ಯಾರೆಂದು ತಿಳಿಯಲು ಕಾತರ

ನಾಗುತ್ತಾನೆ. ತಾಯಿ ಅನೇಕ ಸಬೂಬುಗಳನ್ನು ಹೇಳಿ ತಪ್ಪಿಸಿಕೊಳ್ಳುತ್ತಾಳೆ. ಆದರೆ ಮುಂದೆ ಮಗ ಪರಶುರಾಮ ತಾಯಿಯ ಶೀಲವನ್ನು ಶಂಕಿಸಿ ಆಕೆಯ ಪಾವಿತ್ರ್ಯವನ್ನು ಅನುಮಾನಿಸುತ್ತಾನೆ. ಅನೇಕ ಪರೀಕ್ಷೆಗಳಿಗೆ ತಾಯಿಯನ್ನು ಗುರಿಪಡಿಸುತ್ತಾನೆ. ಆಕೆ ಎಲ್ಲಾ ಪರೀಕ್ಷೆಗಳಲ್ಲಿ ಜಯಿಸಿದರೂ ಪರಶುರಾಮ ತಾಯಿಯ ನಿಜಾಯಿತಿಯನ್ನು ಒಪ್ಪುವುದಿಲ್ಲ. ಕೊನೆಗೆ ಮಗನ ಹಿಂಸೆ ತಡೆಯಲಾರದೆ ಎಲ್ಲಮ್ಮ ಗಂಡ ಜಮದಗ್ನಿ ಎಂದು ಹೆಸರು ಹೇಳುತ್ತಾಳೆ. ತಂದೆಯನ್ನು ಹುಡುಕಿಹೋದ ಪರಶುರಾಮನಿಗೆ ಜಮದಗ್ನಿ ಕಾರ್ತೀಕ ರಾಜರ ಬೇಟೆಯಲ್ಲಿ ಕೊಲ್ಲಲ್ಪಟ್ಟ ಸಂಗತಿ ತಿಳಿದು ಮಾವಂದಿರ ಮ್ಯಾಲೆ ವ್ಯಾಗ್ರಗೊಂಡು ಕಾರ್ತೀಕ ರಾಜರ ರಾಜ್ಯಕ್ಕೆ ಹೋಗಿ ಅವರನ್ನು ಕೊಂದು ರಾಜ್ಯವನ್ನು ವಶಪಡಿಸಿಕೊಂಡು ತಂದೆಯ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳುತ್ತಾನೆ.

ಕಥನದ ಕೊನೆಯಲ್ಲಿ ರೇಣುಕಾ ತನ್ನ ಕಣ್ಣ ಮುಂದೆಯೇ ತನ್ನ ತವರು ಸರ್ವ ನಾಶವಾದುದ್ದನ್ನು ತನ್ನ ಮಗನು ಮಾಡಿದ್ದು ಮಹಾಪಾಪ ಕಾರ್ಯವೆಂದು ಬಗೆದು ಇಂಥ ಪಾಪಿಷ್ಟನ ತಾಯಿಯಾಗಿ ಬದುಕಿರಬಾರದೆಂದು ತನ್ನನ್ನೇ ಶಪಿಸಿಕೊಂಡು ಭೂಮಿಗಿಳಿದು ಹೋಗುತ್ತಾಳೆ.

ಇಡೀ ಕಥನವು ಮಾತೃಪ್ರಧಾನ ಸಮಾಜವು ಆರ್ಯರಿಂದ ಪಿತೃಪ್ರಧಾನಕ್ಕೆ ಪರಿವರ್ತನೆಯಾದ ನಂತರ ಪುರುಷ ಮೌಲ್ಯಗಳನ್ನು ಜನಪದ ಕ್ರಮಗಳು ಒಪ್ಪಿಕೊಂಡಿಲ್ಲದ, ನೆಲೆಯನ್ನು ಕಟ್ಟಿಕೊಡುತ್ತದೆ. ಜನಪದರ ಜೀವನ ಮೌಲ್ಯಗಳು, ಸ್ಮೃತಿಗಳು ಇನ್ನೂ ಮಾತೃ ಪರಂಪರೆಯಲ್ಲಿಯೇ ತಮ್ಮ ಗುರುತುಗಳನ್ನು ಉಳಿಸಿಕೊಂಡಿರುವುದರ ಸಾಕ್ಷಿಯಾಗಿ ನೋಡಬಹುದು.

ಓದಿನ ಗ್ರಹಿಕೆಗಳು

ಎಲ್ಲಮ್ಮ ರೇಣುಕಾ ಕಥನವನ್ನು ಓದುವಾಗಿನ ನನ್ನ ಗ್ರಹಿಕೆಗಳನ್ನು ಪ್ರೊ. ಎ.ಕೆ. ರಾಮಾನುಜನ್ ಅವರ ಮಾತೊಂದನ್ನು ಉಲ್ಲೇಖಿಸುವುದರ ಮೂಲಕ ಆರಂಭಿಸಬಹುದು. ''ಕಥೆಗಳು ಭಾರತದ ಘೋಷಿತ ಮೌಲ್ಯಗಳಿಗಿಂತ ಭಿನ್ನವಾದ ಸತ್ಯವನ್ನು ಅನಾವರಣಗೊಳಿಸುತ್ತವೆ''. ಈ ಮಾತು ಎಲ್ಲಮ್ಮ ರೇಣುಕಾ ಕಥನದಲ್ಲಿ ಅಂತಸ್ಥಗೊಳಿಸಿಕೊಂಡಿರುವ ಸಂಗತಿಗಳನ್ನು ಹೆಕ್ಕಿ ತೋರಲು ಸೂಕ್ತ ಮನೋಭೂಮಿಕೆಯನ್ನು ಒದಗಿಸುತ್ತದೆ.

ಎಲ್ಲಮ್ಮ ರೇಣುಕಾಕಥನವನ್ನು ವೈದಿಕ ಪರಂಪರೆ ಹಾಗೂ ಜನಪದ ಪರಂಪರೆಗಳೆರಡೂ ದಾಖಲಿಸಿವೆ. ಈ ಎರಡೂ ಪರಂಪರೆಗಳು ಈ ಕಥನವನ್ನು ಮಂಡಿಸಿರುವ ಸೃಷ್ಟಿಸಿರುವ ಕ್ರಮಗಳು ಭಾರತೀಯ ಸಂಸ್ಕೃತಿಯ ಅನೇಕ ಸಮಸ್ಯೆಗಳ ಮೇಲೆ ಬೆಳಕು

ಚೆಲ್ಲುತ್ತವೆ. ವೈದಿಕ ಪರಂಪರೆಯ ರೇಣುಕಾ ಕಥನ ಪಿತೃಕುಟುಂಬದ ಶ್ರೇಷ್ಠತೆಯನ್ನು ಪ್ರತಿಪಾದಿಸುವ ನೆಲೆಯದಾಗಿದ್ದರೆ, ಜನಪದ ಕಥನವು ಮಾತೃವಂಶ ವಿಚಾರಧಾರೆಯ ಪರವಾಗಿದೆ ಹಾಗೂ ಪಿತೃಕುಟುಂಬ ವ್ಯವಸ್ಥೆಯ ವಿರುದ್ಧ ನಡೆಸಿರುವ ಹೋರಾಟವನ್ನು ಪ್ರತಿರೋಧವನ್ನು ದಾಖಲಿಸಿವೆ.

ಮೇಲುನೋಟಕ್ಕೆ ಎರಡು ಪರಂಪರೆಗಳ ಕಥನಗಳಲ್ಲಿ ನಡೆವ ಪ್ರಧಾನ ಘಟನೆ ರೇಣುಕಾ ಹತ್ಯೆ ವೈದಿಕ ಪುರಾಣಗಳು ರೇಣುಕಾ ಹತ್ಯೆಯನ್ನು ಸಮರ್ಥಿಸುವಂತೆ ಚಿತ್ರಿತವಾಗಿವೆ. ಅಲ್ಲಿ ರೇಣುಕೆ ಒಂದರಘಳಿಗೆ : ಪರಪುರುಷನಲ್ಲಿ ಅನುರಕ್ತಳಾಗಿ ಸತಿಧರ್ಮವನ್ನು ನಷ್ಟಗೊಳಿಸಿಕೊಂಡಿದ್ದರಿಂದ ಶಿರಚ್ಛೇಧನಕ್ಕೆ ಗುರಿಯಾಗುತ್ತಾಳೆ. ಜನಪದ ಕಥನದಲ್ಲಿ ಆಕೆ ಗಂಡನ ಗುರುತನ್ನು ಹೇಳದ ಕಾರಣಕ್ಕಾಗಿ ಕೊಲ್ಲಲ್ಪಡುತ್ತಾಳೆ. ಮತ್ತು ಹೆತ್ತ ಮಗನ ಮುಂದೆ ಪಾತಿವ್ರತ್ಯವನ್ನು ಸಾಬೀತುಮಾಡುವ ಪರೀಕ್ಷೆಗೆ ಒಳಗಾಗುತ್ತಾಳೆ. ತಾಯ್ತನಕ್ಕೆ ಆದ ಅವಮಾನದಿಂದ ಆಕೆ ಸಾಯುತ್ತಾಳೆ. ಈ ಘಟನೆಯನ್ನು ಕಥನದ ಧಾಟಿ ಖಂಡಿಸುತ್ತದೆ. ಎಲ್ಲಮ್ಮನ ಅವಸಾನವು ಭಾರತದಲ್ಲಿ ಮಾತೃಕುಟುಂಬ ಪದ್ಧತಿ ನಾಶಗೊಂಡಿದ್ದರ ದಾಖಲೆಯಾಗಿ ಕಂಡುಬರುತ್ತದೆ.

ಎಲ್ಲಮ್ಮ ರೇಣುಕಾ ಕಥನವು ಭಾರತೀಯ ಸಮಾಜದ ಸಂಕ್ರಮಣಕಾಲದ ದಾಖಲೆಯಾಗಿದೆ. ಇಲ್ಲಿ ಒಂದೆಡೆ ಪುರುಷ ವ್ಯವಸ್ಥೆಯ ಮೌಲ್ಯಗಳು ಬಲ ಪ್ರಯೋಗದಿಂದ, ಆಕ್ರಮಣದಿಂದ ಸಮಾಜವನ್ನು ತನ್ನ ಅದೀನತೆಗೆ ತೆಗೆದುಕೊಳ್ಳಲು ನಡೆಸುತ್ತಿರುವ ವಿವರಗಳು ಸಿಗುವಂತೆಯೇ ಸ್ತ್ರೀ ಪ್ರಧಾನ ವ್ಯವಸ್ಥೆಯ ಮಾತೃ ಮೌಲ್ಯಗಳು ಪುರುಷ ವ್ಯವಸ್ಥೆಯಿಂದ ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು, ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳಲು ನಡೆಸಿರುವ ಸಂಘರ್ಷದ ವಿವರಗಳನ್ನು ಒದಗಿಸುತ್ತದೆ. ಚರಿತ್ರೆ ಮೌನವಹಿಸುವ ಇಂಥ ಅನೇಕ ಘಟನೆಗಳ ಬಗ್ಗೆ ಈ ಕಥನವು ಸೊಲ್ಲೆತ್ತಿ ನುಡಿಯುವುದನ್ನು ಗಮನಿಸಬಹುದು.

ಎಲ್ಲಮ್ಮ ರೇಣುಕಾ ಕಥನ ಅಂತಸ್ಥಗೊಳಿಸಿಕೊಂಡಿರುವ ಮುಖ್ಯವಾದ ವಲಯಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

1. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಶಿಥಿಲವಾಗುತ್ತಿರುವ ಪ್ರಕ್ರಿಯೆಯ ದಾಖಲೆ
2. ಪಿತೃಪ್ರಧಾನ ವ್ಯವಸ್ಥೆಯ ಆಕ್ರಮಣಕ್ಕೆ ತೋರಿರುವ ಪ್ರತಿಭಟನೆಯ ವಿವರಗಳು
3. ಕ್ಷೇತ್ರ ಅಧಿಕೃತ ಪ್ರತಿಪಾದನೆ
4. ಶರಣ ಚಳುವಳಿಯಲ್ಲಿ ಸ್ತ್ರೀ - ಪುರುಷ ತಾರತಮ್ಯ

ಪ್ರಭುತ್ವ ಪರವಾದ ವೈದಿಕ ಚರಿತ್ರೆ ಮತ್ತು ಸಂಸ್ಕೃತಿ ಮರೆಮಾಚಿದ್ದ ಈ ಸಂಗತಿ

ಗಳಿಗೆ ಜನಪದರ ಸಮಷ್ಟಿ ಪ್ರಜ್ಞೆಯು ಎಲ್ಲಮ್ಮ ರೇಣುಕಾ ಕಥನದ ಮೂಲಕ ಪ್ರತಿಕ್ರಿಯಿಸಿದೆ. ಪ್ರತಿಯೊಂದು ಸಮಾಜದಲ್ಲಿ ಅಧಿಕೃತವಾದ ಪಠ್ಯಗಳಿಗೆ ವಿರುದ್ಧವಾಗಿ ಅಲಿಖಿತವಾದ ಅನಧಿಕೃತ ಪಠ್ಯಗಳು ಲಭ್ಯವಿದ್ದು ,ಅವು ಅಧಿಕೃತ ಪಠ್ಯಗಳು ನಿರ್ದೇಶಿಸುವ ಮೌಲ್ಯಗಳನ್ನು ಒಡೆದುಹಾಕುತ್ತಿರುತ್ತವೆ. ಅಂತಹ ಒಂದು ಉದಾಹರಣೆ ಯನ್ನು ಎಲ್ಲಮ್ಮ ರೇಣುಕಾ ಕಥನ ಒಳಗೊಂಡಿದೆ. ಕೆಲ ಘಟನೆಗಳ ನೆರವಿನಿಂದ ಕಥನ ಮಂಡಿಸುವ ಚಾರಿತ್ರಿಕ ಆಯಾಮಗಳನ್ನು ಗಮನಿಸೋಣ.

1. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಶಿಥಿಲವಾಗುತ್ತಿರುವ ಪ್ರಕ್ರಿಯೆಯ ದಾಖಲೆ

ಎಲ್ಲಾ ಪ್ರಾಚೀನ ಸಂಸ್ಕೃತಿಗಳು ತಮ್ಮ ಆರಂಭಿಕ ಕಾಲಗಳಲ್ಲಿ ಮಾತೃಪ್ರಧಾನ ಸಮಾಜಗಳಾಗಿದ್ದ ವಿಚಾರ ಎಲ್ಲರೂ ತಿಳಿದಿರುವುದೇ ಆಗಿದೆ. ಮನುಷ್ಯ , ಭೇಟೆ, ಆಹಾರ ಸಂಗ್ರಹಣೆ, ಕೃಷಿ, ತಂತ್ರಜ್ಞಾನದ ಯುಗಗಳನ್ನು ದಾಟಿಬಂದಿದ್ದಾನೆ. ಆರಂಭದಿಂದಲೂ ನಿಸರ್ಗ ಮತ್ತು ಸ್ತ್ರೀ ನಡುವಿನ ಸಾಮ್ಯತೆಗಳ ಫಲವಾಗಿ ಸ್ತ್ರೀ ಸಮಾಜದಲ್ಲಿ ನಿರ್ಣಯಕ ಶಕ್ತಿಯಾಗಿ ಸ್ವೀಕರವಾಗಿದ್ದಳು ಮತ್ತು ಕೃಷಿ ಸ್ತ್ರೀಯ ಶೋಧನೆ ಎಂಬುದನ್ನು ನಾವು ಬಲ್ಲೆವು. ಭಾರತಕ್ಕೆ ಆರ್ಯರು ಆಗಮಿಸಿದ ನಂತರ ಕೃಷಿಯ ಸಂಪತ್ತು ಮತ್ತು ಆಸ್ತಿ ಹಕ್ಕು ಪುರುಷರ ಕೈವಶವಾಗುವ ಪ್ರಕ್ರಿಯೆ ಆರಂಭಗೊಂಡಿರುವುದನ್ನು ಕಾಣಬಹುದು. ಪುರುಷನ ಪರಮಾಧಿಕಾರವನ್ನು ಎತ್ತಿ ಹಿಡಿದಿರುವ ವೈದಿಕ ಗ್ರಂಥಗಳು ಗೋತ್ರಗಳ ಮೂಲಕ ಪಿತೃವಂಶದ ಗುರುತನ್ನು ದಾಖಲಿಸಿದವೂ ಕೂಡ. ದೇವತೆಗಳ ಮೂಲದ ಗುರುತುಗಳನ್ನು ಮಾತೃ ಮೂಲದಲ್ಲಿ ಹುಡುಕಿಕೊಂಡಿರುವುದು ಆರ್ಯ ಪೂರ್ವದಲ್ಲಿ ಇಲ್ಲಿ ಇದ್ದ ಸಮಾಜವು ಮಾತೃ ಪ್ರಧಾನ ಸಮಾಜವೇ ಆಗಿತ್ತು ಎಂಬುದಕ್ಕೆ ಸಾಕ್ಷಿ ಯಾಗಿದೆ. ಆರ್ಯೀಕರಣದ ಪ್ರಕ್ರಿಯೆಯಲ್ಲಿ ಆಸ್ತಿಯ ಹಕ್ಕು ಒಡೆತನ ಸ್ತ್ರೀಯಿಂದ ಪುರುಷನಿಗೆ ಹಸ್ತಾಂತರಗೊಂಡಿರುವುದು ಅತ್ಯಂತ ಮುಖ್ಯ ಘಟ್ಟವಾಗಿದೆ. ಆದರೆ ಈ ಆಸ್ತಿ ಹಸ್ತಾಂತರ, ಹಕ್ಕುದಾರಿಕೆಗಳು ಸುಲಭವಾಗಿ ಪುರುಷನ ಕೈವಶವಾಗಿರುವ ಸಾಧ್ಯತೆ ಇಲ್ಲ. ಆಗ ಅನೇಕ ಬಗೆಯ ಹಿಂಸೆ, ಒತ್ತಾಯ ಸಂಘರ್ಷಗಳು ನಡೆದಿರುವ ಸಾಧ್ಯತೆ ಇಲ್ಲದಿಲ್ಲ. ಪುರುಷ ವ್ಯವಸ್ಥೆ ನಿಧಾನವಾಗಿ ಮಾತೃ ಸಮಾಜವನ್ನು ಹತ್ತಿಕ್ಕಲು ಪ್ರಾರಂಭಿಸಿದ್ದಂತೆ ಆಸ್ತಿಯ ವಾರಸುದಾರಿಕೆ ತಾಯಿಯಿಂದ ಮಗಳಿಗೆ ಬದಲಾಗಿ ಮಾವನಿಂದ ಸೋದರಳಿಯನಿಗೆ ಹಸ್ತಾಂತರವಾಗುವ ಪ್ರಕ್ರಿಯೆ ನಡೆದಿದೆ ಎಂದು ಭಾರತದ ಶ್ರೇಷ್ಠ ತತ್ವ ಚಿಂತಕರಾದ ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಅವರು ತಮ್ಮ ಸಂಶೋಧನೆ ಯಲ್ಲಿ ಹೀಗೆ ಗುರುತಿಸಿದ್ದಾರೆ.

"ಮಾತೃ ಪ್ರಧಾನ ಕುಟುಂಬದಲ್ಲಿ ಮಾವ ಮತ್ತು ತಾಯಿ ಒಂದೇ ವಂಶದವರು. ಆದರೆ ಮಾವನ ಮಕ್ಕಳು ಆ ವಂಶದವರಲ್ಲ. ಏಕೆಂದರೆ ಮಾವ ಬೇರೆ ವಂಶದ ಹೆಣ್ಣನ್ನು ಮದುವೆಯಾಗಿದ್ದಾನೆ. ಮಾತೃಪ್ರಧಾನ ಸಮಾಜದಲ್ಲಿ ಮಕ್ಕಳು ತಾಯಿ ವಂಶಕ್ಕೆ ಸೇರಿದವರಾಗಿರುತ್ತಾರೆ. ಮಾವನ ಮಕ್ಕಳು ಅತ್ತೆ ವಂಶದವರಾಗಿರುತ್ತಾರೆ. ಹೀಗಾಗಿ

ಮಾತೃ ಪ್ರಧಾನ ಸಮಾಜದ ಕಟ್ಟಳೆಯಂತೆ ಮಾವನ ಸಂಪತ್ತು ಅವನ ಮಕ್ಕಳು ಪಡೆಯು ವುದು ಸಾಧ್ಯವಿಲ್ಲ ಹಾಗಾದರೆ ಈ ಸಂಪತ್ತನ್ನು ಯಾರು ಪಡೆಯುತ್ತಾರೆ? ಅವನ ಸೋದ ರಳಿಯ ಏಕೆ? ಏಕೆಂದರೆ ಮಾತೃಪ್ರಧಾನ ಸಮಾಜದಲ್ಲಿ ಸೋದರಳಿಯನ ವಂಶ ತಾಯಿಯ ಮನೆಯ ವಂಶ, ಮಾವನಿಂದ ಸೋದರಳಿಯ ಸಂಪತ್ತು ಪಡೆಯುವ ಈ ಪದ್ಧತಿಯು ಒಂದು ರೀತಿಯಲ್ಲಿ ಮಾತೃಪ್ರಧಾನ ಸಮಾಜ ಶಿಥಿಲಗೊಳ್ಳುತ್ತಿರುವುದರ ಲಕ್ಷಣ''. (ಮಾತೆಯರು ಮಾನ್ಯರಾಗಿದ್ದಾಗ, ಪು. 42) ಎಂದು ವಿವರಿಸಿದ್ದಾರೆ.

ಮಾನವ ಚರಿತ್ರೆಯನ್ನು ಗಮನಿಸಿದರೆ ಸಮಾಜದ ಆಸಕ್ತಿಯನ್ನು ಯಾವಾಗಲೂ ಆಸ್ತಿ ಅಥವಾ ಸಂಪತ್ತಿನ ಒಡೆತನ ಮತ್ತು ಅಧಿಕಾರವನ್ನು ತನ್ನ ಸ್ವಾಮ್ಯದಲ್ಲಿ ಉಳಿಸಿ ಕೊಳ್ಳುವ ಸಲುವಾಗಿ ಅಥವಾ ಕಸಿದುಕೊಳ್ಳುವ ಸಲುವಾಗಿ ನಡೆಸುವ ನಿರಂತರ ಕ್ರಿಯಾತ್ಮಕ ಸಂಘರ್ಷವೊಂದರ ಹಾಜರಿಯಂತು ಇದ್ದೇ ಇರುತ್ತದೆ.

ಎಲ್ಲಮ್ಮನ ಕಥೆಯಲ್ಲಿ ಮಾತೃಪ್ರಧಾನ ವಿಚಾರಧಾರೆಗಳು ಮತ್ತು ಪಿತೃಪ್ರದಾನ ವಿಚಾರಧಾರೆಗಳು ನಿರಂತರವಾಗಿ ಸಂಘರ್ಷಕ್ಕೆ ತೊಡಗಿರುವುದು ಗೋಚರವಾಗುತ್ತದೆ. ಕಥನದ ಆರಂಭದಲ್ಲೇ ಸ್ತ್ರೀ ಶಕ್ತಿ ವಿಜೃಂಭಿಸುವುದನ್ನು ಪುರುಷ ಅಧಿಕಾರವು ಅದಕ್ಕೆ ತಲೆ ಬಾಗುವುದನ್ನು ಕಾಣಬಹುದು. ಆದರೆ ಪರಶುರಾಮನ ಹುಟ್ಟಿನೊಂದಿಗೆ ಸ್ತ್ರೀಯು ತಾಯಿಯ ಸ್ಥಾನಕ್ಕೆ ರೂಪಾಂತರಳಾದ ಮೇಲೆ ಪುರುಷ ಅಧಿಕಾರಗಳು ಸ್ತ್ರೀ ಶಕ್ತಿಯನ್ನು ನಿಗ್ರಹಿಸುವ, ಅಧೀನಕ್ಕೆ ಒಳಪಡಿಸಿಕೊಳ್ಳುವ ಮೂಲಕ, ಸಮಾಜ ಪ್ರವಾಹದಲ್ಲಿ ಮುಖ್ಯ ಪಲ್ಲಟವೊಂದು ಜರುಗುತ್ತದೆ. ಮಾತೃಮುಖಿಯಾಗಿದ್ದ ಸಮಾಜ ಪಿತೃಮುಖಿಯಾಗುವ ನಡುವಿನ ಸಂಕರದ ಲಕ್ಷಣವನ್ನೇ ಶ್ರೀದೇವಿ ಪ್ರಸಾದ್ ಚಟೋಪಾದ್ಯಾಯ ಅವರು ಆಸ್ತಿ (ಸಂಪತ್ತು)ಗೆ ಸೋದರಳಿಯನು ವಾರಸುದಾರನಾಗುವ ಪ್ರಕ್ರಿಯೆಯನ್ನು , ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯ ಶಿಥಿಲಗೊಳ್ಳುವುದರ ಲಕ್ಷಣ ಎಂದು ವ್ಯಾಖ್ಯಾನಿಸಿದ್ದಾರೆ. ಎಲ್ಲಮ್ಮ ರೇಣುಕಾ ಕಥನದಲ್ಲಿ ಈ ಶಿಥಿಲತೆ ಮತ್ತಷ್ಟು ಉಲ್ಬಣಗೊಂಡಿರುವುದರ, ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ವೇಗವಾಗಿ ಸಮಾಜವನ್ನು ಆಕ್ರಮಿಸುತ್ತಿರುವುದರ ಅಪೂರ್ವ ವಿವರಗಳನ್ನು ಕಟ್ಟಿಕೊಡಲಾಗಿದೆ.

ಎಲ್ಲಮ್ಮನ ಅಡವಣಿಗೆ ಭಾಗ ಈ ಪರಿವರ್ತನೆಯ ರೂಪವನ್ನು ಸಶಕ್ತನಾಗಿ ಅಭಿ ನಯಿಸಿ ತೋರಿಸಿದೆ. ಇಂದಿಗೂ ಜನಪದರ ನಂಬಿಕೆಯಾಗಿ ಉಳಿದುಹೋಗಿರುವ ''ಸೋದರಳಿಯ ಹುಟ್ಟಿದರೆ ಮಾವನಿಗೆ ಮಗುವಿನ ಮುಖ ನೇರವಾಗಿ ತೋರಿಸ ಬಾರದು, ನೀರಿನಲ್ಲೋ, ಎಣ್ಣೆಯಲ್ಲೋ ಪ್ರತಿಬಿಂಬ ತೋರಿಸಬೇಕು'' ಎನ್ನುವ ನಂಬಿಕೆ ಪ್ರಕಟಿಸುವ ಅನುಮಾನ ಹಾಗೂ ಪುರಾಣಗಳಲ್ಲಿ ವಿನಾ ಕಾರಣ ಕಾಣಿಸಿ ಕೊಳ್ಳುವ ಕಂಸ ಮತ್ತು ಕೃಷ್ಣನ ತರಹದ ಮಾವ - ಸೋದರಳಿಯ ನಡುವಿನ ಶತ್ರುತ್ವದ ಕಲ್ಪನೆಯ ಹಿಂದೆ ಬಲವಾದ ಸಾಮಾಜಿಕ ತಿಕ್ಕಾಟವೊಂದು ಕ್ರಿಯಾಶಾಲಿಯಾಗಿದ್ದ ಬಗ್ಗೆ ಎಲ್ಲಮ್ಮ ರೇಣುಕಾ ಕಥನವು ಮೊದಲ ಬಾರಿಗೆ ಕಾರಣವನ್ನು ಗುರುತಿಸಿದೆ. ಪುರಾಣ

ಗಳಲ್ಲಿ ದಾಖಲುಗೊಂಡಿರುವಂತೆ ಅಶರೀರವಾಣಿಯೋ, ಕನಸೋ ಸೋದರಮಾವನಿಗೆ ತಂಗಿ ಗರ್ಭದಿಂದ ಹುಟ್ಟಲಿರುವ ಅಳಿಯನಿಂದ ಸಾವು ಎಂಬ ಎಚ್ಚರಿಕೆ ಅವರ ನಡುವಿನ ದ್ವೇಷಕ್ಕೆ ಕಾರಣವಾಗುವುದೆಂದು ಈವರೆಗೆ ತಿಳಿಲಾಯಲಾಗಿತ್ತು. ಆದರೆ ಸಾವಿನ ಭಯ ಕ್ಕಿಂತ ಸಂಪತ್ತಿನ ಒಡೆತನದ್ದೆ ಈ ದ್ವೇಷಕ್ಕೆ ಪ್ರಮುಖ ಕಾರಣ ಎನ್ನುವುದನ್ನು ಎಲ್ಲಮ್ಮ ರೇಣುಕಾ ಕಥನದ ಭಾಗ ಬಯಲುಗೊಳಿಸಿದೆ. ಪುರಾಣಗಳಲ್ಲಿ ಆದಂತೆ ಈ ಕಥನದಲ್ಲೂ ಎಲ್ಲಮ್ಮನ ಅಣ್ಣಂದಿರಲ್ಲಿ ಹಿರಿಯ ಕಾರ್ತೀಕ ರಾಜನಿಗೆ ಕನಸು ಬಿತ್ತು. ತಂಗಿಯ ಮಗ ತನ್ನನ್ನು ಕೊಂದು ಪಟ್ಟವೇರಿದಂತೆ ಕನಸಾಯಿತು. (ಕನಸು ಕೂಡ ಆಸ್ತಿಯ ಒಡೆಯನಾದ ಹಿರಿಯ ಅಣ್ಣನಿಗೆ ಬಿದ್ದಿದೆ.) ಕಾರ್ತೀಕ ರಾಜನಿಗೆ ಬಿದ್ದ ಕನಸನ್ನು ಕಾಕತಾಳೀಯವಾಗಿ ಪಂಚಾಂಗದ ನೆರವಿನಿಂದ ನಿರ್ವಚಿಸಿದವರು ಪುರೋಹಿತರು. " ರೇಣುಕಾದೇವಿ ಪುತ್ರರಿಂದ ಕ್ವಾಟೆಪ್ಯಾಟೆ ನಾಸವಾಗಿ ಕಾರ್ತೀಕರಾಜರ ರುಂಡವು ಚಂಡಾಯ್ತವೆ". ಎಂದು ನಿರ್ಣಯ ಹೇಳುತ್ತಾರೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಪಿತೃ ಪ್ರಧಾನ ವ್ಯವಸ್ಥೆಯ ಪೋಷಕರಾದ ಪುರೋಹಿತರು, ಪಂಚಾಂಗ ಮುಂತಾದವು ಕಾರ್ತೀಕರಾಜರೊಂದಿಗೆ ಶಾಮೀಲಾಗಿ ಮಾತೃವಂಶದ ನಾಶಕ್ಕೆ ಪ್ರಯತ್ನಿಸುತ್ತಿರುವುದು ಉಲ್ಲೇಖಾರ್ಹ. ಮುಂದೆ ಈ ಕುತ್ತು ನಿವಾರಿಸಿಕೊಳ್ಳಲು ರೇಣುಕೆಯ ಅಣ್ಣಂದಿರು ಸೂಲಗಿತ್ತಿಯನ್ನು ಬಳಸಿಕೊಳ್ಳಲು ಪ್ರಯತ್ನಿಸುತ್ತಾರೆ. ಪಟ್ಟಣ ದಲ್ಲಿ ಡಂಗೂರ ಸಾರಿ ಸಮರ್ಥ ಸೂಲಗಿತ್ತಿಯ ತಲಾಶ್ ನಡೆಸುತ್ತಾರೆ.

ಕಾರ್ತಿಕ ರಾಜರು ಏನೆಂದು ಮಾತಾಡಿ
ನಮ್ಮ ತಂಗಿ ಯಲ್ಲಮ್ಮನಿಗೆ ಆಡವಣಿಗೆ
ನಮ್ಮ ತಂಗಿ ಯಲ್ಲಮ್ಮನಿಗೆ ಆಡವಣಿಗೆ
ವೋದಾರೆ ಅರ್ಧರಾಜ್ಯವ ಕೊಡುತೀವಿ
ಆನೆಮಟೆಗಳು ಕೊಡುತೀವಿ
ಮುತ್ತುರತ್ನವ ಕೊಡುತೀವಿ ॥
ಆಂದಿನ್ನ ಗಂಡೂರ ವಯಿಸ್ಯಾನು ॥

ಗಂಡುಮಗುವಾದರೆ ಕೊಂದು ಒರಿಗೆ ಮಾಡಿಸಬೇಕಾದ ಷರತ್ತಿಗೆ ಒಪ್ಪಿ ಒಬ್ಬ ಸೂಲಗಿತ್ತಿಯೂ ಮುಂದೆ ಬಾರದಿರುವುದು ಮಾತೃಪ್ರಧಾನ ವ್ಯವಸ್ಥೆಯ ಮೌಲ್ಯವು ಸಮಾಜದಲ್ಲಿ ಪ್ರಭಾವಶಾಲಿಯಾಗಿದ್ದ ನೆಲೆಯನ್ನು ವಿವರಿಸುತ್ತವೆ. ಆಗ ಅಂಥ ಕ್ರೌರ್ಯಕ್ಕೆ ಒಬ್ಬ ಗಂಡಸು ಸೂಲಗಿತ್ತಿಯಂತೆ ವೇಷ ತೊಟ್ಟು ಸಿದ್ಧವಾಗುವುದು ಚರಿತ್ರೆ ಯಲ್ಲಿ ಮಾತೃವಂಶದ ಮೇಲೆ ನಡೆದಿರುವ ಹಿಂಸೆಯ ನಾಟಕೀಯ ಘಟನೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಪಟ್ಟ ಉಳಿಸಿಕೊಳ್ಳಲು, ಸಂಪತ್ತಿನ ಒಡೆತನ ಕಾಪಾಡಿಕೊಳ್ಳಲು ಅಣ್ಣಂದಿರು ಗಂಡಸನ್ನೇ ಸೂಲಗಿತ್ತಿಯ ರೂಪದಲ್ಲಿ ಹೆರಿಗೆ ಮಾಡಿಸಲು ಕಳುಹಿಸಿದ ಈ ಪ್ರಕರಣ ಮನುಷ್ಯರ ನಡುವಿನ ಪಾವಿತ್ರ್ಯದ ಕಲ್ಪನೆ, ರಕ್ತಸಂಬಂಧದ ಕಲ್ಪನೆಯು ಆಸ್ತಿಯ ಒಡೆತನದ ಮುಂದೆ ಎಷ್ಟು ತೆಳುವಾದದ್ದು ಎನ್ನುವುದನ್ನು ನಿರೂಪಿಸುತ್ತವೆ.

ಅಣ್ಣಂದಿರು ರೂಪಿಸಿದ ಷಡ್ಯಂತ್ರದ ಉದ್ದೇಶವು ಕೇವಲ ಸಾವಿನಿಂದ ಪಾರಾಗುವುದಲ್ಲ ಬದಲಾಗಿ ತಂಗಿಯ ವಂಶವನ್ನು ನಾಶಗೊಳಿಸುವುದಾಗಿತ್ತು ಎಂಬುದು ಕಾರ್ತೀಕ ರಾಜನ ಮತ್ತು ಬಜ್ಜಣ್ಣನ ನಡುವಿನ ಸಂವಾದದಲ್ಲಿ ಸ್ಪಷ್ಟವಾಗಿಯೇ ಪ್ರಕಟವಾಗಿದೆ.

ಕಾರ್ತೀಕ ರಾಜರು :- ಅಮ್ಮ ಸುಂದರಿ, ಸೂಲಗಿತ್ತಿ ತಂಗಿ ಯಲ್ಲಮ್ಮನಿಗೆ ಎಣ್ಣು ಮಗ ಹುಟ್ಟಿದರೆ ವುರಿಕೊಯ್ದು ಎರಿಗೆ ಮಾಡ್ಬಿಬಾ. ಗಂಡುಮಗನೇನನ ವುಟ್ಟಿದ್ರೆ ಸಿರಸನ ಕೊಯ್ದು ತಿಪ್ಪೆವಳಗೆ ಬೀಸಾಟಿಬಾ ಎಂದ್ರು.

ಸೂಲಗಿತ್ತಿ :- ಯಾಕ್ರಪ್ಪಾ ಗಂಡ್ಮಗ ಹುಟ್ಟಿದ್ರೆ ಕೊಯ್ಬೇಕು, ಎಣ್ಮಗ ವುಟ್ಟಿದ್ರೆ ವುರಿಕೊಯ್ದು ಎರಿಗೆ ಮಾಡ್ಸಿ ತೊಟ್ಲಿಗ್ಹಾಕಿ ಬಾರಮ್ಮ ಅಂತಿರಲ್ಲ.

ಕಾರ್ತೀಕರಾಜರು :- ಅಮ್ಮ ಗಂಡ್ಮಗ ವುಟ್ಟಿದ್ರೆ ನಮಗೆ ಸೆತ್ರುವಾದನು ಪಟ್ಟಕ್ಕೆ ಬಂದು ರಾಜ್ಯ ನಮದೆಂದಾನು. ಎಣ್ಮಗ ವುಟ್ಟಿದ್ರೆ ರ್‍ಯಾ ಕೇಳದಿಲ್ಲ. ಪಟ್ಟವೆರುವಳಲ್ಲ. ಇನ್ನೇನು ಮಾವ್‌ದಿರಾಗಿ ನಾವ್‌ವೋದ್ರೆ ಮಾವ ಬಂದಂತೇಳಿ ಒಂದ್ ಚರಿಗೆ ನೀರು ಕೊಟ್ಟು ಊಟ ಮಾಡೇಳು ಮಾವ ಅಂತಾಳೆ ಅಷ್ಟೆ.'' (ಪು. 229) ಈ ಪ್ರಕರಣವು ಡಾ|| ದೇವಿ ಪ್ರಸಾದ್ ಚಟ್ಟೋಪಾಧ್ಯಾಯ ಅವರು ಉಲ್ಲೇಖಿಸಿರುವಂತೆ ಸೋದರಳಿಯ ಪಟ್ಟಕ್ಕೆ, ಆಸ್ತಿಗೆ ವಾರಸುದಾರನಾಗುವ ವಿಚಾರದಂತೆಯೇ ಇದೆ. ಇಲ್ಲಿ ನಮ್ಮ ತಂಗಿಯ ಹೊಟ್ಟೆಯಲ್ಲಿ ಹುಟ್ಟಿದ ಗಂಡು ನಮ್ಮ ರಾಜ್ಯವನ್ನು ತನ್ನದೆಂದು ಹಕ್ಕು ಸಾಧಿಸುತ್ತಾನೆ. ಎನ್ನುವ ಭಯ ಮುಖ್ಯವಾಗಿ ತಂಗಿಯ ಮಗನನ್ನು ಕೊಲ್ಲಲು ರೇಣುಕೆಯ ಅಣ್ಣಂದಿರನ್ನು ಪ್ರಚೋದಿಸಿದೆ. ಇದರ ಜೊತೆಯಲ್ಲಿಯೇ ಮಾತೃ ಪರಂಪರೆಯ ಕೊನೆಯ ಕೊಂಡಿ ಯಾಗಿದ್ದ ಆಸ್ತಿ ಸೋದರಳಿಯನಿಗೆ ಹಸ್ತಾಂತರಗೊಳ್ಳುವ ನೆಲೆಯೂ ಕೂಡ ಮತ್ತಷ್ಟು ದುರ್ಬಲವಾಗಿದೆ. ಅಷ್ಟೇ ಅಲ್ಲದೆ ಮಾತೃ ಕುಟುಂಬದ ಶಿಥಿಲವು ಮುಂದುವರೆದು ಸಂಪೂರ್ಣವಾಗಿ ಪುರುಷ ಸಂಸ್ಕೃತಿಯ ಕೈವಶವಾಗಿರುವ ಸೂಕ್ಷ್ಮಗಳನ್ನು ಈ ಕಥನದ ವಿವರಗಳು ಧ್ವನಿಸುತ್ತವೆ. ಕಥನದ ಕೊನೆಯಲ್ಲಿ ತಂದೆಯ ಗುರುತನ್ನು ಸಾಧಿಸಿದಂತೆ, ಪರಶುರಾಮನು ತಾಯಿಯ ಗುರುತಿನಿಂದ ದೂರವಾಗುತ್ತಾನೆ. ತಾಯಿಯ ಕಣ್ಮುಂದೆಯೇ ಮಾತೃವಂಶವನ್ನು ಸಂಪೂರ್ಣವಾಗಿ ನಾಶಪಡಿಸುತ್ತಾನೆ. ಈ ಘಟನೆ ಸಂಕೇತಿಕವಾಗಿ ಭಾರತದಲ್ಲಿ ಮಾತೃಪ್ರಧಾನ ವ್ಯವಸ್ಥೆಯು ಪಿತೃಪ್ರಧಾನವ್ಯವಸ್ಥೆಯಿಂದ ಹತ್ತಿಕ್ಕಲ್ಪಟ್ಟ ಸಂಗತಿಗಳನ್ನು ವಿವರಿಸುತ್ತದೆ.

ಕಥನದ ಕೊನೆಯಲ್ಲಿ ಜಮದಗ್ನಿಯ ಮಗನಾಗಿ, ಪುರುಷನಾಗಿ ಮಾತೃಮೂಲ ಗಳನ್ನು ನಾಶಪಡಿಸಿ ಬಂದ ಪರಶುರಾಮನನ್ನು ನೋಡಿ ರೇಣುಕಾ ''ಇಂತ ಪಾಪಿಷ್ಟನ ಮೊಕ ನೋಡ್ಬಾರ್ದಂತೇಳಿ ಭೂಮಿ ಎರಡು ಪಾಲಾಗಲಿ ನಾನು ಸತ್ತಿವಂತೆಯಾದರೆ ಅಂತೇಳಿ ಕೈಮುಗಿದ್ಲು, ಭೂಮಿ ಎರಡು ಪಾಲಾಯಿತ್ದಂತೆ ತಾಯಿ ಎಲ್ಲಮ್ಮ ಪಾತಾಳಕ್ಕೆ ಇಳಿದು ಬಿಟ್ಲು.'' (ಪು. 243) ಮಾತೃಪ್ರಧಾನ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಹೋದ ಕತೆಯನ್ನು ಇದು ಪ್ರತಿಧ್ವನಿಸುವುದಿಲ್ಲವೇ?

2. ಪಿತೃಪ್ರಧಾನ ವ್ಯವಸ್ಥೆಯ ಆಕ್ರಮಣಕ್ಕೆ ತೋರಿರುವ ಪ್ರತಿಭಟನೆಯ ವಿವರಗಳು

ಈ ಕಥನವು ಮಂಡಿಸುವ ಮತ್ತೊಂದು ಮುಖ್ಯ ಆಶಯವು ಸಾಂಸ್ಕೃತಿಕ ಚರಿತ್ರೆಯ ದೃಷ್ಟಿಯಿಂದ ಅತ್ಯಂತ ಮುಖ್ಯವಾದದ್ದು ಆಗಿದೆ. ಎಲ್ಲಮ್ಮ ರೇಣುಕಾ ಕಥನದೊಳಗೆ ಪಿತೃಪ್ರಧಾನ ವ್ಯವಸ್ಥೆಯ ಮುಖ್ಯ ಆಶಯಗಳಾದ ಕಟುಂಬ, ವಿವಾಹ ಮತ್ತು ಪುರುಷ ಒಡೆತನದ ನೆಲೆಗಳನ್ನು ನಿರಾಕರಿಸುತ್ತಾಳೆ.

ಪುರುಷಪ್ರಧಾನ ಸಮಾಜದಲ್ಲಿ ಮದುವೆಯಲ್ಲಿ ತನ್ನ ಸಂಗಾತಿಯನ್ನು ಆಯ್ಕೆ ಮಾಡುವ ಹಕ್ಕು ಗಂಡಿಗೆ ಮಾತ್ರ ನೀಡಲ್ಪಟ್ಟಿದೆ. ಹೆಣ್ಣು ಇಲ್ಲಿ ಕೇವಲ ಪ್ರದರ್ಶನ ಪದಾರ್ಥದಂತೆ. ತನ್ನನ್ನು ವಿವಾಹವಾಗುವ ವ್ಯಕ್ತಿಯ ಉನ್ನತಿಗಾಗಿ ತನ್ನ ಸರ್ವಸ್ವವನ್ನು ಧಾರೆ ಎರೆದು ಬದುಕುವ ಮೌಲ್ಯಗಳನ್ನು ಈ ವ್ಯವಸ್ಥೆಯ ಸ್ತ್ರೀಯ ಮುಂದೆ ಒಡ್ಡುತ್ತವೆ. ಹೆಂಡತಿ ವ್ಯಕ್ತಿ ಎನ್ನುವ ನೆಲೆಗಿಂತ ಆಸ್ತಿಯಂತೆ, ಉತ್ಪನ್ನಗೊಳಿಸುವ ಪದಾರ್ಥದಂತೆ, ಅನುಭೋಗಕ್ಕೆ ಈಡಾಗುವ ಅಧೀನತೆಯನ್ನು ಜೀವನ ಪರ್ಯಂತ ಪಾಲಿಸಬೇಕಾಗುತ್ತದೆ. ಆದರೆ ಈ ಚೌಕಟ್ಟುಗಳು ರೇಣುಕಾ ದೇವಿಯ ಕಥನದಲ್ಲಿ ಕುಸಿದು ಬೀಳುತ್ತದೆ. ಇಲ್ಲಿ ರೇಣುಕಾದೇವಿ ತನ್ನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಸ್ವಾತಂತ್ರ್ಯವನ್ನು ಉಳಿಸಿಕೊಂಡವಳು - ಮನೆಯವರು ದೇಶ ದೇಶಗಳಿಂದ ತರಿಸಿದ ವರರ ಭಾವ ಚಿತ್ರಗಳನ್ನು ಸರಾಸಗಟಾಗಿ ತಿರಸ್ಕರಿಸಿ 'ಮುರಿಯುವಂತ ಮೂಗುತಿಯ ನಾನು ಇಡಲಾರೆ, ಸಾಯುವಂ ಗಂಡನ್ನ ನಾ ಆಗಲಾರೆ' (ಪು. 243) ಎಂದು ಕುಟುಂಬದ ಚೌಕಟ್ಟು ಮುರಿದು ಗಂಡನ ಅನ್ವೇಷಣೆಗೆ ತಾನೇ ಹೋಗುತ್ತಾಳೆ.

ಕೊರವಂಜಿಯ ಸಲಹೆಯಂತೆ ಗೋಕರ್ಣ ಬೆಟ್ಟದಲ್ಲಿ ತಪಸ್ಸು ಮಾಡುತ್ತಿದ್ದ ವೈದಿಕ ಋಷಿ ಜಮದಗ್ನಿಯನ್ನು ವರನ್ನಾಗಿ ಆರಿಸುತ್ತಾಳೆ. ಆಗ ಜಮದಗ್ನಿ ವಿವಾಹಕ್ಕೆ ಸಮ್ಮತಿಸಲು ಕೆಲವು ಷರತ್ತುಗಳನ್ನು ವಿಧಿಸುತ್ತಾನೆ. ಆ ಷರತ್ತುಗಳು ವೈದಿಕ ಪುರಾಣಗಳಲ್ಲಿ ರೇಣುಕಾದೇವಿಗೆ ವಿಧಿಸಿದ್ದ ಷರತ್ತುಗಳೇ ಆಗಿವೆ ಎನ್ನುವುದು ಅಭ್ಯಾಸಯೋಗ್ಯ. ಈ ಶರತ್ತುಗಳು ಹೆಣ್ಣನ್ನು ಗಂಡನ ಗುಲಾಮಳಾಗಿರಬೇಕು ಎನ್ನುವ ಆಶಯಗಳನ್ನು ಪರೋಕ್ಷವಾಗಿ ನಿರ್ದೇಶಿಸುವಂತೆ ತೋರುತ್ತವೆ.

ನಾನು ಏಳೀದಂಗೆ ನೀನು ಕೇಳಬೇಕು.
ಅಣೆಯಲ್ಲಿ ಈಭೂತಿ ನೀ ಧರಿಸಬೇಕು.
ಮೈಯ್ಯಾಕೆ ಕಾಪು ನೀ ತೊಡಬೇಕು
ಕೊರಳಲ್ಲಿ ರುದ್ರಾಕ್ಷಿ ಸರವಿರಬೇಕೆಂದ ॥
ಅಂತಾ ಇಂತಾ ಮಾತು ನಾ ಕೇಳುವಾನಲ್ಲ
ವಳಿಯಾ ನೀರಿಗೆ ನೀನೋಗಬೇಕು
ಮಳುಲಾ ಕೊಡದಿಂದ ನೀರ ತರಬೇಕು
ತರುವಾಗ ಸರುಪಾನ ಸಿಂಬಿ ಇರಬೇಕು ॥

ಈ ಮಾತುಗಳು ಹೆಂಡತಿ ಅಳವಡಿಸಿಕೊಳ್ಳಬೇಕಾದ ವಿನಯ, ವೇಷ ಹಾಗೂ ಪಾತಿವ್ರತ್ಯ ನಿಯಮಗಳನ್ನು ಕುರಿತವೇ ಆಗಿವೆ. ಇಲ್ಲಿ ಪ್ರತಿಯೊಂದು ಸಾಲಿನಲ್ಲಿಯೂ ಹೆಣ್ಣು ಗಂಡಿಗೆ ಅಧೀನಳಾಗಿರಬೇಕಾದ ಒತ್ತಾಯವನ್ನು ವಿವರಿಸಲಾಗಿದೆ. ಸ್ತ್ರೀಗೆ ಮದುವೆಯ ಮುಖ್ಯ ಉದ್ದೇಶ ತಾಯ್ತನದ ಅನುಭವ. ರೇಣುಕಾದೇವಿ ಈ ಭಾಗ್ಯವನ್ನು ಜಮದಗ್ನಿಯಿಂದ ಪಡೆಯಲು ವಿಫಲಳಾದಾಗ, ಆ ವಿವಾಹವನ್ನೇ ಮುರಿದು ದೇವತೆಗಳನ್ನು ಪ್ರಸನ್ನಗೊಳಿಸಿಕೊಂಡು ಬಸಿರಾಗುವ ವಿವರಗಳು ಮಾತೃಪ್ರಧಾನ ಸಂಸ್ಕೃತಿಯ ಮೌಲ್ಯಗಳನ್ನು ಆಧರಿಸಿ ಪ್ರಕಟಗೊಂಡವೇ ಆಗಿವೆ.

ಎಲ್ಲಮ್ಮ ತನ್ನ ಬಸಿರ - ಬಯಕೆಗಳನ್ನು ಪೂರೈಸಿಕೊಳ್ಳಲು ಕೈಗೊಳ್ಳುವ ಯಾತ್ರೆಯಲ್ಲಿ ಪುರುಷರು ಅಕ್ರಮವಾಗಿ ಜಲ ಮತ್ತು ನೆಲಗಳನ್ನು ತಮ್ಮ ಸ್ವಾರ್ಥಕ್ಕಾಗಿ ಸ್ವಾಧೀನಪಡಿಸಿಕೊಂಡು ಸ್ತ್ರೀಯನ್ನು ಅವುಗಳಿಂದ ದೂರ ಮಾಡಲು ಯತ್ನಿಸುತ್ತಾರೆ. ಮಡಿವಾಳನು ಹೊಳೆಯ ನೀರಿನಲ್ಲಿ ಎಲ್ಲಮ್ಮನ ಬಟ್ಟೆಗಳನ್ನು ಒಗೆಯಲು ನಿರಾಕರಿಸುವುದು ಹಾಗೂ ಪೊನ್ನಶೆಟ್ಟಿ ಸರ್ಪದ ಕಾವಲಿನಲ್ಲಿ ತೋಟದಲ್ಲಿ ಬೆಲೆ ತೆಗದು ಭೋಗ ಜೀವನ ನಡೆಸುವುದನ್ನು, ಎಲ್ಲಮ್ಮ ಛಿದ್ರಿಸುತ್ತಾಳೆ. ಇಲ್ಲಿ ಮುಖ್ಯವಾದ ಕ್ರಿಯೆ ಪ್ರಕೃತಿ ದತ್ತವಾದ ನೆಲ ಜಲಗಳ ಒಡೆತನವನ್ನು ವೈಯಕ್ತಿಕ ಆಸ್ತಿಯಾಗಿಸಿಕೊಳ್ಳುವ, ವೈದಿಕ ಪರಂಪರೆಯ ಹಕ್ಕನ್ನು ಎಲ್ಲಮ್ಮ ತಿರಸ್ಕರಿಸುವ ನೆಲೆಯನ್ನು ಕಥೆ ಒಳಗೊಂಡಿದೆ. ಇದೇ ಕಥನವು ಪುರುಷ ಪ್ರಧಾನ ಮೌಲ್ಯಗಳು ಇಡೀ ಸಮಾಜವನ್ನೂ ಆವರಿಸಿಕೊಂಡು, ಬೇರೆ ಬೇರೆ ಸಂಸ್ಥೆಗಳ ಮೂಲಕ ಸ್ತ್ರೀಯನ್ನು ಅಧೀನತೆಗೆ ಒಳಪಡಿಸುವ ಪ್ರಕ್ರಿಯೆಗಳನ್ನು ಈ ಕಥನ ಪ್ರತಿಭಟಿಸಿದೆ. ಪುರುಷ ಪ್ರಧಾನ ವ್ಯವಸ್ಥೆಯ ಆಧಾರ ಸ್ಥಂಭಗಳಾದ ವಿವಾಹ, ಕುಟುಂಬ, ಪಾತಿವ್ರತ್ಯ, ಆಸ್ತಿಯ ಹಕ್ಕುಗಳ ನೆಲೆಗಳನ್ನು ಕಥನವು ತಿರಸ್ಕರಿಸುವ ವಿವರಗಳನ್ನು ಗಮನಿಸಬಹುದು.

3. ಕ್ಷೇತ್ರದ ಅಧಿಕೃತತೆಯ ಪ್ರತಿಪಾದನೆ

ಬೀಜ ಮತ್ತು ಕ್ಷೇತ್ರ ಕೃಷಿ ಸಂಬಂಧಿತ ಪದಗಳು. ಇವು ಲೈಂಗಿಕವಾದ ಅರ್ಥಗಳನ್ನು ಕೂಡ ಹೊರಡಿಸುವ ಸಂಕೇತಗಳಾಗಿವೆ. ಜನಪದ ಪರಂಪರೆಯು ಸೃಷ್ಟಿ ಕ್ರಿಯೆಯಲ್ಲಿ ಕ್ಷೇತ್ರ ಪರವಾದ ನಿಲುವನ್ನು ತಾಳಿದ್ದರೆ, ಶಿಷ್ಟ ಪರಂಪರೆ ಬೀಜ ಪರವಾದ ನಿಲುವನ್ನು ತಾಳಿದೆ. ಈ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ನಾಲ್ಕನೇ ಅಧ್ಯಾಯದಲ್ಲಿ ವಿಸ್ತಾರವಾದ ಚರ್ಚೆಯನ್ನು ನಡೆಸಲಾಗಿದೆ. ಆದ್ದರಿಂದ ಇಲ್ಲಿ ಸಂಕ್ಷಿಪ್ತವಾಗಿ ಈ ಕಥನದಲ್ಲಿನ ಆಶಯವನ್ನು ಪ್ರತಿಪಾದಿಸಲು ಪ್ರಯತ್ನಿಸಲಾಗಿದೆ.

ಸಮಾಜದಿಂದ ಬಂಜೆ ಎಂಬ ನಿಂದೆಗೆ ವಿನಾಕಾರಣ ಗುರಿಯಾದ ಎಲ್ಲಮ್ಮ ವಿವಾಹೇತರ ಸಂಬಂಧದಿಂದ ಬಸಿರಾಗಿ ಪರಶುರಾಮನ ತಾಯಿಯಾಗುತ್ತಾಳೆ. ಆದರೆ

ಆವೇಳೆಗಾಗಲೇ ಬೀಜ ಪ್ರಧಾನತೆಯನ್ನು ಒಪ್ಪಿಕೊಂಡ ಸಮಾಜದಲ್ಲಿ ಬೀಜದ ಗುರುತು ಅನಿವಾರ್ಯ ಎನ್ನುವುದು ಸಾಮಾಜೀಕರಣದ ಭಾಗವಾಗಿ ಪರಶುರಾಮನಿಗೆ ದತ್ತವಾಗಿರುತ್ತದೆ. ಪರಶುರಾಮ ತನ್ನ ತಂದೆಯ ಅನ್ವೇಷಣೆಯನ್ನು ತಾಯಿಯನ್ನು ಹಿಂಸಿಸುವ ಮೂಲಕ ಶೋಧಿಸುತ್ತಾನೆ. ಎಲ್ಲಮ್ಮನು ಮಗನಿಗೆ ಜಮದಗ್ನಿಯನ್ನು ತಂದೆ ಎಂದು ಹೇಳುವುದು ಸುಳ್ಳೆಂದು ಗೊತ್ತಿತ್ತು. ಹಾಗಾಗಿ ಆತನ ಹೆಸರ ಹೇಳದೆ ಹೆರುವ ಹಕ್ಕು, ಮಗುವಿನ ಗುರುತು ತಾಯಿಯಿಂದಲೇ ಎಂದು ಏನೆಲ್ಲಾ ಪವಾಡಗಳಿಂದ ಸಾಧಿಸಲು ಪ್ರಯತ್ನಿಸುತ್ತಾಳೆ. ಆದರೆ ಪರಶುರಾಮ ಅವುಗಳನ್ನು ನಂಬುವುದಿಲ್ಲ ಕೊನೆಗೆ ತಾಯಿಯನ್ನು ಕೊಲ್ಲುವ ಮಟ್ಟಕ್ಕೂ ಮಗನು ಪುರುಷನಾಗಿ ಬೆಳೆದಾಗ ಅಸಹಾಯಕಳಾಗಿ ಗಂಡನಾದ ಜಮದಗ್ನಿಯ ಹೆಸರನ್ನು ಹೇಳುತ್ತಾಳೆ. ರೇಣುಕಾ ಕೊನೆಯಲ್ಲಿ ವಿವಾಹವಾದ, ಸಮಾಜ ಒಪ್ಪಿತ ಗಂಡನ ಹೆಸರು ಹೇಳುವುದು, ಪರಶುರಾಮ ಜಮದಗ್ನಿಯ ಬೀಜದಿಂದ ಗುರುತಿನ ಮೂಲಕ ತನ್ನನ್ನು ಗುರುತಿಸಿಕೊಂಡು ತಾಯಿವಂಶವನ್ನು ನಾಶಗೊಳಿಸಿದ್ದು ಈ ದೇಶದ ಚರಿತ್ರೆಯಲ್ಲಿ ಬೀಜವು - ಕ್ಷೇತ್ರವನ್ನು ಬಲತ್ಕಾರವಾಗಿ, ವಶಪಡಿಸಿಕೊಂಡ ಪ್ರಕ್ರಿಯೆಯನ್ನು ವಿವರಿಸುತ್ತವೆ.

4. ಹೆಣ್ಣುಗಂಡಿನ ತಾರತಮ್ಯ - ವಚನ ಚಳವಳಿಯ ಒಂದು ಒಳನೋಟ

ಈ ಕಥನವು ಕೇವಲ ಪಿತೃಪರಂಪರೆ ಮತ್ತು ಮಾತೃಪರಂಪರೆಯ ಸಂಘರ್ಷ ನೆಲೆಗಳನ್ನು ಮಾತ್ರ ದಾಖಲಿಸಿಕೊಂಡಿಲ್ಲ. ಜನಪದರ ಪ್ರಜ್ಞೆ ಕಾಲ ದೇಶಗಳಿಗೆ ನಿರಂತರವಾಗಿ ಸ್ಪಂದಿಸುತ್ತದೆ ಎನ್ನುವುದಕ್ಕೆ ಶರಣ ಚಳುವಳಿಯನ್ನು ಕುರಿತಂತೆ ಕಥನದಲ್ಲಿ ನಿರೂಪಗೊಂಡಿರುವ ಜನಪದರ ಗ್ರಹಿಕೆ ಸಾಕ್ಷಿಯಾಗಿದೆ. ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಬಸವಣ್ಣ ಆರಂಭಿಸಿದ ಸಾಮಾಜಿಕ ಚಳವಳಿಯ ಬಗ್ಗೆ ಅನೇಕ ಶಿಷ್ಟ ದಾಖಲೆಗಳು ನಮಗೆ ದೊರಕಿವೆ. ಜನಪದ ಪರಿಕರಗಳು ದಾಖಲಿಸಿಕೊಂಡಿರುವ ಶರಣ ಚಳುವಳಿಯ ಅನೇಕ ಸಂಗತಿಗಳನ್ನು ಇನ್ನೂ ಕ್ರೋಢೀಕರಿಸಿ ಅಧ್ಯಯನ ಮಾಡುವ ಕಡೆ ಈ ಕಥನವು ಆಧಾರ ಸಹಿತವಾಗಿ ಒತ್ತಾಯಿಸುತ್ತದೆ. ಎಲ್ಲಮ್ಮ ಕಥನದಲ್ಲಿ ಓರೆಗಲ್ಲು ಪಟ್ಟಣದ ಪ್ರಕರಣ ಶರಣ ಚಳುವಳಿಯ ಮುಖ್ಯವಾದ ಸಮಸ್ಯೆಯೊಂದರತ್ತ ನಮ್ಮ ಗಮನ ಸೆಳೆಯುತ್ತದೆ.

ಶರಣ ಚಳುವಳಿಯು ನಂಬಿದ್ದ ಜಾತಿ, ಲಿಂಗ (Sex) ತಾರತಮ್ಯವಿಲ್ಲದ ಸಮಾಜ ರಚನೆಯನ್ನು ಕುರಿತಂತೆ ಈ ಕಥನವು ಬಲವಾದ ಅನುಮಾನವೊಂದನ್ನು ಪ್ರಕಟಿಸುತ್ತದೆ. ಎಲ್ಲಮ್ಮ ತನ್ನ ಸಂಚಾರಣೆ ಕಾಲದಲ್ಲಿ ಓರೆಗಲ್ಲು ಪಟ್ಟಣಕ್ಕೆ ಬಂದು ಹಸಿದು ಊರಿನ ಶ್ರೀಮಂತ ಲಿಂಗವಂತನಾದ ಶೆಟ್ಟಿಯ ತೋಟಕ್ಕೆ ಬರುತ್ತಾಳೆ. ಬಂದು ಭಿಕ್ಷೆಯನ್ನು ಕೇಳುತ್ತಾಳೆ. ಆಗ ಪೊನ್ನ ಸೆಟ್ಟಿ ಮತ್ತು ಎಲ್ಲಮ್ಮನ ನಡುವೆ ನಡೆದ ಸಂವಾದವನ್ನು ಗಮನಿಸಿ.

ಪೊನ್ನಸೆಟ್ಟಿ - ಆಹಾ ನೀನು ಯಾವ್ ಕುಲದ ಎಂಗ್ಸೋ ಏನೋ. ತ್ವಾಟದೊಳಿಕಿ ಬಂದು ಬಿಕ್ಸಾ ಕೇಳ್ತಿದಿಯೆ. ನಾವು ನೂರೊಂದು ಲಿಂಗವಂತ್ರು. ನಮ್ಹತ್ರ ಬರಬ್ಯಾಡ. ವರಿಕೋಗಿ ನಿಂತು ಮಾತಾಡು.

ರೇಣುಕಾ - ಅಪ್ಪಾ ನನ್ನ ಮಗ ಪರಸುರಾಮ, ಬಿಕ್ಸವಾದರು ಬ್ಯಾಡ. ಒಂದಿಡಿ ಅರಿವೇಸೊಪ್ಪ ಒಂದು ಉಳ್ಳಾಗಡ್ಡಿ ಒಂದು ಬದನೇಕಾಯಿ ಕೊಡ್ರಪ್ಪ. ನಾನೇನು ನಿಮ್ಮ ಬೆಳ್ಳಿ ಬಂಗಾರ ಕೇಳವುವಲ್ಲ. ವಟ್ಟೆಲಿರಂತ ಮಗನಿಗೆ ಮೂರೊಸ್ತು ಬಿಕ್ಸಕೊಡಿರಪ್ಪ.

ಪೊನ್ನಸೆಟ್ಟಿ - ಅಮ್ಮ ಅಜ್ಜಮ್ಮ ನಾವು ಗಂಡು ದೇವರೊಕ್ಲು. ನಿನ್ನಂತ ಎಂಗ್ಸಿರ್ಗೆಲ್ಲಾ ಬಿಕ್ಸ ಆಕುವವರಲ್ಲ. ಮರ್ಯಾದಿಲಿಂದ ತ್ವಾಟ ಬಿಟ್ಟೋರುಡುವಳಾಗು. ಬೆಕ್ಕಿನ ಕೊಲ್ಲಿಗೆ ಬೆಳ್ಳಿಲಿಂಗ, ನಾಯಿಗೆ ಸಾಕುಲಿಂಗ, ಎತ್ತಿನ ಕೊಂಬಿಗೆಂಟುಲಿಂಗ, ಕುಂಬಾರ ಗುಂಡಮ್ನ ನಿಗೊಂಬತ್ತು ಲಿಂಗ, ವಡ್ರಪೆದ್ದಣ್ಣನಿಗತ್ತು ಲಿಂಗ, ಕುರುಬರ ಬೀರಣ್ಣನಿಗನ್ನೊಂದು ಲಿಂಗ. ಈತರ ನೋರೊಂದು ಲಿಂಗದವುರು ನಾವು. ನಿನ್ಗೆ ಬಿಕ್ಸೆ ನೀಡದುಂಟ. ನಡಿ ವರಿಕೆ (ಪು. 223)

ಇಲ್ಲಿ ಲಿಂಗವಂತರು ಗಂಡುದೇವರ ಒಕ್ಕಲು ಎನ್ನುವ ಅಹಮ್ಮಿನಿಂದ ಎಲ್ಲಮ್ಮನನ್ನು ಹೆಂಗಸೆಂದು ನಿಷ್ಕಾರಣವಾಗಿ ನಿಂದಿಸುತ್ತಾರೆ. ಈ ಬಾಗವು ಧ್ವನಿಸುವ ಒಳನೋಟವು ಶರಣ ಚಳುವಳಿಯಲ್ಲಿ ಸ್ತ್ರೀ ಮತ್ತು ಪುರುಷರು ಸಮಾನರು ಎನ್ನುವ ಆಶಯವನ್ನು ಛಿದ್ರಿಸುತ್ತದೆ. ಅಲ್ಲದೆ ಎತ್ತು ಎಮ್ಮೆ ಬೆಕ್ಕು ಹೀಗೆ ಜೀವ ಜಾಲದಲ್ಲಿನ ಪ್ರಾಣಿಗಳಿಗೂ ಹೆಣ್ಣು ಸಮನಲ್ಲ ಎಂಬ ಧೋರಣೆಯು ವೈದಿಕ ಪರಂಪರೆಯದೇ ಆಗಿದೆ. ಶರಣ ಚಳುವಳಿಯು ವೈದಿಕ, ಜೈನ, ಬೌದ್ಧ ಮುಂತಾದ ಧರ್ಮಗಳ ಕಾಠಿಣ್ಯದಿಂದ ತಾತ್ವಿಕವಾಗಿ ಬಿಡಿಸಿಕೊಂಡರೂ ಶರಣದಲ್ಲಿ ಅಂತರ್ಗತವಾಗಿದ್ದ ಸ್ತ್ರೀಪುರುಷ ಬೇಧ ಕಲ್ಪನೆ ನಷ್ಟ ಗೊಂಡಿರಲಿಲ್ಲ ಎನ್ನುವ ಸೂಕ್ಷ್ಮವನ್ನು ಈ ಕಥನ ಕಟ್ಟಿಕೊಡುತ್ತದೆ . ಲಿಂಗವಂತರ ತೋಟದಲ್ಲಿ ಕಲ್ಲಾಗಿ ಬಿದ್ದಿದ್ದ ಬಸವಣ್ಣನ ವಿವರವು ಶರಣ ಚಳುವಳಿ ಹಿಡಿದ ದಾರಿಯನ್ನು ಸಂಕೇತಿಸುವಂತೆ ಚಿತ್ರಿತವಾಗಿದೆ. (ಪು. 224)

ರೇಣುಕಾ ಎಲ್ಲಮ್ಮ ಕಥನವನ್ನು ಒಂದು ಸಾಂಸ್ಕೃತಿಕ ಪಠ್ಯವಾಗಿ ಸ್ವೀಕರಿಸಿ ಅಧ್ಯಯನಕ್ಕೆ ತೊಡಗಿದರೆ ಇಂಥ ಅನೇಕ ಸಾಂಸ್ಕೃತಿಕ ಮಾನವ ಚರಿತ್ರೆ ಮತ್ತು ಭಾರತೀಯ ಸಮಾಜ ಜೀವನದ ಅನೇಕ ಪಲ್ಲಟಗಳನ್ನು ತೆಗೆದು ತೋರುವ ಸಾಧ್ಯತೆಯನ್ನು ನಿರಾಕರಿಸುವಂತಿಲ್ಲ.

ಜಾನಪದ ಪಠ್ಯ ಎಂಬುದು ಹೇಗೆ ಚಾರಿತ್ರಿಕವಾಗಿ ನಡೆದ ಮಹತ್ವದ ಘಟನೆಗಳನ್ನು ಕಥನ ಶಿಲ್ಪದೊಳಗೆಯೇ ಕಟ್ಟಿಕೊಂಡಿರುತ್ತದೆ ಎಂಬುದನ್ನು ತೋರವ ಸಲುವಾಗಿ ಈ ಟಿಪ್ಪಣಿಯನ್ನು ಸಿದ್ಧಮಾಡಲಾಗಿದೆ. ಕನ್ನಡ ಜಾನಪದ ಪರಿಕರಗಳನ್ನು

ಸಾಂಸ್ಕೃತಿಕ ಪಠ್ಯಗಳನ್ನಾಗಿ ಸ್ವೀಕರಿಸಿ ಅಧ್ಯಯನ ಮಾಡುವುದರಿಂದ ಕನ್ನಡದ ಸಾಂಸ್ಕೃತಿಕ ಚರಿತ್ರೆಯನ್ನು ರಚಿಸಲು ಅವಕಾಶವಾಗಬಹುದೆನ್ನುವ ಮಹತ್ವಾಕಾಂಕ್ಷೆಯು ಈ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿದೆ ಎಂದು ಮಾತ್ರ ಹೇಳಬಲ್ಲೆ.

ಎಲ್ಲಮ್ಮ ರೇಣುಕಾ ಕಥನಗಳನ್ನು ಈ ಟಿಪ್ಪಣಿಯ ಜೊತೆಗೆ ನೀಡಲಾಗಿದೆ. ಕಥನದ ಓದು ನಾನು ಗಮನಿಸಿರುವ ವಿವರಗಳಿಗಿಂತಲೂ ಅಪೂರ್ವ ನಿಧಿಗಳನ್ನು ಹುದುಗಿಸಿಕೊಂಡಿದೆ ಎಂದು ಭಾವಿಸುತ್ತೇನೆ.

---

* ಹನೂರು ಕೃಷ್ಣಮೂರ್ತಿಯವರ 'ಕತ್ತಲ ದಾರಿ ಕೂಡ' ಜನಪದ ಸಂಗ್ರಹದಿಂದ ಈ ಕಥನವನ್ನು ಆಯ್ದುಕೊಳ್ಳಲಾಗಿದೆ

ಶರಣರು ಮತ್ತು ಹರಿಹರ - ಮುಖಾಮುಖಿ

– ಡಾ. ಎಸ್. ವಿದ್ಯಾಶಂಕರ

ಕನ್ನಡ ಸಾಹಿತ್ಯ 12ನೇ ಶತಮಾನದಲ್ಲಿ ಹೊರಳು ದಾರಿಯಲ್ಲಿ ನಡೆದದ್ದು ಬಸವಾದಿ ಶಿವಶರಣರ ಸಮಾಜೋಧಾರ್ಮಿಕ ಚಳುವಳಿಯ ಕಾರಣದಿಂದಾಗಿ, ಈ ಚಳುವಳಿಯ ಅಭಿವ್ಯಕ್ತಿ ಕಂಡುಕೊಂಡುದು ಸಾಹಿತ್ಯಮುಖೇನ. ಹಳೆಗನ್ನಡ ಕವಿಗಳು 10 ರಿಂದ 12ನೇ ಶತಮಾನದ ಕಾಲಘಟ್ಟದಲ್ಲಿ ಸೃಜಿಸಿದ ಸಾಹಿತ್ಯವು ಸಮಾಜಮುಖಿ ಯಾಗದೆ ಆಸ್ಥಾನಮುಖಿಯಾದುದರಿಂದ ಸಾಮಾನ್ಯನ ಬದುಕಿನ ಉತ್ತಮೀಕರಣಕ್ಕೆ ಅಲ್ಲಿ ಅವಕಾಶವಾಗಲಿಲ್ಲ. ಇದಕ್ಕೆ ಕಾರಣಗಳು ಹಲವು :

1. ಜನಬಳಕೆಯ ಭಾಷೆ ಸಾಹಿತ್ಯದಲ್ಲಿ ಪ್ರಯೋಗಗೊಳ್ಳದೆ, ಕೇವಲ ಪಂಡಿತರಿಗಷ್ಟೆ ಸೀಮಿತವಾದ ಹಳಗನ್ನಡದ ಬಳಕೆಯಾದುದು.
2. ಸಾಹಿತ್ಯದ ವಸ್ತು ಲೌಕಿಕ - ಆಗಮಿಕ ಎಂದು ವಿಂಗಡಣೆಗೊಂಡು ಅವುಗಳು ತಮ್ಮ ಏಕತಾನತೆಗೆ ಯುಕ್ತವಾಗದಿದ್ದುದು.
3. ಅಭಿವ್ಯಕ್ತಿ ಮಾಧ್ಯಮಕ್ಕೆ ದೇಸೀ ಛಂದಸ್ಸನ್ನು ಬಳಸದೆ ಸಂಸ್ಕೃತ ಛಂದಸ್ಸಿಗೆ ಮೊರೆಹೊಕ್ಕುದು.
4. ಸಾಹಿತ್ಯದ ಭಾಷೆ ಹಳಗನ್ನಡವಾದುದರಿಂದ ಅದರದೇ ಆದ ನಿರ್ದಿಷ್ಟ ವ್ಯಾಕರಣದ ಕಟ್ಟುಪಾಡುಗಳಲ್ಲಿ ನಿರ್ದೇಶಿತವಾದುದು.
5. ಹಳೆಗನ್ನಡದ ಲೌಕಿಕ - ಆಗಮಿಕ ಕೃತಿಗಳು ಕಾವ್ಯ - ಪುರಾಣಗಳಾಗಿ ಅಭಿವ್ಯಕ್ತಿ ಕಂಡುಕೊಳ್ಳುವಾಗ ಸಂಸ್ಕೃತದ ಲಾಕ್ಷಣಿಕ ಚೌಕಟ್ಟಿಗೆ ಬದ್ಧವಾದುದು.
6. ಅಷ್ಟಾದಶ ವರ್ಣನೆಗಳು ಕೃತಿಯ ಅವಿಭಾಜ್ಯ ಭಾಗವಾದುದು.
7. ನವರಸಗಳು, ಶಬ್ದಾಲಂಕಾರ ಹಾಗೂ ಅರ್ಥಾಲಂಕಾರಗಳು ಕಾವ್ಯ - ಪುರಾಣ ಗಳಲ್ಲಿ ಪ್ರಾಧಾನ್ಯವಹಿಸಿದುದು.
8. ಶಾಸ್ತ್ರಸಾಹಿತ್ಯವು - ವ್ಯಾಕರಣ, ಛಂದಸ್ಸು ಅಲಂಕಾರ, ಗಣಿತ, ಗಜಶಾಸ್ತ್ರ ಹಯ ಶಾಸ್ತ್ರ ಸೂಪಶಾಸ್ತ್ರ, ವೈದ್ಯಶಾಸ್ತ್ರ ಇತ್ಯಾದಿ ಎಲ್ಲರಿಗೂ ಬೇಕಾದ ಜ್ಞಾನ ಶಾಖೆಗಳಾಗದೆ ಕೆಲವರಿಗೆ ಮಾತ್ರ ಸೀಮಿತವಾದುದು.

ಹಳಗನ್ನಡದ ಲೌಕಿಕ ಕೃತಿಗಳು ಅರಸನೊಬ್ಬನ ಶಕ್ತಿ - ಸಾಮರ್ಥ್ಯಗಳನ್ನು ವೈಭವೀಕರಿಸಲು ರಾಮಾಯಣ - ಮಹಾಭಾರತಗಳ ನಾಯಕರುಗಳೊಂದಿಗೆ ಸಮೀಕರಿಸಲು ಪ್ರಯತ್ನಿಸಿದವು. ಆಗಮಿಕ ಕೃತಿಗಳು ಜೈನ ಧಾರ್ಮಿಕ ಪರಿಸರದಲ್ಲಷ್ಟೇ ವ್ಯವಹರಿಸಿದವು. ಹೀಗಾಗಿ 10-12ನೇ ಶತಮಾನದವರೆಗಿನ ಕೃತಿಗಳು ಜನಸಾಮಾನ್ಯನ ಬದುಕಿಗೆ ವಿಮುಖವಾಗಿ ಒಂದು ದ್ವೀಪವಾಗಿಯೇ ಉಳಿದವು. ಕವಿಗಳು ಸಂಸ್ಕೃತ - ಪ್ರಾಕೃತಗಳ ಸಾಹಿತ್ಯದಿಂದ ಪ್ರಭಾವಿತರಾಗಿ ಕನ್ನಡದಲ್ಲಿ - ಅದರಲ್ಲೂ ಪಂಡಿತರಿಗಷ್ಟೆ ಮೀಸಲಾದ ಹಳಗನ್ನಡದಲ್ಲಿ ತಮ್ಮ ಅಭಿವ್ಯಕ್ತಿ ಸಾಧ್ಯತೆಯನ್ನು ದುಡಿಸಿಕೊಳ್ಳ ಹೊರಟದ್ದರಿಂದ ಅಲ್ಲಿ ಜನಸಾಮಾನ್ಯ ಹಾಗೂ ಅವನ ದೈನಂದಿನ ಬದುಕು ಮರೆಯಾಯಿತು. ಪಂಪನಂತಹ ಸಮರ್ಥಕವಿ ತನ್ನ ಕಾಲದ ಮೌಲ್ಯಗಳನ್ನು ತನ್ನ ಕೃತಿಗಳಲ್ಲಿ ದಾಖಲಿಸಿ ಹೊರಟರೂ ಭಾಷೆ ತನ್ನ ಅಭಿವ್ಯಕ್ತಿ ಸಾಧ್ಯತೆಯನ್ನು ಪ್ರಕಟಪಡಿಸುವಾಗ ಪಂಡಿತ - ಪಾಮರರ ನಡುವಿನ ಗೋಡೆಯನ್ನು ಒಡೆದು ಹೋಗಲಾಗಲಿಲ್ಲ. ಹೀಗಾಗಿ ಈ ಕಾಲಮಾನದ ಕವಿಗಳು ದಂತಗೋಪುರದಲ್ಲಿ ಕುಳಿತು ಸ್ವಂತಕ್ಕಾಗಿ ಇಲ್ಲವೇ ಬೇರಾರನ್ನೊ ತೃಪ್ತಿಪಡಿಸಲಿಕ್ಕಾಗಿ ಕೃತಿರಚನೆ ಮಾಡಿದರು.

ಕನ್ನಡ ಸಾಹಿತ್ಯ ಚಂಪೂಪ್ರಕಾರದ ಏಕತಾನತೆಯಿಂದ ಬಿಡುಗಡೆಗೊಳ್ಳಲು ಕಾತರಿಸುತ್ತಿದ್ದ ಘಟ್ಟದಲ್ಲಿ ಕೊಂಡಗುಳಿ ಕೇಶಿರಾಜ (ಕ್ರಿ.ಶ. 1107) ಮೊದಲ ವೀರಶೈವ ಕವಿಯಾಗಿ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ತಿರುವು ತಂದುಕೊಟ್ಟಿರುವನು. ಅವನ ಮಂತ್ರಮಹತ್ವದ ಕಂದ, ಲಿಂಗಸ್ತೋತ್ರದ ಕಂದ, ಶೀಲಮಹತ್ವದ ಕಂದ, ನವರತ್ನಮಾಲಾ, ಅಳಲಾಷ್ಟಕಗಳು ಚಂಪೂ ಸಾಹಿತ್ಯ ಪರಂಪರೆಯಿಂದ ಸಂಪೂರ್ಣವಾಗಿ ಸಿಡಿದು ನಿಂತ ಕೃತಿಗಳಾಗಿವೆ. ಅಂತರಂಗದ ಭಕ್ತಿ ನಿವೇದನೆಗೆ ಕಂದಪದ್ಯಗಳನ್ನು ಆತ ಮನೋಜ್ಞವಾಗಿ ಬಳಸಿಕೊಂಡಿರುವನು. ಶೀಲಮಹತ್ವದ ಕಂದದಲ್ಲಿ ಪಾಲ್ಕುರಿಕೆ ಸೋಮನಾಥನಿಗೆ ಪೂರ್ವದಲ್ಲಿ, ಬಸವಣ್ಣನಿಗಿಂತ ಹಿಂದಿದ್ದ ಶೈವದಲ್ಲಿ ಪ್ರಚಲಿತವಿದ್ದ ಅರವತ್ತುನಾಲ್ಕು ಶೀಲಗಳನ್ನು ಪ್ರಸ್ತಾಪಿಸಿರುವನು. ನವರತ್ನಮಾಲಾ, ಅಷ್ಟಕಗಳೆನ್ನುವ ಸಾಹಿತ್ಯ ಪ್ರಕಾರಗಳನ್ನು ಪ್ರಚಾರಕ್ಕೆ ತಂದಿರುವನು. ಶಾಂತಲಿಂಗ ದೇಶಿಕನು (1672) ಕೊಂಡಗುಳಿ ಕೇಶಿರಾಜನು ನಿತ್ಯವೂ ಶಿವಪೂಜೆ ಮಾಡುವಾಗ ಕಂದ, ವೃತ್ತ, ಗ್ರಂಥ, ತ್ರಿವಿಧಿ, ರಗಳೆ, ವಚನ, ಪದ, ಪದ್ಯ, ಗದ್ಯ, ದಂಡಕ, ಅಷ್ಟಕಗಳನ್ನು ಹೇಳುತ್ತಿದ್ದನೆಂದು ಹೇಳುವನು. ಇದು ನಿಜವಾದರೆ, ಮೊದಲ ವಚನಕಾರ ಇವನಾಗುತ್ತಾನೆ ; ಬಸವಪೂರ್ವದಲ್ಲಿ ವೈವಿಧ್ಯಮಯವಾದ ಸಾಹಿತ್ಯ ಪ್ರಕಾರಗಳು ಹಾಗೂ ಹೊಸ ಬಗೆಯ ವೀರಶೈವ ಸಾಹಿತ್ಯ ಸೃಷ್ಟಿ ನಡೆದಿತ್ತೆಂದು ಊಹಿಸಬಹುದಾಗಿದೆ. ಇವನ ಕಂದಗಳು ಕವಿಯ ಭಾವೋತ್ಕಟತೆಗೆ ಹಾಗೂ ಉಜ್ವಲವಾದ ಭಕ್ತಿಗೆ ಸಹಜವಾಗಿ ಬಳಕೆಗೊಂಡಿವೆ. ಚಂಪೂ ಪ್ರಕಾರದಿಂದ ಸಾಹಿತ್ಯ ಹೊರಳುತ್ತಿರುವುದರ ಸೂಚನೆಯನ್ನು ಸ್ಪಷ್ಟವಾಗಿ ನಾವು ಗುರುತಿಸಬಹುದಾಗಿದೆ. ಕೊಂಡಗುಳಿ ಕೇಶಿರಾಜನ ಕಂದಪದ್ಯಗಳು ಮುಕ್ತಕಗಳಾದ ವಚನ

ಸಾಹಿತ್ಯದತ್ತ ಹೊರಳುತ್ತಿರುವುದನ್ನೂ ಹಳಗನ್ನಡ ಭಾಷೆ ನಡುಗನ್ನಡದತ್ತ ಹೊರಳುತ್ತಿರುವುದನ್ನೂ ನಾವು ಕಾಣಬಹುದಾಗಿದೆ. ಬಸವಣ್ಣನ ಮೇಲೆ ಕೊಂಡಗುಳಿ ಕೇಶಿರಾಜನ ಪ್ರಭಾವ ಗಾಢವಾಗಿರುವುದನ್ನು ಈಗಾಗಲೇ ಗುರುತಿಸಲಾಗಿದೆ.* ಅವರೀರ್ವರೂ ಸಮಾನ ಹೃದಯಿಗಳು. ಬಸವಣ್ಣನ ವಚನಗಳ ಅನೇಕ ಭಾವಗಳಿಗೆ ಕೇಶಿರಾಜನ ಸ್ಫೂರ್ತಿಯಿದೆ. ಕೇಶಿರಾಜನ 'ಶೀಲಮಹತ್ವದ ಕಂದ'ದಲ್ಲಿ 12ನೇ ಶತಮಾನದ ಬಸವಾದಿ ಶಿವಶರಣರು ಟಂಕಿಸಿದ ಅನೇಕ ಪಾರಿಭಾಷಿಕ ಪದಗಳನ್ನು ಉದಾಹರಣೆಗೆ ಕಾಯಕ, ಜಂಗಮ, ಮಹೇಶ, ಭಕ್ತ ಭವಿ , ಶಿವನ ತ್ರಿವಿಧರೂಪಗಳಾದ ಗುರುಲಿಂಗ - ಜಂಗಮ, ಷಡ್ವಿಧಶೀಲ, ಷಡ್ವಿದ , ವ್ರತ ಇತ್ಯಾದಿ ಪ್ರಸ್ತಾಪಿಸಿರುವನು. ಬಸವಾದಿ ಶರಣರು ನಡೆಸಿದ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯ ಪೂರ್ವ ಚಿಹ್ನೆಗಳನ್ನು ಕೊಂಡಗುಳಿ ಕೇಶಿರಾಜನ ಕೃತಿಗಳಲ್ಲಿ ನಾವು ಕಾಣಬಹುದಾಗಿದೆ.

ಸದ್ಯಕ್ಕೆ ಆದ್ಯ ವಚನಕಾರರ ಜೇಡರ ದಾಸಿಮಯ್ಯ. ಡಾ. ಎಂ. ಚಿದಾನಂದ ಮೂರ್ತಿಯವರು ಚಂಪೂವಿನಿಂದ ವಚನಕ್ಕೆ ಕನ್ನಡ ಸಾಹಿತ್ಯವು ಸಂಕ್ರಮಣಗೊಂಡುದನ್ನು ವಿವೇಚಿಸುತ್ತಾ ''ಯಾವುದೇ ಹೊಸ ಪ್ರಕಾರ ಧಿಡೀರನೆ ಕಾಣಿಸಿಕೊಳ್ಳುವುದಿಲ್ಲ - ಅದು ಹಿಂದಿನ ಪ್ರಕಾರ ಅಥವಾ ಪ್ರಕಾರಗಳ ಮೇಲೆ ರೂಪುಗೊಂಡುದಾಗಿರುತ್ತದೆ. ಹಳೆಯ ಮತ್ತು ಹೊಸ ಪ್ರಕಾರಗಳ ಸಂಧಿಕಾಲದ ಸಾಹಿತ್ಯವನ್ನು ಎಚ್ಚರಿಕೆಯಿಂದ ಗಮನಿಸದಿದ್ದರೆ ಹಳೆಯದಕ್ಕೂ ಹೊಸದಕ್ಕೂ ಸಂಬಂಧವೇ ಇಲ್ಲವೇನೋ ಎಂಬ ಭ್ರಮೆ ಬರಬಹುದು. ಸಾಮಾನ್ಯ ಓದುಗರಂತೂ ಹಾಗೆ ಭಾವಿಸುವುದೂ ಸಾಮಾಜಿಕ. ಆದರೆ, ಸೂಕ್ಷ್ಮವಾಗಿ ನೋಡಿದರೆ, ಒಂದು ಪ್ರಕಾರಕ್ಕೂ ಇನ್ನೊಂದು ಪ್ರಕಾರಕ್ಕೂ ಸಂಬಂಧವಿದ್ದು ಒಂದು ಇನ್ನೊಂದಾಗಿ ಕ್ರಮೇಣ ಮಾರ್ಪಟ್ಟಿರುತ್ತದೆ ; ಈ ಸಂಧಿಕಾಲದ, ಸಂಕ್ರಮಣಾವಸ್ಥೆಯ ಸಾಹಿತ್ಯವು ಹಳೆಯ ಮತ್ತು ಹೊಸ ಪ್ರಕಾರಗಳನ್ನು ತಾರ್ಕಿಕವಾಗಿ ಕೂಡಿಸುವ ಕೊಂಡಿಯಾಗಿರುತ್ತದೆ. ಚಂಪೂ ವಚನಗಳ ಮಧ್ಯೆ ಇರುವ ಅಂತಹ ಕೊಂಡಿಯನ್ನು ಕೊಂಡಗುಳಿ ಕೇಶಿರಾಜನಲ್ಲಿ ನಾವು ಕಾಣಬಹುದು'' ಎಂದಿರುವರು (ಲಿಂಗಾಯತ ಅಧ್ಯಯನಗಳು, ಪು. 554 - 555) ಕೊಂಡಗುಳಿ ಕೇಶಿರಾಜನ ನಂತರ ಬರುವ ಜೇಡರ ದಾಸಿಮಯ್ಯನ ವಚನಗಳನ್ನು ಗಮನಿಸಿದಾಗ ಅವನ ಕಾಲಕ್ಕಾಗಲೇ ವಚನವು ಒಂದು ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳುತ್ತಿದ್ದಂತೆ ಹಾಗೂ ಬಸವಾದಿ ಶಿವಶರಣರು ನಡೆಸಿದ ಸಮಾಜೋಧಾರ್ಮಿಕ ಆಂದೋಲನದ ಪೂರ್ವ ಚಿಹ್ನೆಗಳು ಬೀಜಾರೋಪಣ ಪಡೆದಂತೆ ಕಂಡುಬರುತ್ತದೆ.

ಬಸವಪೂರ್ವದ ವಚನಕಾರರಾಗಿ ಜೇಡರದಾಸಿಮಯ್ಯ, ಶಂಕರದಾಸಿಮಯ್ಯ,

ನನ್ನ 'ವಚನಾನುಶೀಲನ (1989) ಕೃತಿಯ 'ಬಸವಪೂರ್ವಯುಗದ ವೀರಶೈವ' ದ ಅಧ್ಯಯನಕ್ಕೊಂದು ಆಕರ (ಪು. 42 - 74) ಎಂಬ ಲೇಖನ ನೋಡಿ.

ಡೋಹರ ಕಕ್ಕಯ್ಯ, ಮಾದರಾ ಚನ್ನಯ್ಯ, ಕೆಂಬಾವಿ ಭೋಗಣ್ಣ, ತೆಲುಗು ಜೋಮ್ಮಣ್ಣ ನಿಜಗುಣದೇವ , ಚಂದಿಮರಸ ಹಾಗೂ ಸಕಲೇಶ ಮಾದರಸರು ಕಂಡುಬಂದರೂ , ಜೇಡರ ದಾಸಿಮಯ್ಯ, ಚಂದಿಮರಸ, ಸಕಲೇಶ ಮಾದರಸರು ಮಾತ್ರ ಉಳಿದವರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಚನಗಳನ್ನು ಬರೆದಿರುವರು. ಇವರು ಬಸವ ಪೂರ್ವದ ಗಮನಾರ್ಹ ವಚನಕಾರರು. ಉಳಿದವರು ಬೆರಳೆಣಿಕೆಯ ವಚನಗಳನ್ನು ಬರೆದಿದ್ದು ವಯೋಮಾನದ ದೃಷ್ಟಿಯಿಂದ ಬಸವಣ್ಣ , ಪ್ರಭುದೇವರಿಗಿಂತ ಹಿರಿಯರು. ಆದರೆ ಇವರು ಬಸವಣ್ಣ ಹಾಗೂ ಪ್ರಭುದೇವರ ದಟ್ಟವಾದ ಪ್ರಭಾವಕ್ಕೆ ಒಳಗಾಗಿ ಅವರನ್ನು ತಮ್ಮ ವಚನಗಳಲ್ಲಿ ಸ್ತುತಿಸಿರುವರು. ಬಹುಶಃ ಇವರು ಅವರ ವಚನಗಳಿಂದ ಪ್ರೇರಣೆ ಪಡೆದು ವಚನಗಳನ್ನು ರಚಿಸಿರಬಹುದು.

ವಚನಗಳು ದೇಸೀ ರಚನೆಗಳು. ಅವುಗಳ ಮೂಲವನ್ನು ಸಂಸ್ಕೃತ, ತಮಿಳಿನಲ್ಲಿ ಹುಡುಕುವುದಕ್ಕಿಂತ ಕನ್ನಡದ ನೆಲದಲ್ಲಿಯೇ ಹುಡುಕುವುದು ಒಳ್ಳೆಯದು. ವಚನಗಳು ಬಹುವಾಗಿ ಶರಣರು ನಡೆಸುತ್ತಿದ್ದ ಅನುಭಾವ ಗೋಷ್ಠಿಯಲ್ಲಿ ಹುಟ್ಟಿಕೊಂಡಿರಬಹುದು. ಈ ಬಗೆಯ ಗೋಷ್ಠಿಗಳು ಬಸವಣ್ಣನ ಮಹಾಮನೆಯಲ್ಲಿ ನಡೆದಿರಬಹುದು, ಅನುಭವ ಮಂಟಪದಲ್ಲಿ ಆಗಿರಬಹುದು, ಗೊಗ್ಗಯ್ಯನು ಉಳುಮೆ ಮಾಡುತ್ತಿದ್ದ ತೋಟದಲ್ಲಾಗಿರ ಬಹುದು, ಲಕ್ಕುಂಡಿಯ ಹಾದಿಬದಿಯಲ್ಲಿ ಮುಕ್ತಾಯಕ್ಕ ಅಜಗಣ್ಣನ ಶವವನ್ನು ಮುಂದಿ ಟ್ಟುಕೊಂಡು ಗೋಳಿಡುತ್ತಿದ್ದ ಎಡೆಯಲ್ಲಿ ಆಗಿರಬಹುದು, ಶ್ರೀಶೈಲದ ದಟ್ಟವಾದ ಕಾಡಿನಲ್ಲಿ ಪ್ರಭು ಗೋರಕ್ಷನ ಜೊತೆ ಸಂಭಾಷಿಸುವಾಗ ಆಗಿರಬಹುದು. ಜೇಡರ ದಾಸಿಮಯ್ಯ ಬಳಸುವ 'ಸೂಳ್ನುಡಿ' 'ಅನುಭಾವ' 'ನುಡಿಗಡಣ' ಎಂಬ ಪದಗಳು ಪರ್ಯಾಯವಾಗಿ, ವಚನ ರಚನೆಯನ್ನು ಸೂಚಿಸುತ್ತಿರುವಂತಿದೆ. ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆಯಲ್ಲಿ ಪ್ರಸಂಗದ ಉಲ್ಲೇಖ ಬಂದಿದೆ. ಪ್ರಸಂಗವು ಅನುಭಾವಿಗಳು ಮನೆಯ ಮುಂದಿನ ಪಡಸಾಲೆಯಲ್ಲಿಯೊ, ಅಂಗಳ ದಲ್ಲಿಯೊ, ದೇವಸ್ಥಾನ ಅಥವಾ ಮಠ - ಮಂದಿರದಲ್ಲೋ ನಡೆಸುತ್ತಿದ್ದ ಅನುಭಾವಿಕ ಚರ್ಚೆ, ಶೂನ್ಯ ಸಂಪಾದನೆಯಂತಹ ವಿಶಿಷ್ಟ ಸಂಕಲನ ಗ್ರಂಥವಾಗಲೀ, ಗುಬ್ಬಿಯ ಮಲ್ಲಣ್ಣನ (ಸು. 1530) ವೀರಶೈವಾಮೃತ ಮಹಾಪುರಾಣವಾಗಲಿ ಹೀಗೆ 'ಪ್ರಸಂಗ' ರೂಪದಲ್ಲಿ ಸೃಷ್ಟಿಯಾದುದನ್ನು ಲಕ್ಷಿಸಬಹುದು. ಉದಾಹರಣೆಗೆ ಮೊದಲನೆ ಶೂನ್ಯ ಸಂಪಾದನೆಯಲ್ಲಿ (ಸು. 1430) ಬರುವ 'ಇಲ್ಲಿ ವಚನ ಕ್ರಮ ಸೇರವೆ ತಪ್ಪುಳೊಡೆ ನಿಮ್ಮ ಪರಮಜ್ಞಾನದಿಂ ತಿದ್ದಿ ಈ ವಚನಾನುಭವ ಪ್ರಸಂಗಮಂ ಮಾಡಿ ಸುಖಿಸುವುದು' ಎಂಬ ಉಲ್ಲೇಖವನ್ನು ಗಮನಿಸಬಹುದು. ಹಾಗೆಯೆ ಶಿವಗಂಗೆಯ ಜ್ಯೋತಿಯಮ್ಮನ ಮನೆ ಯಲ್ಲಿ ಹಲಗೆಮಾರ್ಯನು (ಎರಡನೆಯ ಶೂನ್ಯ ಸಂಪಾದನೆಕಾರ) ನಡೆಸಿದ 'ಪ್ರಸಂಗವನ್ನು' ಆಧರಿಸಿ ಎರಡನೆಯ ಶೂನ್ಯ ಸಂಪಾದನೆ ಹಾಗೂ ವೀರಶೈವಾಮೃತ ಮಹಾಪುರಾಣ ಹುಟ್ಟಿಕೊಂಡಿರುವುದನ್ನು ಗಮನಿಸಬಹುದು.

ವಚನಗಳು ಪದ್ಯವೂ ಅಲ್ಲದ ಗದ್ಯವೂ ಅಲ್ಲದ ಪದ್ಯ ಗದ್ಯಗಳ ಸಮ್ಮಿಶ್ರ ಗುಣವನ್ನು ತನ್ನಲ್ಲಿ ಅಳವಡಿಸಿಕೊಂಡಿರುವ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. ವಚನ ರಚನೆಯು ಆ ಕಾಲಮಾನದ ಸಾಹಿತ್ಯದ ಪರಿವರ್ತನೆಯ ತುರ್ತಿಗೆ ಒಂದು ಸಾಂಕೇತಿಕ 'ಶಬ್ದ ಸಂಪುಟ' ಸಾಹಿತ್ತಿಕ ಬದಲಾವಣೆ ಹಿಂದಿನ ಏಕತಾನತೆ (monotonus) ಯಿಂದ ಮುಕ್ತವಾಗುವುದಷ್ಟೇ ಆಗಿರದೆ ಸಾಹತ್ಯವು ಸಮಾಜ ಮುಖಿಯಾಗಬೇಕೆನ್ನುವ ಸಾಮಾಜಿಕ ಒತ್ತಡವೂ ಇದರೊಂದಿಗೆ ಕೈಜೋಡಿಸಿದೆ. ಅರಮನೆಯ ಪರಿಸರದಿಂದ ಶ್ರೀಸಾಮಾನ್ಯರ ಗುಡಿಸಲಿಗೂ ಸಾಹಿತ್ಯ ತನ್ನ ವಿರಾಡ್ರೂಪವನ್ನು ವಿಸ್ತರಿಸಬೇಕು ; ಸಾಮಾಜಿಕ ಬದಲಾವಣೆಗೆ ಸಾಹಿತ್ಯ ಅಭಿವ್ಯಕ್ತಿ ಮಧ್ಯಮವಾಗಬೇಕು; ಶ್ರೀಸಾಮಾನ್ಯನೂ ತನ್ನ ಮನದಾಳದ ವಿಚಾರವನ್ನು ಪ್ರಕಟಪಡಿಸಲು ಸಾಹಿತ್ಯವು ಪ್ರಭಾವಶಾಲಿ ವೇದಿಕೆಯಾಗಬೇಕು - ಇವು ಸಾಹಿತ್ತಿಕ ಬದಲಾವಣೆಯ ಮುಖ್ಯ ಆಶಯಗಳು. ಬಸವಣ್ಣ 12ನೇ ಶತಮಾನದ ಸಮಾಜೋಧಾರ್ಮಿಕ ಚಳವಳಿಯ ನಾಯಕನಾದಂತೆ ಶಿವಶರಣರ ವಚನಗಳ ಸಾಮೂಹಿಕ ಸೃಷ್ಟಿಗೆ ಅವನು ಮಾದರಿಯಾದನು. ಅನುಭಾವ ಗೋಷ್ಠಿಗಳು ವಚನ ರಚನೆಯ ಸಾಮೂಹಿಕ ಕ್ರಿಯೆಗೆ ಒಂದು ರೀತಿಯಲ್ಲಿ ಪ್ರಚೋದನೆ ನೀಡಿತೆಂದು ಹೇಳಿದರೂ ತಪ್ಪಾಗಲಾರದು.

ಹನ್ನೆರಡನೆಯ ಶತಮಾನದ ಸಾಮಾಜಿಕ, ದಾರ್ಮಿಕ ಚಳವಳಿಗೆ ಶಕ್ತಿ ಸಂಚಯನವಾದುದು ಆಗಿನ ವಾತಾವರಣದಲ್ಲಿ ಗರಿಗೆದರಿದ ವಚನ ಸಾಹಿತ್ಯದ ಮೂಲಕ. ಈ ಚಳುವಳಿಯಿಂದ ಕನ್ನಡ ಸಾಹಿತ್ಯವೂ, ವಚನ ಸಾಹಿತ್ಯದಿಂದ ಚಳುವಳಿಯೂ ಪರಸ್ಪರ ಪೂರಕವಾಗಿ ಪ್ರೇರಣೆ ಪಡೆಯಿತೆಂದರೂ ತಪ್ಪಾಗಲಾರದು. ಈ ಚಳವಳಿಯಿಂದ

1. ವರ್ಣ - ವರ್ಗಗಳ ನಡುವಿನ ಅಂತರ ಇಲ್ಲವಾಗಿ ಜನರ ನಡುವೆ ಸಮಾನತೆ ಮೂಡಲು ಸಾಧ್ಯವಾಯಿತು.
2. ಗಂಡು ಹೆಣ್ಣಿನ ನಡುವೆ ಲಿಂಗಭೇದವೇ ಹೊರತು ಮತ್ತಾವ ವ್ಯತ್ಯಾಸವೂ ಇರಕೂಡದೆಂದು ಹೆಣ್ಣಿಗೆ ಪಂರಪರೆ ನಿರಾಕರಿಸಿದ್ದ ಜ್ಞಾನವನ್ನು ಪಡೆಯುವ ಹಕ್ಕು ಹಾಗೂ ಅಭಿವ್ಯಕ್ತಿ ಸ್ವಾತಂತ್ರವನ್ನು ದೊರಕಿಸಿಕೊಡಲಾಯಿತು.
3. ಆರ್ಥಿಕ ಸಮಾನತೆಗಾಗಿ ಕಾಯಕ - ದಾಸೋಹ ಪರಿಕಲ್ಪನೆಗಳನ್ನು ಜಾರಿಗೆ ತರಲಾಯಿತು.
4. ವಿದ್ಯೆಯನ್ನು ಪಡೆಯಲು ಎಲ್ಲರಿಗೂ ಅವಕಾಶವಿದೆಯೆಂದೂ, ತಾವು ಪಡೆದ ಅರಿವನ್ನು ಮುಕ್ತವಾದ ವಾತಾವರಣದಲ್ಲಿ ಅಭಿವ್ಯಕ್ತಿ ಮಾಡುವ ಅಧಿಕಾರ ಬ್ರಾಹ್ಮಣನಿಂದ ಅಂತ್ಯಜನವರೆಗೂ ಇದೆಯೆಂದು ಘೋಷಿಸಲಾಯಿತು.
5. ಸಮಾನತೆಗೆ ಅರ್ಥ ಬರುವುದು ಸಮಾನ ವೇದಿಕೆಯಲ್ಲಿ ನಡೆಸುವ ಮುಕ್ತ

ಚರ್ಚೆಯಲ್ಲಿ ಎಂಬುದನ್ನು ಕಾರ್ಯರೂಪಕ್ಕೆ ತರಲು 'ಅನುಭಾವ ಗೋಷ್ಠಿ'ಯನ್ನು ನಡೆಸಲಾಯಿತು. ಇಲ್ಲಿ ಜಾತಿಯಿಂದ ವರ್ಗದಿಂದ ಯಾರೂ ಹಿರಿಯರಲ್ಲ ಯಾರೂ ಕಿರಿಯರಲ್ಲ; ಎಲ್ಲರೂ ಸಮಾನರು. ಈ ಮುಕ್ತ ವಾತಾವರಣದಲ್ಲಿ ವ್ಯಕ್ತಿಗಳಲ್ಲಿನ ಲೋಪ - ದೋಷಗಳನ್ನು ಸಾಮಾಜಿಕ ಅರ್ಥವಿಹೀನ ಆಚಾರ - ಆಚರಣೆ, ನಂಬಿಕೆಗಳು - ಮೌಢ್ಯಗಳನ್ನು ಕುರಿತ ಚರ್ಚೆಗೆ ಅವಕಾಶವಾಯಿತು.

6. ಮಾನವೀಯತೆ, ಅನುಕಂಪ, ಪರಸ್ಪರ ತಿಳುವಳಿಕೆ, ಸಾಂಘಿಕ ಜೀವನ, ಸಾರ್ಥಕ ಮೌಲ್ಯಗಳ ಅಳವಡಿಕೆ ಸಾಧ್ಯವಾಯಿತು.

7. ವೀರಶೈವ ಧರ್ಮವು ತನ್ನ ತಾತ್ತ್ವಿಕ ನೆಲಗಟ್ಟನ್ನು ಅನುಭವ ಮಂಟಪದ ಮುಕ್ತ ವಾತಾವರಣದಲ್ಲಿ ನಿರ್ಣಯಿಸಿ ಅನುಷ್ಠಾನಕ್ಕೆ ತರಲು ಸಾಧ್ಯವಾಯಿತು.

ಹರಿಹರ ವಚನಕಾರರ ನಂತರ ಸು. 70-80 ವರ್ಷಗಳ ಅಂತರದಲ್ಲಿ ಬಂದ ಕನ್ನಡದ ಮಹತ್ವದ ಭಕ್ತಕವಿ ; ಕೊಂಡಗುಳಿ ಕೇಶಿರಾಜನ ನಂತರ ಬರುವ ವೀರಶೈವ ಕವಿಗಳಲ್ಲಿ ಎರಡನೆಯವನು. ಅವನು 'ಗಿರಿಜಾ ಕಲ್ಯಾಣ' ಚಂಪೂ ಮಹಾಕಾವ್ಯವನ್ನು ಬರೆಯುವುದರ ಜೊತೆಗೆ ರಗಳೆ, ಅಷ್ಟಕ, ಶತಕಗಳಲ್ಲೂ ಕೃತಿರಚನೆ ಮಾಡಿರುವನು. ವಚನಕಾರರು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ತಿರುವನ್ನು ಕೊಟ್ಟರೆ, ಹರಿಹರ ಕನ್ನಡ ಸಾಹಿತ್ಯದ ದಿಕ್ಕು ದೆಸೆಯನ್ನೇ ಬದಲಿಸಿದನು. ವಚನ ಸಾಹಿತ್ಯದ ನೆರೆ ಬಂದು ತಗ್ಗಿದ ಕಾಲಘಟ್ಟದಲ್ಲಿ ಇವನು ಸಾಹಿತ್ಯ ರಚನೆಗೆ ತೊಡಗಿದರೂ ವಚನ ಸಾಹಿತ್ಯ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ತಿಕ ನೆಲೆಯಲ್ಲಿ ಬೀರಿದ ಮಹತ್ತರ ಪ್ರಭಾವವನ್ನು ಹಾಗೂ ಅದು ಮಾಡಿದ ಬದಲಾವಣೆಗಳನ್ನು ಪ್ರತ್ಯಕ್ಷವಾಗಿ ಕಂಡವನು. ಶಿವಶರಣರ ರಚಿಸಿದ ವಚನ ಸಾಹಿತ್ಯ ಗಾಳಿಯಲ್ಲಿ ವಾಗ್ರೂಪದಲ್ಲಿ ತೇಲಾಡುತ್ತಿದ್ದಾಗ, ಅಲ್ಲಲ್ಲಿ ಅವು ಲಿಖಿತರೂಪದಲ್ಲಿ ಮೈವೆತ್ತಿದ್ದಾಗ ಅವನ್ನು ಕೇಳಿದವನು, ಓದಿದವನು. ಅವನ ಮೇಲೆ ವಚನ ಸಾಹಿತ್ಯ ಗಾಢವಾದ ಪ್ರಭಾವ ಬೀರಿದೆ. ಅದಕ್ಕಿಂತ ಹೆಚ್ಚಾಗಿ, ಅಂದಿನ ಶರಣರ ಬದುಕು - ಮಣಿಹಗಳು, ವಿಚಾರಗಳು, ವೈಚಾರಿಕ ಮನೋಭಾವ, ಸಾಮಾಜಿಕ ಬದಲಾವಣೆಗಾಗಿ ತುಡಿಯುತ್ತಿದ್ದ ಪ್ರಾಮಾಣಿಕ ಹಂಬಲಗಳು ಹರಿಹರನನ್ನು ಆಕರ್ಷಿಸಿದೆ. ಬಸವಾದಿ ಶಿವಶರಣರು ಜಾತಿ ನಿರ್ಮೂಲನಕ್ಕೆ ಹೋರಾಡಿದುದು ಹರಿಹರನಿಗೆ ಮೆಚ್ಚುಗೆಯಾಗಿದೆ; ಅಂತ್ಯಜರ ಕ್ಷೇಮಚಿಂತನೆ, ಅವರಿಗೆ ಸಾಮಾಜಿಕ ನ್ಯಾಯ ದೊರಕುವಂತೆ ಮಾಡಿದುದು ಒಂದು ದೊಡ್ಡ ಆದರ್ಶವಾಗಿ ಅವನಿಗೆ ತೋರಿದೆ. ಹೀಗಾಗಿ ಅವನು ಅಂತ್ಯಜರ ಬಗೆಗೆ ಪ್ರಸ್ತಾಪ ಮಾಡುವಾಗ ಪಿರಿಯ ಮಾಹೇಶ್ವರರ್ ಎಂದು ಅತ್ಯಂತ ಗೌರವಪೂರ್ವಕವಾಗಿ ಸಂಬೋಧಿಸುವನು. 'ಮಾದರ ಚೆನ್ನಯ್ಯಗಳು' ರಗಳೆಯಲ್ಲಿ ಕರಿಕಾಲಚೋಳನು ಚೆನ್ನಯ್ಯನನ್ನು ಕುರಿತು ದೇವದೇವ ನೊಲಿದನ ಕುಲವೆ ಸತ್ಕುಲಂ ಘನಮಹಿಮನೊಲಿದ ಜಾತಿಯೆ ಜಾತಿ ನಿರ್ಮಲಂ

ಸರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ ಸರ್ವಜ್ಞ ನಿನ್ನ ಕೆರ್ಪಿಂಗೆನ್ನ ಶಿರ ಸರಿಯೆ'' ಎಂದು ಹೇಳುವನು.

ಶಿವಶರಣರು ಹಾಗೂ ಅವರ ವಚನಗಳಿಂದ ಹರಿಹರ ಪ್ರಭಾವಿತನಾಗಿದ್ದರೂ ವಚನ ರಚನೆಯ ಮುಂದುವರಿಕೆಯ ಕೆಲಸ ಮಾಡಲಿಲ್ಲ. ಅವನು ಭಕ್ತಕವಿ, ಅವನ ಓರುಂಜವ್ವನದ ಭಕ್ತಿಗೆ ವಚನ ಸೂಕ್ತ ಮಾಧ್ಯಮವಾಗಿ ಕಾಣಲಿಲ್ಲ. ಭಕ್ತಿಯ ತುಂಬು ಪ್ರವಾಹಕ್ಕೆ 'ರಗಳೆ' ಸಮರ್ಥ ಮಾಧ್ಯಮವಾಯಿತು ಶಿವನ ಭಕ್ತರ, ಕರ್ನಾಟಕದ ಶರಣರ, ತಮಿಳುನಾಡಿನ ನಾಯನ್ಮಾರರ, ತೆಲುಗು ನಾಡಿನ ಶಿವಭಕ್ತರ ಕಥನಗಳನ್ನು ನಿರೂಪಿಸಲು ಅವನಿಗೆ ರಗಳೆಯ ಹೊರತಾಗಿ ಬೇರೊಂದು ಸಾಹಿತ್ಯ ಪ್ರಕಾರ ಹೊಂದಿಕೆಯಾಗಲಿಲ್ಲ. ಅವನ 'ಗಿರಿಜಾಕಲ್ಯಾಣ' ಮಹಾಕಾವ್ಯವಾಗಿದ್ದರೂ ಅವನ 'ಶಿವ ಗಣ'ದ ರಗಳೆಗಳು ಅವನಿಗೆ ಕೀರ್ತಿ ತಂದ ಕೃತಿಗಳು. ಅವನು ಆ ಮೂಲಕ ಪರಂಪರೆಯ ನಿರ್ಮಾಪಕ. ಶಾಸನ / ಕಾವ್ಯಗಳಲ್ಲಿ ಕ್ವಚಿತ್ತಾಗಿ ಬಳಕೆಗೊಳ್ಳುತ್ತಿದ್ದ ರಗಳೆಗೆ ಅವನು ಜೀವವಿತ್ತವನು. ತ್ರಿಭುವನತಾತ ರಗಳೆಯನ್ನು ಬಳಸಿದ್ದರೂ ಹರಿಹರನಂತೆ ರಗಳೆಯನ್ನು ಕುಣಿಸಿಲ್ಲ, ಮಣಿಸಿಲ್ಲ. ಹೀಗಾಗಿ ರಗಳೆಗೆ ಇವನೇ ಆದಿ ಇವನೇ ಅಂತ್ಯ. 'ಗುಂಡಯ್ಯನ ರಗಳೆ'ಯಲ್ಲಿ ತನ್ನ ವೃತ್ತಿ ಪರಿಭಾಷೆಯಲ್ಲಿಯೆ ತನ್ನ ಅನುಭಾವಿಕ ಸಾಧನೆಯನ್ನು ಹೇಳುವ ಇವನು 12ನೇ ಶತಮಾನದ ಶಿವಶರಣರನ್ನು ಈ ಹಿನ್ನೆಲೆಯಲ್ಲಿ ನೆನಪಿಸುವನು :

ಆಧಾರವೆಯಾಧಾರಮದಾಗಿರೆ
ವೇಧೆಯ ಚಕ್ರದ ಮೊಳೆ ತಾನಾಗಿರೆ
ಮಿಗೆ ಘಟ್ಚಕ್ರಮೆ ಚಕ್ರಮದಾಗಿರೆ
ಸೊಗಯಿದ ನಾಭಿಯೆ ನಾಭಿಯದಾಗಿರೆ
ಕನಸಿನ ಕಾಯಂ ಮೃತ್ತಿಕೆಯಾಗಿರೆ
ನೆನಹಂ ಚಟಿದಾರಂಗಳವಾಗಿರೆ
ನಿಷ್ಠೆಯೆ ಪಿಡಿವುರುದಂಡಮದಾಗಿರೆ
ಮುಟ್ಟಿ ತಿರುಗುವುದು ಜೀವನಮಾಗಿರೆ
ಮಾಡುವ ಭಕ್ತಿ ಕಟಾಹಮದಾಗಲು
ಕೂಡಿದ ಕರಣದೆ ಮರ್ದಿಸುತಾಗಲು
ಮಿಗೆ ಶೋಷಣದಾ ತಪದಿಂದಾರಿಸಿ
ಬಗೆ ಮಿಗಲುದರಾಗ್ನಿಗಳಿಂದಾಹಿಸಿ
ಆನಂದಜಲಪ್ಲಾವನಮಾಗಿರೆ
ನಾನಾ ಭಕ್ತಿ ಕಟಾಹಮದಾಗಿರೆ
ಶಿವಕಾರುಣ್ಯಾಂಬುಗಳಿಂ ತೀವುತೆ
ಶಿವಭಕ್ತರ್ಗಾನಂದದೋಳೀವುತೆ

ಮೇಲಿನ ರಗಳೆಯ ಸಾಲುಗಳನ್ನು ಬಹಿರಂಗದ ಮಡಕೆಯ ಕಾಯಕ ಅಂತ

ರಂಗದಲ್ಲಿ ಶಿವಮೊಗ್ಗದ ಸಾಧನೆಗಳನ್ನು ಜೊತೆಜೊತೆಯಾಗಿ ಹರಿಹರ ನಿರೂಪಿಸುವನು. ಶರೀರದಲ್ಲಿನ ಆಧಾರ ಚಕ್ರವೆ ಮಡಕೆಯ ನಿರ್ಮಾಣಕ್ಕೆ ಆಧಾರವಾಗಿರುವ ಚಕ್ರವಾಗಿದೆ. ಇಷ್ಟಲಿಂಗಧ್ಯಾನದಲ್ಲಿ ತಲ್ಲೀನನಾಗುವ ಹಂತವಾದ ವೇಧೆಯೆ ಚಕ್ರದ ಮಧ್ಯದ ಮೊಳೆಯಾಗಿದೆ. ದೇಹದಲ್ಲಿನ ಆಧಾರ ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ ಮತ್ತು ಆಜ್ಞೆಗಳೆಂಬ ಆರು ಚಕ್ರಗಳೆ ಇಲ್ಲಿ ಚಕ್ರವಾಗಿದೆ. ಸೊಗಸಾದ ನಾಭಿಸ್ಥಾನದಲ್ಲಿರುವ ಮಣಿಪೂರಕ ಚಕ್ರವೆ ನಾಭಿಯಾಗಿದೆ. ಅಶಾಶ್ವತವಾದ ಶರೀರವೇ ಮಡಕೆಗೆ ಮೂಲ ದ್ರವ್ಯವಾದ ಮೃತ್ತಿಕೆ (ಜೇಡಿಮಣ್ಣು)ಯಾಗಿದೆ. ನೆನಹು ಮಡಿಕೆ ಮಾಡುವಾಗ ಬಳಸುವ ಚಟೆದಾರಗಳಾಗಿವೆ. ನಿಷ್ಠೆಯೆ ಚಕ್ರವನ್ನು ತಿರುಗಿಸುವ ದಂಡವಾಗಿದೆ. ಜೀವನವೇ ಬುದ್ಧಿ ಚಿತ್ತ ಮತ್ತು ಅಹಂಕಾರಗಳೆ ಮಡಕೆಗೆ ಮರ್ದನವಾಗಿದೆ. ಶೋಷಣದ ಆ ತಪವೆ ಇಲ್ಲಿ ಮಡಕೆಯನ್ನು ಆರಿಸುವುದಾಗಿದೆ. ಉದರಾಗ್ನಿಯಿಂದ ದೇಹಕ್ಕೆ ಚೈತನ್ಯವುಂಟಾಗುತ್ತದೋ ಹಾಗೆ ಇಲ್ಲಿ ಮಡಕೆಗೆ ಗಟ್ಟಿತನ ಕೊಡಲು ಅದನ್ನು ಬೇಯಿಸುವ ಅಗ್ನಿಯಾಗಿದೆ. ಷಡ್ವಿಧ ಭಕ್ತಿಗಳಲ್ಲಿ ಒಂದಾದ ಆನಂದವೆ (ಆನಂದ ಜಲವೆ) ಇಲ್ಲಿ ಸುಟ್ಟ ಮಡಿಕೆಯನ್ನು ನೀರಿನಲ್ಲಿ ಅದ್ದುವ (ತಣಿಸುವ) ಕ್ರಿಯೆಯಾಗಿದೆ. ಹೀಗೆ ಅಂತರಂಗದ ಭಕ್ತಿ ಕ್ರಿಯೆ ಬಹಿರಂಗದ ಕ್ರಿಯೆ (ಮಡಕೆಯ ನಿರ್ಮಾಣ ಕ್ರಿಯೆ) ಎರಡನ್ನೂ ಸಮೀಕರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. 'ಇಳೆಯಾಂಡ ಗುಡಿಮಾರರ ರಗಳೆ'ಯಲ್ಲೂ ಅಂತರಂಗದೊಳಗಿನ ಭಕ್ತಿಯ ಆರಂಭ (=ವ್ಯವಸಾಯ) ಹಾಗೂ ಇಳೆಯಾಂಡಗುಡಿಮಾರರು ಬಹಿರಂಗದಲ್ಲಿ ಮಾಡುವ ವ್ಯವಸಾಯಗಳನ್ನು ಸಮೀಕರಿಸಿ ಹೇಳುವನು. ಕೆಳಗಿನ ಈ ಸಾಲುಗಳನ್ನು ಗಮನಿಸಿ : -

ಸಮಚಿತ್ತವೆಂಬ ಭೂಮಿಯನೆ ಹಸನಾಗಿರಸಿ
ಅಮರ್ದ ಶಂಕರನ ನೆನಹೆಂಬ ನೇಗಿಲನಿರಿಸಿ
ಅರಿವರ್ಗವಾರುವಂ ಹೂಡುವೆತ್ತಂ ಮಾಡಿ
ಹರಿವ ಮನಮಂ ಕಟ್ಟಿ ಹಿಡಿವ ಹಗ್ಗಂ ಮಾಡಿ
ಗರ್ವಿಸುವಹಂಕಾರಮುಮನಚ್ಚುವಂ ಮಾಡಿ
ಸರ್ವೇಶನಿಷ್ಠೆಯಂ ತಳಿವ ಬೀಜಂ ಮಾಡಿ
ಸುರುಚಿರ ಶಿವಜ್ಞಾನ ಶಶಿಕರಂ ಸೋಂಕುತಿರೆ
ಹರನ ಪರಮಾನಂದರಸದ ಮಳೆ ಕೊಳುತಮಿರೆ
ಬಿತ್ತಿ ಬೆಳೆವಂ ಶಿವನ ಸದ್ಭಕ್ತಿ ಸಸಿಗಳಂ
ಕಿತ್ತು ಕಳೆವಂ ಮೊಳೆವ ಪಾದಾದಿ ಕಳೆಗಳಂ

ಹರಿಹರನ ರಗಳೆಗಳ ವೈಶಿಷ್ಟ್ಯ ಅದರ ವಸ್ತುವಿನಲ್ಲಿದೆ. ಹರಿಹರ ಪರಂಪರೆಯ ನಿರ್ಮಾಪಕ (trend setter) ಹೇಗೆಂದರೆ, ಅವನು ಕನ್ನಡದಲ್ಲಿ ಮೊತ್ತಮೊದಲಿಗೆ ತಮಿಳುನಾಡಿನ ಪುರಾತನರು, ಕನ್ನಡನಾಡಿನ ಶರಣರು, ಪೂರ್ವದ ಶಿವನ ಸದ್ಭಕ್ತರು, (ಉದಾಹರಣೆಗೆ ಓಹಿಲಯ್ಯ, ಉದ್ಭಟ, ಮಲಯರಾಜದೇವ, ಬಾಣ, ಹಲಾಯುಧ,

ಮಲುಹಣ, ಸಾಯವೇದಿ, ಮನುಚೋಳ) ಇವರುಗಳ ಭಕ್ತಿಕಥನವನ್ನು ನಿರೂಪಿಸಿರುವನು. ಶಿವನ ಪಂಚವಿಂಶತಿ ಲೀಲೆಗಳಲ್ಲಿ ಒಂದಾದ ದಕ್ಷಾಧ್ವರಲೀಲೆಯನ್ನು ದಕ್ಷಾಧ್ವರ ರಗಳೆಯಲ್ಲಿ ಹೇಳುವನು. ತಮಿಳುನಾಡಿನ ಕರಿಕಾಲಜೋಳನ ಸಮಕಾಲೀನನಾದ ಮಾದರ ಚನ್ನಯ್ಯನ ಭಕ್ತಿಕಥನವನ್ನು ನಿರೂಪಿಸುವನು. ಭಕ್ತಿಕಥನಕ್ಕೆ ಹೊರತಾದ ಸಂಕೀರ್ಣ ವಿಷಯಗಳಾದ ಸಂಸಾರವ್ಯಾಮೋಹ ನಿರಸನ ರಗಳೆ, ಗುಣಸ್ತೋತ್ರ ರಗಳೆ, ವಿಭೂತಿ, ಪಂಚಾಕ್ಷರಿ ರಗಳೆ, ನಮಃಶಿವಾಯ ರಗಳೆ, ಹಂಪೆಯರಸನ ರಗಳೆ, ಜಯರಗಳೆ, ಪುಷ್ಪರಗಳೆ, ಲಿಂಗಾರ್ಚನೆಯ ರಗಳೆ, ಪಂಪಾಕ್ಷೇತ್ರದ ರಗಳೆ, ಮಹಿಮಾ ರಗಳೆ - ಇವುಗಳನ್ನೂ ಆತ ಬರೆದಿರುವನು.

ಹರಿಹರನ ರಗಳೆಗಳ ಬಂಧ (structure) ಸ್ವಾರಸ್ಯಕರವಾಗಿದೆ. ಭಕ್ತ ಅಥವಾ ಶರಣರ ಕಥೆಗಳು ವಿಸ್ತಾರವಾಗಿದ್ದರೆ ಆತ ಚಂಪೂವಿನಂತೆ ಗದ್ಯ ಪದ್ಯಗಳನ್ನು ಬಳಸುವನು. ಅಂದರೆ, ಒಂದು ಸ್ಥಲ ಪೂರ್ಣವಾಗಿ ರಗಳೆಯಲ್ಲಿಯೂ ಮತ್ತೊಂದು ಸ್ಥಲ ಪೂರ್ಣವಾಗಿ ಗದ್ಯದಲ್ಲಿಯೂ ಬರೆಯುವುದು. ಪುಟ್ಟ ಕಥಾವಸ್ತುವಿದ್ದರೆ ರಗಳೆಯನ್ನು ಬಳಸುವನು. ಕನ್ನಡ ನಾಡಿನ ಶರಣರ ಕಥನ ನಿರೂಪಣೆಯಲ್ಲಿ ಕೈಲಾಸದಿಂದ ಕಥೆಯು ಪ್ರಾರಂಭವಾಗಿ ಮರ್ತ್ಯದ ಮಣಿಹ ಮುಗಿದ ಮೇಲೆ ನೇರವಾಗಿ ಕೈಲಾಸಕ್ಕೆ ಶರಣ /ಶರಣೆಯರು ಹೋದರೆಂದು ನಿರೂಪಿಸಲಾಗಿದೆ. ಕೈಲಾಸದಲ್ಲಿ ಗಣವರ / ರುದ್ರಕನ್ನಿಕೆ ಮಾಡಿದ ತಪ್ಪನ್ನು ತಿದ್ದಿಕೊಳ್ಳಲು ಶಿವ/ ಪಾರ್ವತಿ ಶಾಪವಿತ್ತು ಮರ್ತ್ಯಕ್ಕೆ ಕಳುಹಿಸುವರು. ತಮ್ಮ ತಪ್ಪನ್ನು ನೇರ್ಪಡಿಸಿಕೊಂಡು ಶಾಪದ ಅವಧಿ ಮುಗಿಯುತ್ತಿದ್ದಂತೆ ಕೈಲಾಸದಿಂದ ಇಳಿದು ಬಂದ ವಿಮಾನದಲ್ಲಿ ಕೈಲಾಸಕ್ಕೆ ಮತ್ತೆ ಹಿಂತಿರುಗಿ ಹೋಗಿ ತಮ್ಮ ಪೂರ್ವಸ್ಥಾನದಲ್ಲಿ ನೇಮಕಗೊಳ್ಳುವರು. ಈ ತಂತ್ರ ತಮಿಳುನಾಡಿನ ನಾಯನ್ಮಾರರ ಕಥೆಯಲ್ಲಿ ವ್ಯತ್ಯಯಗೊಳ್ಳುತ್ತದೆ (ನಂಬಿಯಣ್ಣನ ಕಥೆ ಹೊರತಾಗಿ). ಅಲ್ಲಿ ಕಥೆ ನೇರವಾಗಿ ಪ್ರಾರಂಭಗೊಳ್ಳುತ್ತದೆ. ಅಲ್ಲಿ ಭಕ್ತ / ಭಕ್ತೆಯ ನಿಷ್ಠಾಪೂರ್ಣ ಭಕ್ತಿಯನ್ನು ಒರೆಹಚ್ಚಲಾಗುವುದು. ಶಿವನು ಮಾರುವೇಷದಲ್ಲಿ ಒಡ್ಡಿದ ಪರೀಕ್ಷೆಯಲ್ಲಿ ಭಕ್ತ/ ಭಕ್ತೆ ಜಯಶೀಲರಾದರೆ ಅವರಿಗೆ ಕೈಲಾಸದಲ್ಲಿ ಗಣವರ ಪದವಿ ಪ್ರಾಪ್ತವಾಗುತ್ತದೆ.

ಕರ್ನಾಟಕದ ಶರಣರ ಕಥನದಲ್ಲಿ ಶರಣ / ಶರಣೆಯರ ಬಹುಮುಖ ವ್ಯಕ್ತಿತ್ವದ ಪರಿಚಯದ ಬದಲು ಅವರ ಭಕ್ತಮಯವಾದ ಬದುಕಿನ ಚಿತ್ರವೇ ಪ್ರಧಾನವಾಗಿದೆ. ಉದಾಹರಣೆಗೆ ಬಸವರಾಜದೇವರ ರಗಳೆಯಲ್ಲಿ 12ನೇ ಶತಮಾನದ ಸಮಾಜೋಧಾರ್ಮಿಕ ಚಳುವಳಿಯಲ್ಲಿ ಬಸವಣ್ಣ ನಿರ್ವಹಿಸಿದ ಪಾತ್ರವಾಗಲಿ, ಅವನ ಸಾಂಸಾರಿಕ ಜೀವನದ ಮಧುರ ಚಿತ್ರವಾಗಲಿ, ಕಲ್ಯಾಣದಲ್ಲಿ ನಡೆದ ಗಲಭೆಗೆ ಕಾರಣವಾದ ಹಿನ್ನೆಲೆಯಾಗಲಿ ಅಲ್ಲಿ ದೊರೆಯುವುದಿಲ್ಲ. 'ಮಹಾದೇವಿಯಕ್ಕನ ರಗಳೆ' ಹಾಗೂ 'ಪ್ರಭುದೇವರ ರಗಳೆ'ಯಲ್ಲಿ ನಾಯಕರು ಕಲ್ಯಾಣಕ್ಕೆ ಬಂದ ಪ್ರಸ್ತಾಪ ಬರುವುದಿಲ್ಲ. ಶ್ರೀಶೈಲಕ್ಕೆ

ಅವರು ನೇರವಾಗಿ ಹೋದಂತೆ ಚಿತ್ರಿತವಾಗಿದೆ. ಹರಿಹರ ಬಸವರಾಜದೇವರ ರಗಳೆ ಹಾಗೂ ಮಹಾದೇವಿಯಕ್ಕನ ರಗಳೆಯಲ್ಲಿ 'ಶಿವಾನುಭಾವ ಗೋಷ್ಠಿ' ಗಳ ಚಿತ್ರವನ್ನು ಕೊಟ್ಟಿರುವನು ; 'ಗೀತ'(=ವಚನ) ಗಳು ಮಾತುದಮಾತಿಂಗೆ ಪ್ರಕಟಗೊಳ್ಳುತ್ತಿದ್ದುದನ್ನು ಪ್ರಸ್ತಾಪಿಸಿರುವನು ; ಶರಣರ 'ಗೋಷ್ಠಿ' ಹಾಗೂ ಅಲ್ಲಿನ ಶಿವಪೂಜಾ ವೈಭವಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿರುವನು. ಬಸವರಾಜದೇವರ ರಗಳೆಯಲ್ಲಿ ಶಿವಯೋಗ ನಿದ್ರಾ ಮುದ್ರಾ ಪ್ರಸಂಗವು ಬಸವಣ್ಣನ ಜಂಗಮ ಪ್ರೇಮಿತ್ವವನ್ನು ವ್ಯಕ್ತ ಪಡಿಸಿದರೆ, ಉಳ್ಳಿಯ ಪ್ರಸಂಗವು ಭಕ್ತರ ಇಷ್ಟಾರ್ಥವೇ ತನ್ನ ಇಷ್ಟಾರ್ಥವೆನ್ನುವ ನೆಲೆಯಲ್ಲಿ ಮನೋಜ್ಞವಾಗಿ ಚಿತ್ರಿತವಾಗಿದೆ. ಓಲೆಯ ಪ್ರಸಂಗ ಹಾಗೂ ಆಕಳ ಕಳ್ಳರ ಪ್ರಸಂಗದಲ್ಲಿ ಬಸವಣ್ಣನ ದಯಾಗುಣ ಹಾಗೂ ಮಾನವೀಯತೆ ಉಜ್ವಲವಾಗಿ ಪ್ರಕಟಗೊಂಡಿದೆ. ಬಸವಣ್ಣನು ಕೂಡಲಸಂಗನ ಸಾನ್ನಿಧ್ಯದಲ್ಲಿದ್ದಾಗಿನ ದೈನಂದಿನ ವಿಧಿಗಳು ಹರಿಹರನ ವೈಯಕ್ತಿಕ ಜೀವನ ವಿಧಾನವನ್ನು ನೆನಪಿಸಿರುವಂತಿದೆ. ಹೂದೋಟದಲ್ಲಿ ಹೂಗಳನ್ನು ಬೇಡಿ ತರುವ ಪ್ರಸಂಗ ಅವನ 'ಪುಷ್ಪರಗಳೆ' ಯನ್ನು ಮೇಲಿಂದ ಮೇಲೆ ನೆನಪಿಸುತ್ತದೆ. ಪ್ರಭುದೇವರ ರಗಳೆಯಲ್ಲಿ ಪ್ರಭು - ಕಾಮಲತೆಯರ ಪ್ರಸಂಗ ವಿಲೋಮ ವಿವಾಹದ ಪ್ರಸ್ತಾಪವಿದೆ. ಪ್ರಭುವಿನ ಬದುಕಿನಲ್ಲಿ ಒಂದು ಮಹತ್ತರ ತಿರುವು ಕಾಣಿಸಿಕೊಳ್ಳುವುದು ಕಾಮಲತೆ ಮಹಾ ಜ್ವರದಿಂದ ಕೈಲಾಸವಾಸಿಯಾದ ಮೇಲೆ ; ವಿರಹಾಗ್ನಿಯಲ್ಲಿ ಬೇಯುತ್ತಿದ್ದ ಅವನು ತನ್ನ ಕಾಲ ಕೆಳಗೆ ದೇವಾಲಯವಿರುವುದನ್ನು ಕಂಡು ಅದರ ಒಳಹೊಕ್ಕು ಅನಿಮಿಷ ಗುರುವಿನಿಂದ ಇಷ್ಟಲಿಂಗ ಪಡೆದುಕೊಂಡು ಹೊಸ ಮನುಷ್ಯನಾಗಿ ಬರುವ ಸನ್ನಿವೇಶದಲ್ಲಿ. 'ಮಹಾದೇವಿಯಕ್ಕನ ರಗಳೆ'ಯಲ್ಲಿ ಮಹಾದೇವಿಯ ತಂದೆ - ತಾಯಿ ಯರು ಗಿರಿಜೆಯಲ್ಲಿ ಹೆಣ್ಣು ಮಗುವನ್ನು ಬೇಡುವುದು ವಾಡಿಕೆಗೆ ವಿರುದ್ಧವಾದುದು. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೀಗೆ ಬೇಡಿಕೆ ಸಲ್ಲಿಸುವುದು ವಿಶೇಷವಾಗಿ ಕಾಣಿಸುತ್ತದೆ. ಮಹಾದೇವಿಯಕ್ಕ - ಕೌಶಿಕರ ವೈವಾಹಿಕ ಬದುಕಿನ ವಿಷಮತೆಯ ಚಿತ್ರ ಮಹಾದೇವಿಯಕ್ಕನ ರಗಳೆಯಲ್ಲಿ ಸೊಗಸಾಗಿ ಬಂದಿದೆ. ಪ್ರಭು ಮಾಯಾವಶನಾಗಿ ಕೆಲ ಕಾಲ ಸಂಸಾರ ನಡೆಸಿದ್ದನೆಂದೂ, ಮಹಾದೇವಿಯಕ್ಕ ಬಲವಂತಕ್ಕೆ ಕೌಶಿಕನೊಡನೆ ವಿವಾಹವಾಗಿ ಒಲ್ಲದ ಸಂಸಾರ ನಡೆಸಿದ್ದಳೆಂದೂ ಹರಿಹರ ನಿರೂಪಿಸಿರುವುದು ವಿಶಿಷ್ಟವಾಗಿದೆ.

ಭಕ್ತರ ಉಜ್ವಲವಾದ ಭಕ್ತಿ ನಿಷ್ಠೆ ಒರೆಹಚ್ಚಲ್ಪಡುವುದು ವಿಶೇಷವಾಗಿ ತಮಿಳು ನಾಡಿನ ನಾಯನ್ಮಾರರನ್ನು ಕುರಿತ ರಗಳೆಗಳಲ್ಲಿ. ಅಲ್ಲಿಯ ಭಕ್ತರ ಕಥನ ಜೀವಂತವಾಗಿ ಬರುತ್ತದೆ. ತಿರುನಾಳ್ಪೋವ ಓರ್ವ ಹಿರಿಯ ಮಾಹೇಶ್ವರ (= ಅಂತ್ಯಜ). ಪೊನ್ನಾಂ ಬಲದ ತಿರುನಾಳ್ ಉತ್ಸವವನ್ನು ಕಣ್ಣಾರೆ ನೋಡಬೇಕೆಂದು ಹಗಲೂ ಇರುಳೂ ಕನಸು ಕಂಡವನು. ಹನ್ನೆರಡು ವರ್ಷಗಳಾದರೂ ಕೆಲಸಗಳ ಒತ್ತಡದಲ್ಲಿ ಪೊನ್ನಾಂಬಲಕ್ಕೆ ಹೋಗಲಾಗದೆ ನಿತ್ಯವೂ ಪೊನ್ನಾಂಬಲದ ತಿರುನಾಳಿನ ವೈಭವವನ್ನು ಕಣ್ಣಿನಲ್ಲಿ ಮೂಡಿಸಿ

ಕೊಂಡು ಸುಖಿಸುವನು. ಒಡೆಯನು ತಿರುನಾಳಿನ ಜಿಟ್ಟಿಯ ಕೆಲಸಕ್ಕೆ ತಿರುನಾಳ್ಲೋವನನ್ನು ನೇಮಿಸಿದಾಗ ಅವನ ಬಹುಕಾಲದ ಆಸೆ ಈಡೇರಿತು. ಅವನು ಬತ್ತದ ಮೂಟೆ ಹೊತ್ತು ಪೊನ್ನಾಂಬಲಕ್ಕೆ ಹೊರಡುವ ಅವನ ಉತ್ಸಾಹ ಹರಿಹರನಲ್ಲಿ ಅನನ್ಯವಾಗಿ ಚಿತ್ರಿತವಾಗಿದೆ. ತಿರುನಾಳಿನ ಆ ವೈಭವದ ಚಿತ್ರ ಕಣ್ಣಿಗೆ ಕಟ್ಟುವಂತಿದೆ. ತನ್ನ ಬಹುಕಾಲದ ಆಸೆ ಈಡೇರಿದ ಸಂದರ್ಭದಲ್ಲಿ ತಿರುನಾಳ್ಲೋವನ ಮನದಲ್ಲಾದ ಆನಂದಾನುಭೂತಿಯ ಚಿತ್ರವಂತೂ ಅನನ್ಯವಾದುದು. ತಿರುನಾಳ್ಲೋವನ ಬಾಯಲ್ಲಿ ಅಣುಗಿಸಲಾದ ಆ ಆನಂದವನ್ನು ಹರಿಹರ ತಮಿಳಿನಲ್ಲಿಯೇ ಸ್ತೋತ್ರ ಮಾಡಿಸುವನು:

ಅಡಿಯೆನ್ನಡಿಯನ್ನಿಂದಂಗಾಣೋ
ಗುಡಿಗೆಟ್ಟೆಂ ಗುಡಿಗೆಟ್ಟೆಂ ಶಿವನೆ
ಕುಡಿವಾಳ್ದೆಂ ಕುಡಿವಾಳ್ದೆಂ ಹರನೆ
ಎನ್ನೆಂಯೆನ್ನೆಂ ಅಳಗಿಯ ಜೋಲೆ
ಎನ್ನೆಂ ಯೆನ್ನೆಂ ಶಿವಂದಕಾಲೆ
ಉಲಘರ್ಕೊರುವರ್ ವಂದನ್ವಂದನ್
ಉಲಘಕ್ಕರಿಯರ್ ನಿಂದಾನ್ವಂದಾನ್
ಇದುವೇನಿದುವೇನಂಬಲಕೂತರೆ
ಇದುವೇನಿದುವೇನಳಗಿಯ ಕೂತರೆ
ಅಡುಗೆಂ ನಡುಗೆನ್ ವಾಣಾಲೊಡೆಯಾ
ಅಡುಗೆನ್ ಪೆರುಮಾಳೇ ವೊಲಘೊಡೆಯಾ
ಓಹೋ ಓಹೋ ಕಣ್ಣಿಕ್ಕಿನಿಯನ್
ಓಹೋ ಓಹೋ ಮನವಿಕ್ಕಿನಿಯನ್
ಏನಪ್ಪುದುವೆನ್ ಯೆನ್ನಂ ಪಾರಿ
ಏನ್ಯೆರೆಕ್ಕಿರ ಅಳವುಪ್ಪಾರಿ

ಹೀಗೆ ಜುಮ್ಮೆನ್ನುವ ಭಕ್ತಿ ಪರಿಸರದಲ್ಲಿ ನಮ್ಮನ್ನು ಹರಿಹರ ಸುತ್ತಾಡಿಸುವನು ; ಅಪೂರ್ವ ದೃಶ್ಯಾವಳಿಗಳನ್ನು ಕಾಣಿಸುವನು. ಕುಂಬರ ಗುಂಡಯ್ಯನ ರಗಳೆಯಲ್ಲಿ ಒಂದು ಅದ್ಭುತವನ್ನು ಕಣ್ಣಿನ ಮುಂದೆ ನಿಲ್ಲಿಸುವನು. ಮಡಕೆಯ ಮಾಡುವ ಗುಂಡಯ್ಯ ಆ ಕಾಯಕದಲ್ಲಿ ತೊಡಗಿ ಶಿವನನ್ನು ಅಂತರಂಗದಲ್ಲಿ ತಂದುಕೊಂಡು ತನ್ನ ಮಡಿಕೆಯನ್ನು ಬಾರಿಸುತ್ತಲೆ ಶಿವನನ್ನು ನಾಟ್ಯ ಮಾಡಿಸುವನು. ಒಮ್ಮೆ ಶಿವ ತನ್ನ ಭಕ್ತನ ಮಡಕೆಯನ್ನು ನುಡಿಸುವ ದನಿಗೆ ಮರುಳಾಗಿ ನಿಜರೂಪಿನಲ್ಲಿ ಬಂದು ಕುಣಿಯುವನು. ಶಿವನನ್ನು ಕಂಡ ಆ ಗುಂಡಯ್ಯನೂ ಶಿವನೊಡನೆ ಕುಣಿಯುವನು. ಶಿವನ ಲೀಲೆಯನ್ನು ಕಂಡು ಗಿರಿಜೆ ಹೆದರಿ ಶಿವನ ಈ ತಾಂಡವ ನೃತ್ಯದಿಂದ ನರಲೋಕ ಕೆಡಬಾರದೆಂದು ಅದನ್ನು ನಿಲ್ಲಿಸುವಂತೆ ಶಿವನಲ್ಲಿ ಮೊರೆಯಿಡುವಳು. ಮಡಕೆಯನ್ನು ನುಡಿಸುವ ಗುಂಡಯ್ಯನ ಜಾಣ್ಮೆ, ಅದರ ದನಿಗೆ ಸಮ್ಮೋಹಿತನಾಗಿ ಕುಣಿಯುವ ಶಿವನ ಅದ್ಭುತ ನಾಟ್ಯ ಲೀಲೆ - ಇವೆರಡನ್ನೂ ಸಮಸಮನಾಗಿ ಹರಿಹರ ಮಾತಿನಲ್ಲಿ ಸೆರೆಹಿಡಿದಿರುವನು. ಈ ಸೃಜನಶೀಲ ಪ್ರತಿಭೆ ಹರಿಹರನಂತಹ ಮಹಾನ್ ಕವಿಗೆ ಮಾತ್ರ ಸಾಧ್ಯ.

ಬೇಡರ ಕಣ್ಣಪ್ಪನ ರಗಳೆಯಲ್ಲಿ ತಾಮಸಿಕ ಹಾಗೂ ಸಾತ್ವಿಕ ಭಕ್ತಿ ಮೀಮಾಂಸೆಯ ಪ್ರಸ್ತಾಪ ಬರುತ್ತದೆ. ಅಲ್ಲಿ ಪೂಜಾರಿ ಸಾತ್ವಿಕ ಭಕ್ತಿಯ ಪ್ರತಿನಿಧಿಯಾದರೆ ಕಣ್ಣಪ್ಪ ತಾಮಸಿಕ ಭಕ್ತಿಯ ಪ್ರತಿನಿಧಿಯಾಗುತ್ತಾನೆ. ಇವೆರಡರಲ್ಲಿ ಶಿವನಿಗೆ ಪ್ರಿಯವಾದುದು ಯಾವುದು? ಎಂಬದರ ನಿರ್ಣಾಯಕ ಶಕ್ತಿಯಾಗಿ ಪಾರ್ವತಿ ಬರುವಳು. ಕಣ್ಣಪ್ಪ ಬಂದಾಗ ಮುಚ್ಚಿದ ದೇವಾಲಯದ ಬಾಗಿಲು ತೆರೆಯುವುದು, ಕಣ್ಣಪ್ಪನು ಬಾಯಲ್ಲಿ ತುಂಬಿಕೊಂಡು ಬಂದು ಮುಕ್ಕುಳಿದ ಉದಕದಿಂದ ಶಿವನು ಪ್ರೀತ್ಯರ್ಥನಾಗುವುದು, ಬೇಡನು ತಲೆಯಲ್ಲಿ ಮುಡಿದ ಹೂವನ್ನು (ನಿರ್ಮಾಲ್ಯ ಪುಷ್ಪವನ್ನು) ಸಂತಸದಿಂದ ಸ್ವೀಕರಿಸುವುದು,, ಪತ್ತಳೆಯಲ್ಲಿ ರಕ್ತ ಒಸರುವ ಮಾಂಸವನ್ನು ಮುಚ್ಚಿ ತಂದು 'ಎನ್ನವನೆ ಎನ್ನವನೆ' ಉಣ್ಣು ಎಂದು ಬೇಡನು ಹೇಳಿದಾಗ ಭೂತಗಣಗಳ ಮೂಲಕ ಅದನ್ನು ಸ್ವೀಕರಿಸುವುದು, ಪ್ರದಕ್ಷಿಣ ಹಾಗೂ ನಮಸ್ಕಾರವೆಂದರೇನೆಂದು ತಿಳಿಯದ, ಸ್ತೋತ್ರ ಮಾಡಿ ಅರಿಯದ ಬೇಡನಿಗೆ ಒಲಿಯುವುದು ಇವೆಲ್ಲವ ವಿಚಿತ್ರವಾಗಿ ಪಾರ್ವತಿಗೆ ತೋರುತ್ತದೆ. ಪಾರ್ವತಿ ಶಿವನನ್ನು 'ಆವ ಪರಿಯಿಂದೊಲ್ದಿರಭವ ನೀವಾತಂಗೆ ಹೇವ ವಿಲ್ಲದ ದುಶ್ಚರಿತ್ರದ ಕಿರಾತಂಗೆ' ಎಂದು ಕೇಳುವಳು. ಅದಕ್ಕೆ ಶಿವ ಭಕ್ತಿ ಮೀಮಾಂಸೆ ಯನ್ನೇ ಪಾರ್ವತಿಯ ಮುಂದಿಡುವನು :

ಪಾರ್ವನಗ್ಗವಣಿ ತಿಳಿ ಮನ ಕದಡು ಎಲೆ ಗೌರಿ
ಪಾರ್ವನರ್ಚನೆ ಇನಿದು ಮನವತಿ ವಿಷಂ ಗೌರಿ
ಆವನಿಟ್ಟ ಭಸಿತವವನಂ ಮುಟ್ಟದೆಲೆ ಗೌರಿ
ಆವನ ರುದ್ರಾಕ್ಷಿಯವನಂ ಪೊರ್ದದೆಲೆ ಗೌರಿ
ಬಾಯ ಮಂತ್ರಂ ಮನದ ಕ್ಷುದ್ರ ತಂತ್ರಂ ಸೂಸೆ
ಕಾಯ ವೇಷಂ ಮನದ ಭವಿತನವದೇಂ ಲೇಸೆ
ಎನ್ನನರ್ಚಿಸಿ ಭವಿಗೆ ಕೈಯಾನುವರೆ ದೇವಿ
ಎನ್ನಂ ಪೊಗಳುತನ್ನಯರಂ ಪೊಗಳ್ವರೇ ದೇವಿ
ಸತ್ಯವಿಲ್ಲದ ಪೂಜೆ ಸಸಿನವಪ್ಪುದೆ ಗೌರಿ
ನಿತ್ಯವಿಲ್ಲದ ಹಾಡು ಸೊಗಸಪ್ಪುದೇ ಗೌರಿ
ಮನವಿಲ್ಲದವ ಮುಟ್ಟೆ ಬಡಿವಡೆದ ತೆರನೆನಗೆ
ಮನವುಳ್ಳವಂ ಬಡಿಯೆ ಪೂಜಿಸಿದ ತೆರನೆನಗೆ

ಭಕ್ತಿ ಮೀಮಾಂಸೆ ಕಲಿಕಾಮದೇವರ ರಗಳೆಯಲ್ಲಿಯೂ ಬರುತ್ತದೆ. ಅಲ್ಲಿ ಶಿವ ನಂಬಿಯಣ್ಣನಿಗೆ ಹೀಗೆ ಹೇಳುವನು :

ಭಿನ್ನರುಚಿ ಭಿನ್ನಭಾವಂ ಭಕ್ತಿಯೆಲೆ ಮಗನೆ
ನಿನ್ನೆನ್ನ ವಶವೆ ಶರಣರ ಚರಿತ್ರಂ ಮಗನೆ

ನಾನೊಲಿದದರ್ಕೆಲರು ತಾವೊಲಿವವರ್ಕೆಲರು
ಏನೆಂಬೆ ಭಕ್ತಿಯಂ ಬಯಸುತಿಪ್ಪರ್ಕೆಲರು
ಇಂತೆಂದು ಘಟಿಯಿಸಲು ಬಾರದೆನ್ನಯ ಭಕ್ತಿ
ಇಂತೊಂದು ತೆಱನೆನಲ್ಬಾರದೆನ್ನಯ ಭಕ್ತಿ
ವೀರರುಂ ಶಾಂತರುಂ ನೇಮದಚಲಿತರುಂಟು
ಧೀರರುಂ ಗುಪ್ತರುಂ ಕರುಣಮುಳ್ಳವರುಂಟು
ಕಡುಮೋಹಿತಂ ಕೇಳು ಕಲಿಕಾಮನಿಂದೆನಗೆ
ಕಡುನಿಷ್ಠೆಯುಳ್ಳವಂ ಸೈರಿಸಂ ಕೇಳ್ನಿನಗೆ
ಆನೊಳ್ಳಿದಂ ನಿನಗೆ, ಎನಗಾತನೊಳ್ಳಿದಂ
ಏನೆಂಬೆನೀ ಭಕ್ತಿ ದಸರಿದೊಡಕಿಂತಿದಂ
ಬಲ್ಲರೆನ್ನವರು ಬಲ್ಲರು ಪೆಱರು ಬಲ್ಲರೇ

ನಂಬಿಯಣ್ಣ ಶಿವನನ್ನು ಕುಂಟಣಿಯಾಗಿ ಮಾಡಿಕೊಂಡು ಪರವೆನಾಚ್ಚಿಯ ಮನೆಗೆ ಓಡಾಡಿಸಿದ ಕಾರಣಕ್ಕಾಗಿ ಶಿವನ ಇನ್ನೊಬ್ಬ ನೆಚ್ಚಿನ ಭಕ್ತನಾದ ಕಲಿಕಾಮದೇವನು ನಂಬಿಯಣ್ಣನ ಹೆಸರು ಹಾಗೂ ತಿರುವಾಂಕೂರಿನ ಹೆಸರು ಕೇಳಿದ ತಕ್ಷಣ ಉರಿಲಿಂಗವಾಗುವನು. ಈ ಸುದ್ದಿ ಕೇಳಿದ ನಂಬಿಯಣ್ಣ ಶಿವನಲ್ಲಿ ಈ ವಿಷಯ ಪ್ರಸ್ತಾಪಿಸುವನು. ಆಗ ಶಿವ ಮೇಲಿನ ಭಕ್ತಿಯ ವ್ಯಾಖ್ಯೆ ಮಾಡುವನು. ಭಕ್ತಿ ಎನ್ನುವುದು 'ದಸರಿದೊಡಕು' 'ಭಿನ್ನರುಚಿ ಭಿನ್ನ ಭಾವಂ' ಎನ್ನುವ ಭಕ್ತಿಯ ಬಗೆಗಿನ ವ್ಯಾಖ್ಯಾನವನ್ನು ಹರಿಹರ ಶಿವನಿಂದ ಮಾಡಿಸುವನು. ಕಣ್ಣಪ್ಪನ ರಗಳೆ ಹಾಗೂ ಕಲಿಕಾಮದೇವರ ರಗಳೆಯಲ್ಲಿನ ಈ ಭಕ್ತಿಯ ನಿರ್ವಚನ ಹರಿಹರನದಾದರೂ ಇದಕ್ಕೆ 12ನೇ ಶತಮಾನದ ಶಿವಶರಣರು ಜೀವಂತ ಸಾಕ್ಷಿಯಾಗಿರುವರು. ಭಕ್ತಿಯ ಬಗೆಗೆ ಅವರು ತಾಳಿದ ನಿಲುವು ಅವರ ನಂತರ ಬಂದ ಹರಿಹರನದೂ ಆಗುತ್ತದೆ.

ರುದ್ರಪಶುಪತಿ ರಗಳೆಯಲ್ಲಂತೂ ಹರಿಹರನ ಪ್ರತಿಭೆ ಮಡುಗಟ್ಟಿದೆ. ರುದ್ರ ಪಶುಪತಿ ಶಿವನ ಮುಗ್ಧಭಕ್ತ. ಲೌಕಿಕ ಸಂಗತಿಗಳೇನೂ ತಿಳಿಯದ ಈತನ ಮುಗ್ಧಭಕ್ತಿ ಎಂತಹದೆಂಬುದನ್ನು ರಗಳೆಯ ಪ್ರಾರಂಭದಲ್ಲೇ ಮನವರಿಕೆ ಮಾಡಿಕೊಡುವನು. ದೇವಾಲಯ ಶಿವಲಿಂಗದ ಮೇಲೆ ಇರುವೆಯೊಂದಿರಲು ಅದನ್ನು ಕಂಡು ಹೌಹಾರಿ ಪಾರ್ವತಿಯನ್ನು ಹಾಗೂ ಶಿವನನ್ನು ಕುರಿತು

ಏನವ್ವ ಪಾರ್ವತೀ ಸುಮ್ಮನಿರ್ದಪಿರವ್ವ
ಏನಿಂತಿರುಂಪೆ ಊರಲು ನೋಡುತಿರ್ದಪ್ವ
ಗಂದೆ ನೆಸೆದುದೊ ನೊಂದು ಚುಳ್ಳನುರಿದುದೊ ತಂದೆ
ಬೆಂದೆ ನಾಂ ಬೆಂದೆ ನಾನಿಲ್ಲೀಗಳೆಲೆ ತಂದೆ

ಎನ್ನುವನು. ಇರುವೆ ಕಚ್ಚಿದ್ದರಿಂದ ಶಿವನ ಮೈಮೇಲೆ ಗಂದೆ ಮೂಡಿತೊ, ನೆಸೆ (=ಅಸಾಧ್ಯ ಕೆರೆತ) ಯಾಯಿತೊ, ಚುಳ್ಳನೆ ಉರಿ ಕಾಣಿಸಿಕೊಂಡಿತೊ ಎಂದು ಆತಂಕ

ದಿಂದ ಕೇಳುವನು. ಅವುಗಳ ನಿವಾರಣೆಗಾಗಿ ಪಂಚಾಕ್ಷರಿಯಿಂದ ಮಂತ್ರಿಸುವನು, ಪಂಚಾಮೃತಗಳನ್ನು ಮಾಡಿಸುವನು, ಸಾಲದೆನ್ನುವಂತೆ ಸಹಸ್ರಾಭಿಷೇಕವನ್ನು ಮಾಡುವನು, ಪಂಚಾಕ್ಷರಿ ಜಪವನ್ನು ಮಾಡುವನು. ಇಂಥ ಮುಗ್ಧ ಒಂದು ದಿನ ಶಿವ ಪುರಾಣದಲ್ಲಿ ಬರುವ ವಿಷಧರಲೀಲೆಯನ್ನು ಪುರಾಣಿಕರಿಂದ ಕೇಳಿ, ಅದನ್ನು ನಿಜವೆಂದು ನಂಬಿ ನಾನಾ ಬಗೆಯಲ್ಲಿ ದುಃಖಿಸುವನು. ಅದರ ನಿವಾರಣೆಗಾಗಿ ಕಂಠ ಪ್ರಮಾಣ ಸಮುದ್ರದಲ್ಲಿ ಮುಳುಗಿ ಪಂಚಾಕ್ಷರಿ ಮಂತ್ರ ಜಪಿಸತೊಡಗುವನು. ಸಮುದ್ರದ ಜಲಚರಗಳು ರುದ್ರಪಶುಪತಿಯ ಶರೀರದ ಮಾಂಸವನ್ನೆಲ್ಲ ತಿಂದು ಹಾಕಿದವು, ಅಸ್ಥಿ ಮಾತ್ರ ಉಳಿದವು. ಆಗಲೂ ವಿಚಲಿತನಾಗದೆ ಪಂಚಾಕ್ಷರಿಯನ್ನು ಬಿಡದೆ ಜಪಿಸುವನು. ತನ್ನ ಭಕ್ತನ ಕಡುನಿಷ್ಠೆಯನ್ನು ಶಿವ ಗಿರಿಜೆಗೆ ತೋರಿಸುತ್ತಾ 'ಅಂದಿನ ಮಹಾವಿಷಂ ಕಂಠ ಭೂಷಣವಾಯ್ತು ಇಂದಿನ ಪ್ರೇಮಲತೆ ಕೊರಳಿಗುಬ್ಬಸವಾಯ್ತು' ಎನ್ನುವನು. ಗಿರಿಜೆ ಯೊಡನೆ ಮಾರುವೇಷದಿಂದ ರುದ್ರ ಪಶುಪತಿಯಿದ್ದಲ್ಲಿಗೆ ಬಂದು ನಾನಾ ಬಗೆಯಾಗಿ ಶಿವನಿಂದೆಯನ್ನು ಮಾಡುವನು. ಈ ಶಿವನಿಂದೆಯನ್ನು ಕೇಳಿ ಸಹಿಸದ ರುದ್ರಪಶುಪತಿ ಅತ್ಯಂತ ಕೋಪವಿಷ್ಟನಾಗಿ 'ಎಲೆಲೆ ಶಿವನಿಂದೆಯಡಗಡಗೆನುತ್ತಂ ಮೇಲೆ ಜಲವನಭಿ ಮಂತ್ರಿಸುತ್ತಿಟ್ಟನ್'. ಶಿವನ ಮೇಲೆ ಜಲವನ್ನು ಅಭಿಮಂತ್ರಿಸಿ ಪ್ರೋಕ್ಷಿಸಿದಾಗ ಶಿವ ತನ್ನ ನಾಟಕವನ್ನು ನಿಲ್ಲಿಸಿ ನಿಜರೂಪುದೋರುವನು. ಆಗ -

> ಆವನಾದೊಡವೇನು ಕೃತ್ರಿಮಂ ಗೆಲುವುದೇ
> ದೇವನಾದೊಡವೇನು ಸಟೆ ದಿಟಕೆ ನಿಲ್ಲುವುದೇ

ಎಂದು ಕವಿ ಉದ್ಗಾರ ಮಾಡುವನು. ಇಲ್ಲಿನ ಪ್ರಸಂಗ ಗಿರಿಜಾ ಕಲ್ಯಾಣದಲ್ಲಿ ಬರುವ ಇಂತಹುದೇ ಒಂದು ಪ್ರಸಂಗವನ್ನು ನೆನಪಿಸುತ್ತದೆ. ಇಲ್ಲಿ ನೀರನ್ನು ಮಂತ್ರಿಸಿ ರುದ್ರಪಶುಪತಿ ಶಿವನ ಮೇಲೆ ಹೊಡೆದರೆ ಅಲ್ಲಿ ಪಾರ್ವತಿ ಶಿವನ ಮೇಲೆ ತನ್ನ ಕಡವಸದ ಬೂದಿಯಿಂದ ಹೊಡೆಯುವಳು*. 'ಇಲ್ಲಿ ಸೆಟೆ ದಿಟಕೆ ನಿಲ್ಲುವುದೇ' ಎಂದರೆ 'ಅಲ್ಲಿ ಪುಸಿ ದಿಟಕೆ ನಿಲ್ವುದೇ' ಎಂದು ಹೇಳಲಾಗಿದೆ. ಶಿವಸಾಕ್ಷಾತ್ಕಾರವಾದ ಮೇಲೆ ರುದ್ರ ಪಶುಪತಿ ಪಾರ್ವತಿಯನ್ನು ಕುರಿತು ತಾಯೇ ಮಹಾದೇವಿ ಸೈರಿಸುವರೇ ಅವ್ವಾ, 'ತಾಯೇ ನಿನ್ನೋಲೆ ಕಲ್ಲೋಲೆ ತಪ್ಪದಲ್ಲವ್ವ' ಎಂದು ಕೇಳುವನು. ಇಲ್ಲಿನ 'ಕಲ್ಲೋಲೆ' ಎಂಬ ಪದ ಎಷ್ಟು ಧ್ವನಿಪೂರ್ಣವಾಗಿದೆ. ನಂಬಿಯಣ್ಣನ ರಗಳೆಯಂತೂ ಅತ್ಯದ್ಭುತವಾದ ನಾಟ್ಯ ಗುಣವನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಪರವೆ - ಸಂಕಿಲಿನಾಚಿಯರ ಪ್ರಸಂಗ ಕಾವ್ಯದ ಕಮನೀಯ ಭಾಗವಾಗಿದೆ. ವೃದ್ಧಮಾಹೇಶ್ವರನ ಲೀಲಾವಳಿಗಳಂತೂ ಕನ್ನಡದಲ್ಲೇ ಅಪರೂಪದ ತುಂಟಾಟದ ವಿವರಗಳಾಗಿವೆ. ಹರಿಹರನ ಪ್ರತಿಭೆ ನಾಟಕೀಯ ಪ್ರಸಂಗ ಗಳನ್ನು ಸೃಷ್ಟಿಸುವಲ್ಲಿ ಅಪ್ರತಿಮವಾಗಿದೆ. ತಿರುನೀಲ ಕಂಡರ ರಗಳೆಯಲ್ಲಿ, ನಂಬಿಯಣ್ಣನ ರಗಳೆಯಲ್ಲಿ, ಅಮರ ನೀತಿಗಳ ರಗಳೆಯಲ್ಲಿ ಈ ನಾಟ್ಯಗುಣ ಮನೋಜ್ಞವಾಗಿ ಮೂಡಿ

ಬಂದಿದೆ. ಇಳೆಯಾಂಡಗುಡಿಮಾರರ ರಗಳೆಯಲ್ಲಿನ ಉತ್ತರಾರ್ಧ ಹರಿಹರನ ಸ್ವಂತಿಕೆಯಾಗಿದೆ. ತಮಿಳುನಾಡಿನಲ್ಲಿ ಪ್ರಚಲಿತವಿರುವ ಇಳೆಯಾಂಡಗುಡಿಮಾರರ ಕಥೆಗೂ ಹರಿಹರನ ನಿರೂಪಣೆಗೂ ವ್ಯತ್ಯಾಸವಿದೆ.

ವರ್ಣನೆಗಳನ್ನು ಬಳಸದೆ ನೇರವಾಗಿ ಕಥೆ ಹೇಳುವ ಹರಿಹರ ಎಂತಹ ಮಾಂತ್ರಿಕನೆಂದರೆ, ಅವನು ಕಥೆಯನ್ನು ನಿರೂಪಿಸುವ ರೀತಿ ಅಸ್ವಾದ್ಯಶವಾದುದು. ತಮಿಳು ನಾಡಿನಲ್ಲಿ ಬರುವ ನಾಯನ್ಮಾರರ ಕಥೆಗಳನ್ನು ಕನ್ನಡಕ್ಕೆ ತರುವಾಗ ಈ ನಾಯನ್ಮಾರನನ ಭಕ್ತಿನಿಷ್ಠೆಗೆ ಹಾಗೂ ಪರೀಕ್ಷೆಗೆ ಒಳಪಟ್ಟು ಅದು ಜಯಪಡೆಯುವ ಅಂತಿಮ ಕ್ರಿಯೆಗೆ ಹೆಚ್ಚಿನ ಒತ್ತುಕೊಡುವನು. ಕಾಡುವ ಕೈ ಶಿವನದಾದರೆ ಅದನ್ನು ತಮ್ಮ ನಿಷ್ಠಾಪೂರ್ಣಭಕ್ತಿಯಿಂದ ಗೆಲ್ಲುವ ಮನ ಭಕ್ತನದಾಗುತ್ತದೆ. ತನ್ನ ಭಕ್ತರ ಹಿರಿಮೆಯನ್ನು ಲೋಕಕ್ಕೆ ಸಾರುವುದೆ ಈ ಕಾಡುವ ಕ್ರಿಯೆಯ ಹಿಂದಿರುವ ಮನೋಭಾವ. ಅಲ್ಲಿನ ಶಿವ ಭಕ್ತಪ್ರಿಯ. ಭಕ್ತರೇ ಹಿರಿದೆಂದು ನಂಬಿರುವವನು. ಶಿವನು ನಂಬಿಯಣ್ಣನಿಗೆ ಆಶ್ರಯ ಕೊಟ್ಟ ಕಾರಣಕ್ಕಾಗಿ ಮೆರೆಮಿಂಡದೇವನು ಶಿವನಿಗೂ ಬಹಿಷ್ಕಾರ ಹಾಕುವನು ಆಗ ಶಿವನು ನಂಬಿಯಣ್ಣನಿಗೆ ಹೀಗೆ ಹೇಳುವನು :

ಭಕ್ತರೊಲ್ಲದೊಡೆನ್ನನೊಲಿವರಾರೆಲೆ ನಂಬಿ
ಭಕ್ತರಜಿಯದೊಡೆನ್ನ ನಜಿವರಾರೆಲೆ ನಂಬಿ
ಭಕ್ತರರ್ಚಿಸದೊಡರ್ಚಿಸುವರಾರೆಲೆ ನಂಬಿ
ಭಕ್ತರಾಗದೊಡೆಯೆನಗಪ್ಪರಾರೆಲೆ ನಂಬಿ
ಭಕ್ತರೀಯ್ಯದೊಡೆನಗೆ ಈವರಾರೆಲೆ ನಂಬಿ
ಭಕ್ತರುಂ ನೋಡದೊಡೆ ನೋಳ್ಪರಾರೆಲೆ ನಂಬಿ

ಇದಿಷ್ಟೇ ಅಲ್ಲ ನಂಬಿಯಣ್ಣನಿಂದ, ಹಿಂದೆ ಆಗಿಹೋದ 62 ಮಂದಿ ನಾಯನ್ಮಾರರ ಗುಣಸ್ತವನವನ್ನು ಮಾಡಿಸಿ ಮೆರೆಮಿಂಡದೇವನ ಕೋಪವನ್ನು ತಣಿಸುವನು.

12ನೇ ಶತಮಾನದಲ್ಲಿ ಭಕ್ತನ ಮುಖದರ್ಪಣದಲ್ಲಿ ಶಿವನನ್ನು ಕಾಣುವ ಮನೋಧರ್ಮ ಪ್ರಧಾನವಾಗಿದೆ. ಬಸವಣ್ಣನವರು ತಾವೊಬ್ಬರೇ ಭಕ್ತರು, ಉಳಿದವರೆಲ್ಲ ಶಿವನರೂಪು ಎಂದರು. ಅಷ್ಟೇ ಅಲ್ಲ

ಆವನಾದಡೇನು ಶ್ರೀಮಹಾದೇವನ ನೆನೆವನ
ಬಾಯ ತಂಬುಲವ ಮೆಲುವೆ, ಬೀಳುಡಿಗೆಯ ಹೊದೆವೆ

ಶಿವನು ಗಿರಿಜೆಯನ್ನು ಪರೀಕ್ಷಿಸಬೇಕೆಂದು ಮಾರುವೇಷದಿಂದ ಬಂದು ಮನಬಂದಂತೆ ಶಿವನಿಂದೆ ಮಾಡುವುದನ್ನು ಕೇಳಲಾಗದೆ ಗಿರಿಜೆ ಬೂದಿಯಿಂದ ಹೊಡೆಯುವ ಪ್ರಸಂಗದ ಮೂಲ ಪರಿಕಲ್ಪನೆ (concept) ಪುರಾಣಗಳಲ್ಲಿ ಬರುವ ಉಪಮನ್ಯು ಮುನಿಯ ಕಥೆಯಲ್ಲಿ ಬಂದಿದ್ದು, ಅದರಿಂದ ಹರಿಹರ ಪ್ರಭಾವಿತನಾಗಿರುವಂತೆ ತೋರುತ್ತದೆ.

ಪಾದರಕ್ಷೆಯ ಕಾಯ್ದು ಬದುಕುವೆ,
ಕೂಡಲಸಂಗಮದೇವಾ

ಪಾತಕ ಮಹಾಪಾತಕವ ಮಾಡಿದವನು
ಸದ್ಭಕ್ತರ ಮನೆಗೆ ಹೋಗಿ
ಅವರೊಕ್ಕ ಪ್ರಸಾದವನಾಯ್ದುಕೊಂಡುಂಡಡೆ

ಸಕಲ ಬ್ರಹ್ಮಹತ್ಯಾದಿ ಪಾತಕ ಹರಿಹಾರ
ಒಮ್ಮೆ ಬೇಡಿಕೊಂಡುಂಡಡೆ !

ಪಾತಕೇ ಸಮನುಪ್ರಾಪ್ತೇ ಶಿವಭಕ್ತಗೃಹಂ ವ್ರಜೇತ್।
ಯಾಚಯೇದನ್ನಮಮೃತಂ ತದಲಾಭೇ ಜಲಂ ಪಿಬೇತ್॥
ಇದು ಕಾರಣ ಕೂಡಲಸಂಗಮದೇವಾ,
ನಿಮ್ಮ ಸದ್ಭಕ್ತರಿಗೆ ನಮೋ ನಮೋ ಎಂಬೆನು

ಕಾಮಸಂಗವಳಿದು ಅನುಭಾವಸಂಗದಳಿದವರ ಅಗಲವಾಱೆನು ;
ಶಿವಂಗೆ ಮಿಗೆ ಒಲಿದವರನು ನಾನಗಲಲಾಱೆನು ಕಾಣಾ,
ಕೂಡಲಸಂಗಮದೇವಾ.

ಬಸವಣ್ಣನವರು 12ನೇ ಶತಮಾನದ ಶರಣಲೋಕದ ಪ್ರತಿನಿಧಿ. ಮೇಲಿನ ಅವರ ಅನಿಸಿಕೆಗಳು ಭಕ್ತರ ಬಗೆಗೆ ಅವರು ತಾಳಿದ ಪೂಜ್ಯ ಭಾವನೆಯಾಗಿದೆ. ಹರಿಹರ 12ನೇ ಶತಮಾನದ ಸಾಮಾಜಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ಭಕ್ತಿ ನಿರ್ವಹಿಸಿದ ಪಾತ್ರವನ್ನು ಗಮನಿಸಿರುವನು. ಕನ್ನಡ ಸಾಹಿತ್ಯಲೋಕದಲ್ಲಿ ಕೊಡಗುಳಿ ಕೇಶಿರಾಜನ ನಂತರ ಬರುವ ಮತ್ತೊಬ್ಬ ಭಕ್ತಕವಿ ಹರಿಹರ. ಅವನ ಉತ್ಕಟವಾದ ಭಕ್ತಿ ಶಿವಪ್ರೇಮ ಅಪ್ರತಿಮವಾದುದು. ತನ್ನ ಒಲವಿನ ಭಕ್ತಿ ಕಾರಣವಾಗಿ ಅವರು ಕನ್ನಡಕ್ಕೇ ವಿಶಿಷ್ಟವಾದ ಭಕ್ತಿ ಪ್ರಪಂಚವನ್ನು ಕಾಣಿಸಿದನು. ಅವನಿಲ್ಲದಿದ್ದರೆ ಕನ್ನಡ ನಾಡಿನ ಶರಣರ, ತಮಿಳುನಾಡಿನ ನಾಯನ್ಮಾರರ , ಶಿವನ ನೆಚ್ಚಿನ ಭಕ್ತರ ಅಪೂರ್ವವಾದ ಭಕ್ತಿ ಕಥನ ನಮಗೆ ದಕ್ಕದಿರುತ್ತಿತ್ತು. 12ನ ಶತಮಾನದ ಶರಣರಿಂದ ಪ್ರಭಾವಿತನಾಗಿ ಅವರ ಲೋಕೋತ್ತರ ಬಾಳ್ವೆಯನ್ನು ಪರಿಚಯಿಸದಿದ್ದರೆ, ತಮಿಳುನಾಡಿನ ನಾಯನ್ಮಾರರ ನಿಷ್ಠಾಪೂರ್ಣ ಬದುಕನ್ನು ಪರಿಚಯಿಸದಿದ್ದರೆ ನಮಗೆ ದೊಡ್ಡ ನಷ್ಟವಾಗುತ್ತಿದ್ದಿತು.

ಹರಿಹರ ನಿಸ್ಸಂಶಯವಾಗಿ ಭಕ್ತಕವಿ. 'ಲಿಂಗಾರ್ಚನಾ ರಗಳೆ'ಯಲ್ಲಿ ಅವನು ತನ್ನನ್ನು ನಾಗಭೂಷಣನ 'ವೇಳೆಯಾಳು' ಎಂದು ಕರೆದುಕೊಂಡಿರುವನು. 10-11ನೇ ಶತಮಾನದ ಸಾಮಾಜಿಕ ಬದುಕಿನಲ್ಲಿ 'ವೇಳೆವಾಳಿ'ಯಾಗುವುದು ಒಡೆಯನು ಅನ್ನ ಕೊಟ್ಟ ಋಣದ ಸಂಕೇತ. ಅವನಿಗೆ ನಿಷ್ಠೆಯಿಂದಿದ್ದು ಅನುಗಾಲವೂ ಅವನ ಸೇವೆಯನ್ನು ಮಾಡುವ ಪ್ರತಿಜ್ಞೆ ಸ್ವಿಕರಿಸುವುದು. 'ವೇಳೆಗೊಳಿ' ಎಂಬುದಾಗಿತ್ತು.

ಹರಿಹರ ಈ ಅರ್ಥದಲ್ಲಿ ಶಿವನಿಗೆ ತನ್ನನ್ನು ಅರ್ಪಿಸಿಕೊಂಡವನು. ಭಕ್ತನೊಬ್ಬನ ದೈನಂದಿನ ಚಟುವಟಿಕೆಗಳ ಚಿತ್ರವನ್ನು 'ಲಿಂಗಾರ್ಚನೆಯ ರಗಳೆ'ಯ ಪ್ರಾರಂಭದಲ್ಲಿ ಹರಿಹರ ಕೊಟ್ಟಿರುವನು. ಅದು ಬೇರಾರ ಚಿತ್ರವೂ ಆಗಿರದೆ ಸ್ವತಃ ಹರಿಹರನ ಭಕ್ತಿ ಮಯವಾದ ದಿನನಿತ್ಯದ ಭಕ್ತಿ ಕೈಂಕರ್ಯದ ಚಿತ್ರಗಳೇ ಆಗಿವೆ. 'ಪಂಪಾಕ್ಷೇತ್ರದ ರಗಳೆ'ಯಂತೂ ಹಂಪೆಯಲ್ಲಿನ ಪಂಪಾವಿರೂಪಾಕ್ಷನ ಸುತ್ತಣ ಪರಿಸರದ ಸ್ಫುಟವಾದ ವಿವರಗಳಿಂದ ತುಂಬಿಕೊಂಡಿದೆ. ಮೇಲೆ ತಿಳಿಸಿದಂತೆ, ಹರಿಹರ ತನ್ನನ್ನು ಶಿವನಿಗೆ ಅರ್ಪಿಸಿಕೊಂಡ ಕಾರಣಕ್ಕಾಗಿ ಮನುಜರ ಸೇವೆ ಅವನ ವ್ಯಕ್ತಿತ್ವಕ್ಕೆ ಒಗ್ಗದು. ಹರಿಹರ ತನ್ನ ಬದುಕಿನ ಮೊದಲ ಘಟ್ಟದಲ್ಲಿ ದೋರಸಮುದ್ರದ ನರಸಿಂಹ ಬಲ್ಲಾಳನ (ಕ್ರಿ.ಶ. 1141-1173) ಆ ಸ್ಥಾನದಲ್ಲಿ 'ಕರಣಿಕರ ಕುಲತಿಲಕ'ನಾಗಿದ್ದನು. ಅನ್ಯದೈವಗಳಿಗೆ ನಮಸ್ಕರಿಸದ ನೇಮ ಹರಿಹರನದು. 'ಮಹಿಮಾ ರಗಳೆ'ಯಲ್ಲಿ ಲಿಂಗವಿಲ್ಲದೆ ಮತ್ತೆ ದೈವವಿಲ್ಲವೆನ್ನುವ ಅವನ ನಿಷ್ಠೆ ಎಷ್ಟರಮಟ್ಟಿಗೆ ಗಟ್ಟಿಯಾಗಿದೆಯೆಂದರೆ -

ಅಂತ್ಯವಾದಡೆ ರುದ್ರಭೂಮಿಗಂತೊಯ್ಯೆಂಬೆ
ಭ್ರಾಂತೆ ಕೇಳಾ ರುದ್ರಗಣಕಿಕ್ಕು ಮುನ್ನೆಂಬೆ
ವೃಷಭ ಹೋಮಂ ಬೇಳದಲ್ಲದಿದು ಸಲ್ಲೆಂಬೆ
ವೃಷಭನಂ ಬಿಟ್ಟಲ್ಲದಿಲ್ಲ ಸ್ವರ್ಗವಿದೆಬೆ
ಪಿತೃಕೃತ್ಯರೆಲ್ಲ ವಿಶ್ವೇದೇವ ಬಲವೆಂಬೆ
ಪಿತೃದತ್ತ ರುದ್ರಪಾದೇ ದತ್ತ ನಮೊ ಎಂಬೆ
ಉಪನಯನ ವೈವಾಹಕಂ ನಂದಿಮುಖವೆಂಬೆ
ಸುಪದವಲೆ ಸರ್ವಕ್ಕೆ ಶಾಶ್ವತಂ ಶಿವನೆಂಬೆ
ಯಜ್ಞಕಾರ್ಯದಲಿ ವೇದಾ ಬೂಯಾ ಎಂಬೆ
ಯಜ್ಞಹೋಮಂಗಳಲಿ ಸರ್ವವುಂ ಶಿವನೆಂಬೆ
ಇದು ವೇದಶಾಸ್ತ್ರವಾಗಮ ಪುರಾಣದ ಯುಕ್ತಿ

ಎಂದಿರುವನು. ದ್ವಾರಸಮುದ್ರದ ರಾಜಸಭೆಯಲ್ಲಿದ್ದುಕೊಂಡೇ ಪಂಪಾ ವಿರೂಪಾಕ್ಷ ದೇವಾಲಯದ ಗರ್ಭಗುಡಿಯ ತೆರೆಗೆ ಹತ್ತಿದ ಬೆಂಕಿಯನ್ನು ನಿವಾರಿಸಿದ ಪವಾಡ ಜರುಗಿದ ಮೇಲೆ ನರಹಸಿಂಹಬಲ್ಲಾಳನು ಹರಿಹರ ಮಹಿಮೆಗೆ ಶಿರಬಾಗಿ ವಿರೂ ಪಾಕ್ಷನ ಸನ್ನಿಧಿಗೇ ಹೋಗಿ ಕಾವ್ಯರಚನೆಯ ಕಾರ್ಯ ಮುಂದುವರಿಸಲು ಪ್ರಾರ್ಥಿಸು ವನು. ಆ ವೇಳೆಗೆ ಮನುಜರ ಸೇವಾವೃತ್ತಿ ಹರಿಹರನಿಗೆ ಸಾಕೆನಿಸಿರಬೇಕು. ಪಂಪಾ ಶತಕದಲ್ಲಿ ಇದರಿಂದ ಬಿಡುಗಡೆಗೊಂಡು ನಿರಾಳ ಮನಃಸ್ಥಿತಿ ಕೆಳಗಿನ ಪದ್ಯದಲ್ಲಿ ವ್ಯಕ್ತ ಗೊಂಡಿದೆ :

ಪೋಗೆನೆ ಪೋಪ ಬಾರೆಲವೋ ಬಾರನೆ ಜೀಯ ಹಸಾದಮೆಂದು ಬೆ -
ಳ್ಳಾಗುತೆ ಬರ್ಪ ಮಾಣೆಲವೊ ಸುಮ್ಮನಿರೆಂದೊಡೆ ಸುಮ್ಮನಿರ್ಪ ಮ-
ತ್ತಾಗಳೆ ಬಗ್ಗಿಸಲ್ ನಡುಗಿ ಬೀಮಿವ ಸೇವಿಪ ಕಷ್ಟವೃತ್ತಿಯಂ
ನೀಗಿದೆನಿಂದು ನಮ್ಮ ದಯೆಯಿಂ ಕರುಣಾಕರ ಹಂಪೆಯಾಳ್ವನೇ ॥

ಇದರ ಜೊತೆಗೆ ತನ್ನ ಕಾವ್ಯ ನಿರ್ಮಿತಿಯಲ್ಲಿ ವಸ್ತು ಯಾವುದಿರಬೇಕೆಂಬುದರ ನಿರ್ಧಾರವೂ ಅವನ ಆಲೋಚನಾಕ್ರಮಕ್ಕೆ ಒಂದು ನಿರ್ಬಂಧವನ್ನು ಒದಗಿಸಿದ್ದನ್ನು ನಾವು ಮುಖ್ಯವಾಗಿ ಈ ಪದ್ಯದಲ್ಲಿ ಗುರುತಿಸುತ್ತೇವೆ :

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನತನಗಿಂದ್ರ ಚಂದ್ರರವಿ ಕರ್ಣದಧೀಚಿ ಬಲೀಂದ್ರನೆಂದು ತಾ
ನನವರತಂ ಪೊಗಮ್ಮಿ ಕೆಡಬೇಡೆಲೆ ಮಾನವ ನೀನಹರ್ನಿಶಂ
ನೆನೆ ಪೊಗವಿರ್ಚಿಸೆಮ್ಮ ಕಡುಸೊಂಪಿನ ಪೆಂಪಿನ ಹಂಪೆಯಾಳ್ದನಂ ॥

ಹರಿಹರನನ್ನು ಭಕ್ತಕವಿಯೆಂದಷ್ಟೇ ಗುರುತಿಸಿದರೆ, ಅವನಿಗೆ ಅನ್ಯಾಯ ಮಾಡಿದಂತೆ, ಅವನು ಕನ್ನಡ ಸಾಹಿತ್ಯದ ದಿಕ್ಕುದೆಸೆಯನ್ನು ಬದಲಿಸಿದ ಕ್ರಾಂತಿಕಾರಿ ಕವಿ. ಮೇಲಿನ ಎರಡೂ ಪದ್ಯಗಳು ಅವನ ಮನೋಭಾವವನ್ನು ತೆರೆದಿಟ್ಟಿವೆ. 12ನೇ ಶತಮಾನದ ಸಮಾಜೋಧಾರ್ಮಿಕ ಚಳವಳಿಯ ಪರಿಣಾಮವಾಗಿ ಅವನ ಕೃತಿಗಳ ವಸ್ತುವಿನ ಆಯ್ಕೆಯಲ್ಲಿ ವೈಯಕ್ತಿಕತೆಯನ್ನು ಮೆರೆದಿರುವನು. ಹೀಗಾಗಿ ಶಿವನ ಭಕ್ತರು ಹಾಗೂ ಶಿವ ಅವನ ಕೃತಿಗಳ ನಾಯಕರಾದರು. ವಿಶೇಷವೆಂದರೆ, ಕೆಳವರ್ಗದವರು ಕಥಾನಾಯಕರಾದದ್ದು. ತಮಿಳುನಾಡಿನ ಪುರಾತನರ ರಗಳೆಯಲ್ಲಿ ಮೇಲ್ವರ್ಗದ ಕಥಾ ನಾಯಕರು ಬೆರಳೆಣಿಕೆಯಷ್ಟು, ಉಳಿದವರೆಲ್ಲ ಶೂದ್ರವರ್ಗದವರು. ಕನ್ನಡ ನಾಡಿನ ಶರಣರ ರಗಳೆಯಲ್ಲಿ ಮಾದಾರ ಚೆನ್ನಯ್ಯನನ್ನು ಕರಿಕಾಲಚೋಳನಿಗಿಂತ ಮಿಗಿಲಾಗಿ ಅವನ ವ್ಯಕ್ತಿತ್ವವನ್ನು ರೂಪಿಸಿರುವನು. ಚೆನ್ನನ ಹೆಂಡತಿ ಮಾಡಿದ ಅಂಬಕಳ ಹಾಗೂ ಉಪ್ಪಿನಕಾಯಿಯನ್ನು ಚೆನ್ನನು ಶಿವಲಿಂಗಕ್ಕೆ ಅರ್ಪಿಸಿದಾಗ ಅದರ ಸವಿ ಜಿಹ್ವೆಗೆ ಹತ್ತಿ ಅವನೊಡನೆ ಶಿವನೂ ಉಂಡನಂತೆ. ಅದರ ಸವಿ 'ಸುಧೆಯ ಕಡು ಸವಿಯಿಂದೆ ನೂರ್ಮಡಿಸಿ ಸವಿ' ಯಾಗಿದ್ದಿತಂತೆ :

ಕೊಂಡ ಹರನೊಡನೆ ಚೆನ್ನನೊಡನೊಂದಾಗಿ
ಉಂಡನಭವಂ ಸ್ವರ್ಗಮರ್ತ್ಯಕ್ಕೆ ಪೊಸತಾಗಿ
ಒಂದು ಸುರಿಯೊಳಗೆ ಕೈಗಂದುದೇ ಶಿವಪದಂ
ಮುಂದೆ ಸವಿದರ್ಪಿಸುವುದಕ್ಕಿಲ್ಲ ಘನಪದಂ
ಎಂದಂಜಿಕೊಂಡನಾ ಶಿವನಂಬಕಳಾಮುಮಂ
ಅಂದು ಶಿವನೊಡನುಂಡ ಚೆನ್ನನಂದುತ್ತಮಂ
ಭಾಪು ಭಾಗ್ಯವೆ ಚೆನ್ನನಿಂದಧಿಕರಿನ್ನುಂಟೆ
ಭಾಪು ಭಾಗ್ಯವೆ ಶಿವನ ಕಾರುಣ್ಯವಿನಿತುಂಟೆ

ಹೀಗೆ ಆ ಘಟನಾವಿಶೇಷವನ್ನು ಹರಿಹರ ಮನೋಜ್ಞವಾಗಿಸುವನು. 'ಅಂದು ಶಿವನೊಡನುಂಡ ಚೆನ್ನನಂದುತ್ತಮಂ' ಎನ್ನುವ ಮಾತು ಹನ್ನೆರಡನೆ ಶತಮಾನದ ಸಾಮಾಜಿಕ ಚಳವಳಿಯ ಪರಿಣಾಮಕ್ಕೆ ಒಂದು ಉಜ್ವಲ ಉದಾಹರಣೆಯಂತಿದೆ. ಚೆನ್ನನೊಡನುಂಡ ಶಿವನಿಗೆ ಕರಿಕಾಲನು ಅರ್ಪಿಸಿದ ಷಡ್ರಸೋಪೇತ ಪದಾರ್ಥಗಳು ಪ್ರಿಯ

ವಾಗದಿರಲು ವಿಷಯ ತಿಳಿದ ಕರಿಕಾಲ ಬರಿಗಾಲಲ್ಲಿ ಚೆನ್ನನನ್ನು ಕಾಣಲು ಬರುವನು. ಚೆನ್ನನ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುವನು. ಚೆನ್ನಯ್ಯ ಗಾಬರಿಗೊಂಡು ಚೋಳರಾಜನೇ, ನೀನು ಭಾನುಕುಲದರ್ಪಣನು. ನಾನೋ ಕುಲದಲ್ಲಿ ಜಾತಿಯಲ್ಲಿ ಉತ್ತಮನಲ್ಲದವನು. ನಿನಗೆ ನಿನ್ನಾಣೆ ಎನ್ನಾಣೆ ಕಾಲನ್ನು ಬಿಡು ಎಂದು ಗದುಗದಿಸಿ ಕಂಪಿಸಿ ನುಡಿಯುವನು. ಅದಕ್ಕೆ ಕರಿಕಾಲಚೋಳ ಹೀಗೆನ್ನುವನು :

.... ದೇವ ದೇವನೊಲಿದವನ ಕುಲ ಸತ್ಕುಲಂ
ಘನಮಹಿಮನೊಲಿದ ಜಾತಿಯೆ ಜಾತಿ ನಿರ್ಮಲಂ
ಶರ್ವನೊಡನುಂಡ ನಿಮ್ಮಯ ಜಾತಿಗಾಂ ಸರಿಯೆ
ಸರ್ವಜ್ಞನಿಮ್ಮ ಕೆರ್ಪಿಂಗೆನ್ನ ಶಿರ ಸರಿಯೆ

'ತೆಲುಗು ಜೊಮ್ಮಯ್ಯನ ರಗಳೆ' ಯಲ್ಲಿ ತೆಲುಗ ಜೊಮ್ಮ ತಂದೆಯು ಕಲ್ಯಾಣದ ಪೆರ್ಮಾಡಿರಾಯನಲ್ಲಿ ಸೇವಕಾವೃತ್ತಿಯಲ್ಲಿದ್ದನು. ಆತ ತನ್ನ ಇಷ್ಟದೇವ ಭೀಮನಾಥನಿಗೆ ವೇಳೆವಾಳಿಯಾಗಿಯಾಗಿಯೂ ಪೆರ್ಮಾಡಿರಾಯನಿಗೆ ಜೋಳವಾಡಿಯಾಗಿಯೂ ಇದ್ದನೆಂದು ಹರಿಹರ ಹೇಳುವನು. ಅವನ ಪ್ರಕಾರ, ಜೊಮ್ಮಯ್ಯನು ಶಿವನ ಆದೇಶ ದಂತೆ ಬೇಟೆಯಾಡುವನು. ಪೆರ್ಮಾಡಿರಾಯ ವಿಷ್ಣುಭಕ್ತ ; ಅವನ ಪತ್ನಿ ಲಕುಮಾ ದೇವಿಯು ಶಿವಲಿಂಗಸಂಪನ್ನೆ. ಶಿವನಿಂದೆಯನ್ನು ಕೇಳಲಾರದ ಜೊಮ್ಮಯ್ಯ ಪುರಾಣ ಭಟ್ಟನನ್ನು ಕೊಂದು ಗಣಾಚಾರವನ್ನು ಮೆರೆಯುವನು. ಜೊಮ್ಮಯ್ಯನು ಪೆರ್ಮಾಡಿರಾಯನನ್ನು ಲೆಕ್ಕಿಸನು. 'ತನ್ನಿಚ್ಛೆಯೊಳ್ಬಂದು ತನ್ನಿಚ್ಛೆಯೊಳ್ಪೋಗಿ ಮನ್ನಣೆಯ ಶಿವನ ತೇಜದ ಕಣೆಯ ಕರುವಾಗಿ' ಇರುತ್ತಿದ್ದನು. ಮುನ್ನ ಎಂದೂ ನರರಿಗೆ ಪೊಡವಡದ ಜೊಮ್ಮಣ್ಣ ಪೊಡಮಟ್ಟಿದ್ದೇ ಆದರೆ ತನಗೆ ನಮಸ್ಕರಿಸಿದ ನೆಂದು ಅರಸನು ಮನ್ನಿಸುವನೆಂದು ಬಗೆದು ತನ್ನ ಇಷ್ಟಲಿಂಗವನ್ನು ಸಿಂಗರಿಸಿ ಅದರ ಮಾಣಿಕ್ಯದ ಸಿಂಹಾಸನದೊಂದಿಗೆ ಅರಸನಿಗೆ ಗೊತ್ತಾಗದಂತೆ ಲಕುಮಾದೇವಿ ಹಿಡಿದಿರಲು 'ಕಲಿಯುಗ ವೀರಭದ್ರ'ನಾದ ಜೊಮ್ಮಯ್ಯನು ಮೇಲೆ ನೋಡುತ್ತ ಬರಲು ಹೊಳೆಯುವ ಲಿಂಗವು ಅವನ ಕಣ್ಣಿಗೆ ಬೀಳುವುದು. ಆ ಲಿಂಗವನ್ನು ಆ ಕ್ಷಣ ಕಂಡು ನಮಸ್ಕರಿಸಲು, ಅವನ ಕೈ ಭವಿಗೆ ನಮಸ್ಕರಿಸಲು ಒಲ್ಲದೆ ಬೇರೊಂದೆಡೆಗೆ ಸನ್ನೆದೋರಲು (ಲಕುಮಾದೇವಿಯ) ಶಿವಲಿಂಗವು ಮಾಣಿಕ್ಯದ ಸಿಂಹಾಸನವನ್ನು ಬಿಟ್ಟು ಭಕ್ತನ ಕೈಗೆ ಇದಿರಾಗಿ ಗಗನದಲ್ಲಿ ನೆಲೆಗೊಂಡಿತು. ಜೊಮ್ಮಯ್ಯನು ಆ ಲಿಂಗಕ್ಕೆ ನಮಸ್ಕರಿಸಿ ಬಿಸಿಲು ಗಾಳಿಗಳಿಂದ ನೀವು ಘಾಸಿಗೊಳ್ಳಬೇಡಿ ಸಜ್ಜೆಗೆ ದಯಮಾಡಿಸಿ ಎಂದು ಹೇಳಲು ಲಿಂಗವು ಮುನ್ನಿನಂತೆ ಸಜ್ಜೆಗೆ ಹಿಂತಿರುಗಿತು. ಪುರಾಣಭಟ್ಟನನ್ನು ಕೊಂದುದು ಸರಿಯೆ? ಎಂದು ಅರಸನು ವಿಚಾರಿಸಲು ಈತ ಶಿವದೂಷಕ. ಅವನ ಹೆಣವನ್ನು ತೆಗೆದು ನೋಡಲು ಅದು ಹುಳುವಿನ ರಾಶಿಯಾಗಿರದಿದ್ದರೆ ನಾನು ಅಪರಾಧಿಯಾಗುತ್ತೇನೆ ಎಂದು ಹೇಳಿ ಅದನ್ನು ಪ್ರಮಾಣಿಸಿ ತೋರುವನು. ತನ್ನ ತಪ್ಪನ್ನು

ಮನ್ನಿಸುವಂತೆ ಪ್ರಾರ್ಥಿಸಿದ ಪೆರ್ಮಾಡಿರಾಯನು ಅವನಿಗೆ ಪ್ರತ್ಯೇಕ ಪಟ್ಟಣವೊಂದನ್ನು ಕಟ್ಟಿಸಿಕೊಡುವನು.

ಜೊಮ್ಮಯ್ಯನು ಕೊಂಡಗುಳಿ ಕೇಶಿರಾಜನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಲಿಂಗಾರ್ಚನೆಗೆ ಏರ್ಪಾಡುಮಾಡಿ ಆರೋಗಣೆಗೆ ಮಾಂಸವನ್ನು ಎಡೆ ಮಾಡಲು ಕೊಂಡಗುಳಿ ಕೇಶಿರಾಜನು ಮನದಲ್ಲಿ ಕೊರಗಿ ಕರಗಿ ಬಾಡುತ್ತ ಮಾತನಾಡಲಾಗದೆ ಇರಲು ಜೊಮ್ಮಿತಂದೆ ಆ ಮಾಂಸವನ್ನು ಪಕ್ವಾನ್ನವನ್ನಾಗಿ ಪರಿವರ್ತಿಸುವನು. ಜೊಮ್ಮಯ್ಯನು ಬೇಟೆ ಮಾಡಿ ಕಾರಣಿಕ ಮೃಗಗಳಿಗೆಲ್ಲ ಶಾಪ ವಿಮೋಚನೆ ಮಾಡಿ ಕೈಲಾಸಕ್ಕೆ ಕಳುಹಿಸಿದ ಸುದ್ದಿ ಕೇಳಿ ಕೇಶಿರಾಜ ದಣ್ಣಾಯಕರು ಕೌತುಕಗೊಂಡು ಶಿವನ ಮಹಿಮೆಗೆ ಮೆಚ್ಚಿ "ಅಸಮಾಕ್ಷ ನೀ ಒಲಿಯೆ ಪಾಪವೇ ಪುಣ್ಯವದು । ಒಸೆದು ನೀನೊಲಿದಂಗನೀತಿಯೆ ನೀತಿಯದು । ಅಃಕಾರ್ಯವೇ ಕಾಯದವಕ್ರಮಂ ಕ್ರಮವೆಯದು । ದುಃಕುಲಂ ಸತ್ಕುಲಧರ್ಮವೇ ಧರ್ಮವದು ।" ಎಂದು ಪದ್ಯವನ್ನು ಓದಿ ಆರೈಸಿ ಹಿಗ್ಗಿದನೆಂದು ಹರಿಹರ ಹೇಳುವನು. ಹರಿಹರನ ಈ ಹೇಳಿಕೆ ಮುಖ್ಯವೆನ್ನಿಸುತ್ತದೆ. ಕೊಂಡಗುಳಿ ಕೇಶಿರಾಜ ಮೊತ್ತಮೊದಲ ವೀರಶೈವ ಕವಿ. ಅವನ ಕೃತಿಯೊಂದರ ಪದ್ಯ (ಅ) ರಗಳೆಗೆ ಹೊಂದಿಸಿದ ಪದ್ಯ ಇಲ್ಲಿ ದಾಖಲಾಗಿರುವುದು ವಿಶೇಷ. 'ತೆಲುಗ ಜೊಮ್ಮಯ್ಯನ ರಗಳೆ'ಯಿಂದ ತಿಳಿದು ಬರುವ ಮುಖ್ಯ ಸಂಗತಿಗಳಿವು :

1. ಬಸವಪೂರ್ವದ ಶಿವಶರಣರಲ್ಲಿ ತೆಲುಗ ಜೊಮ್ಮಯ್ಯನೂ ಒಬ್ಬ
2. ಈತ ಕೊಂಡಗುಳಿ ಕೇಶಿರಾಜನ ಸಮಕಾಲೀನ ಮಹಿಮಾಪುರುಷ
3. ವೃತ್ತಿಯಲ್ಲಿ ಬೇಡನಾಗಿ ಪೆರ್ಮಾಡಿರಾಯನ ಆಸ್ಥಾನದಲ್ಲಿ ಸೇವಕಾವೃತ್ತಿಯನ್ನು ಹೊಂದಿದ್ದ.
4. ಪೆರ್ಮಾಡಿರಾಯನಲ್ಲಿ ಸೇವೆಯಲ್ಲಿದ್ದರೂ ಅವನಿಗೆ ನಮಸ್ಕರಿಸನು, ಅವನನ್ನು ಲೆಕ್ಕಿಸನು. ಅವನು ಪೆರ್ಮಾಡಿರಾಯನಿಗೆ ಜೋಳವಾಳಿಯವನು, ಇಷ್ಟದೈವ ಭೀಮನಾಥನಿಗೆ ವೇಳೆವಾಳಿಯವನು (ಇಲ್ಲಿನ ಜೋಳವಾಳಿ, ವೇಳೆವಾಳಿ ಎಂಬ ಪದಗಳು 10ನೇ ಶತಮಾನದ ಸಾಮಾಜಿಕ ಬದುಕಿನ ಮೌಲ್ಯಗಳಾಗಿದ್ದವು. ಒಂದು ಅನ್ನದ ಋಣಕ್ಕೆ ಇನ್ನೊಂದು ನಿಷ್ಠೆಗೆ ಸಂಕೇತವಾಗಿದ್ದುವು).
5. ಪೆರ್ಮಾಡಿರಾಯನು ವಿಷ್ಣುಭಕ್ತನಾಗಿದ್ದರೆ ಅವನ ಪತ್ನಿ ಲಕುಮಾದೇವಿ ಶಿವಭಕ್ತೆ; ತೆಲುಗ ಜೊಮ್ಮಯ್ಯನ ಬಗೆಗೆ ವಿಶೇಷ ಭಕ್ತಿ ಗೌರವಗಳನ್ನು ಹೊಂದಿದ್ದವಳು.
6. ಕೊಂಡಗುಳಿ ಕೇಶಿರಾಜನು ಜೊಮ್ಮಯ್ಯನ ಬಗೆಗೆ ಲಘುವಾಗಿ ಭಾವಿಸಿದ್ದವನು ಅವನ ಮಹಿಮೆಯನ್ನು ಕಣ್ಣಾರೆ ಕಂಡ ಮೇಲೆ ಅವನ ಬಗೆಗೆ ಪೂಜ್ಯಭಾವವನ್ನು ಹೊಂದುವನು.

7. ಕೊಂಡಗುಳಿ ಕೇಶಿರಾಜನ ಪದ್ಯವೊಂದು ಜೊಮ್ಮಯ್ಯನ ರಗಳೆಯಲ್ಲಿ ಅಂತರ್ಗತ ವಾಗಿರುವುದು.

ಭೋಗಣ್ಣನ ರಗಳೆಯಲ್ಲಿ ಕೆಂಬಾವಿಯ ಭೋಗಣ್ಣನೆನ್ನುವ ಶಿವನ ನೆಚ್ಚಿನ ಭಕ್ತನು-

ಶಿವಭಕ್ತರೊಳಗೆ ಜಾತಿಯನರಸುವುದಿಲ್ಲ
ಶಿವಭಕ್ತರೊಳಗೆ ಭೇದವ ಕಲ್ಪಿಸುವುದಿಲ್ಲ
ಹರಭಕ್ತರೊಳಗೆ ಜಾಣ್ನುಡಿಯನರಸುವುದಿಲ್ಲ
ಹರಭಕ್ತರೊಳಗಧಿಕ ವಿದ್ಯವನರಸುವುದಿಲ್ಲ
ವೇಷವಿರ್ದಲ್ಲಿ ಗಿರಿಜೇಶನಿರ್ದಪನೆಂದು
ವೇಷವಿರ್ದಲ್ಲಿ ಸರ್ವೇಶನಿರ್ದಪನೆಂದು

ಭಕ್ತರನ್ನು ಕೊಂಡಾಡುತ್ತಿರುವನೆಂದು ಹರಿಹರ ವರ್ಣಿಸುವನು. ಈ ಶಿವಭಕ್ತನ ಚಿತ್ರ ಹನ್ನೆರಡನೆಯ ಶತಮಾನದ ಶರಣ ಲೋಕದ್ದೇ ಆಗಿದೆ. ಶಿವ ವೇಷ ಮರೆಯಿಸಿ ಕೊಂಡು (ಹಿರಿಯ ವೇಷಂಗೊಂಡು = ಹಿರಿಯ ಮಾಹೇಶ್ವರನ ವೇಷಧರಿಸಿ) ಭೋಗಣ್ಣನ ಮನೆಗೆ ಹಗಲಲ್ಲಿ ಮಿಳಿ, ಕೈಯಲ್ಲಿ ಕಂಕರಿಗೋಲು ಹಿಡಿದು ಬರಲು ಭೋಗಣ್ಣನು ಅವನನ್ನು ಕರೆದು ನಮಿಸಿ ಪಾದಪೂಜೆ ಮಾಡಿ ಪಾದೋದಕ ಸ್ವೀಕರಿಸಿ ಶಿವಪೂಜೆಗೆ ಎಡೆಮಾಡಿಕೊಡುವನು. ಈ ವಿಷಯ ತಿಳಿದು ಬ್ರಾಹ್ಮಣರು ಚಂದಿ ಮರಸನಲ್ಲಿಗೆ ಹೋಗಿ -

ನಿಮ್ಮೂರ ಭೋಗಣ್ಣನೆಂಬ ಭಕ್ತಂ ಮೀರಿ
ತಮ್ಮ ಭಕ್ತಾಚರ ವೆಗ್ಗಳಂ ತಲೆಗೇರಿ
ಹೊಲೆಗಲಸಿ ನೆಲೆಗೆಟ್ಟು ಛಲವುಡುಗಿ ಕುಲವಳಿದು
ಹೊಲೆಯನೆನ್ನದೆ ಹಿರಿಯ ಭಕ್ತನೆಂದರಿದರಿದು
ತಂದಿಂತು ಮನೆಯೊಳಗೆ ಗೋಜಾಗತಂ ಮಾಡಿ
ಸಂದ ವಿಪ್ರರ ಕರ್ಮವೆಲ್ಲಮಂ ಪುಸಿ ಮಾಡಿ
ಹೊಲೆಯನಂ ಮುಂದಿಟ್ಟುಕೊಂಡೈದನೆಲೆಯರಸ
ಕುಲವೆಲ್ಲ ನಿರ್ಮೂಲವಾದುದಿಂದೆಲೆಯರಸ
ಆತನಂ ಕರೆಯಿಪುದು ಪೊರಮಡಿಪುದಲ್ಲದಡೆ
ಆತನಿರಲಾವೆಲ್ಲ ಪೋದಪ್ಪೆವಲ್ಲದಡೆ

ಎಂದು ಚಾಡಿ ಹೇಳುವರು. ಚಂದಿಮರಸ ಭೋಗಣ್ಣನನ್ನು ಕರೆಯಿಸಿ ಯಾರಾದರೂ ಮನೆಗೆ ಹೊಲೆಯರನ್ನು ಹೊಗಿಸಿ ಬಾಳುವರೆ? ಮನೆಯೊಳಗೆ ಅನಾಮಿಕನನ್ನು ಹೊಗಿಸುವರೆ? ಎಂದು ಕೇಳುವುದು. ಅದಕ್ಕೆ ಭೋಗಣ್ಣ ಶಿವನರಿಯದ ಹೊಲೆ ಯರನ್ನು ನಾನು ಹೊಗಿಸಿದೆನೆ? ಶಿವಭಕ್ತನನ್ನು ಹೊಗಿಸಿದೆ ಇದು ತಪ್ಪೆ? ಎಂದು ಉತ್ತರಿಸುವನು. ಚಂದಿಮರಸ ಭೋಗಣ್ಣನಿಗೆ ಊರಿಂದ ಹೊರಗೆ ಹೋಗೆಂದು ಹೇಳಿದಾಗ ಅವನು ಹೊರಡಲು ಅವನ ಬೆನ್ನ ಹಿಂದೆ ಊರಲ್ಲಿನ ಶಿವನಿಲಯದ

ಲಿಂಗಗಳೆಲ್ಲವೂ ಉರುಳುತ್ತ ಬಂದವು. ಚಂದಿಮರಸ ಮುಂದೆ ತನ್ನ ತಪ್ಪಿನ ಅರಿವಾಗಿ ಭೋಗಣ್ಣನಲ್ಲಿ ಕ್ಷಮೆಯಾಚಿಸಲು ಭೋಗಣ್ಣ ಊರಿಗೆ ಹಿಂತಿರುಗುವನು. ಅವನ ಹಿಂದೆ ಲಿಂಗಗಳೂ ಬರುವುವು.

ಶಂಕರದಾಸಿಮಯ್ಯ ಶಿವನಿಂದ ನೊಸಲಕ್ಕಣ್ಣನ್ನು ಪಡೆದು ಜೇಡರ ದಾಸಿಮಯ್ಯನ ತವನಿಧಿಯನ್ನು ಇಲ್ಲವಾಗಿಸಿ ಅವನ ಗರ್ವವನ್ನು ಮುರಿದ ಪ್ರಸಂಗ ; ಪೆಂಬೇರದಲ್ಲಿ ಮೈಳುಗ (=ಮೈಲಾರ)ನಿಗೆ ಶಂಕರದಾಸಿಮಯ್ಯ ತನ್ನ ಬಾಯ ತಂಬುಲವನಿಕ್ಕಿದ ಪ್ರಸಂಗ; ಮೈಳಾದೇವಿ (=ಮಾಳಚಿ > ಮಹಾಲಕ್ಷ್ಮಿ) ನೀಡಿದ ವೀಳೆಯ ಪಚ್ಚೆಗರ್ಪೂರ, ಮಲ್ಲಿಗೆ ಸಂಪಿಗೆ ಪುಷ್ಪಗಳು, ಪರಿಮಳದ್ರವ್ಯಗಳನ್ನು ಸ್ವೀಕರಿಸಿ ಅವಳನ್ನು ಶಂಕರದಾಸಿಮಯ್ಯ ಅನುಗ್ರಹಿಸಿದ ಪ್ರಸಂಗ ; ಶಂಕರದಾಸಿಮಯ್ಯ ಮಾರಿ ಮಸಣೆಯರಿಂದ ಕೊಟ್ಟಣವನ್ನು ಕುಟ್ಟಿಸಿದ ಪ್ರಸಂಗ ; ಶಂಕರದಾಸಿಮಯ್ಯನಿಗೆ ಸದ್ಯೋಜಾತದೇವನೆನ್ನುವ ಮಗನಾದ ಪ್ರಸಂಗ - ಹೀಗೆ 'ಶಂಕರದಾಸಿಮಯ್ಯನ ರಗಳೆ' ಮುಖ್ಯ ಸಂಗತಿಗಳನ್ನು ತನ್ನಲ್ಲಿ ಗರ್ಭೀಕರಿಸಿಕೊಂಡು ಕರ್ನಾಟಕದ ಸಾಂಸ್ಕೃತಿಕ ಇತಿಹಾಸಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ. ಶಂಕರದಾಸಿಮಯ್ಯ - ಜೇಡರದಾಸಿಮಯ್ಯ ಬಸವ ಪೂರ್ವದ ಸಮಕಾಲೀನ ಶರಣರು. ಶಂಕರದಾಸಿಮಯ್ಯ ತನ್ನ ನೊಸಲಕಣ್ಣಿನ ಉಗ್ರತೆಯಿಂದ ಮೈಲಾರ, ಮಾಳಚಿಯರನ್ನು, ಮಾರಿ ಮಸಣಿಯರನ್ನು ಮಣಿಸಿದನೆಂಬುದು ಗಮನಾರ್ಹ ವಿಚಾರ. ಇವರೆಲ್ಲ ಕ್ಷುದ್ರದೇವತೆಗಳಾಗಿ ಸಾಮಾಜಿಕ ಜೀವನದಲ್ಲಿ ಜನರಿಂದ ಗೌರವವನ್ನು ಪಡೆದಿದ್ದರು. ಇವರಿಂದ ಕೇಡು ಬರಬಹುದೆಂದು ಜನರು ಇವರ ಭಕ್ತರಾಗಿ ಇವರನ್ನು ಪೂಜಿಸುತ್ತಿದ್ದರು. ಶಂಕರದಾಸಿಮಯ್ಯ ಜನರ ಈ ನಂಬುಗೆಯನ್ನು ಹುಸಿಗೊಳಿಸಲೆಂದೇ ಈ ಕ್ಷುದ್ರದೈವಗಳಿಂದ ಸೇವೆಗೊಂಡುದು. ಶಂಕರದಾಸಿಮಯ್ಯನ ಬಾಯ ತಂಬುಲವನ್ನು ಮೈಲಾರ ತಿಂದದ್ದರಿಂದ ಜನರ ದೃಷ್ಟಿಯಲ್ಲಿ ಇವನ ಸಾಮರ್ಥ್ಯದ ಬಗೆಗೆ ಇದ್ದ ನಂಬುಗೆ ಸಡಿಲವಾಯಿತು :

> ಕುಂದಿತ್ತು ಮೈಳುಗೆಯ ಸಾಮರ್ಥ್ಯಸಂಪದಂ
> ಮೈಲಾರನೆಲ್ಲರೆಂಜಲ ತಿಂಬ ತೆರನಾಯ್ತು
> ಮೈಲಾರನೊಳಗದು ಸಣಾಂಬೆಂಬುದಿಂದಾಯ್ತು
> ಇನ್ನೇಕೆ ಮೈಳುಗೆಯನೊಪ್ಪಿ ಸಜೆ ಪೂಜಿಪ್ಪುದು
> ಇನ್ನೇಕೆ ಹಾಳಾದ ಮಾಳಚಿಯ ರಂಜಿಪುದು

ಎಂದು ಜನ ಮಾತನಾಡಿಕೊಂಡರೆಂದು ಹರಿಹರ ಹೇಳುವನು. ಹರಿಹರ ಇಲ್ಲಿ ಕೆಲವು ಮುಖ್ಯ ಸಂಗತಿಗಳ ಉಲ್ಲೇಖ ಮಾಡಿರುವನು. ಪೆಂಬೇರವು ಈಗಿನ ಮಹಾರಾಷ್ಟ್ರದ ಪೆಂಬರವಾಗಿದೆ. ಭಕ್ತರು ಸಣಬು ಅರಲಿನಿಂದ ಮೈಲಾರನ ಮೂರ್ತಿಯನ್ನು ಮಾಡಿ ಮೇಲೆ ಬಣ್ಣ ಬಳಿಯುತ್ತಿದ್ದುದಕ್ಕೆ ಕಾರಣ ಹೊರಗೆ ತೋರಿಕೆಗೆ ಅವನು ಎಷ್ಟು ಉಗ್ರವೊ ಒಳಗೆ ಅಷ್ಟೇ ಟೊಳ್ಳು ಎಂಬುದನ್ನು ವಿಡಂಬಿಸುವ ಸಲುವಾಗಿ. ಇದು

ರಗಳೆಯ ಮೇಲಿನ ಸಾಲುಗಳಿಂದ ವಿದಿತವಾಗುತ್ತದೆ. ಇದು ಬಹುಶಃ ಬಸವಣ್ಣನ ಕಾಲಕ್ಕಾಗಲೇ ಜನಪ್ರತೀತಿಯಲ್ಲಿರಬೇಕು. 'ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು, ಹೊಱಗಣ ಬಣ್ಣ ಕರಲೇಸಾಯಿತ್ತಯ್ಯಾ' ಎಂಬ ಬಸವಣ್ಣನ ವಚನದ ಉಲ್ಲೇಖ ಇದಕ್ಕೆ ಪೂರಕವಾಗಿದೆ.

ಹರಿಹರ ವಿರಕ್ತನಾದರೂ ಸಂಸಾರವನ್ನು ದ್ವೇಷಿಸುವವನಲ್ಲ. ಸುಂದರ ದಾಂಪತ್ಯ ಚಿತ್ರಗಳನ್ನು ಅವನು ತನ್ನ ರಗಳೆಗಳಲ್ಲಿ ಕೊಟ್ಟಿರುವನು. ಇದು ಅವನ ಅನನ್ಯ ಜೀವನ ಪ್ರೀತಿಗೆ ಉದಾಹರಣೆಯಾಗಿದೆ. ಅವನು 'ರಸಿಕಚಕ್ರಿ'ಯಾಗಿರುವುದರಿಂದ ನಂಬಿಯಣ್ಣ ಹಾಗೂ ಮಲುಹಣ ರಗಳೆಗಳಲ್ಲಿ ಪ್ರೀತಿಯ ಅನನ್ಯ ಭಾವಸಂಬಂಧವನ್ನು ಮನೋಜ್ಞವಾಗಿ ಚಿತ್ರಿಸಿರುವನು. ಪರವೆ -ಸಂಕಲಿನಾಚ್ಚಿಯರಲ್ಲಿನ ನಂಬಿಯಣ್ಣನ ಪ್ರಣಯದಾಟ, ವಿರಸ - ಮುನಿಸು - ಶಿವನ ಮಧ್ಯಸ್ಥಿಕೆ - ಮುನಿಸನ್ನು ತಿಳಿಗೊಳಿಸುವುದು - ಪ್ರೇಮಿಗಳನ್ನು ಒಂದು ಗೂಡಿಸುವುದು - ಮುರಿದ ಮನಗಳನ್ನು ಬೆಸುಗೆ ಹಾಕುವುದು - ಈ ಎಲ್ಲ ಬದುಕಿನ ಸಾಂಸಾರಿಕ ಸಂಬಂಧಗಳ ಸುಂದರ ಚಿತ್ರವನ್ನು ಹರಿಹರ ಕೊಡುವುದನ್ನು ಗಮನಿಸಿದಾಗ ಅವನು ವಿರಕ್ತಿಯ ಮುಸುಕನ್ನು ತನ್ನ ವ್ಯಕ್ತಿತ್ವಕ್ಕೆ ಹೊಂದಿಸಿಕೊಳ್ಳದೆ ಅನನ್ಯ ಜೀವನ ಪ್ರೀತಿಯನ್ನು ವ್ಯಕ್ತಿತ್ವಕ್ಕೆ ಅಳವಡಿಸಿಕೊಂಡಿರುವುದು ಮುಖ್ಯ ವೆನ್ನಿಸುತ್ತದೆ. ವಿರಹಾಗ್ನಿಯಲ್ಲಿ ಬೆಂದ ಮಲುಹಣ ತನ್ನ ಪ್ರೇಯಸಿಯ ಧ್ಯಾನದಲ್ಲಿ ಅವಳ ಮನೆಯ ಹೊರಗೆ ಹಿಮದರಾಶಿಯಲ್ಲಿ ಮರಗಟ್ಟಿ ಮಲುಹಣೆ ಮಲುಹಣೆ ಎಂದು ಜಪಿಸುತ್ತಾ ನಿಂತುದನ್ನು ನೋಡಿ ಮಲುಹಣೆ ಎನ್ನ ಮೇಲಿಕ್ಕುವಾ ಚಿತ್ತದಾತುರತೆಯಂ ಪನ್ನಗಾಭರಣನೊಳು ಮಾಳ್ಪುದು ... ಬೇಡಿ ಕೋಳ್ಕೀಶ್ವರನೊಳೆನ್ನ ಮಲುಹಣ ಹೋಗು' ಎಂದು ಹೇಳಿ ಅವನ ಕಣ್ತೆರೆಯಿಸುವಳು. 'ಇಂದುಧರನಂ ಬೇಡು ನಿನ್ನತ್ತ ನಾಂ ಬಪ್ಪೆ ಎನ್ನಹವಣೇ ಕೋಟಿ ಮಲುಹಣೆಯರಾಗರೇ' ಎಂದು ಅವಳು ಹೇಳುವ ಮಾತು ಪ್ರೀತಿಯ ಆಳದಿಂದ ಬಂದದ್ದು.

ಬಸವಾದಿ ಶಿವಶರಣರು ಸಾತ್ವಿಕಭಕ್ತಿಯಾದರೆ, ಹರಿಹರನ ಶಿವನ ಭಕ್ತರದು ಉಗ್ರ ಭಕ್ತಿ. ಲಿಂಗಾಂಗ ಸಾಮರಸ್ಯದ ಅನುಭೂತಿ ಷಟ್‌ಸ್ಥಲದ ನಾಲ್ಕನೆಯ ಹಂತದಲ್ಲಿ ಆಗುತ್ತದೆ. ವೀರಶೈವ ಪರಿಭಾಷೆಯಲ್ಲಿ ಇದನ್ನು 'ಅನುಭಾವ' ಎಂದು ಕರೆಯಲಾಗುವುದು. ಜೇಡರ ದಾಸಿಮಯ್ಯನು ಅನುಭಾವಕ್ಕೂ ಭಕ್ತಿಗೂ ಇರುವ ಅವಿನಾಭಾವ ಸಂಬಂಧವನ್ನು ಹೀಗೆ ವಿವರಿಸಿರುವನು :

ಅನುಭಾವವಿಲ್ಲದ ಭಕ್ತಿ ತಲೆಕೆಳಗಾದುದಯ್ಯಾ
ಅನುಭಾವ ಭಕ್ತಿಗಾಧಾರ
ಅನುಭಾವ ಭಕ್ತಿಗೆ ನೆಲವನೆ
ಅನುಬಾವವುಳ್ಳವರ ಕಂಡು
ತುರ್ಯ ಸಂಭಾಷಣೆಯ ಬೆಸಗೊಳ್ಳದಿದ್ದಡೆ
ನರಕದಲ್ಲಿಕ್ಕಯ್ಯ ರಾಮನಾಥ

ಅನುಭಾವವಿಲ್ಲದೆ ಈ ತನು ಎಳತಟವಾದುದಯ್ಯ
ಅನುಭಾವವೀ ತನುವಿಂಗಾಧಾರ
ಅನುಭಾವರ ಅನುಭಾವವನು ಮನವಾರೆ ಭೇದಿಸಿದವರಿಗೆ
ಜನನವಿಲ್ಲ ಕಾಣಾ ರಾಮನಾಥ.

ಶಿವಜ್ಞಾನ ಅಥವಾ ಷಟ್‌ಸ್ಥಲದ ಬಗೆಗಿನ ಅರಿವು ಭಕ್ತನಾದವನಿಗೆ ಇರಬೇಕು. ಇದನ್ನೇ 'ಅನುಭಾವ'ವೆಂದು ಕರೆದಿರುವ ಶಿವಶರಣರು ಭಕ್ತನಾದವನಿಗೆ ಭಕ್ತಿಯ ಅನುಸಂಧಾನದಲ್ಲಿ ಅನುಭಾವಜ್ಞಾನದ ಅವಶ್ಯಕತೆಯನ್ನು ಒತ್ತಿ ಹೇಳಿರುವರು. ಮೇಲಿನ ವಚನದ ಮೊದಲ ಮೂರು ಸಾಲುಗಳು ಇದನ್ನೇ ಪ್ರತಿಪಾದಿಸುತ್ತವೆ. ಶಿವಜ್ಞಾನ ಅಥವಾ ಷಟ್‌ಸ್ಥಲದ ತಿಳುವಳಿಕೆಯುಳ್ಳವರನ್ನು 'ಅನುಭಾವರು' 'ಅನುಭಾವವುಳ್ಳವರು' (=ಅನುಭಾವಿಗಳು) ಎಂದು ಕರೆದಿರುವುದೂ ಗಮನಿಸಬೇಕಾದ ಸಂಗತಿ. ಚಂಚಲವಾದ ಮನಃಸ್ಥಿತಿಯನ್ನು ಹದ್ದುಬಸ್ತಿಗೆ ತರಲು ನೆರವಾಗುವುದು ಅನುಭಾವ. ಆ ಕಾರಣದಿಂದಲೇ 'ಅನುಭಾವೀತನು ಲಿಂಗಾಧಾರ' ಎಂದು ಎರಡನೆಯ ವಚನದಲ್ಲಿ ಕರೆದಿರುವುದು. ಭಕ್ತನ ಸ್ಥಿತಿಯಲ್ಲಿನ ಚಾಂಚಲ್ಯ ಕ್ರಮಾಗತವಾಗಿ ಷಟ್‌ಸ್ಥಲದ ಅನುಸಂಧಾನದಲ್ಲಿ ಇಲ್ಲವಾಗುತ್ತಾ ಸಾಗುವುದು. ಮನದ ಕಾಳಿಕೆಯನ್ನು ಪರಿಹರಿಸಲು 'ಅನುಭಾವ'ವು ಸಾಧಕನಿಗೆ ಸಾಧಕಾವಸ್ಥೆಯಲ್ಲಿ ನೆರವಾಗುವುದು. ಅನುಭಾವವು ಎಲ್ಲರಿಗೂ ಸಾಧ್ಯವಲ್ಲ. ಅದೊಂದು ಗುಪ್ತನಿಧಿ. ಶಿವಜ್ಞಾನವೆನ್ನುವ ಅಂಜನವನ್ನು ಕಣ್ಣಿಗೆ ಹಚ್ಚಿಕೊಂಡವರಿಗೆ ಮಾತ್ರ ಆ ಗುಪ್ತನಿಧಿ ಕರಗತವಾಗುವುದು. ಇದನ್ನೇ ಬಸವಣ್ಣನವರು 'ಭಕ್ತಿಯೆಂಬ ನಿಧಾನವ ಸಾಧಿಸುವಡೆ ಶಿವಪ್ರೇಮವೆಂಬ' ಅಂಜನವನೆಚ್ಚಿಕೊಂಬುದು ಎಂಬ ಮಾತಿನಲ್ಲಿ ಹೇಳಿರುವರು. 'ನಮ್ಮ ಕೂಡಲಸಂಗನ ಶರಣರ ಅನುಭಾವ ಗಜವೈದ್ಯ' ಎಂದೂ ಅವರು ಹೇಳಿರುವರು. ನಮ್ಮ ದೈಹಿಕ ಕಾಯಿಲೆಗಳಿಗೆ ಶ್ರೇಷ್ಠ ವೈದ್ಯರ ಚಿಕಿತ್ಸೆ ಹೇಗೆ ಪರಿಹಾರ ನೀಡುತ್ತದೆಯೋ ಹಾಗೆ ಅನುಭಾವವೆನ್ನುವ ಗಜವೈದ್ಯ (= ಶ್ರೇಷ್ಠ ವೈದ್ಯ) ಮಾನಸಿಕ ಸುಪ್ರಸನ್ನತೆಗೆ ಕಾರಣವಾಗುತ್ತದೆ. ಕೂಡಲ ಸಂಗನ ಶರಣರ ನಡುವೆ ನಡೆಸುವ ಅನುಭಾವಿಕ ಚರ್ಚೆಯನ್ನು ಬರಿಯ ಮಾತೆನ್ನಬಹುದೆ? ಅದು 'ಶಬ್ದಸಾರಾಯ' ಎಂದು ಅತ್ಯಂತ ಧ್ವನಿಪೂರ್ಣವಾಗಿ ಬಸವಣ್ಣನವರು ಹೇಳಿರುವರು. ಶರಣರು ಒಂದೆಡೆ ಸೇರಿ ನಡೆಸುವ ಗೋಷ್ಠಿಯನ್ನು 'ಸುಖದ ಸುಖಿಗಳ ಸಂಭಾಷಣೆ' ಎಂದೂ ಅದರಿಂದ 'ದುಃಖಕ್ಕೆ ವಿಶ್ರಾಮ'ವೆಂದೂ ಅಕ್ಕಮಹಾದೇವಿ ಹೇಳುವುದರಲ್ಲಿ ಅರ್ಥವಿದೆ. ಶರಣರ ಸಂಗವೆ 'ಶರಣರ ಅನುಭಾವ'ವಾಗಬಹುದು. 'ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿಯೆಂಬ ಒಡವೆಯ ದಿಟವ ಮಾಡಿ ತೋರಿದರು' ಎಂಬ ಬಸವಣ್ಣನವರ ಹೇಳಿಕೆಯಲ್ಲಿ ಗೋಷ್ಠಿಯಲ್ಲಿ ಶರಣರು ಶಿವಾನುಭವವನ್ನು ಅಥವಾ ಶಿವಜ್ಞಾನವನ್ನು ಕುರಿತಂತೆ ಮೇಲಿಂದ ಮೇಲೆ ಚರ್ಚಿಸುವ ಮೂಲಕ ನಾನು 'ನಿಜ'ವನ್ನು ಕಂಡುಕೊಂಡೆ ಎಂಬ ಭಾವ ಉದ್ದೀಪಿತವಾಗುತ್ತದೆ. 'ಶರಣರ ಅನುಭಾವ (= ಶಿವಜ್ಞಾನಕ್ಕೆ ಸಂಬಂಧಿಸಿದಂತೆ ಚರ್ಚೆ) ಮಡಿವಾಳನ ಕಾಯಕದಂತೆ' ಎನ್ನುವ ಬಸವಣ್ಣನವರ

ಮಾತಿನಲ್ಲಿ ಶಿವಶರಣರ ಜೊತೆ ನಡೆಸುವ ಚರ್ಚೆಯು ಮನದ ಮಲಿನವನ್ನು ಪರಿಹರಿಸುತ್ತದೆನ್ನುವ ಅರ್ಥವಿದೆ. ಹಾಗೆಯೇ 'ಕೂಡಲಸಂಗನ ಶರಣರು ರಸದ ವಾರುಧಿಗಳು' ಎಂದು ಬಸವಣ್ಣನವರು ಕರೆದಿರುವುದು ಇನ್ನೂ ಹೆಚ್ಚಿನ ಧ್ವನಿಗೂಡಿಸುತ್ತದೆ.

ಶರಣರದು 'ಲಿಂಗಸುಖಿ'ಗಳಾಗುವ 'ಲಿಂಗವ್ಯಸನಿ'ಗಳಾಗುವ ಕಡೆಗೆ ಲಿಂಗವೇ ಆಗುವ ಒಂದು ಹಂತ. ಹರಿಹರನ ಭಕ್ತರದು ಉಗ್ರಭಕ್ತಿ. ಅಲ್ಲಿ ಹಂತಹಂತವಾಗಿ ಸಾಧಕ ತನ್ನ ಅಂತರಂಗದ ಕಾಳಿಕೆಗಳನ್ನು ಕಳೆದುಕೊಳ್ಳುತ್ತ ಕೊನೆಗೆ ತಾನು ಬೇರೆಯಲ್ಲ ಲಿಂಗ ಬೇರೆಯಲ್ಲ ಎನ್ನುವ ಹಂತಕ್ಕೆ ತಲುಪುವ ಶಿವಶರಣರ ಸಾಧನಾಗತಿಯ ಆತ್ಯಂತಿಕ ಸ್ಥಿತಿಯಲ್ಲ. ಹರಿಹರನಲ್ಲಿ ಭಕ್ತಿ ಎನ್ನುವುದು ಅಂತರಂಗವನ್ನು ಒರೆಹಚ್ಚಿ ನೋಡುವುದಾಗಿದೆ. ಹರಿಹರನ ಭಕ್ತರು ತಮ್ಮ ಭಕ್ತಿನಿಷ್ಠೆಯನ್ನು ಪ್ರಕಟಪಡಿಸಲು ತಮ್ಮ ಜೀವವನ್ನೇ ಪಣಕ್ಕಿಡುವರು. ಉದಾಹರಣೆಗೆ ಕೊಂಡಗುಳಿ ಕೇಶಿರಾಜನು ನದಿ ದಾಟುವಾಗ ತನ್ನ ಇಷ್ಟಲಿಂಗ ನೀರಿನಲ್ಲಿ ಕಳೆದು ಹೋಗಲು ತನ್ನ ಶಿರವನ್ನೇ ಛೇದಿಸಿಕೊಳ್ಳಲು ಹೊರಡುವನು. ತಮಿಳುನಾಡಿನ ನಾಯನ್ಮಾರರ ಬದುಕಿನಲ್ಲಿ ಪ್ರಧಾನವಾದುದು ಲಿಂಗನಿಷ್ಠೆ. ಅದು ಪರೀಕ್ಷೆಗೆ ಒಳಪಟ್ಟಲ್ಲಿ ತಮ್ಮ ಜೀವವನ್ನೇ ತಮ್ಮ ಲಿಂಗ ನಿಷ್ಠೆಗಾಗಿ ಅರ್ಪಿಸಿಕೊಳ್ಳುವರು. ಬಸವಣ್ಣನವರು ಈ ಅಗ್ನಿ ಪರೀಕ್ಷೆಯನ್ನು ಹೀಗೆ ವ್ಯಾಖ್ಯಾನಿಸುವರು :

> ಭಕ್ತಿಯೆಂಬುದು ಅನಿಯಮ ನೋಡಯ್ಯಾ
> ಅದು ವಿಷದ ಕೊಡ : ತುಡುಕಬಾರದು ;
> ಅಂಗಕ್ಕೆ ಹಿತವಲ್ಲ, ಸಿಂಗಿ ನೋಡಯ್ಯಾ
> ಅದು ವಿಚಿತ್ರ ವಿಸ್ಮಯ ಕೂಡಲಸಂಗಮದೇವಾ

'ಮುನ್ನಿನವರು' ಅಂದರೆ ಪುರಾತನರು ಹೋದ ದಾರಿ ಭಯ ಕಾಣಿರಣ್ಣಾ ! ಎಂದು ಬಸವಣ್ಣನವರು ಹೇಳುತ್ತಾ, ಈ ಭಕ್ತಿ ಪರೀಕ್ಷೆ ಎಷ್ಟು ಉಗ್ರವಾದುದೆಂದರೆ, ಬಲ್ಲಾಳನ ವಧುವನ್ನೇ ಬೇಡಿದ, ಸಿರಿಯಾಳನ ಮಗನನ್ನೇ ಬೇಡಿದ, ದಾಸನು (ಜೇಡರ ದಾಸಿಮಯ್ಯನ)ನೆಯ್ದು ಬೆಲೆಬಾಳುವ ವಸ್ತ್ರವನ್ನು ಅವನ ಎದುರಿಗೇ ಸೀಳಿದ ಪರೀಕ್ಷೆ ಮನಸ್ಸನ್ನು ಒರೆಹಚ್ಚಿ ನೋಡುವಂತಹದ್ದು. ಆದ್ದರಿಂದಲೇ ಅವರು ಹೋದ ದಾರಿ ಭಯವನ್ನುಂಟು ಮಾಡುವಂತಹದ್ದು. ಈ ಉಗ್ರ ಪರೀಕ್ಷೆಯುಲ್ಲಿ ಅವರು ತಮ್ಮನ್ನು ತಾವು ಪಣವಾಗಿ ಒಡ್ಡಿದರು. ಆದ್ದರಿಂದಲೇ ಅವರು 'ಅಘಟಿತಘಟಿತರು , ವಿಪರೀತ ಚರಿತರು'.

ಹಂಪೆಯ ವಿರೂಪಾಕ್ಷ: ಕಾಲಾನುಕ್ರಮಣಿಕೆಯ ಬೆಳವಣಿಗೆ

(ಕನ್ನಡ ಸಾಹಿತ್ಯ ಹಾಗೂ ಶಾಸನಗಳನ್ನು ಅನುಲಕ್ಷಿಸಿ)

- ಡಾ. ಸಿ. ನಾಗಭೂಷಣ

ಹಂಪೆಯನ್ನೊಳಗೊಂಡಂತೆ ಕನ್ನಡ ನಾಡಿನಲ್ಲಿ ವಿರೂಪಾಕ್ಷನನ್ನು ಆರಾಧಿಸುವ ಪದ್ಧತಿ ಯಾವಾಗ ಪ್ರಾರಂಭವಾಯಿತು ಎಂಬುದು ನಿಖರವಾಗಿ ತಿಳಿಯದಿದ್ದರೂ ಪೂರ್ವದಿಂದಲೂ ವಿರೂಪಾಕ್ಷನ ಆರಾಧನೆ ಕಂಡುಬರುತ್ತದೆ. ಹತ್ತನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಶಿವನನ್ನು ವಿರೂಪಾಕ್ಷನೆಂದು ಕರೆದು ಆರಾಧಿಸುವ ಪದ್ಧತಿ ಕನ್ನಡ ನಾಡಿನಲ್ಲಿ ಇತ್ತು ಎಂಬುದು ಸಾಹಿತ್ಯ ಹಾಗೂ ಶಾಸನಗಳಲ್ಲಿಯ ಉಲ್ಲೇಖದಿಂದ ತಿಳಿದು ಬರುತ್ತದೆ.

ವಿರೂಪಾಕ್ಷ ಎಂಬುದು ಸ್ಥಳದೈವ ಶಿವನ ಹೆಸರು. ವರ್ತುಲ ಸ್ತಂಭಾಕೃತಿಯ ಲಿಂಗ ರೂಪದಲ್ಲಿ ನೆಲೆನಿಂತಿದೆ. ಈ ಲಿಂಗವು ಮಾನವ ನಿರ್ಮಿಸಿದುದಲ್ಲ. ಸ್ವಯಂಭು ಲಿಂಗ ಎಂಬುದು ಪರಂಪರಾಗತ ನಂಬಿಕೆ. ದೇವತೆಗಳು ಹಾಗೂ ವಿಗ್ರಹಗಳು ಉದ್ಭವ ವಾದವು ಎಂಬ ಕಲ್ಪನೆ ಅಥವಾ ನಂಬಿಕೆ ಇದ್ದಾಗ ಆವಿಗ್ರಹಗಳು ಸ್ವಯಂಭು ಎನ್ನಿಸಿ ಕೊಳ್ಳುತ್ತವೆ. ಶಿವ ಸ್ವರೂಪಿಯಾದ ಲಿಂಗವು ಸ್ವಯಂಭು ಆಗುವ ಅವಕಾಶ ಹೆಚ್ಚಾಗಿರುವುದರಿಂದ ಅಂತಹ ಲಿಂಗಗಳು ಪ್ರತಿಷ್ಠಿತವಾಗಿರುವ ದೇವಾಲಯಗಳು ಸ್ವಯಂಭು ಸ್ಥಾನಗಳೆಂದು ಪರಿಗಣಿತವಾಗಿವೆ. ವಿರೂಪಾಕ್ಷ: ವಿರೂಪ + ಅಕ್ಷಿ ಅಂದರೆ ವಿಕಾರವಾದ ಕಣ್ಣುಳ್ಳವನು ಎಂದೂ, ಈಶ್ವರ , ಮುಕ್ಕಣ್ಣ ತ್ರಿಯಂಬಕ ಇತ್ಯಾದಿ ಸಮಾನಾರ್ಥಕ ಪದಗಳು ಅನ್ವಯಿತವಾಗಿವೆ ಸಾಮಾನ್ಯ ಅರ್ಥದಲ್ಲಿ ತ್ರಿನೇತ್ರ ವುಳ್ಳವನೂ ಎಂಬ ಅರ್ಥವನ್ನು ಪಡೆದಿದೆ. ಹರನ ರೂಪಾಂತರಗಳಲ್ಲಿ 'ವಿರೂಪಾಕ್ಷ' ಎನ್ನುವುದು ಒಂದು ಎಂಬುದು ಜಗನ್ನಾಥ ದಾಸರ ಕೀರ್ತನೆಯಿಂದ ತಿಳಿದುಬರುತ್ತದೆ. ವಿರೂಪಾಕ್ಷನೆಂದರೆ ತ್ರಿಪುರಾರಿ, ತ್ರಿನೇತ್ರವುಳ್ಳವನು. ಹಂಪೆಯ ವಿರೂಪಾಕ್ಷನ ರೂಪಗಳ ಬಗೆಗೆ ಕನ್ನಡ ಸಾಹಿತ್ಯ ಕೃತಿಗಳಲ್ಲಿ ವರ್ಣನೆ ಇದೆ. ಬಸವಣ್ಣನವರು ತಮ್ಮ ವಚನದಲ್ಲಿ ನಾಲ್ಕು ಯುಗಗಳಲ್ಲಿ ಶಿವನು ಒಂದೊಂದೆಡೆಯಿದ್ದ ಬಗೆಗೆ ಹೇಳುತ್ತ 'ಕೃತಯುಗದಲ್ಲಿ ಕೇದಾರ ಎಂಬ ಮೂಲ ಸ್ಥಾನ'[1], ತ್ರೇತಾಯುಗದಲ್ಲಿ ವಾರಣಾಸಿ ಮೂಲಸ್ಥಾನ,

ದ್ವಾಪರದಲ್ಲಿ ವಿರೂಪಾಕ್ಷನೆಂಬ ಮೂಲಸ್ಥಾನ, ಕಲಿಯುಗದಲ್ಲಿ ಪರ್ವತ ಸ್ಥಾನ ಎಂದಿದ್ದು ನಾಲ್ಕು ಕಾಲಗಳಲ್ಲಿ ಶಿವನು ಒಂದೊಂದು ಪೀಠ ಸ್ಥಾನದಲ್ಲಿದ್ದ ಅಂದರೆ ಕೇದಾರ, ಕಾಶಿ, ಹಂಪೆ, ಶ್ರೀಶೈಲ ಪೀಠದಲ್ಲಿದ್ದ ಎಂಬುದಾಗಿ ತಿಳಿದುಬರುತ್ತದೆ. ದ್ವಾಪರಯುಗದಲ್ಲಿಯೇ ವಿರೂಪಾಕ್ಷ ಸ್ಥಾನ ಇತ್ತು ಎಂದು ವಿರೂಪಾಕ್ಷನ ಕಲ್ಪನೆಯನ್ನು ಬಹಳ ಹಿಂದಕ್ಕೆ ಕೊಂಡೊಯ್ದಿರುವುದನ್ನು ಈ ವಚನ ತಿಳಿಸುತ್ತದೆ.

ಹರಿಹರನು ತನ್ನ ಕೃತಿಗಳಲ್ಲಿ ವಿರೂಪಾಕ್ಷನ ಕಲ್ಪನೆಯನ್ನು ಕುರಿತು ಸುದೀರ್ಘವಾಗಿ ವರ್ಣಿಸಿದ್ದಾನೆ. ಹಂಪೆಯರಸನ ರಗಳೆಯಲ್ಲಿ ವಿರೂಪಾಕ್ಷನನ್ನು ಕುರಿತು

ನಿತ್ಯ ಶ್ರೀಕಂಠ ಕಂಠಾಭರಣ ಕಿರಣ ಸಂಘಾತ ಸಂಬೂತ ಸೂತ್ರಾ
ದಿತ್ಯ ವ್ರಾತಾಂಗ ಗಂಗಾಧರ ಪುರಹರ ಭಾಳಾಕ್ಷ ಚಂಚದ್ಭವಾನೀ
ಪ್ರತ್ಯಕ್ಷ ಸ್ವಾಮಿ ಕಾಮಾಂತಕ ನಿಖಿಳ ಮಹಾಧಾರ ವಿಸ್ತೀರ್ಣ ಭಕ್ತ
ರ್ಗತ್ಯಂತ ಪ್ರೇಮಿ ಪಂಪಾಪುರದರಸ ವಿರೂಪಾಕ್ಷ
ಆಪುರದೊಳೊಪ್ಪುವ ಶಶಿಧರಂ ವಿಷಧರಂ
ಕಾಪಾಲಿ ದಕ್ಷನ ಧ್ವರಹರಂ ಪುರಹರಂ
ದುರಿತ ತಿಮಿರ ವ್ರಜ ದಿವಾಕರ ಭೀಕರಂ
ಸಕಳ ಚೈತನ್ಯ ವಿಸ್ತಾರಕಂ ಪ್ರೇರಕಂ
ಶರಣ ನಿಕರ ಸ್ತೋತ್ರ ಪೂಜಿತಂ ಯೋಜಿತಂ
ನಿಖಿಳ ಶಾಶ್ವತ ಶಿವ ಮಹೋನ್ನತಂ ಸನ್ನುತಂ
ನೆಲಸಿಪ್ಪನಖಿಲಗುರು ಪಂಪಾ ವಿರೂಪಾಕ್ಷ [2]

ವಿರೂಪಾಕ್ಷಾಷ್ಟಕದಲ್ಲಿ ವಿರೂಪಾಕ್ಷನನ್ನು ಕುರಿತು,

ಅವನ ನಯನದೊಳು ಹವಿ
ತ್ರಿಶೂಲದ ಪೆಣ
ಮತ್ತವನ ಶಿರದೊಳ್ಸುರನದ ಇದೇವ ವಿರೂಪಾಕ್ಷ...
ಎಂದು ವರ್ಣನೆ ಇದೆ.

ಗಿರಿಜಾಕಲ್ಯಾಣದಲ್ಲಿ ಹರಿಹರನು ತನ್ನ ಆರಾಧ್ಯ ದೈವ ಪಂಪಾಪುರದರಸ ವಿರೂಪಾಕ್ಷನನ್ನು ಅಷ್ಟತನು ಮೂರ್ತಿ ಸ್ವರೂಪದವನೆಂದು ಕೊಂಡಾಡಿದ್ದಾನೆ.

ಶ್ರೀಮಚ್ಛೈಲೇಂದ್ರ ಪುತ್ರೀ ಗುರುತರ ಹೃದಯ ಕ್ಷೀರವಾರಾಶಿ ಚಂದ್ರಂ
ವ್ಯೋಮಾರ್ಕೇಂದು ಕ್ಷಮಾತ್ಮಾನಲಜಲ ತಪಮಾನಾಷ್ಟ ಮೂರ್ತಿ ಪ್ರಸಿದ್ಧಂ[3]

ಹೈಮಾವತಿಯ ಪ್ರೇಮಲ ಹೃದಯವೆಂಬ ತಾಲ್ಗಡಲಿಗೆ ಚಂದ್ರನೂ, ನೆಲ,

---

[1] ಬಸವಣ್ಣನವರ ಷಟ್ಸ್ಥಲ ವಚನಗಳು (ಸಂ|| ಶಿ.ಶಿ.ಬಸವನಾಳ) ವ.ಸಂ. 393
[2] ಹರಿಹರನ ರಗಳೆಗಳು (ಸಂ. ಎಂ.ಎಂ. ಕಲಬುರ್ಗಿ) ಪು. 497, 510
[3] ಗಿರಿಜಾ ಕಲ್ಯಾಣ ಮಹಾಪ್ರಬಂಧ (ಸಂ. || ಎಂ.ಜಿ. ನಂಜುಂಡಾರಾಧ್ಯ) ಆ-1 ಪ.ಸಂ. 1

ನೀರು, ಬೆಂಕಿ, ಗಾಳಿ, ಬಯಲು, ರವಿ, ಶಶಿ ಮತ್ತು ಒಡೆಯರೆಂಬ ಎಂಟು ತನು ಮೂರ್ತಿಗಳಿಂದ ಪ್ರಸಿದ್ಧ ಸ್ವರೂಪವುಳ್ಳವನು ಆದ ಪಂಪಾ ವಿರೂಪಾಕ್ಷ ಹರಿಹರನು ವರ್ಣಿಸಿರುವ ಅಷ್ಟತನ ತತ್ವವನ್ನೊಳಗೊಂಡ ಶಿವನ ಶಿಲ್ಪವನ್ನು ಹಂಪೆಯಲ್ಲಿ ಮೊದಲ ಬಾರಿಗೆ ಸಂಶೋಧಕರು ಗುರುತಿಸಿದ್ದಾರೆ. ಶಿಲ್ಪ ಶೈಲಿಯ ದೃಷ್ಟಿಯಿಂದ ಈ ಶಿಲ್ಪವು 14 - 15ನೇ ಶತಮಾನದಲ್ಲಿ ರೂಪುತಳೆದಿರಬೇಕೆಂದು ಭಾವಿಸಿದ್ದಾರೆ[4]. ಈ ಶಿಲ್ಪವು ಪಂಪಾ ವಿರೂಪಾಕ್ಷನನ್ನು ಸಾಕಾರ ರೂಪದಲ್ಲಿ ಪ್ರತಿನಿಧಿಸುವಂತಹದ್ದಾಗಿದೆ.

ರಾಘವಾಂಕನು ಸೋಮನಾಥ ಚಾರಿತ್ರ ಕೃತಿಯಲ್ಲಿ ವಿರೂಪಾಕ್ಷನನ್ನು ಕುರಿತು,

> ಶ್ರೀಮಾಯಾವರನಿಂದುಧರನುಗ್ರನಭಯಂಕರ
> ಮಾಯೂರಿಭಕ್ತ ಭಯಹಾರಿ ಗಂಗಾವಾರಿ
> ಮಾಯುಭೂಗ್ಭೂಷನುತ್ತಮವೇಶನಘತಿಮಿರ ಪೂಷನ ತಿವಿಗತ ದೋಷ
> ಸ್ವಾಯುತಾಖಿಳ ಲೋಕದಾಸತ ವಜ್ರಪುಣ್ಯ ದಾಯಕಂ ಹರಿವಿರಂಚ್ಯಾದಿ
> ಪ್ರಮುಖ ದೇವರಾಯ ಪಂಪಾ ವಿರೂಪಾಕ್ಷ[5] ಎಂದು ವರ್ಣಿಸಿದ್ದಾನೆ.

ಈ ಸಾಹಿತ್ಯ ಕೃತಿಗಳಲ್ಲಿಯ ಉಲ್ಲೇಖಗಳಲ್ಲಿ ವಿರೂಪಾಕ್ಷನ ರೂಪವು ತ್ರಿನೇತ್ರ, ತ್ರಿಪುರಾರಿ ಗಂಗಾಧರ, ಕಾಪಾಲಿ, ಧಕ್ಷನ ದ್ವರ ಹರಂ ನಡುಗಣ್ಣನವ, ಕಾಮಾಂತಕ, ಪುರಹರ, ಭಾಳಾಕ್ಷ, ಅಷ್ಟತನುಮೂರ್ತಿ ಇತ್ಯಾದಿ ರೀತಿಯಲ್ಲಿ ವ್ಯಕ್ತವಾಗಿದೆ. ಸಾಹಿತ್ಯ ಕೃತಿಗಳಲ್ಲಿ ವರ್ಣಿತವಾಗಿರುವ ವಿರೂಪಾಕ್ಷನ ರೂಪಗಳು ಹಂಪೆಯ ವಿರೂಪಾಕ್ಷನಿಗೆ ಸಂಬಂಧ ಪಟ್ಟವುಗಳಾಗಿವೆ.

ವಿರೂಪಾಕ್ಷ ದೇವಾಲಯವು ಹಂಪೆಯಲ್ಲಿ ಯಾವಾಗ ಸ್ಥಾಪಿತವಾಯಿತೆಂದು ಹೇಳುವುದು ಕಷ್ಟವಾದರೂ, ಹನ್ನೆರಡನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಶಕ್ತಿ ಕೇಂದ್ರವಾಗಿದ್ದ ಹಂಪೆಯು ಶೈವ ಕ್ಷೇತ್ರವಾಗಿ ಪರಿಣಮಿಸಿದ್ದು ಆ ಅವಧಿಯಲ್ಲಿ ಸ್ಥಾಪಿತ ವಾಗಿರಬೇಕು ಎಂದೆನಿಸುತ್ತದೆ. ಹಂಪೆಯು ಪ್ರಾಚೀನ ಕಾಲದಿಂದಲೂ ವಿರೂಪಾಕ್ಷ ದೇವಾಲಯದ ಮೂಲಕ ಪ್ರಸಿದ್ಧ ಧಾರ್ಮಿಕ ನೆಲೆವೀಡಾಗಿದ್ದಿತು ಎಂಬುದು ಪುರಾತತ್ತ್ವ ಅವಶೇಷಗಳು ಹಾಗೂ ಸಾಹಿತ್ಯದಲ್ಲಿಯ ಪುರಾವೆಗಳಿಂದ ವಿದಿತವಾಗುತ್ತದೆ. ಹಂಪೆ ಯಲ್ಲಿ ವಿರೂಪಾಕ್ಷನು ನೆಲೆ ಊರಿದ್ದಾಗಿಲಿನಿಂದ ಜನತೆಯ ಜೀವನ ಶ್ರದ್ಧೆ ಹಾಗೂ ನಿಷ್ಠೆಗಳ ಪ್ರತೀಕವಾಗಿದ್ದಾನೆ. ಹಂಪೆಯ ವಿರೂಪಾಕ್ಷ ದೇವಾಲಯವು ಕಲ್ಯಾಣ ಚಾಲುಕ್ಯರು, ಹೊಯ್ಸಳರು, ವಿಜಯ ನಗರದರಸರು, ಸ್ಥಳೀಯ ಅರಸರು ಹಾಗೂ ಇಲ್ಲಿ ಯುವರೆವಿಗೂ ತನ್ನದೇ ಆದ ರೀತಿಯಲ್ಲಿ ಸಾಂಸ್ಕೃತಿಕವಾಗಿ ಹಾಗೂ ಧಾರ್ಮಿಕವಾಗಿ ಪ್ರಾಮುಖ್ಯತೆಯನ್ನು ಪಡೆದಿದೆ. ಈಗಿನ ವಿರೂಪಾಕ್ಷ ದೇವಾಲಯದ ಸಂಕೀರ್ಣದ

---

[4] *ಹಂಪೆಯಲ್ಲಿ ವೀರಶೈವ ಪ್ರಾಚೀನ ಕುರುಹುಗಳು. ಎನಗಿಂತ ಕಿರಿಯರಿಲ್ಲ (ಸಂ॥ ಬಸವ ರಾಜು ಮಲ್ಲಶೆಟ್ಟಿ) ಪು. 319*

[5] *ಸೋಮನಾಥ ಚಾರಿತ್ರ (ಸಂ॥ ಆರ್.ಸಿ.ಹಿರೇಮಠ, ಎಂ.ಎಸ್. ಸುಂಕಾಪುರ) ಸ್ಥ.1 ಪ,ಸಂ.6*

ವಿವಿಧ ಭಾಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ದೇವಾಲಯದ ವಿವಿಧ ಭಾಗಗಳು ವಿವಿಧ ಅರಸು ಮನೆತನಗಳ ಕಾಲದಲ್ಲಿ ಕ್ರಿ.ಶ. 7ನೇ ಶತಮಾನದಿಂದೀಚೆಗೆ ವಿಭಿನ್ನ ಕಾಲಗಳಲ್ಲಿ ನಿರ್ಮಾಣವಾಗಿರುವುದು ಹಾಗೂ ಕೆಲಭಾಗಗಳು ಜೀರ್ಣೋದ್ಧಾರ ಗೊಂಡಿರುವುದು ಕಂಡುಬರುತ್ತದೆ.

ಹಂಪೆಯು ಪೂರ್ಣಕಾಲದಿಂದಲೂ ಪಂಪಾಕ್ಷೇತ್ರ, ಪಂಪಾಪುರ, ಪಂಪಾಪಟ್ಟಣ, ಪಂಪಾತೀರ್ಥ ಎಂದು ಶಾಸನ, ಕಾವ್ಯಗಳಲ್ಲಿ ಕರೆಯಲ್ಪಟ್ಟಿದೆ. ಪಂಪಾಕ್ಷೇತ್ರ ಎಂದರೆ ಈಗಿನ ವಿರೂಪಾಕ್ಷ ದೇವಾಲಯದ ಸುತ್ತಲ ಪ್ರದೇಶಗಳೇ ಆಗಿವೆ. ಕ್ರಿ.ಶ. 1199ರ ಶಾಸನದಲ್ಲಿಯ ವಿವರದ ಪ್ರಕಾರ 'ಪಂಪಾತೀರ್ಥ ಪ್ರದೇಶವನ್ನು ವಿರೂಪಾಕ್ಷ ಸೀಮೆ' ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ. ಈಗಿನ ಚಕ್ರತೀರ್ಥವೆಂದು ಕರೆಯುವ ಭಾಗವು ಕಾವ್ಯ - ಶಾಸನಗಳಲ್ಲಿ ಉಲ್ಲೇಖವಾಗಿರುವ ಪಂಪಾತೀರ್ಥವಾಗಿದೆ. ಈಗಲೂ ಚಕ್ರ ತೀರ್ಥ ಪ್ರದೇಶದ ಬಳಿ ಇರುವ ಪ್ರದೇಶವೇ ವಿರೂಪಾಕ್ಷ ದೇವರಿಗೆ ಪವಿತ್ರವಾದ ಸ್ಥಳವಾಗಿ ಕಂಡುಬರುತ್ತದೆ. ಚಕ್ರತೀರ್ಥದ ಬಳಿಯೇ ವಿರೂಪಾಕ್ಷನ ಫಲಪೂಜೆಯು ನಡೆಯುತ್ತಿದ್ದು ಇದು ಹಿಂದಿನಿಂದಲೂ ಹಂಪಿಯಲ್ಲಿ ವಿರೂಪಾಕ್ಷನ ಪೂಜೆಯಲ್ಲಿಯ ಬಹುಮುಖ್ಯವಾದ ಆಚರಣೆಯಾಗಿದೆ. ಈ ಪ್ರದೇಶವೇ ವಿಜಯನಗರ ಪೂರ್ವದಲ್ಲಿಯ ಪಂಪಾಕ್ಷೇತ್ರವಾಗಿದ್ದಿತು. ಈ ಪಂಪಾಕ್ಷೇತ್ರದ ಅರಸ, ಒಡೆಯನಾಗಿ ವಿರೂಪಾಕ್ಷ ಪ್ರಸಿದ್ಧಿಯನ್ನು ಪಡೆದಿದ್ದು ವಿಜಯನಗರ ಪೂರ್ವದಲ್ಲಿಯೇ ವಿರೂಪಾಕ್ಷನು ಜನತೆಯ ಆರಾಧ್ಯ ದೈವವಾಗಿದ್ದನು. ವಿರೂಪಾಕ್ಷನ ಮಹಿಮೆಯಿಂದಲೇ ಹಂಪೆಯೂ ಪ್ರಸಿದ್ಧಿಯನ್ನು ಪಡೆಯಿತೆಂದು ಹೇಳಬಹುದು. ಹರಿಹರನ ಏಕಾಂತರಾಮಿತಂದೆ ರಗಳೆಯಲ್ಲಿ ಜೈನರ ವಿರುದ್ಧ ಪಣವೊಡ್ಡಿ ಶಿರವನ್ನರಿದು ಕೊಂಡ ಏಕಾಂತರಾಮಯ್ಯನ ರುಂಡವನ್ನು ಅಗ್ಗಣಿಯ ಹೊನ್ನಿತಂದೆಗಳು, ಅಗ್ಗಳೆಯ ದೇವರಸರು ಮತ್ತು ಇತರೆ ಶರಣರ ಜೊತೆ ಹೊನ್ನ ಹರಿವಾಣದಲ್ಲಿಟ್ಟುಕೊಂಡು ಪುಲಿಗೆರೆಯ ಸೋಮನಾಥ, ಅಣ್ಣಿಗೆರೆಯ ಅಮೃತನಾಥ, ಕೆಂಭಾವಿಯ ಭೋಗನಾಥ, ಕಪ್ಪಡಿಯ ಸಂಗಮೇಶ, ಆವುಂದದ ನಾಗನಾಥ, ಹಂಪೆಯ ವಿರೂಪಾಕ್ಷ ಮೊದಲಾದ ಶೈವಕ್ಷೇತ್ರಗಳಲ್ಲಿ ಮೆರೆಸಿ ಅಬ್ಬಲೂರಿನ ಬ್ರಹ್ಮೇಶ್ವರ ದೇವಾಲಯಕ್ಕೆ ತರುತ್ತಾರೆಂಬ ಉಲ್ಲೇಖ ಇದೆ[6]. ಈ ಕ್ಷೇತ್ರಗಳು ಆಗಿನ ಕಾಲಕ್ಕೆ ಪ್ರಸಿದ್ಧ ಶೈವ ಕ್ಷೇತ್ರಗಳಾಗಿದ್ದಂತೆ ಕಂಡು ಬರುತ್ತವೆ. ಹನ್ನೆರಡನೇ ಶತಮಾನದ ವೇಳೆಗಾಗಲೇ ಹಂಪೆಯ ವಿರೂಪಾಕ್ಷ ದೇವಾಲಯವು ಪ್ರಸಿದ್ಧ ಶೈವ ಕ್ಷೇತ್ರವಾಗಿ ಪ್ರಸಿದ್ಧಿ ಹೊಂದಿತ್ತು ಎಂಬುದು ವ್ಯಕ್ತವಾಗುತ್ತದೆ.

ಹಂಪೆಯಲ್ಲಿ ವಿರೂಪಾಕ್ಷ ಹೆಸರಿನ ದೇವಾಲಯದ ಪ್ರಸ್ತಾಪ ಶಾಸನಗಳಲ್ಲಿ ಕಂಡುಬರುವುದರ ಜೊತೆಯಲ್ಲಿಯೇ ರಾಣಿಬೆನ್ನೂರು ತಾಲ್ಲೂಕಿನ ಇಟಗಿ ಹರಪನಹಳ್ಳಿ,

---

[6] *ಹರಿಹರದೇವ ಕೃತ ನೂತನ ಪುರಾತನ ರಗಳೆಗಳು (ಸಂ।।ಎಂ.ಎಸ್. ಸುಂಕಾಪುರ) ಪು. 351*

ತಾಲ್ಲೂಕಿನ ಬೆಣ್ಣೆಹಳ್ಳಿ ಬಳ್ಳಾರಿ ತಾಲ್ಲೂಕಿನ ಓರ್ವಾಯಿಗಳಲ್ಲಿಯೂ ವಿರೂಪಾಕ್ಷ ಹೆಸರಿನ ದೇವಾಲಯಗಳು ಸ್ಥಾಪಿತವಾಗಿದ್ದವು ಎಂಬುದು ಶಾಸನೋಕ್ತ ಸಂಗತಿಗಳಿಂದ ವ್ಯಕ್ತ ವಾಗುತ್ತದೆ. ತುಂಗಭದ್ರಾ ಪರಿಸರದಲ್ಲಿಯೇ ಈ ದೇವಾಲಯಗಳು ಸ್ಥಾಪಿತ ವಾಗಿರುವುದು ಗಮನಿಸತಕ್ಕ ಸಂಗತಿಯಾಗಿದೆ. ಕ್ರಿ.ಶ. 1069ರ ಶಾಸನದ ಪ್ರಕಾರ ನೂಱುಂಬಾಡದ ಮನ್ನೆಯತನವನ್ನು ಮಾಡುತ್ತಿದ್ದ ವ್ಯಕ್ತಿಯೊಬ್ಬ ಇಟ್ಟಿಗೆಯ ವಿರೂಪಾಕ್ಷ ದೇವರಿಗೆ ಸ್ನಾನ ನಿವೇದಕ್ಕೆ ಭೂದಾನ ನೀಡಿದ್ದು ತಿಳಿದು ಬರುತ್ತದೆ[7]. ಕ್ರಿ. ಶ. 1149 ಓರ್ವಾಯಿ ಶಾಸನದಲ್ಲಿಯ ಉಲ್ಲೇಖದ ಪ್ರಕಾರ ಕಲ್ಯಾಣ ಚಾಲುಕ್ಯದೊರೆ ಇಮ್ಮಡಿ ಜಗದೇಕಮಲ್ಲನ ಕಾಲದಲ್ಲಿ ದೊರೆವದಿ ನಾಡಿನ ಕಾಚರಸ, ಗಂಗರಸರಲ್ಲದೆ ಇಮ್ಮಡಿ ರಾಚಮಲ್ಲನ ಮಹಾ ಪ್ರಧಾನನಾದ ಕಪ್ಪೆಯರಾಹಾರದಾನ ವಿನೋದಿಯಾದ ಲಖ್ಖೆಯ ನಾಯಕನು ಮತ್ತವನ ತಮ್ಮಂದಿರಾದ ಮಾದೆಯ ನಾಯಕ, ವಿರುಪೆಯ ನಾಯಕ, ಆಚೆಯ ನಾಯಕರು ದೊರೆವದಿನಾಡಿನ ಎಪ್ಪತ್ತರ ಪ್ರಭು ಗಾವುಂಡುಗಳು, ಮೂಲಿಗರು, ಎಂಟು ಹಿಟ್ಟುಗಳು ಸೇರಿ ಕುತ್ತುಕನೂರಲ್ಲಿ ವಿರೂಪಾಕ್ಷ ದೇವಾಲಯ ಗಳನ್ನು ಕಟ್ಟಿಸಿ ಓರುವಾಯಿಯ ಚಳೇಶ್ವರ ಪಂಡಿತನ ಮಗ ಭೀಮರಾಶಿ ಪಂಡಿತನ ಕಾಲು ತೊಳೆದು ದಾನ ನೀಡಿದ ಸಂಗತಿ ವ್ಯಕ್ತವಾಗಿದೆ[8]. ಬೆಣ್ಣೆಹಳ್ಳಿ ಶಾಸನವು ಕ್ರಿ.ಶ. 1148ರ ಕಾಲಕ್ಕೆ ಪಂಪಾಪತಿ ಅಥವಾ ವಿರೂಪಾಕ್ಷ ದೇವಾಲಯವು ಕಲ್ಯಾಣ ಚಾಲುಕ್ಯ ಇಮ್ಮಡಿ ಜಗದೇಕಮಲ್ಲನ ಕಾಲದಲ್ಲಿ ನಿರ್ಮಾಣಗೊಂಡಿದ್ದನ್ನು ದಾಖಲಿಸಿದೆ[9]. ಶಾಸ ನದಲ್ಲಿ ಈ ದೇವಾಲಯವನ್ನು ಸ್ವಯಂಭು ವಿರೂಪಾಕ್ಷನೆಂದೇ ಕರೆದಿದೆ. ಇತ್ತೀಚಿನ ಆಧಾರಗಳ ಪ್ರಕಾರ ಮೇಲ್ಕಂಡ ಸ್ಥಳಗಳಲ್ಲಿಯ ವಿರೂಪಾಕ್ಷ ದೇವಾಲಯಕ್ಕಿಂತ ಹಂಪೆ ಯ ವಿರೂಪಾಕ್ಷ ದೇವಾಲಯವೇ ಅತೀ ಪ್ರಾಚೀನ ಎಂಬುದು ವ್ಯಕ್ತವಾಗಿದೆ.

ಪಂಪಾಕ್ಷೇತ್ರವು ಪ್ರಾಚೀನ ಪುಣ್ಯಕ್ಷೇತ್ರವಾಗಿದ್ದುದರಿಂದ ಪೂರ್ವದಿಂದಲೂ ದೇವಾಲಯಗಳು ಸ್ಥಾಪಿತಗೊಂಡಿದ್ದವು ಎಂದೇಳಬಹುದು. ಈಗಿನ ಹಂಪೆಯ ಅವಶೇಷಗಳಲ್ಲಿ ಸಂಶೋಧಕರು ಅಭಿಜ್ಞಿಸಿರುವ ಪ್ರಕಾರ ದೇವಾಲಯ ಪ್ರದೇಶದ ಪರಿಸರದಲ್ಲಿ ಅಂದು ತುಂಗಭದ್ರಾ ನದಿಯ ಬಲತಡಿಯಲ್ಲಿ ದೇವಾಲಯಗಳ ರಚನೆ ಸ್ಪರ್ಧಾತ್ಮಕ ರೀತಿಯಲ್ಲಿ ನಡೆದಿರುವುದು ದೇವಾಲಯಗಳ ಅವಶೇಷಗಳಿಂದ ವಿದಿತ ವಾಗುತ್ತದೆ. ಅದರಲ್ಲಿಯೂ ಪ್ರಾಚೀನ ದೇವಾಲಯಗಳು ಹೇಮಕೂಟ ಪ್ರದೇಶದಲ್ಲಿ ರಚಿತವಾಗಿವೆ.ಹೇಮಕೂಟದಲ್ಲಿಯ ಕೆಲವು ದೇವಾಲಯಗಳ ಕಟ್ಟಡಗಳು ಕಾಲದಿಂದ ಕಾಲಕ್ಕೆ ಬದಲಾವಣೆಗೊಳಗಾಗಿವೆ. ಬಾದಾಮಿ ಚಾಲುಕ್ಯದೊರೆ ವಿನಯಾದಿತ್ಯನ

---

[7] ಇತಿಹಾಸ ದರ್ಶನ)ಸಂ//ಎಂ.ಜಿ. ನಾಗರಾಜು, ಪಿ.ವಿ. ಕೃಷ್ಣಮೂರ್ತಿ) ಸಂ. 13, ಪು. 100

[8] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ -1 ಬಳ್ಳಾರಿ ಶಾ.ಸಂ. 40, ಪು. 54

[9] ಅದೇ ಹರಪನಹಳ್ಳಿ ಶಾ.ಸಂ. 199, ಪು. 643- 644

ಕಾಲದ ಕ್ರಿ.ಶ. 689ರ ತಾಮ್ರ ಶಾಸನವು ಹಂಪೆಯನ್ನು ಪಂಪಾತೀರ್ಥ ಎಂದು ಕರೆದಿದ್ದು ಈ ಶಾಸನದ ಕಾಲಕ್ಕೆ ಹಂಪೆಗೆ ಪಂಪಾತೀರ್ಥವೆಂಬ ಪರ್ಯಾಯ ಹೆಸರು ಇತ್ತು ಎಂಬುದು ವ್ಯಕ್ತವಾಗಿದೆ. ಕೆಂಪು ಉಸುಗು ಮರಳಗಲ್ಲಿನ ಕೆಲವು ದೇವಾಲಯಗಳು ಹೇಮಕೂಟ ಪರಿಸರದಲ್ಲಿ ಕ್ರಿ.ಶ. 7ನೇ ಶತಮಾನದ ವೇಳೆಗೆ ರಚಿತವಾಗಿದ್ದವು ಎಂಬುದಾಗಿ ವಾಸ್ತುಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಕ್ರಿ.ಶ. 1018ರ ಬಾಗಳಿ ಶಾಸನದಲ್ಲಿಯ 'ಉದಯಾದಿತ್ಯ ದೇವರ್ಪಂಪಾಪುರದ ತೀರ್ಥಕ್ಕೆ ಬಿಜಯಂಗೆಯ್ದು' ಎಂಬ ಉಲ್ಲೇಖದಿಂದ[10] ನೊಳಂಬ ದೊರೆ ಪಂಪಾತೀರ್ಥಕ್ಕೆ ಭೇಟಿ ನೀಡಿದ್ದ ಎಂಬುದು ತಿಳಿದುಬರುತ್ತದೆ. ಈ ವೇಳೆಗಾಗಲೇ ಪಂಪಾತೀರ್ಥದಲ್ಲಿ ದೇವಾಲಯಗಳು ಸ್ಥಾಪಿತ ವಾಗಿದ್ದವೆಂದು ಹೇಳಬಹುದು. ವಿರೂಪಾಕ್ಷ ದೇವಾಲಯದ ಸಂಕೀರ್ಣದಲ್ಲಿಯ ದುರ್ಗಾದೇವಾಲಯದಲ್ಲಿನ ಕ್ರಿ.ಶ. 1199ರ ಶಾಸನವು ವಿರೂಪಾಕ್ಷನ ಉಲ್ಲೇಖ ಮಾಡಿದ್ದು ಶಾಸನದಲ್ಲಿಯ[11] ವಿವರದ ಪ್ರಕಾರ 2ನೇ ರಾಚಮಲ್ಲನ ಅಮಾತ್ಯನಾದ ವೀರ ಕಲಿದೇವರಸ ಕುರುಗೋಡಿನಲ್ಲಿ ಆಳ್ವಿಕೆ ನಡೆಸುತ್ತಿದ್ದಾಗ ವಿರೂಪಾಕ್ಷ ತೀರ್ಥ ರಕ್ಷಣಾರ್ಥ ಸಾಮಂತ ಮಾದೆಯ ನಾಯಕಂ ಮತಂಗ ಪರ್ವತಮಂ ಪ್ರತಿಪಾಳಿಸುತ್ತ ಮಿರೆ ಇವನ ಮೈದುನ ಚೌಡಯ್ಯನು ವಿರೂಪಾಕ್ಷ ದೇವಾಲಯಕ್ಕೆ ಸೇರಿದಂತೆ ಪಂಪಾದೇವಿಗೆ ಚಿನ್ನದ ಕಲಶ ಹಾಗೂ ಪೂಜಾ ಪರಿಕರಗಳನ್ನು ಮಾಡಿಸಿಕೊಡುತ್ತಾನೆ. ಅಲ್ಲದೆ ಈ ಶಾಸನದಲ್ಲಿ ಹೇಮಕೂಟದಲ್ಲಿ ನೆಲೆಸಿರುವ ವಿರೂಪಾಕ್ಷನನ್ನು

> 'ಶ್ರೀ ಮದ್ಗೌರೀ ಸಮೇತಂ ನೆಲಸಿರಲಿದು ತಾಂ ತಕ್ಕುದೀ ಪುಣ್ಯ ತೀರ್ತ್ಥ
> ಶ್ರೀ ಮೆಯ್ವೆತ್ತೊಪ್ಪುವೀ ಹೇಮಶಿಲೆಯಿದೆನುತಂ ತಚ್ಚಿಳೇಂದ್ರಾಗ್ರ ಮಂದುಂ
> ಧಾಮನ್ತಾನಾಗೆ ಸನ್ತಂ ನೆಲಸಿ ಸೊಗಯಿಪಾ ಶ್ರೀವಿರೂಪಾಕ್ಷದೇವಂ'

ಎಂದು ವರ್ಣಿಸಿದೆ. ಈ ಶಾಸನದಲ್ಲಿಯ ಮಾಹಿತಿಯಿಂದ ಕ್ರಿ.ಶ. 1199ಕ್ಕಿಂತ ಪೂರ್ವ ದಲ್ಲಿಯೇ ಹಂಪೆಯಲ್ಲಿ ವಿರೂಪಾಕ್ಷ ದೇವಾಲಯ ಸ್ಥಾಪಿತವಾಗಿತ್ತು ಎಂಬುದು ತಿಳಿದು ಬರುತ್ತದೆ. ಎಷ್ಟು ಮೊದಲು ಎಂಬುದಕ್ಕೆ ಕುಷ್ಟಗಿ ತಾ|| ಪುರದ ಶಾಸನ ಆಧಾರ ಒದ ಗಿಸಿದೆ. ಕ್ರಿ.ಶ. 1018ರ ಪುರದ ಶಾಸನದಲ್ಲಿಯ [12] ಪ್ರಕಾರ ಚಾಳುಕ್ಯ ಜಗದೇಕಮಲ್ಲನ ದಂಡನಾಯಕನು ಕೆಳವಡಿ -300ನ್ನು ಆಳುತ್ತಿದ್ದಾಗ ಅಗ್ರಹಾರ ಬೈಳೆನೆಗೆಯೂರಿನ ಒಡೆಯ ಕೊಣ್ಡಯವಾರಿ ಅಯ್ಯಣಯ್ಯಂಗೆ 'ಪಂಪಾಸ್ಥಾನ ವಿರೂಪಾಕ್ಷ ದೇವರ ಸನ್ನಿ ಧಾನದೊಳ್' 5 ಮತ್ತರು ಗದ್ದೆಯನ್ನು ದಾನವಾಗಿ ನೀಡಿದ ವಿಷಯ ವ್ಯಕ್ತವಾಗಿದೆ. ಕ್ರಿ.ಶ. 1018ರ ಪುರದ ಶಾಸನವೇ ಹಂಪೆಯ ವಿರೂಪಾಕ್ಷನನ್ನು ಉಲ್ಲೇಖಿಸುವ ಪ್ರಥಮ ಶಾಸನವಾಗಿದೆ. ಹೀಗಾಗಿ ಕ್ರಿ.ಶ. 1018ರ ವೇಳೆಗಾಗಲೇ ಹಂಪೆಯಲ್ಲಿ ವಿರೂಪಾಕ್ಷ

---

[10] *ಅದೇ ಹರಪನಹಳ್ಳಿ ಶಾ.ಸಂ. 136, ಪು. 604*

[11] *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - 3 ಹಂಪೆಯ ಶಾಸನಗಳು , ಸಂ. 55 ಪು.46*

[12] *ಅದೇ ಸಂ.ಪು. 2 ಕುಷ್ಟಗಿ ಶಾ.ಸಂ. 18, ಪು. 297*

ದೇವಾಲಯವು ಸ್ಥಾಪಿತವಾಗಿದ್ದು ಧಾರ್ಮಿಕ ವ್ಯಕ್ತಿಗಳಿಗೆ ತನ್ನ ಸನ್ನಿಧಾನದಲ್ಲಿ ದತ್ತಿಯನ್ನು ಅರಸರುಗಳು ಬಿಡುವಷ್ಟರಮಟ್ಟಿಗೆ ಪ್ರಸಿದ್ಧಿಯನ್ನು ಪಡೆದಿತ್ತು. ಕ್ರಿ.ಶ. 1163ರ ಕುಕನೂರ ಶಾಸನದಲ್ಲಿ[13](ಬಿಜ್ಜಳನ ಕಾಲ) ಮಹಾಪ್ರದಾನ ದಂಡನಾಯಕ ಬಲದೇವಯ್ಯ ಮತ್ತವನ ಕರಣಗಳು ಬಿಜ್ಜಳದೇವನಲ್ಲಿ ಬಿನ್ನಹವನ್ನು ಮಾಡಿಕೊಂಡು ಕುಕ್ಕನೂರ - 30ರ ಶ್ರೀಮಂತ ಗ್ರಾಮವಾದ ಎಡೆಹಳ್ಳಿಯನ್ನು ಸರ್ವಬಾಧಾ ಪರಿಹಾರವಾಗಿ ಹಂಪೆಯ ವಿರೂಪಾಕ್ಷ ದೇವರ ಸನ್ನಿಧಿಯಲ್ಲಿ ಪುನರ್ದತ್ತಿಯಾಗಿ ಪಡೆದು ಮಲ್ಲಿಕಾರ್ಜುನ ದೇವರಿಗೆ ಹಾಗೂ ಬ್ರಾಹ್ಮಣರಿಗೆ ದಾನ ನೀಡಿದ ವಿವರ ವ್ಯಕ್ತವಾಗಿದೆ. ಕ್ರಿ.ಶ. 1163ರ ವೇಳೆಗಾಗಲೇ ಹಂಪೆಯ ವಿರೂಪಾಕ್ಷನ ಸನ್ನಿಧಿಯಲ್ಲಿ ಪುನರ್ದತ್ತಿಯಾಗಿ ನೀಡುವಷ್ಟರ ಮಟ್ಟಿಗೆ ಖ್ಯಾತಿ ಪಡೆದಿತ್ತು ಎಂಬುದು ವ್ಯಕ್ತವಾಗುತ್ತದೆ. ಈಗಿನ ವಿರೂಪಾಕ್ಷ ದೇವಾಲಯದ ಸುತ್ತಲು ಮೌಲ ಪ್ರಾಚೀನ ದೇವಾಲಯಗಳು ಹಾಗೂ ಮನ್ಮುಖ ತೀರ್ಥ ಇರುವುದರಿಂದ ಅದುವೇ ವಿರೂಪಾಕ್ಷ ದೇವಾಲಯ ಆಗಿದ್ದು ಉಳಿದವು ನಂತರದ ಬೆಳವಣಿಗೆಗಳಾಗಿವೆ.

ಕ್ರಿ.ಶ. 1199ರ ಶಾಸನದ ಪ್ರಕಾರ ಕುರುಗೋಡಿನ ದೊರೆಗಳು ಹಂಪೆಯಲ್ಲಿ ತಮ್ಮ ಸೈನ್ಯವನ್ನು ವಿರೂಪಾಕ್ಷ ತೀರ್ಥ ರಕ್ಷಣಾರ್ಥವಾಗಿ ಇಟ್ಟಿದ್ದನ್ನು, ಸೈನ್ಯದ ಮುಖಂಡರು ಮತಂಗ ಪರ್ವತದಲ್ಲಿ ನೆಲೆಸಿದ್ದನ್ನು ಹೇಳುತ್ತದೆ. ಈ ಸಂಗತಿಗಳು ಹಂಪೆಯನ್ನು ರಕ್ಷಿಸುವ ಹೊಣೆಯು ಕುರುಗೋಡಿನ ದೊರೆಗಳದಾಗಿತ್ತು ಎಂಬುದಾಗಿ ತಿಳಿದು ಬರುತ್ತದೆ. ಹಂಪೆಯನ್ನು ವಿರೂಪಾಕ್ಷ ತೀರ್ಥ ಎಂದು ಕರೆಯುವುದು ಆ ವೇಳೆಗಾಗಲೇ ವಿರೂಪಾಕ್ಷ ಅಲ್ಲಿಯ ಜನಮನದ ಆರಾಧ್ಯ ದೈವವಾಗಿದ್ದನ್ನು ಸೂಚಿಸುತ್ತದೆ. ಹಂಪೆಯನ್ನು ರಕ್ಷಿಸುವ ಕಾರ್ಯದಲ್ಲಿ ಬಾಗಿಯಾಗಿರಲು ಕಾರಣ ಬಹುಶಃ ಹಂಪೆಯ ನಿಜವಾದ ಒಡೆಯ ವಿರೂಪಾಕ್ಷನೇ ಎಂದು ಆ ಪ್ರದೇಶದ ಜನತೆ ಮಾನ್ಯ ಮಾಡಿದ್ದುದು. ಹಂಪೆಯ ಪರಿಸರದ ಗದ್ದೆ ತೋಟಗಳು ಆಡಳಿತ ಇತ್ಯಾದಿಗಳ ಉಸ್ತುವಾರಿಯನ್ನು ಕುರುಗೋಡು ದೊರೆಗಳ ಆಯಾ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರೂ ಇಡೀ ಪಂಪಾಪುರ ಪ್ರದೇಶದ ನಿಜವಾದ ರಾಜ ವಿರೂಪಾಕ್ಷ ಸ್ವಾಮಿಯೇ ಎಂಬಂತೆ ಭಾವಿಸಲಾಗಿತ್ತು. ವಿರೂಪಾಕ್ಷನೇ ಹಂಪೆಯ ಸಾಮ್ರಾಟನೆಂಬ ಪರಿಕಲ್ಪನೆ ತಾತ್ವಿಕ ಮಟ್ಟದಲ್ಲಿ ನಂಬಿಕೆಯ ಮಟ್ಟದಲ್ಲಿ ಎಂಬುದುದರಿಂದ ಮಥಿತವಾಗುತ್ತದೆ[14].

ವಿರೂಪಾಕ್ಷ ದೇವಾಲಯವು ವಿಜಯನಗರ ಅರಸರುಗಳಿಂದ ಪೂರ್ವದಲ್ಲಿಯೇ ಜನತೆಯ ಆರಾಧ್ಯ ದೈವವಾಗಿತ್ತು. ವಿರೂಪಾಕ್ಷ ದೇವಾಲಯದಲ್ಲಿ ಇಂದು ಪ್ರಾಚೀನ ವಾಸ್ತುಶಿಲ್ಪದ ಕುರುಹುಗಳು ಕಾಣದಿರುವುದಕ್ಕೆ ನಂತರ ಕಾಲದಲ್ಲಿ ಅದರಲ್ಲಿಯೂ

[13] *ಅದೇ ಶಾಸನ ಸಂ. 2 ಯಲಬುರ್ಗಾ ಶಾ.ಸಂ. 40 ಪು. 208*

[14] *ಎಂ . ಚಿದಾನಂದಮೂರ್ತಿ ಹೊಸತು ಹೊಸತು, ಪು. 473*

ವಿಜಯ ನಗರದ ಅರಸರ ಕಾಲದಲ್ಲಿ ಹಲವಾರು ಮಾರ್ಪಾಡುಗಳಿಗೆ ಒಳಗಾದುದು ಹಾಗೂ ಹಲವಾರು ಹೊಸ ಭಾಗಗಳು ಸೇರ್ಪಡೆಗೊಂಡು ವಿಸ್ತಾರಗೊಳ್ಳುತ್ತ ಸಂಕೀರ್ಣ ದೇವಾಲಯವಾಗಿ ಪರಿಣಮಿಸಿರುವುದು ವಿಜಯನಗರ ಸಾಮ್ರಾಜ್ಯ ಉದಯಗೊಳ್ಳುವ ಪೂರ್ವದಲ್ಲಿಯೇ ವಿರೂಪಾಕ್ಷನ ಸಾನ್ನಿಧ್ಯದಿಂದ ಹಂಪೆಯು ಶೈವ ಕ್ಷೇತ್ರ ಹಾಗೂ ವಿದ್ಯಾಕೇಂದ್ರವಾಗಿದ್ದು ಸಾಂಸ್ಕೃತಿಕ ಕೇಂದ್ರ ಎನಿಸಿ 'ವಿಜಯ ವಿರೂಪಾಕ್ಷಪುರ' ಹೆಸರಿನಿಂದ ಗುರುತಿಸಲ್ಪಟ್ಟಿತ್ತು.

12ನೇ ಶತಮಾನದ ಕೊನೆಯ ಭಾಗಕ್ಕಾಗಲೇ ಹಂಪೆಯ ವಿರೂಪಾಕ್ಷ ದೇವರ ಪೂಜೆಗೋಸ್ಕರ ಮೀಸಲಾಗಿ ಹೂದೋಟ (ದೇವತೋಟ) ಇದ್ದುದಾಗಿ ತಿಳಿದು ಬರುತ್ತದೆ. ವಿರೂಪಾಕ್ಷನ ಪೂಜೆಗೋಸ್ಕರ ಈ ಹೂದೋಟವನ್ನು ನಿರ್ಮಾಣ ಮಾಡಿದವರು ವಿರೂಪಾಕ್ಷ ತೀರ್ಥದ ಸಂರಕ್ಷಣೆಗಾಗಿಯೇ ಕುರುಗೋಡು ದೊರೆಗಳು ನೇಮಿಸಿದ್ದ ನಾಯಕ ತಾಳೆಗಾರ ಮನೆತನದವರು. ಹಂಪೆಯ ಸಂರಕ್ಷಣೆಗಾಗಿಯೇ ನೇಮಕವಾಗಿದ್ದ ನಾಯಕರ ಹೆಸರಿನ ದೇವತೋಟವು ಹಂಪೆಯ ವಿರೂಪಾಕ್ಷ ಸ್ವಾಮಿಯದ್ದೇ ಆಗಿತ್ತೆಂಬುದು ಸ್ಪಷ್ಟವಾಗುತ್ತದೆ[15]. ಶಾಸನದಲ್ಲಿ ಉಲ್ಲೇಖಿತವಾಗಿರುವ ವಿರೂಪಾಕ್ಷ ಸ್ವಾಮಿಗೆ ಹೂವನ್ನು ಒದಗಿಸುತ್ತಿದ್ದ ನಾಯಕರ ದೇವತೋಟವು ಹರಿಹರನ ಪುಷ್ಪರಗಳೆಯಲ್ಲಿ ಸೂಚಿತವಾಗಿರುವ ಹೂದೋಟವು ಆಗಿದ್ದಿರಬಹುದು ಎಂದೆನಿಸುತ್ತದೆ. ಕ್ರಿ.ಶ.1199ರ ಶಾಸನದಲ್ಲಿ ಬರುವ ಹೂದೋಟ ಹಾಗೂ ಅಡಕೆ ತೋಟದ ಪ್ರದೇಶವು ಆ ಕಾಲದಲ್ಲಿ ವಿರೂಪಾಕ್ಷ ಸ್ವಾಮಿಗೆ ಸೇರಿತ್ತು ಎಂಬುದಾಗಿ ಊಹಿಸಬಹುದಾಗಿದೆ.

ಹನ್ನೆರಡು ಹಾಗೂ ಹದಿಮೂರನೇ ಶತಮಾನಗಳಲ್ಲಿ ವಿರೂಪಾಕ್ಷನ ಆವಾಸ ಸ್ಥಾನವಾದ ಹಂಪೆಯು ಧಾರ್ಮಿಕ ಗ್ರಂಥ ರಚನಾತ್ಮಕ ಕಾರ್ಯ ನಿರ್ವಹಣೆಯ ಪ್ರಮುಖ ಸ್ಥಾನವಾಗಿದ್ದಿತು. ವೀರಶೈವ ಧರ್ಮದ ಅನುಯಾಯಿಗಳಾಗಿದ್ದ ಕುರು ಗೋಡಿನ ಅರಸರ ಪ್ರೋತ್ಸಾಹದಿಂದಾಗಿ ಶರಣರನ್ನು ಆಕರ್ಷಿಸಿತು. ಈ ನಿಟ್ಟಿನಲ್ಲಿ ಹರಿಹರ ಮೊದಲಿಗನಾಗಿ ಕಂಡುಬರುತ್ತಾನೆ. ಹರಿಹರನು ತನ್ನ ಗುರು ಪರಂಪರೆಯನ್ನು ಹೇಳಿಕೊಂಡಿರುವುದನ್ನು ನೋಡಿಕೊಂಡರೆ ಹರಿಹರನಿಗಿಂತ ಪೂರ್ವದಲ್ಲಿಯೇ ವೀರಶೈವ ಮಠಗಳು , ಗುರುಕುಲಾಶ್ರಮಗಳು ಇದ್ದವು ಎಂಬುದು ವ್ಯಕ್ತವಾಗುತ್ತದೆ.

ಹೊಯ್ಸಳ ದೊರೆ ನರಸಿಂಹನ ಆಸ್ಥಾನದಲ್ಲಿ ಕರಣಿಕನಾಗಿದ್ದ ಹರಿಹರನು ರಾಜ ಸೇವೆಯನ್ನು ತ್ಯಜಿಸಿ ಜಿಗುಪ್ಸೆಗೊಂಡು ಹಂಪೆಗೆ ಹಿಂದಿರುಗಿದನೆಂದು ಪ್ರತೀತಿ ಇದೆ. ತನ್ನ ಆರಾಧ್ಯದೈವ ಹಂಪೆಯ ವಿರೂಪಾಕ್ಷನ ಸೇವೆಯಲ್ಲಿ ತನ್ನನ್ನು ಅರ್ಪಿಸಿಕೊಂಡು ಗ್ರಂಥರಚನೆಯಲ್ಲಿ ತೊಡಗಿದ್ದುದು ತಿಳಿದುಬರುತ್ತದೆ. ವೀರಶೈವ ಧರ್ಮವು ಪ್ರತಿಪಾದಿ

---

[15] *ಅದೇ. ಪು. 310*

ಸಿದ ತತ್ವಗಳಿಗೆ ಅನುಗುಣವಾಗಿ ಜೀವನ ಸಾಗಿಸುತ್ತ ವಿರೂಪಾಕ್ಷ ಸ್ವಾಮಿಗೆ ಸೇವೆ ಸಲ್ಲಿಸುತ್ತ ಬದುಕಿದ್ದುದರ ಬಗೆಗೆ ಸಿದ್ಧನಂಜೇಶನ ರಾಘವಾಂಕ ಚರಿತದಿಂದ ವ್ಯಕ್ತವಾಗುತ್ತದೆ. ರಾಘವಾಂಕ ಚರಿತೆಯ ಪ್ರಕಾರ ಹರಿಹರ ದೇವನು ವಿರೂಪಾಕ್ಷ ಸ್ವಾಮಿಯ ದೇವಸ್ಥಾನಕ್ಕೆ ಹತ್ತಿರದಲ್ಲೇ ಇದ್ದ ನಾಗನಾಥ ದೇವಾಲಯದಲ್ಲಿ ವಾಸವಾಗಿದ್ದ ಎಂಬುದು ವ್ಯಕ್ತವಾಗುತ್ತದೆ. ಹರಿಹರನ ಕಾಲಕ್ಕೆ ವಿರೂಪಾಕ್ಷ ದೇವಾಲಯವು ಸಂಕೀರ್ಣ ದೇವಾಲಯವಾಗಿರದೆ ಕೇವಲ ಗರ್ಭಗುಡಿ, ನಂದಿಮಂಟಪಗಳಿಂದ ಕೂಡಿದ ದೇವಾಲಯವಾಗಿದ್ದಿತು. ಹರಿಹರನ ಸಮಗ್ರ ಕೃತಿಗಳಲ್ಲಿ ಹಂಪೆಯ ವಿರೂಪಾಕ್ಷನನ್ನು ಪಂಪಾಪುರದರಸ ಎಂದೇ ಸಂಬೋಧಿಸಿದ್ದಾನೆ. ವಿರೂಪಾಕ್ಷನನ್ನು ತನ್ನ ಕೃತಿಗಳುದ್ದಕ್ಕೂ ಹಂಪೆಯ ಆಳ್ವ ಅರಸ, ಒಡೆಯ, ಅಧೀಶ್ವರ ಎಂದು ಸ್ತುತಿಸಿದ್ದಾನೆ. ವಿಜಯನಗರ ಪೂರ್ವದಲ್ಲಿ ಹಂಪೆಯು ವಿರೂಪಾಕ್ಷ ದೇವರ ಅಧೀನಕ್ಕೆ ಒಳಪಟ್ಟಿತ್ತು ಎಂಬುದನ್ನು ಹರಿಹರನ ಕೃತಿಗಳಲ್ಲಿಯ 'ಪಂಪಾಪುರದರಸ' ಎಂಬ ಹೇಳಿಕೆ ಪುಷ್ಟೀಕರಿಸುತ್ತದೆ. ವಿರೂಪಾಕ್ಷನೆ ಅಧಿದೈವ, ಒಡೆಯನಾದ ಪಂಪಾಪುರದ ಗಡಿಗಳ ಬಗೆಗೆ ಹರಿಹರನ ಪಂಪಾಕ್ಷೇತ್ರದ ರಗಳೆಯಲ್ಲಿ ಉಲ್ಲೇಖ ಸಿಗುತ್ತದೆ.

> ಆ ಪುರದೊಳುಂ ನಾಲ್ಕು ಬಾಗಿಲುಗಳುಂ ನೋಡೆ
> ಅಲ್ಲಿ ಮೌಡಣ ಬಾಗಿಲೊಳಗಿರ್ಪ ನುನ್ನತಂ
> ಸಲ್ಲಲಿತ ಗುಣ ಕಿನ್ನರೇಶ್ವರಂ ಶಾಶ್ವತಂ
> ಅಲ್ಲಿ ತೆಂಕಣ ಬಾಗಿಲೊಳಗಿರ್ಪನ ಚಳಿತಂ
> ಬಲ್ಲ ಶರಣರ ಜಂಬುಕೇಶ್ವರಂ ಶಾಶ್ವತಂ
> ಪಶ್ಚಿಮ ದ್ವಾರದೊಳು ನೆಲಸಿರ್ಪ ನೊಪ್ಪದಿಂ
> ನಿಶ್ಚಯಂ ದಿಟಂ ಸೋಮನಾಥಯ್ಸನತಿ ಪ್ರೇಮದಿಂ
> ಉತ್ತರ ದ್ವಾರದೊಳು ನೆಲಸಿರ್ಪನೀಶ್ವರಂ
> ಉತ್ತಮ ಗುಣಸ್ಥಾಣು ವಾಣಿಭದ್ರೇಶ್ವರಂ [16]

ಈ ವಿವರಣೆಯಿಂದ ಹರಿಹರನ ಕಾಲದ ಹಂಪೆಯ ನಾಲ್ಕು ಗಡಿಗಳು ಹಾಗೂ ಆಗಿನ ಕಾಲದ ಹಂಪೆಯ ವ್ಯಾಪ್ತಿಯನ್ನು ತಿಳಿಯಬಹುದಾಗಿದೆ. ಹದಿಮೂರನೇ ಶತಮಾನದ ಹಂಪೆಯ ವಿಸ್ತೀರ್ಣವು ವಿರೂಪಾಕ್ಷ ದೇವಾಲಯವನ್ನು ಕೇಂದ್ರದಲ್ಲಿಟ್ಟು ನೋಡಿದರೆ ಅದರ ನಾಲ್ಕು ದಿಕ್ಕುಗಳಿಗೆ ಸರಿಯಾಗಿ ಅಲ್ಲಿಗೆ ಸುಮಾರು ಹತ್ತು ಹದಿನೈದು ಕಿ.ಮೀ. ದೂರದಲ್ಲಿ ಆ ನಾಲ್ಕು ದೇವಾಲಯಗಳಿವೆ. ಕಿನ್ನರೇಶ್ವರನನ್ನು ಬಿಟ್ಟರೆ ಉಳಿದ ಮೂರು ದೇವಾಲಯಗಳು ಬೆಟ್ಟದ ಮೇಲಿವೆ. ಶಿವರಾತ್ರಿಯ ದಿವಸ ವಿರೂಪಾಕ್ಷನ ಶಾಸ್ತ್ರೋಕ್ತ ದರ್ಶನವಾಗಬೇಕಾದರೆ ನಾಲ್ಕು ದೇವಾಲಯಗಳನ್ನು ದರ್ಶಿಸಿ ವಿರೂಪಾಕ್ಷ ದೇವಾಲಯದಲ್ಲಿ ಅಂತಿಮ ಪೂಜೆ ಸಲ್ಲಿಸುವ ಪದ್ಧತಿ ಈಚಿನವರೆಗೂ ಇತ್ತು[17].

---

[16] *ಹರಿಹರನ ರಗಳೆಗಳು (ಸಂ|| ಎಂ.ಎಂ. ಕಲಬುರ್ಗಿ) ಪು. 509*

[17] *ಎಂ. ಚಿದಾನಂದಮೂರ್ತಿ, ಹೊಸತು, ಹೊಸತು, ಪು. 478*

ಇದರಿಂದಾಗಿ ವಿಜಯನಗರ ಪೂರ್ವದಲ್ಲಿ ವಿರೂಪಾಕ್ಷನ ಅಧೀನತ್ವದ ಹಂಪೆಯ ವಿಸ್ತಾರದ ಹರವು ವ್ಯಕ್ತವಾಗುತ್ತದೆ.

ಹರಿಹರನ ಕಾಲಕ್ಕಾಗಲೇ ಹಂಪೆಯು ಯಾರ ಒಡೆತನಕ್ಕೂ ಒಳಗಾಗದ ದೇವರ ಸಾಮ್ರಾಜ್ಯವಾಗಿದ್ದಿತು. ಆ ದೇವರ ಸಾಮ್ರಾಜ್ಯದ ಪರ್ಯಾಯ ನಾಮ ವಿರೂಪಾಕ್ಷನೇ ಆಗಿತ್ತು. ವಿರೂಪಾಕ್ಷನಲ್ಲಿ ಅಚಲನಿಷ್ಠೆಯನ್ನುಳ್ಳ ಹರಿಹರ ತನ್ನ ಹೆಸರನ್ನು ಬಿಟ್ಟು ವಿರೂಪಾಕ್ಷನ ಹೆಸರಿನಲ್ಲಿ ಕಾವ್ಯ ಬರೆದ. ಹರಿಹರನಿಗೆ ವಿರೂಪಾಕ್ಷನೇ ಕವಿ ಲಿಪಿಕಾರ ನಾನು ಎನ್ನುವಷ್ಟರಮಟ್ಟಿಗೆ ಭಾವುಕನಾದವನು ದ್ವಾರಸಮುದ್ರದಲ್ಲಿ ಕರಣಿಕ ಕಾಯಕ ತೊಡಗಿಕೊಂಡಿದ್ದ ಸಂದರ್ಭದಲ್ಲಿ ದೂರದ ಹಂಪೆಯ ವಿರೂಪಾಕ್ಷನ ತೆರೆಗೆ ಆವರಿಸಿದ್ದ ಉರಿಯನ್ನು ಆರಿಸುವಷ್ಟರ ಮಟ್ಟಿಗೆ ಮಹಿಮಾಶಾಲಿಯಾಗಿದ್ದ. ಹರಿಹರನು ಚಂಪೂ, ರಗಳೆ, ಶತಕ ಸಾಹಿತ್ಯ ಪ್ರಕಾರಗಳ ಕೃತಿಗಳಲ್ಲಿ ವಿರೂಪಾಕ್ಷನಲ್ಲಿ ತನಗಿರುವ ಉತ್ಕಟಭಕ್ತಿಯನ್ನು ವಿಧವಿಧವಾಗಿ ವ್ಯಕ್ತಪಡಿಸಿದ್ದಾನೆ. ಹರಿಹರನ ಗಿರಿಜಾಕಲ್ಯಾಣ ಕೃತಿಯ ಪ್ರಕಾರ ಶಿವ ಗಿರಿಜೆಯರ ವಿವಾಹ ಕಾರ್ಯ ನಡೆಯುವುದು ದೂರದ ಹಿಮಾಲಯದಲ್ಲಿ ಅಲ್ಲ. ಹಂಪೆಯ ಪರಿಸರದಲ್ಲಿಯೇ ನಡೆಯುವುದು . ಗಿರಿಜೆಯು (ಪಂಪಾಂಬಿಕೆ) ಶಿವನ (ವಿರೂಪಾಕ್ಷ) ಕೈಹಿಡಿಯುವ ಪ್ರಸಂಗವೇ ಗಿರಿಜಾ ಕಲ್ಯಾಣದ ವಸ್ತು. ಈಗಲೂ ಗಿರಿಜಾ ಕಲ್ಯಾಣೋತ್ಸವ ವಿಧಿಗೆ ಸಂಬಂಧಿಸಿದ ಧಾರ್ಮಿಕ ಕಾರ್ಯಾಚರಣೆಗಳನ್ನು ಇಲ್ಲಿಯ ವಿರೂಪಾಕ್ಷ ಹಾಗೂ ಪಂಪಾಂಬಿಕೆಯರ ದೇವಾಲಯದಲ್ಲಿ ಪ್ರತೀವರ್ಷವೂ ನಿಗದಿಪಡಿಸಿದ ದಿನಾಂಕದಂದು ಆಚರಿಸುತ್ತಾರೆ. ಹರಿಹರನ ಅಸಂಖ್ಯಾತ ರಗಳೆಗಳಲ್ಲಿ ಆದಿ ಮತ್ತು ಅಂತ್ಯಗಳಲ್ಲಿ ತಪ್ಪದೆ ಅಧಿದೈವ ವಿರೂಪಾಕ್ಷ ಮುದ್ರಿಕೆಯ ಕಂದ ಬಳಕೆಯಾಗಿದೆ. ರಕ್ಷಾಶತಕ ಕಾವ್ಯ 101 ಪದ್ಯಗಳಿಂದ ಕೂಡಿದ್ದು ಪ್ರತಿಯೊಂದು ಪದ್ಯವೂ ಪಂಪಾಪುರದರಸ ವಿರೂಪಾಕ್ಷ ರಕ್ಷಿಪುದೆನ್ನಂ ಎಂದು ಕೊನೆಗೊಳ್ಳುತ್ತದೆ. ತನ್ನನ್ನು ಪಂಪಾಪುರದರಸನ ಸಾಕ್ಷಾತ್ ಸುಪುತ್ರನೆಂದು ಕರೆದುಕೊಂಡಿದ್ದಾನೆ. ವಿರೂಪಾಕ್ಷಾಷ್ಟಕ ಹಾಗೂ ಹಂಪೆಯರಾಯ ಶತಕ ಲಘುಕೃತಿಗಳಲ್ಲಿಯೂ ವಿರೂಪಾಕ್ಷನನ್ನು ಮನದುಂಬಿ ಸ್ತುತಿಸಿದ್ದಾನೆ. ಹರಿಹರನು, ಹಂಪೆಯಾಳ್ದ ವಿರೂಪಾಕ್ಷನೊಬ್ಬನನ್ನು ಮಾತ್ರ ಹೊಗಳಬೇಕೆಂದು ಮತ್ತೆ ಮತ್ತೆ ಘೋಷಿಸಿಕೊಂಡಿದ್ದಾನೆ. ದೊರೆಗಳಾದರೂ ಅವರ ಮೇಲೆ ಕಾವ್ಯಗಳನ್ನು ಬರೆಯಬಾರದೆಂಬ ಸಂಕಲ್ಪವನ್ನು ಮಾಡುವ ಧೈರ್ಯ ಹರಿಹರನಿಗೆ ಬರಲು ಕಾರಣ. ಅವನ ಹುಟ್ಟೂರಾದ ಹಂಪೆಯು ಬಹುಶಃ ಯಾವುದೇ ರಾಜರ ಅಧೀನದಲ್ಲೂ ಇರದೆ ಒಂದು ರೀತಿಯಲ್ಲಿ ಸ್ವತಂತ್ರವಾಗಿದ್ದುದೇ ಆಗಿದೆ 'ಅವನು ಇದ್ದ ವಾತಾವರಣದಲ್ಲಿ ದೈವಕ್ಕೆ ಬಾಗುವುದಿತ್ತೇ ಹೊರತು ರಾಜನಿಗಲ್ಲ. ಆ ದೈವ ಬೇರಾರು ಆಗಿರದೆ ಹಂಪೆಯ ವಿರೂಪಾಕ್ಷನೇ ಆಗಿದ್ದ'[18]. ಹರಿಹರನ ಸೋದರಳಿಯನಾದ ರಾಘವಾಂಕನು ಹಂಪೆಯ ವಿರೂಪಾಕ್ಷನ ರೂಪವನ್ನು ಕುರಿತು ಸೋಮನಾಥಚರಿತ್ರೆ,

[18] *ಅದೇ, ಪು. 474*

ಹರಿಶ್ಚಂದ್ರ ಕಾವ್ಯ ಹಾಗೂ ವೀರೇಶ ಚರಿತೆಗಳಲ್ಲಿ ವರ್ಣಿಸಿದ್ದಾನೆ. ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರನು ವಿಶ್ವಾಮಿತ್ರನಿಗೆ ಹೇಳುತ್ತಾ ತಾನು ಇಡೀ ಭೂಮಂಡಲದ ಒಡೆಯ ನಾಗಿದ್ದರೂ ತನ್ನ ಆಳ್ವಿಕೆಗೆ 'ಹೇಮಕೂಟಂ ವಾರಣಾಸಿಗಳು' ಹೊರಗು, ಆ ಎರಡು ಪ್ರದೇಶಗಳಿಗೆ ನೀನು ಒಡೆಯನಲ್ಲ. ಅವಕೆ ವಿಶ್ವೇಶ್ವರ ವಿರೂಪಾಕ್ಷರೇ ಒಡೆಯರು, ಅವನಿಯೊಳಗಲ್ಲಿ ನಿನ್ನಾಜ್ಞೆಗಳು ಸಲ್ಲ'[19]. ಎಂದು ಹರಿಶ್ಚಂದ್ರ ವಾದಿಸುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಂಪೆ, ವಾರಣಾಸಿಗಳಿಗೆ ವಿರೂಪಾಕ್ಷ, ವಿಶ್ವೇಶ್ವರರೇ ಅಧಿಪತಿಗಳು. ಭೂರಾಜರುಗಳ ಆಜ್ಞೆ, ಅಧಿಕಾರಗಳು ನಡೆಯುವುದಿಲ್ಲ ಎಂಬುದು ಹದಿಮೂರನೇ ಶತಮಾನದ ವೇಳೆಗಾಗಲೇ ಜನಮನದಲ್ಲಿ ಪಂಪಾಪುರದ ಪ್ರದೇಶದ ನಿಜವಾದ ರಾಜ ವಿರೂಪಾಕ್ಷ ಸ್ವಾಮಿಯೇ ಎಂಬ ಕಲ್ಪನೆ ಬೆಳೆದಿತ್ತು. ಕ್ರಿ.ಶ. 1220 ರಲ್ಲಿದ್ದ ಸೋಮರಾಜ ಕವಿಯು ತನ್ನ ಉದ್ಭಟ ಕಾವ್ಯದಲ್ಲಿ ಹಂಪೆಯ ಅಧಿದೇವತೆ ವಿರೂಪಾಕ್ಷನ ಪ್ರಾರ್ಥನೆ ಇರುವುದರ ಜೊತೆಗೆ ಕೃತಿಯ ಒಳಗಡೆ ಹಂಪೆಯ ಪರಿಸರ. ವಿರೂಪಾಕ್ಷ ಸ್ವಾಮಿಯ ಬಗೆಗೆ ಸವಿವರವಾದ ವರ್ಣನೆ ಇದೆ. ಹರಿಹರನ ಪ್ರಯತ್ನದಿಂದಾಗಿ ಹಂಪೆಯ ಪರಿಸರದಲ್ಲಿ ವಿರೂಪಾಕ್ಷನ ಬಗೆಗಿನ ಭಕ್ತಿ ನಿಷ್ಠೆ ಧರ್ಮಜಾಗೃತಿ ಜನತೆಯಲ್ಲಿ ಇಮ್ಮಡಿಸಿತು. ಭಕ್ತರ ಸಂಖ್ಯೆಯ ಹೆಚ್ಚಿತು. ವಿಜಯನಗರ ಸಾಮ್ರಾಜ್ಯ ಪೂರ್ವದಲ್ಲಿಯೇ ವಿರೂಪಾಕ್ಷನ ಕೀರ್ತಿ ಎಲ್ಲೆಡೆ ಪಸರಿಸಿತ್ತು ಹಾಗೂ ಹಂಪೆಯು ವಿರೂಪಾಕ್ಷ ಸ್ವಾಮಿಯ ದೇವಾಲಯವನ್ನು ಕೇಂದ್ರವಾಗಿರಿಸಿಕೊಂಡು ಬಹು ಪ್ರಮುಖವಾದ ಒಂದು ಹಿಂದೂ ಧರ್ಮದ ಕ್ಷೇತ್ರವಾಗಿ ಅಭಿವೃದ್ಧಿಯತ್ತ ಮುನ್ನಡೆಯುತ್ತಿತ್ತು ಎಂಬುದು ವಿದಿತವಾಗುತ್ತದೆ[20].

ಹೊಯ್ಸಳರ ಅರಸರ ಕಾಲಾವಧಿಯಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯವು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು ಎಂಬುದಾಗಿ ತಿಳಿದುಬರುತ್ತದೆ. ಹೊಯ್ಸಳ ಅರಸ ಸೋಮೇಶ್ವರ ದೇವನ ಒಂದು ಶಾಸನವು ಅರಸನು ಹಂಪೆಯ ವಿರೂಪಾಕ್ಷ ದೇವರಿಗೆ ಆ ರಾಜಧಾನಿಯ ಪರಿಸರದಲ್ಲಿ ತನ್ನ ಕಾರ್ಯಸಿದ್ಧಿಗಾಗಿ ಚಿಕ್ಕಗರಜೆ ಗ್ರಾಮವನ್ನು ದಾನ ನೀಡಿದ್ದು ಆ ಗ್ರಾಮದ ಆದಾಯವು ದೇವರ ಪೂಜೆಗೆಸಲ್ಲಬೇಕೆಂದು ನಿರೂಪಿಸಿದೆ[21]. ಜೊತೆಗೆ ವಿರೂಪಾಕ್ಷನನ್ನು ಕುರಿತು ವಿಶೇಷಣಗಳಿಂದ ಕುರಿತು ಸ್ತುತಿಸಲಾಗಿದೆ.

ದೆಹಲಿಯ ಸುಲ್ತಾನರ ದಾಳಿಗೆ ತುತ್ತಾದ ಹೊಯ್ಸಳ ಸಾಮ್ರಾಜ್ಯ ಬಲ್ಲಾಳನ ಕಾಲದಲ್ಲಿ ಕಷ್ಟಗಳಿಗೆ ಗುರಿಯಾಯಿತು. ಈ ಹಂತದಲ್ಲಿ ಮೂರನೆಯ ಬಲ್ಲಾಳನು ವಿರೂಪಾಕ್ಷ ಸ್ವಾಮಿಯಲ್ಲಿ ಮೊರೆ ಹೊಕ್ಕು ಸಮಕಾಲೀನ ಜನತೆಯ ಸಹಾಯ,

[19] ಹರಿಶ್ಚಂದ್ರ ಕಾವ್ಯ ಸಂಗ್ರಹ (ಸಂ॥ ಎ.ಆರ್. ಕೃಷ್ಣಶಾಸ್ತ್ರಿ) ಸಂ. 5 ಪ.ಸಂ. 32,34

[20] ಎನಗಿಂತ ಕಿರಿಯರಿಲ್ಲ (ಸಂ. ॥ ಬಸವರಾಜ ಮಲಶೆಟ್ಟಿ) ಪು. 231

[21] ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ - 3, ಹಂಪೆಯ ಶಾಸನಗಳು ಸಂ. 54 ಪು 42-43

ಸಹಕಾರ, ಪ್ರೋತ್ಸಾಹಗಳನ್ನು ನಿರೀಕ್ಷಿಸಿದನು. ಆ ವೇಳೆಗೆ ವಿರೂಪಾಕ್ಷನು ಜನರ ಮನಸ್ಸಿನ ಅಧಿದೈವನಾಗಿ ಖ್ಯಾತಿಗೊಂಡಿದ್ದರಿಂದ ಜನತೆಯಿಂದ ಸಹಾಯ ಸಹಕಾರ ನಿರೀಕ್ಷಿಸಲು ತನ್ನನ್ನು ವೀರ ವಿರೂಪಾಕ್ಷ ಬಲ್ಲಾಳ ಎಂದು ಕರೆದುಕೊಂಡಿದ್ದಲ್ಲದೆ, ಹಂಪೆಯ ಒಡೆಯ ನೆಂದು ಹೇಳಿಕೊಂಡನು. ಆತನು ತನ್ನ ರಾಜಧಾನಿಯನ್ನು ತಾತ್ಕಾಲಿಕವಾಗಿ ಹಂಪೆಗೆ ಬದಲಾಯಿಸಿ ಅದನ್ನು ಶ್ರೀ ವೀರವಿಜಯ ವಿರೂಪಾಕ್ಷಪುರ, ಹೊಸ ಹಂಪೆಯ ಪಟ್ಟಣ ಎಂದು ಕರೆದನು. ಹಂಪೆಯನ್ನು ಉಪರಾಜಧಾನಿಯನ್ನಾಗಿ ಮಾಡಿಕೊಳ್ಳಲು ಕಾರಣ ಬಹುಶಃ ಪಂಪಾವಿರೂಪಾಕ್ಷನ ಸಾನ್ನಿಧ್ಯದಲ್ಲಿರುವ ಹಾಗೂ ತುಂಗಭದ್ರೆ ಮತ್ತು ಉದ್ದಕ್ಕೂ ಚಾಚಿರುವ ಕಾಡುಗಲ್ಲಿನ ಪರ್ವತ ಶ್ರೇಣಿಗಳು ಉತ್ತರ ಧಾಳಿಯನ್ನು ತಡೆಗಟ್ಟಲು ಅನು ಕೂಲವಾಗಿದ್ದಿತು. ಮುಮ್ಮಡಿ ಬಲ್ಲಾಳ ನಿರ್ಮಿತ ಆ ಪಟ್ಟಣವು ಆ ಕಾಲದ ಶಾಸನಗಳಲ್ಲಿ ಹೊಸ ಹಂಪೆಯ ಪಟ್ಟಣ ವಿರೂಪಾಕ್ಷ ಹೊಸಪಟ್ಟಣ ವಿರೂಪಾಕ್ಷ ಪಾದ ಇತ್ಯಾದಿ ಹೆಸರುಗಳಿಂದ ಉಲ್ಲೇಖಿತವಾಗಿದೆ. ಕ್ರಿ.ಶ. 1339 ರ ಶಾಸನದಲ್ಲಿ ಮೂರನೇ ಬಲ್ಲಾಳನು 'ಶ್ರೀ ವೀರವಿಜಯ ವಿರೂಪಕ್ಷಾಪುರ' ನೆಲೆವೀಡಿನಿಂದ ಆಳುತ್ತಿದ್ದಂತೆ ಉಲ್ಲೇಖಿಸಿದೆ[22]. ಬಲ್ಲಾಳನು ಈ ರೀತಿ ಕಾರ್ಯ ಪ್ರವೃತ್ತನಾಗಲು ಮತ್ತೊಂದು ಕಾರಣ ಎಂದರೆ 'ವಿರೂಪಾಕ್ಷ ದೈವದ ಘನತೆಯಿಂದಾಗಿ ಪ್ರಬಾವಿತವಾಗಿದ್ದ ಶೈವ/ ವೀರಶೈವ ಸಮಾಜ. ಆ ಸಮಾಜದ ಜಾಗ್ರತಾ ಶಕ್ತಿ'[23]. ಈ ಶಕ್ತಿಯನ್ನು ತನ್ನ ಅನುಕೂಲಕ್ಕೆ ಉಪಯೋಗಿಸಿಕೊಂಡನು. ವಿಪತ್ತಿನ ಸಮಯದಲ್ಲಿ ತನ್ನ ಉದ್ದೇಶ ಸಾಧನೆಗಾಗಿ ಅಲ್ಲಿಯ ಬಹುಸಂಖ್ಯಾತ ಪ್ರಜೆಗಳ ಬಲವನ್ನು ಗಳಿಸಿಕೊಳ್ಳುವ ಸಲುವಾಗಿ ತನ್ನ ಸುತನಿಗೆ ಹಂಪೆಯ ವಿರೂಪಾಕ್ಷನ ಹೆಸರನ್ನೇ ಇಟ್ಟನು. ಪ್ರಭಾವೀ ದೈವವಾಗಿದ್ದ ಹಂಪೆಯ ಹೆಸರನ್ನು ಮುಂದು ವರೆಸಿಕೊಂಡು ಹಂಪೆಯ ಪರಿಸರದ ಜನತೆಯ ಸಹಕಾರಗಳನ್ನು ನಿರೀಕ್ಷಿಸಿದನು. ಹದಿನಾಲ್ಕನೇ ಶತಮಾನದ ವೇಳೆಗಾಗಲೇ ವಿರೂಪಾಕ್ಷ ದೇವಾಲಯ ಸುಪ್ರಸಿದ್ಧ ದೇವಾಲಯವಾಗಿದ್ದು ಹೊಯ್ಸಳ ರಾಜ್ಯದ ಉತ್ತರ ಮೇಲೆಯಲ್ಲಿಯ ರಾಜಕೀಯ ಜೀವನದಲ್ಲಿ ಸಕ್ರಿಯವಾಗಿ ಪಾತ್ರವಹಿಸಿತ್ತು.ಕ್ರಿ.ಶ. 1340ರಲ್ಲಿ ಮೂರನೆಯ ಬಲ್ಲಾಳನು ತನ್ನ ಪುತ್ರ ವಿರೂಪಾಕ್ಷ ನಾಲ್ಕನೇ ಬಲ್ಲಾಳನ ಯುವರಾಜ ಪಟ್ಟ ಮಹೋತ್ಸವ ವನ್ನು ವಿರೂಪಾಕ್ಷ ದೇವಾಲಯದಲ್ಲಿಯೇ ನೆರವೇರಿಸಿದ. ಹೀಗಾಗಿ ಹೊಯ್ಸಳ ಅರಸರ ಕೊನೆಯ ಆಳ್ವಿಕೆಯ ದಿವಸಗಳಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯವು ಮಹತ್ತರ ಪಾತ್ರ ವಹಿಸಿತ್ತು. ಹದಿಮೂರು ಹಾಗೂ ಹದಿನಾಲ್ಕನೇ ಶತಮಾನಗಳಲ್ಲಿ ವಿರೂಪಾಕ್ಷ ದೇವಾಲಯವು , ಕುರುಗೋಡು ದೊರೆಗಳ, ಹೊಯ್ಸಳ ಕೊನೆಯ ಅರಸರುಗಳ, ಕವಿಗಳ ಆರಾಧ್ಯ ದೈವವಾಗಿದ್ದು ಹಂಪೆಯ ಸಮಸ್ತ ಜನತೆಯ ಚಟುವಟಿಕೆಗಳನ್ನು ನಿಯಂತ್ರಿಸುವ ಸಾಂಸ್ಕೃತಿಕ ಕೇಂದ್ರವಾಗಿದ್ದು ಜನತೆಯ ಜೀವನಾಡಿಯಾಗಿ ಪರಿಣಮಿಸಿತ್ತು.

---

[22] ಎಸ್.ರಾಜಶೇಖರ,ಹೊಯ್ಸಳ-ಸಂಗಮರ ಸಂಬಂಧ,ಕರ್ನಾಟಕ ಭಾರತಿ,ಸಂ.6 ಸಂ.3ಪ್ರ. 31

[23] ಎನಗಿಂತ ಕಿರಿಯರಿಲ್ಲ (ಸಂ. //ಬಸವರಾಜ ಮಲಶೆಟ್ಟಿ) ಪು. 261

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಆರಂಭಕಾಲದ ಸಂಗಮ ವಂಶದ ಅರಸರುಗಳ ಕಾಲದಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯವು ಎಲ್ಲಾ ರೀತಿಯಿಂದಲೂ ವ್ಯಾಪಕ ಮಹತ್ವವನ್ನು ಪಡೆಯಿತು. ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಲು ಹಕ್ಕ ಬುಕ್ಕರು ಹಂಪೆಯ ಪ್ರದೇಶವನ್ನು ಆರಿಸಿಕೊಳ್ಳಲು ಸಹಜ ಪ್ರಾಕೃತಿಕ ರಕ್ಷಣೆಯೊಡ ಗೂಡಿದ ದುರ್ಗಮ ಪ್ರದೇಶದ ಜೊತೆಗೆ 'ಬಹುಶಃ ತಾತ್ವಿಕವಾಗಿಯಾದರೂ ಹಂಪೆಯ ಪ್ರದೇಶವು ಯಾವುದೇ ರಾಜನ ಪ್ರಭುತ್ವದಿಂದ ಮುಕ್ತವಾಗಿದ್ದ (ವಿರೂಪಾಕ್ಷನ ಆಡಳಿತವಿದ್ದ) ಪ್ರದೇಶವೂ ಆಗಿತ್ತು[25]' ಎಂಬುದು ಕಾರಣವಾದಂತಿದೆ. ಸಂಗಮ ವಂಶದ ಅರಸರುಗಳ ಮೇಲೆ ಈ ದೈವ ಬಹಳವಾಗಿ ಪ್ರಭಾವ ಬೀರಿದೆ. ಸಂಗಮ ವಂಶದ ಅರಸರುಗಳು ತಾವು ಹೊಸದಾಗಿ ಸ್ಥಾಪಿಸಿದ್ದ ರಾಜ್ಯವನ್ನು ರಕ್ಷಿಸುವ ಹಾಗೂ ಭದ್ರಪಡಿಸಿಕೊಳ್ಳುವ ಉತ್ಕಟ ಆಕಾಂಕ್ಷೆಯಿಂದ ಹಂಪೆಯ ಅಧಿದೈವವಾದ ವಿರೂಪಾಕ್ಷ ಸ್ವಾಮಿಯನ್ನು ತಮ್ಮ ಕುಲದ ದೈವವೆಂದು ಪ್ರಾರಂಭದಿಂದಲೇ ಸಾರಿದರು. ಸಂಗಮರ ಕಾಲದ ಆರಂಭದ ಶಾಸೇನದಲ್ಲಿಯೇ ಪಂಪಾ ವಿರೂಪಾಕ್ಷ : ಸಾಕ್ಷಾತ್ ಕುಲ ಪರಮ ದೈವ[26] ಎಂಬ ಉಲ್ಲೇಖ ಇದೆ. ಪ್ರೌಢ ದೇವರಾಯನ ಕಾಲದ ಶಾಸನವು ವಿಜಯನಗರ ಸಾಮ್ರಾಜ್ಯವನ್ನು 'ಶ್ರೀಮದ್ಭಾಸ್ಕರ ಕ್ಷೇತ್ರದ ಶ್ರೀ ವಿರೂಪಾಕ್ಷ ದೇವರ ಪಂಚ ಕೋಶದೊಳಗೆ'[27] ಎಂದು ಕೀರ್ತಿಸಿದೆ. ಇಮ್ಮಡಿ ಹರಿಹರನ ಕಾಲದ ಕ್ರಿ.ಶ. 1379ರ ಶಾಸನದ ಪ್ರಕಾರ, ಶ್ರೀ ವಿರೂಪಾಕ್ಷನು ಹೇಮಕೂಟ ಪರಿಸರದ ಪ್ರಾಕಾರದಿಂದ ಕೂಡಿರುವ ತುಂಗಭದ್ರೆಯಿಂದ ಪವಿತ್ರವಾದ ಭೂಮಿಗೆ ಅಭಯವನ್ನು ನೀಡುವ ರಕ್ಷಕ ನಾಗಿದ್ದಾನೆ. ಸಂಗಮರ ಕಾಲದಲ್ಲಿ ವಿರೂಪಾಕ್ಷ ದೇವಾಲಯವು ಬಹಳಷ್ಟು ವಿಸ್ತೀರ್ಣ ಗೊಂಡಿತು. ಗರ್ಭಗೃಹ, ಸುಖನಾಸಿ, ನವರಂಗ ಪ್ರಕಾರ ಹಾಗೂ ಮುಖ್ಯ ಗೋಪುರಗಳನ್ನು ಒಳಗೊಂಡಿತ್ತು. ಇವರ ಕಾಲದಲ್ಲಿ ಹಂಪೆಯ ವಿರೂಪಾಕ್ಷನ ಹೆಸರಿನಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದತ್ತಿದಾನಗಳನ್ನು ನೀಡಿರುವ ಶಾಸನಗಳ ಉಲ್ಲೇಖ ಅಧಿಕವಾಗಿವೆ. ಸಂಗಮ ವಂಶದ ಆರಂಭದ ದೊರೆಗಳಾದ ಬುಕ್ಕರಾಯ ಹಾಗೂ ಇಮ್ಮಡಿ ಹರಿಹರನ ಕಾಲದಲ್ಲಿಯೇ ವಿರೂಪಾಕ್ಷ ದೇವಾಲಯವು ದಾನವನ್ನು ಪಡೆದುಕೊಂಡಿದೆ. ಕ್ರಿ.ಶ. 1379ರ ಶಾಸನವು ಅರಸನ ಆಜ್ಞೆಯ ಮೇರೆಗೆ ಮುದ್ದ ದಂಡೇಶನು ವಿರೂಪಾಕ್ಷ ದೇವರ ಪೂಜೆಗೆ ಹೆಬ್ಬಾಳು ಮತ್ತು ದಂಡನಾಥ ಪುರಗಳನ್ನು ದಾನ ನೀಡಿದ್ದನ್ನು ದಾಖಲಿಸಿದೆ. ಹಾಗೆಯೇ ಸಂಗಮರ ಕಾಲದ ಆರು ಶಾಸನಗಳು ವಿರೂಪಾಕ್ಷ ದೇವರಿಗೆ ದಾನದತ್ತಿಗಳನ್ನು ನೀಡಿದ್ದನ್ನು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಉಲ್ಲೇಖಿಸಿವೆ.

---

[25] ಎಂ. ಚಿದಾನಂದಮೂರ್ತಿ , *ಹೊಸತು ಹೊಸತು, ಪು. 474*

[26] *ಎಸ್. ಐ.ಟಿ. ಸಂ. ನಂ. 259 ಪು. 54*

[27] *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ. 1, ಹೊಸಪೇಟೆ ಶಾ.ಸಂ. 32, ಪು. 170*

ಸಂಗಮರ ಕಾಲದಲ್ಲಿ ಹಂಪೆಯ ವಿರೂಪಾಕ್ಷ ದೇವರಿಗೆ ಹೆಚ್ಚಿನ ಮಾನ್ಯತೆ ದೊರೆತು ಅಪಾರ ದಾನ ದತ್ತಿಗಳ ಮೂಲಕ ಸಂಪತ್ತು ಸಂಗ್ರಹಿಸಲ್ಪಟ್ಟು ಸ್ಥಳೀಯ ಜನತೆಯ ಆರಾಧ್ಯ ದೈವವಾಗಿ ಸಕಲ ಸಾಂಸ್ಕೃತಿಕ ಚಟುವಟಿಕೆಗಳ ನೆಲೆಯಾಯಿತು. ಸಂಗಮ ವಂಶದ ರಾಜರುಗಳು ತಾವು ಹೊರಡಿಸಿದ ತಾಮ್ರ ಶಾಸನಗಳ ಕೊನೆಯಲ್ಲಿ ತಮ್ಮ ಹೆಸರಿನ ಅಂಕಿತ ಅಥವಾ ಒಪ್ಪದ ಬದಲಿಗೆ 'ಶ್ರೀ ವಿರೂಪಾಕ್ಷ' ಎಂಬ ತಮ್ಮ ಕುಲದೈವದ ಹೆಸರನ್ನೇ ಹೊರಡಿಸಿರುವುದು ವ್ಯಕ್ತವಾಗುತ್ತದೆ. ಇಮ್ಮಡಿ ಹರಿಹರನಿಂದ ಹಿಡಿದು ಎರಡನೇ ಪ್ರೌಢದೇವರಾಯನವರೆಗೂ ವಿರೂಪಾಕ್ಷನ ಹೆಸರಿನಲ್ಲಿ ಒಪ್ಪವನ್ನು ಹಾಕಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಈ ದೊರೆಗಳು ತಮ್ಮ ರಾಜ ಶಾಸನಗಳನ್ನು ತಮ್ಮ ಹೆಸರಿನಲ್ಲಿ ಹೊರಡಿಸದೆ ಪಂಪಾ ವಿರೂಪಾಕ್ಷನ ಹೆಸರಿನಲ್ಲಿ ಹೊಡಿಸಿರುವುದನ್ನು ಮನಗಂಡರೆ ಹಂಪೆಯ ಪ್ರದೇಶದಲ್ಲಿ ತಾವು ರಾಜತ್ವ ನಡೆಸುತ್ತಿದ್ದರೂ ನಿಜವಾದ ದೊರೆ ವಿರೂಪಾಕ್ಷ, ಆತನ ಪ್ರತಿನಿಧಿಗಳು ನಾವು ಎಂದು ಪರಿಭಾವಿಸುವಂತೆ ಕಂಡು ಬರುತ್ತದೆ. ಈ ಅರಸರುಗಳು ಚಿನ್ನದ ನಾಣ್ಯಗಳನ್ನು ಠಂಕಿಸಿ ಅವುಗಳ ಮುಂದಿನ ಮುಖದ ಮೇಲೆ ಶಿವ - ಪಾರ್ವತಿಯರ ರೂಪುಗಳನ್ನು ಮುದ್ರಿಸಿದರು. ಈ ರೂಪುಗಳು ಹಂಪೆಯ ವಿರೂಪಾಕ್ಷ ಹಾಗೂ ಪಂಪಾಂಬಿಕೆಯರ ಪ್ರತೀಕವಾಗಿದೆ. ವಿಜಯನಗರದ ಆರಂಭದ ದೊರೆಗಳು ಹಂಪೆಯ ವಿರೂಪಾಕ್ಷ ಹಾಗೂ ಪಂಪಾಂಬಿಕೆಯರ ರೂಪಗಳನ್ನು ಚಿನ್ನದ ನಾಣ್ಯಗಳ ಮೇಲೆ ಕಾಣಬರುವಂತೆ ಅಳವಡಿಸಿಕೊಂಡಿರುವುದು ವಿರೂಪಾಕ್ಷ ದೈವದ ಪ್ರಭಾವ ಸೂಚಿಸುತ್ತದೆ. ಜನತೆಯ ಆರಾಧ್ಯ ದೈವವಾಗಿದ್ದ ವಿರೂಪಾಕ್ಷನಲ್ಲಿ ಸಂಗಮ ವಂಶದ ದೊರೆಗಳು ಹೆಚ್ಚಿನ ನಿಷ್ಠೆ ತೋರಲು 'ಬಹುಶಃ ಎಲ್ಲಾ ರೀತಿಯ ಬೆಂಬಲಗಳನ್ನೊದಗಿಸುತ್ತಿದ್ದ ಶೈವ / ವೀರಶೈವ ಅನುಯಾಯಿಗಳನ್ನು ಸಂತೃಪ್ತಿಪಡಿಸಲೋಸುಗ ಕೈಗೊಂಡಿದ್ದ ಕ್ರಮಗಳಲ್ಲೊಂದಾಗಿತ್ತು ಎಂದೂ ಹೇಳಬಹುದು'[28].

ಸಾಹಿತ್ಯ ಕೃತಿಗಳು ಹಾಗೂ ಶಾಸನಗಳ ಉಲ್ಲೇಖದ ಪ್ರಕಾರ ವಿರೂಪಾಕ್ಷ ದೇವಾಲಯವು ಎರಡನೇ ದೇವರಾಯ ಹಾಗೂ ಪ್ರೌಢದೇವರಾಯನ ಕಾಲದಲ್ಲಿ ಹೊಸಭಾಗಗಳ ಸೇರ್ಪಡೆಯೊಂದಿಗೆ ವಿಸ್ತಾರಗೊಂಡಿತು. ವಿರೂಪಾಕ್ಷ ದೇವಾಲಯದ ಮುಖ್ಯ ಗೋಪುರವನ್ನು ಇಮ್ಮಡಿ ಪ್ರೌಢದೇವರಾಯನ ದಂಡನಾಯಕ ಪ್ರೋಲಗಂಟಿ ತಿಪ್ಪನು ಕಟ್ಟಿಸಿದನೆಂದು ಶಾಸನ ಹಾಗೂ ಹರಿಭದ್ರನ ಉತ್ತರ ನಾರಸಿಂಹ ಪುರಾಣಮ್ ಕೃತಿಯಿಂದ ತಿಳಿದುಬರುತ್ತದೆ. ಪ್ರೌಢದೇವರಾಯನು ತಾನು ದೊರೆಯಾಗಿ ಅಕಾರ ಸ್ವೀಕರಿಸಿದ ತಕ್ಷಣ ವಿರೂಪಾಕ್ಷ ದೇವಾಲಯಕ್ಕೆ ಸಲ್ಲಿಸಿದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಸೇವೆಯ ಬಗೆಗೆ ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿಯು ಮೂರು ಪದ್ಯಗಳಲ್ಲಿ ಮಹತ್ತರವಾದ ಸಂಗತಿ ವ್ಯಕ್ತವಾಗಿದೆ.

---

[28] *ಎನಗಿಂತ ಕಿರಿಯರಿಲ್ಲ (ಸಂ॥ ಬಸವರಾಜ ಮಲಶೆಟ್ಟಿ) ಪು. 260*

'ದೇವಲೋಕದ ಸಕಲ ವೈಭವಂಗಳು ಸಹತಿ
ಭೂವಿನುತ ವಿಜಯ ಕಲ್ಯಾಣ ಪುರಕೆಯ್ತಂದು
ಭಾವಜವಿದಾರಿ ಪಂಪಾ ವಿರೂಪಾಕ್ಷ ಭವನದ ನಾಲ್ಕು ದೆಸೆಗಳಲ್ಲಿ
ತೀವಿ ಕಿಕ್ಕಿಱಿಗಿಱಿದ ಮಣಿಗಳಸ ಕೋಟೆಗಳ
ಲಾವಣ್ಯತರ ಗೋಪುರಂಗಳ ರಚಿಸಿದಂ'

ತ್ರಿಪುರ ವಿಜಯಿತ ವಿರೂಪಾಕ್ಷನ ಮನೋರಥಕೆ
ಸುಪಥವಾದುದು ದೇವ ರಾಜೇಂದ್ರನುದಯದಿಂ
ವಿಪುಳೆಯೊಳು ದೃಷ್ಟವಿದೆಯೆಂದೆಂಬ ಮಾಳ್ಕೆಯಿಂ ಪಂಪಾಪುರದೊಳನುದಿನಂ
ಅಪರಿಮಿತ ಗೋಪುರಂಗಳ ಮಧ್ಯವೀಧಿಯಿಂ
ರಿಪು ಕಂಟಕಂಗಳಂ ಸವಱುವಂದದಿ ಸವಱಿ
ಸುಪವಿತ್ರವೆನಿಸಿದಂ ರಥಪಥವನ್......'

ಆ ಮಹಾರಥ ಪಥದೊಳವಿರತಂ ಸಂಚರಿಪ
ಕಾಮಿತಾರ್ಥಗಳ ಕಲ್ಪಿಸಿದ ಸುಫಲಂಗಳಂ
ಪ್ರೇಮದಿಂದೀವ ಭರದಿಂ ಸುರದ್ರುಮಕುಲಂ ಗೋಪುರದೊಳಿಕ್ಕೆಲದೊಳು

ಪಂಪಾಪತಿಯ ಮನೋರಥ ರೂಪ ತಾನಾದ
ಪೆಂಪಂ ಜಗಕ್ಕಱುಪಿ ತೋಱಿದನೊ ಎಂಬಂತೆ
ಸೊಂಪೇಱಿ ಮೆಱೆಸುವ ವಿರೂಪಾಕ್ಷನತುಳ ರಥ ಪಂಪಾಂಬಿಕಾ ರಥವನು
ಝುಂಪಳಿಪ ನಾನಾರಸದ ಗಣಾಧಿಪ ರಥವ
ಗುಂಪಱಿವರಳವಲ್ಲವೆನೆ ರೂಢಿವಡಿಸಿದನ
ದೇಂ ಪ್ರತಾಪನೊ ದೇವರಾಜೇಂದ್ರನ ....'[29]

ಲಕ್ಕಣ್ಣ ದಂಡೇಶನ ಈ ಮೇಲ್ಕಂಡ ಪದ್ಯಗಳ ಪ್ರಕಾರ ಪ್ರೌಢದೇವರಾಯನು ವಿರೂಪಾಕ್ಷ ದೇವಾಲಯದ ನಾಲ್ಕು ದಿಕ್ಕುಗಳಲ್ಲಿ ಮಣಿಗಳಸಗಳನ್ನು, ಕೋಟೆಗಳ ಲಾವಣ್ಯತರ ಗೋಪುರಗಳನ್ನು ಕಟ್ಟಿಸಿದನಂತೆ. ಅಲ್ಲದೆ ಈ ಗೋಪುರಗಳ ಮಧ್ಯದ ಬೀದಿಯಲ್ಲಿ ರಥವು ಸುಗಮವಾಗಿ ಸಾಗಲು ಅಡಚಣೆಯಾಗಿದ್ದ ಗಿಡಗಂಟೆಗಳನ್ನು ಕೀಳಿಸಿ ಅನುಕೂಲವಾಗುವಂತೆ ಮಾಡಿಸಿದನಂತೆ. ಬೀದಿಯ ಇಕ್ಕೆಡೆಗಳಲ್ಲಿ ನಾನಾ ಫಲಂಗಳ ಮರಗಳನ್ನು ನೆಡಸಿದನಂತೆ. ಇದಕ್ಕಿಂತ ದೊರೆಯ ಮಹತ್ವದ ಕೊಡುಗೆ ಎಂದರೆ ವಿರೂಪಾಕ್ಷನ ರಥ, ಪಂಪಾಂಬಿಕ ರಥ, ಗಣೇಶ ರಥಗಳನ್ನು ಮಾಡಿಸಿ ರಥೋತ್ಸವವನ್ನು ರೂಢಿಗೆ ತಂದದ್ದು[30] ತಿಳಿದುಬರುತ್ತದೆ. ಪ್ರೌಢದೇವರಾಯನು ವಿರೂಪಾಕ್ಷ ದೇವರಿಗೆ ಮಾಡಿದ ಸಾಂಸ್ಕೃತಿಕ ಸೇವೆಯ ವಿವರ ಮತ್ತೆಲ್ಲಿಯೂ

---

[29] ಲಕ್ಕಣ್ಣ ದಂಡೇಶನ ಶಿವತತ್ತ್ವ ಚಿಂತಾಮಣಿ (ಸಂ॥ಸ್. ಬಸಪ್ಪ) ಸಂ. 38 ಪ.ಸಂ. 251-254
[30] ಸಿ. ನಾಗಭೂಷಣ ಕನ್ನಡ ಸಾಹಿತ್ಯ ಸಂಸ್ಕೃತಿ ಶೋಧನೆ. ಪು. 144

ದೊರೆತಿಲ್ಲ. ಸಂಗಮ ಅರಸರುಗಳ ಕಾಲದಲ್ಲಿ ವಿರೂಪಾಕ್ಷನ ರಥೋತ್ಸವ ಆಚರಣೆಗೆ ಬಂದಿದ್ದು ರಥೋತ್ಸವದ ಸಂದರ್ಭದಲ್ಲಿ ನಾಡಿನಾದ್ಯಂತ ಸ್ಥಳೀಯ ಅರಸರು ಮಠಾಧೀಶರು ಭಾಗವಹಿಸುತ್ತಿದ್ದ ವಿವರ ಅಹೋಬಲ ಕವಿಯ 'ವಿರೂಪಾಕ್ಷ ವಸಂತೋತ್ಸವ ಚಂಪು' ಸಂಸ್ಕೃತ ಕಾವ್ಯದಿಂದ ತಿಳಿದುಬರುತ್ತದೆ. ಹದಿನಾಲ್ಕನೆಯ ಶತಮಾನದ ಕೊನೆಯಲ್ಲಿದ್ದ ಅಹೋಬಲನು ವಿರೂಪಾಕ್ಷನ ರಥೋತ್ಸವದ ವರ್ಣನೆಯ ಬಗೆಗೆ ವಿವರಿಸಿದ್ದಾನೆ. ಸಂಗಮರ ಆಳ್ವಿಕೆಯ ಕಾಲದಲ್ಲಿ ವಿರೂಪಾಕ್ಷನ ವಸಂತೋತ್ಸವವು ಒಂಭತ್ತು ದಿವಸಗಳ ಅವಧಿಯದಾಗಿತ್ತು. ಚೈತ್ರಶುದ್ಧ ನವಮಿಯಂದು ಧ್ವಜಾರೋಹಣದೊಂದಿಗೆ ಆರಂಭಗೊಳ್ಳುವ ಈ ಉತ್ಸವ ಚೈತ್ರ ಬಹುಳ ದ್ವಿತೀಯಯೆಂದು ಅವಭೃತ ಸ್ನಾನದೊಂದಿಗೆ ಪೂರ್ಣಗೊಳ್ಳುತ್ತಿತ್ತು. ಸ್ವತಃ ಕವಿಯು ತಾನೇ ಕಣ್ಣಾರೆ ಕಂಡ ವಿರೂಪಾಕ್ಷನ ವಸಂತೋತ್ಸವ ವಿವರವನ್ನು ವರ್ಣಿಸಿದ್ದಾನೆ. 'ಈ ರಥೋತ್ಸವದಲ್ಲಿ ಪಾಲ್ಗೊಂಡವರಲ್ಲಿ ವಿಜಯನಗರದ ಅರಸ, ಶಿರಶಿಯ ಲಿಂಗಾಯತ ಸಾಮಂತ, ಕರ್ನೂಲ್ ಜಿಲ್ಲೆಯ ಮೋಕ್ಷಗುಂಡ ಅಧಿಪತಿ, ಸಿದ್ಧ ರಾಮೇಶ್ವರ ಆರಾಧಕರಾದ ಬಳ್ಳಾರಿಯ ಅಧಿಪತಿ, ಹರಿಹರನಗರದ ಅಧಿಪತಿ, ವಿಜಯನಗರದ ಅರಸನ ಸೇನಾಪತಿಗಳಲ್ಲೊಬ್ಬನಾದ ರಾಮದುರ್ಗದ ಅಧಿಪತಿ ಹರಿಹರ ನಗರದ ಅಧಿಪತಿ ಭುಜಂಗನಗರದ ಅಧಿಪತಿ ಹಾಗೂ ಲಕ್ಷ್ಮೇಶ್ವರದ ಅಧಿಪತಿ ಮೊದಲಾದವರು ಇದ್ದಾರೆ. ರಥೋತ್ಸವ ಮುಗಿದ ಮೇಲೆ ಯಾತ್ರಿಕರು ಜಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದರು[31]. ಸಹ್ಯಾದ್ರಿಯ ಕಡೆಗಿದ್ದ ಬತ್ತಲೇಶ್ವರ ವಿರಕ್ತನು ಸಂಸಾರಿಯಾದ ಮೇಲೆ ಪದ್ಮಾವತಿಯೊಡನೆ ರಥೋತ್ಸವ ನೋಡಲೆಂದು ಹಂಪೆಗೆ ಬಂದನೆಂದು ನೂರೊಂದು ವಿರತರ ಕಾವ್ಯದಲ್ಲಿ ಹೇಳಲಾಗಿದೆ[32]. ಅಹೋಬಲನು ತನ್ನ ಕೃತಿಯಲ್ಲಿ ವರ್ಣಿಸಿರುವ ವಿರೂಪಾಕ್ಷನ ರಥೋತ್ಸವದ ವಿವರವನ್ನು ವಿಜಯನಗರ ಕಾಲದ ಶಾಸನಗಳು ಸಮರ್ಥಿಸುತ್ತವೆ. ಕ್ರಿ.ಶ. 1520ರ ಗಿಣಿಗೇರಾ ತಾಮ್ರ ಶಾಸನವು ಶ್ರೀವಿರೂಪಾಕ್ಷ ದೇವರ ರಥೋತ್ಸವಕ್ಕೆ ಅಂತರವಳ್ಳಿ ನಿರಂಜನಯ್ಯ ಮೂರು ಝೂವ ದಯ್ಯಯೆಂಬುವರು ವುಭಯತ್ರರು ಬಂದು[33], ಎಂಬ ವಿವರವನ್ನು ದಾಖಲಿಸಿದ್ದು, ವಿರೂಪಾಕ್ಷನ ರಥೋತ್ಸವಕ್ಕೆ ಸುತ್ತಮುತ್ತಲಿನ ಪ್ರತಿಷ್ಠಿತ ಸ್ಥಳೀಯ ಅರಸರುಗಳು ಪಾಲ್ಗೊಳ್ಳುತ್ತಿದ್ದರು ಎಂಬುದನ್ನು ಸಮರ್ಥಿಸುತ್ತದೆ. ವಿಜಯನಗರದ ಉಚ್ಛ್ರಾಯ ಸ್ಥಿತಿಯ ಕಾಲದಲ್ಲಿ ವಿರೂಪಾಕ್ಷ ದೇವಾಲಯದ ಮುಂದೆ ಪ್ರಸಿದ್ಧ ಬಜಾರು ಇದ್ದು ಅದಕ್ಕೆ ವಿರೂಪಾಕ್ಷ ಬಜಾರು ಎಂಬ ಹೆಸರು ಲಭಿಸಿತ್ತು. ಚಂದ್ರಶೇಖರ ಕವಿಯು 'ಪಂಪಾ ವಿರೂಪಾಕ್ಷಾಸ್ಥಾನ ವರ್ಣನಂ' ಎಂಬ ಚಂಪೂಕೃತಿಯನ್ನು ರಚಿಸಿದ್ದು ಅದರಲ್ಲಿ

---

[31] ವಿಜಯ ಕಲ್ಯಾಣ (ಸಂ॥ಸಂ.ಶಿ. ಭೂಸನೂರ ಮಠ) ಪು. *199*

[32] ವ್ಹಿ. ಶಿವಾನಂದ : ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ಪು. *60*

[33] ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ *2* ಕೊಪ್ಪಳ ಶಾಸನ ಸಂ. *139*, ಪು. *138*

'ಹಂಪಿಯಾಳ್ದನೆಸೆವೋಲಗಂ' ಎಂದು ವಿರೂಪಾಕ್ಷನ ಓಲಗವನ್ನು ವರ್ಣಿಸಿದ್ದಾನೆ. ಹಂಪೆಯ ಭೌಗೋಳಿಕ ಪರಿಸರದ ಹಿನ್ನೆಲೆಯಲ್ಲಿಯ ವಿರೂಪಾಕ್ಷನ ಆಸ್ಥಾನದ ವರ್ಣನೆಯನ್ನು ಮಾಡಿದ್ದಾನೆ. ಕವಿಯ ಆಶಯ ಎಂದರೆ ವಿರೂಪಾಕ್ಷನನ್ನು ಒಬ್ಬ ದೊರೆ ಎಂದು ಭಾವಿಸಿ ಅವನ ಆಸ್ಥಾನವನ್ನು, ಆಸ್ಥಾನದಲ್ಲಿ ನಡೆಯುತ್ತಿದ್ದ ನರ್ತನ ಗಾಯನಾದಿಗಳನ್ನು ವರ್ಣಿಸಿದ್ದಾನೆ. ಹಂಪೆಯ ವಿರೂಪಾಕ್ಷನ ದೇವಾಲಯವೇ ಅರಮನೆ, ಆ ದೇವಾಲಯದ ನವರಂಗವೇ ಆ ವಿರೂಪಾಕ್ಷಸ್ವಾಮಿ ಎಂಬ ರಾಜನ ಆಸ್ಥಾನ. ಇದು ಹರಿಹರನ ಕಾಲದ ಪರಿಕಲ್ಪನೆಯ ಮುಂದುವರಿಕೆಯೇ ಆಗಿದೆ[34]. ಪಂಪಾವಿರೂಪಾಕ್ಷನ ನೆಲೆವೀಡಾಗಿದ್ದ ಹಂಪೆಯು ಸಂಗಮರ ಕಾಲದಲ್ಲಿ ವೀರಶೈವ ಸಾಹಿತ್ಯ - ಸಂಸ್ಕೃತಿಯ ಪುನರುಜ್ಜೀವನದ ಮುಖ್ಯ ಕೇಂದ್ರವಾಗಿದ್ದಿತು. ಕಲ್ಯಾಣ ಕ್ರಾಂತಿಯ ವಿಪ್ಲವ ಹಾಗೂ ಮುಸ್ಲಿಂ ಆಕ್ರಮಣದಿಂದಾಗಿ ಚದುರಿಹೋಗಿದ್ದ ಹಾಗೂ ಅಳಿದುಳಿದ ವಚನ ರಾಶಿಯನ್ನು ಸಂಕಲಿಸುವ , ಸಂಸ್ಕರಣ ವ್ಯಾಖ್ಯಾನ ಸ್ಥಲಕಟ್ಟು ನಿಯೋಜನೆಗೊಳಿಸುವ ಮಹತ್ವಪೂರ್ಣ ಕಾರ್ಯಕ್ಕೆ ನೆಲೆಯೊದಗಿಸಿತು.

ಪ್ರೌಢದೇವರಾಯನ ದಂಡನಾಯಕನಾದ ಲಕ್ಕಣ್ಣ ದಂಡೇಶನು ಹಂಪೆಯ ವಿರೂಪಾಕ್ಷನ ನಿಷ್ಠಾವಂತ ಭಕ್ತನಾಗಿದ್ದ ಎಂಬುದಕ್ಕೆ ಅವನ ಕೃತಿ ಶಿವತತ್ತ್ವ ಚಿಂತಾಮಣಿಯೇ ನಿದರ್ಶನ. ಮುಳಬಾಗಲ ಪ್ರಾಂತಕ್ಕೆ ಅಧಿಕಾರಿಯಾಗಿದ್ದ ಲಕ್ಕಣ್ಣನು ತಾನು ನಿರ್ಮಿಸಿದ ಹೊಸ ಪಟ್ಟಣಕ್ಕೆ ವಿರೂಪಾಕ್ಷಪುರ ಎಂಬ ಹೆಸರಿಟ್ಟು ಅಲ್ಲಿ ಪ್ರಸನ್ನ ವಿರೂಪಾಕ್ಷ ದೇವಸ್ಥಾನವನ್ನು ಕಟ್ಟಿಸಿ ಸುವರ್ಣ ಕಲಶದಿಂದ ಪರಿಶೋಭಿಸುವ ಗೋಪುರ, ಮನ್ಮಥ ಕುಂಡ, ಕೆರೆ, ಉದ್ಯಾನ ಮುಂತಾದವುಗಳನ್ನು ನಿರ್ಮಿಸಿದ್ದನೆಂದು ಶಾಸನದಿಂದ ತಿಳಿದುಬರುತ್ತದೆ[35]. ಮನ್ಮಥಕುಂಡ ಪುಷ್ಕರಿಣಿಯು ಹಂಪೆಯ ವಿರೂಪಾಕ್ಷ ದೇವಾಲಯದ ಮನ್ಮಖ ಪುಷ್ಕರಣಿಯನ್ನು ನೆನಪಿಸುತ್ತದೆ. ಲಕ್ಕಣ್ಣನು ಹಂಪೆಯ ವಿರೂಪಾಕ್ಷನ ಮೇಲಿನ ಅಭಿಮಾನದಿಂದ ಅದೇ ಮಾದರಿಯ ದೇವಾಲಯವನ್ನು ತನ್ನ ಪ್ರಾಂತ್ಯದಲ್ಲಿ ನಿರ್ಮಿಸಿರುವುದು ಹಂಪೆಯ ವಿರೂಪಾಕ್ಷನು ಅಮಾತ್ಯರಲ್ಲಿ ಬೀರಿದ್ದ-ಪ್ರಭಾವದ ಪ್ರತೀಕವಾಗಿದೆ. ಸಂಗಮರ ಆಳ್ವಿಕೆಯಲ್ಲಿ ಅಮಾತ್ಯರು, ದಂಡನಾಯಕರು ವಿರೂಪಾಕ್ಷನಿಗೆ ದಾನದತ್ತಿಗಳನ್ನು ನೀಡಿರುವ ಉಲ್ಲೇಖ ಶಾಸನಗಳಿಂದ ತಿಳಿದು ಬರುತ್ತದೆ. ಮಾಧವಾಮಾತ್ಯನ ಮಗ ಶಶಿಧರನು ವಿರೂಪಾಕ್ಷ ದೇವರಿಗೆ ದೀಪದ ಕಂಬವನ್ನು ಮಾಡಿಸಿದ ವಿವರ ಕ್ರಿ.ಶ. 1429ರ ಶಾಸನ ತಿಳಿಸುತ್ತದೆ. ಕ್ರಿ.ಶ. 1467ರ ಶಾಸನವು[36] ವಿಜಯನಗರದ ದೊರೆ ವಿರೂಪಾಕ್ಷನು ಸೋಮಲಾಪುರವನ್ನು ಅಗ್ರಹಾರವನ್ನಾಗಿ ಪರಿವರ್ತಿಸಿ ಅದಕ್ಕೆ ವಿರೂಪಾಕ್ಷಪುರವೆಂದು ಹೆಸರಿಟ್ಟ ವಿವರವನ್ನು

---

[34] *ಎಂ. ಚಿದಾನಂದಮೂರ್ತಿ : ಹೊಸತು ಹೊಸತು, ಪು. 475*

[35] *ಎಪಿಗ್ರಫಿಯಾ ಕರ್ನಾಟಿಕಾ ಸಂ. 10 ಮುಳಬಾಗಿಲ ಶಾ.ಸಂ. 69*

[36] *ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 1. ಬಳ್ಳಾರಿ ಶಾ.ಸಂ. 71, ಪು. 89*

ತಿಳಿಸುತ್ತದೆ. ಸಂಗಮರ ಕಾಲದಲ್ಲಿ ಸಾಮಂತರು, ದಂಡನಾಯಕರು, ಇತರರು ರಾಜ ದಾನಿಯ ಹೊರಗಡೆ ದತ್ತಿದಾನಗಳನ್ನು ಬಿಡುವಾಗ ಕೆಲವೆಡೆ 'ತುಂಗಭದ್ರಾ ನದೀ ತೀರದ ಪಂಪಾಕ್ಷೇತ್ರದ ವಿರೂಪಾಕ್ಷ ದೇವರ' ಹೆಸರಿನಲ್ಲಿ ದತ್ತಿಯನ್ನು ನೀಡುವಷ್ಟರ ಮಟ್ಟಿಗೆ ಪ್ರಸಿದ್ಧಿಯನ್ನು ಪಡೆದಿತ್ತು.

ಸಂಗಮರ ಆಳ್ವಿಕೆಯ ನಂತರದ ರಾಜವಂಶಗಳ ಕಾಲದಲ್ಲಿ ಹಂಪೆಯ ವಿರೂಪಾಕ್ಷ ದೇವಾಲಯಕ್ಕೆ ದತ್ತಿದಾನಗಳು, ದೇವಾಲಯದ ವಿಸ್ತರಣೆ, ಜೀರ್ಣೋದ್ಧಾರ ಇತ್ಯಾದಿ ಚಟುವಟಿಕೆಗಳು ಯಥಾಸ್ಥಿತಿಯಲ್ಲಿ ಮುಂದುವರಿದಂತೆ ಅಲ್ಲೊಂದು ಇಲ್ಲೊಂದು ಶಾಸನಗಳಿಂದ ಮೇಲ್ನೋಟಕ್ಕೆ ಕಂಡುಬರುತ್ತದೆಯಾದರೂ ಹಜಾರರಾಮ ಮತ್ತು ವಿಜಯ ವಿಠಲ ದೇವಾಲಯಗಳೇ ಅಧಿಕ ಸಂಖ್ಯೆಯಲ್ಲಿ ರಾಜರುಗಳಿಂದ, ಮಾಂಡಳಿಕರಿಂದ ಪ್ರತಿಷ್ಠಿತರಿಂದ ಪಡೆದಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಈ ಅರಸರ ಧಾರ್ಮಿಕ ಆಸಕ್ತಿಯ ಬದಲಾವಣೆಯ ಕಾರಣವಾಗಿ ವಿರೂಪಾಕ್ಷ ತನ್ನ ಹೆಚ್ಚುಗಾರಿಕೆಯಲ್ಲಿ ಸ್ವಲ್ಪಮಟ್ಟಿಗೆ ಕಳೆದುಕೊಂಡಂತಾಯಿತು. ಸಂಗಮರ ಆಳ್ವಿಕೆಯವರೆಗೂ ನಿರಂತರವಾಗಿ ಸಾಗಿಬಂದಿದ್ದ ವಿರೂಪಾಕ್ಷ ಪರಂಪರೆಯು ನಂತರದ ರಾಜವಂಶಗಳಲ್ಲಿ ಹಂತಹಂತವಾಗಿ ಇಲಿಮುಖವಾದಂತೆ ಕಂಡುಬರುತ್ತದೆ. ಸಾಳುವರ ಆಳ್ವಿಕೆಯಲ್ಲಿಯೇ, ಇಲ್ಲಿಯವರೆಗೂ ರಾಜಮುದ್ರೆಯಲ್ಲಿ ಉಪಯೋಗಿಸುತ್ತಿದ್ದ 'ಶ್ರೀ ವಿರೂಪಾಕ್ಷ' ಎಂಬ ಅಂಕಿತದ ಸ್ಥಾನದಲ್ಲಿ 'ಶ್ರೀರಾಮಾ' ಎಂಬ ಅಂಕಿತವನ್ನುಪಯೋಗಿಸುತ್ತಿದ್ದರು ಎಂಬುದು ರಾಜನಾಥ ಡಿಂಡಿಮನ 'ಸಾಳುವಾಭ್ಯುದಯ' ಕೃತಿಯಿಂದ ತಿಳಿದುಬರುತ್ತದೆ.

ತುಳುವ ವಂಶದ ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ ವಿರೂಪಾಕ್ಷ ದೇವಾಲಯದ ಮುಖಮಂಟಪವನ್ನು ನಿರ್ಮಿಸಿದ್ದಲ್ಲದೆ ಸಂಗಮ ಅರಸರ ಕಾಲದಲ್ಲಿ ಕಟ್ಟಲ್ಪಟ್ಟ ಮುಖ್ಯ ಗೋಪುರವನ್ನು ಜೀರ್ಣೋದ್ಧಾರ ಮಾಡಿಸಿದನು ಜೊತೆಗೆ ವಿಶಾಲ ಪ್ರಾಕಾರದೊಳಗಿದ್ದ ರಂಗಮಂಟಪದ ಮುಂಭಾಗದಲ್ಲಿ ಚಿಕ್ಕ ಗೋಪುರವನ್ನು ಕಟ್ಟಿಸಿದ್ದಲ್ಲದೆ, ಸಿಂಗೆನಾಯಕನ ಹಳ್ಳಿಯನ್ನು ವಿರೂಪಾಕ್ಷ ದೇವಸ್ಥಾನಕ್ಕೆ ದತ್ತಿಯಾಗಿ ನೀಡಿದ ವಿವರ ಶಾಸನದಿಂದ[37] ತಿಳಿದುಬರುತ್ತದೆ. ಕ್ರಿ.ಶ. 1513 ರ ಶಾಸನದ ಪ್ರಕಾರ ಹಂಪೆಯ ವಿರೂಪಾಕ್ಷನಿಗೆ ವರ್ಷಪೂರ್ತಿ ಅಮೃತಪಡಿ ನೈವೇದ್ಯ, ನಿತ್ಯ ನೈಮಿತ್ತಿಕ, ಚಯಿತ್ರ ಮಾಸದ ರಥೋತ್ಸವ, ಮಕರ ಸಂಕ್ರಾಂತಿ ರಥೋತ್ಸವ, ಮಾಸೋತ್ಸವ, ಪಕ್ಷೋತ್ಸವ ಸಂವತ್ಸರೋತ್ಸವದ ದೀಪಾರಾಧನೆ, ಪಂಚಪರ್ವ ಇತ್ಯಾದಿ ಪೂಜಾ ಕಾರ್ಯಗಳು ನಡೆಯುತ್ತಿದ್ದವು ಎಂಬುದಾಗಿಯೂ, ಆ ಚಟುವಟಿಕೆಗಳು ನಿರಾತಂಕವಾಗಿ ನಡೆಯಲು ದತ್ತಿದಾನಗಳು ಸಲ್ಲುತ್ತಿದ್ದವು ಎಂಬುದಾಗಿ ತಿಳಿದುಬರುತ್ತದೆ[38]. ಕೃಷ್ಣ

[37] ಅದೇ, ಶಾಸನ ಸಂಪುಟ 3 ಹಂಪೆಯ ಶಾಸನ ಸಂಖ್ಯೆ 34 ಪು. 22

[38] ಅದೇ. ಶಾಸನ ಸಂಪುಟ ಹಂಪೆಯ ಶಾಸನ ಸಂಖ್ಯೆ 33. ಪು. 17

ದೇವರಾಯನ ಕಾಲದಲ್ಲಿ ದಂಡನಾಯಕರು ಪ್ರಜಾವರ್ಗದವರು ವಿರೂಪಾಕ್ಷನಿಗೆ, ವಿರೂಪಾಕ್ಷನ ಹೆಸರಿನಲ್ಲಿ ದತ್ತಿ ದಾನಗಳನ್ನು ನೀಡಿದ ವಿವರ ಶಾಸನಗಳಿಂದ ತಿಳಿದು ಬರುತ್ತದೆ. 15 - 16 ನೇ ಶತಮಾನದ ಶಾಸನದಲ್ಲಿ ವಿರೂಪಾಕ್ಷ ದೇವರ ಸ್ಥಾನಿಕ ಲಿಂಗಣಾರಾಧ್ಯನಿಗೆ ವೀರಣ್ಣ ನಾಯಕನು ತನ್ನ ತಂದೆ ಸಂಗಮೇಶ ನಾಯಕನಿಗೆ ಪುಣ್ಯವಾಗಲೆಂದು ವಿರೂಪಾಕ್ಷ ದೇವರಿಗೆ ಎರಡು ಹರಿವಾಣ ನೈವೇದ್ಯಕ್ಕಾಗಿ ಭೂದಾನ ನೀಡುತ್ತಾನೆ[39]. ಕ್ರಿ.ಶ. 1510ರ ಶಾಸನದಲ್ಲಿ ನರಸನಾಯಕನ ತಾಯಿ ಬುಕ್ಕಾಜಿ ಅಂಮನು ಹಂಪೆಯ ತಿರುಮಲಭಟ್ಟನಮಗ ಸಾಇ ಭಟ್ಟನಿಗೆ ವಿರೂಪಾಕ್ಷ ದೇವರ ನೈವೇದ್ಯಕ್ಕಾಗಿ ಭೂದಾನ ಮಾಡಿದ ವಿವರ[40] ವ್ಯಕ್ತವಾಗಿದೆ.

ತುಳುವ ಅರಸರ ಕಾಲದಲ್ಲಿ ಮಾಂಡಳಿಕರು, ಸಾಮಂತರು ಊರೊಡೆಯರು ವಿರೂಪಾಕ್ಷನಿಗೆ ದಾನವಾಗಿ ನೀಡುವಾಗ ವಿರೂಪಾಕ್ಷನ ಹೆಸರಿನಲ್ಲಿ ವ್ಯಕ್ತಿಗಳಿಗೆ ದಾನ ನೀಡಿದ ವಿವರ ಶಾಸನಗಳಲ್ಲಿ ವ್ಯಕ್ತವಾಗಿದೆ. ದಾನಗಳನ್ನು ಪಡೆದವರು ಅದನ್ನು ಸಮರ್ಥವಾಗಿ ವಿರೂಪಾಕ್ಷ ದೇವರಿಗೆ ಸದ್ವಿನಿಯೋಗಿಸಿದರು ಎಂಬುದರ ಬಗೆಗೆ ಶಾಸನಗಳಲ್ಲಿ ಮಾಹಿತಿ ಲಭ್ಯವಿಲ್ಲ. ತುಳುವ ಹಾಗೂ ಅರವೀಡು ಅರಸರ ಕಾಲದಲ್ಲಿ ವಿರೂಪಾಕ್ಷ ದೇವರಿಗೆ ದತ್ತಿದಾನಗಳು ಮುಂದುವರಿದರೂ, ಉಳಿದ ದೇವಾಲಯಗಳು ಪಾಲನ್ನು ಕೇಳಲಾರಂಭಿಸಿದ್ದು ಅದರಲ್ಲಿಯೂ ವಿಠಲ ದೇವಾಲಯವು ಸಿಂಹಪಾಲನ್ನು ಪಡೆಯಲು ಆರಂಭಿಸಿತ್ತು. ತುಳುವ ಅರಸರ ಕಾಲದಲ್ಲಿ ವೈಷ್ಣವ ಪಂಥದ ವಿಠಲ ಪರಂಪರೆಯು ಪ್ರಮುಖ ಸ್ಥಾನವನ್ನು ಪಡೆದುಕೊಂಡಿತೆನ್ನಬಹುದು. ವಿಜಯನಗರದಲ್ಲಿ ವಿಠಲ ಭಕ್ತಿಗೆ ಹೆಚ್ಚಿನ ಆದ್ಯತೆ ದೊರೆತಿದ್ದು ಕೃಷ್ಣದೇವರಾಯನಿಂದಲೇ ಅಲ್ಲ. ಕೃಷ್ಣ ದೇವರಾಯನ ತಂದೆಯ ಕಾಲಕ್ಕೆ ಶ್ರೀವಿಠಲನ ಶ್ರೀವಿರೂಪಾಕ್ಷ ದೇವರೊಡನೆ ರಾಜ ಮರ್ಯಾದೆಗಳನ್ನು ಸ್ವೀಕರಿಸುತ್ತಿದ್ದನೆಂದು, ವಿಜಯನಗರವೂ ಪಂಡರಿಯಂತೆ ಒಂದು ವಿಠಲ ಕ್ಷೇತ್ರವಾಗಲಾರಂಭಿಸಲು ಪ್ರಾರಂಭಿಸಿತ್ತು[41] ಎಂದು ಶಂ.ಬಾ. ಜೋಷಿಯವರು ಅಭಿಪ್ರಾಯ ಪಟ್ಟಿದ್ದಾರೆ. ತುಳುವ ಅರಸರ ದೃಷ್ಟಿಯಲ್ಲಿ ಹಂಪೆಯ ವಿರೂಪಾಕ್ಷ ಮರೆಯಾಗಲು ಪ್ರಾರಂಭಿಸಿದ್ದ ಎಂದೆನಿಸುತ್ತದೆ. ತುಳುವ ಮತ್ತು ಅರವೀಡು ಮನೆತನಗಳ ಕಾಲದ ಕೆಲವು ಶಾಸನಗಳಲ್ಲಿ ಶ್ರೀವಿರೂಪಾಕ್ಷ ಹಾಗೂ ವಿಠಲ ಇಬ್ಬರ ಹೆಸರನ್ನು ಒಟ್ಟಿಗೆ ಸೇರಿಸಿ ಅವರ ಹೆಸರಿನಲ್ಲಿ ದಾನವನ್ನು ಬಿಟ್ಟಿರುವುದು ಕಂಡು ಬರುತ್ತದೆ. ಸದಾಶಿವರಾಯನ ಕಾಲದ ಕ್ರಿ.ಶ. 1565ರ ಶಾಸನದಲ್ಲಿ[42] ಬೆಳುಗಲ್ಲ ಸಿದ್ಧೇಶ್ವರ ದೇವರ ಅಮೃತ ಪಡಿಗೆ, ಅರ್ಚನ ವಿಧಿಗೆ ಶ್ರೀ ತುಂಗಭದ್ರಾ ತೀರದಲು ಶ್ರೀ ವಿರೂ

---

[39] *ಅದೇ , ಹಂಪೆಯ ಶಾಸನ ಸಂಖ್ಯೆ 29, ಪು. 14*

[40] *ಅದೇ, ಹಂಪೆಯ ಶಾಸನ ಸಂಖ್ಯೆ 32, ಪು. 16*

[41] *ಉದ್ಧೃತ : ಸತ್ಯಶುದ್ಧಕಾಯಕ (ಸಂ॥ಬಿ. ರಾಜಶೇಖರಪ್ಪ) ಸಂ. 5 ಸಂ. 3-4 ಪು. 96*

[42] *ಕನ್ನಡ ವಿಶ್ವವಿದ್ಯಾಲಯ ಸಾಸನ ಸಂ. 1 ಬಳ್ಳಾರಿ ಶಾ.ಸಂ. 69 ಪು. 86*

ಪಾಕ್ಷ ವಿಠಲರ ಸನ್ನಿಧಿಯಲ್ಲಿ ಭೂದಾನವನ್ನು ರಘುನಾಥ ರಾಜಯ್ಯ ಅರಸು ನೀಡಿದ್ದ ವಿವರ ನಿದರ್ಶನವಾಗಿದೆ. ಸಂಗಮರ ನಂತರದ ಅರಸರುಗಳು ಧಾರ್ಮಿಕ ಆಸಕ್ತಿಯ ಫಲವಾಗಿ ಹಂಪೆಯ ವಿರೂಪಾಕ್ಷ ದೇವಾಲಯವು ಹಂತ ಹಂತವಾಗಿ ಹೆಚ್ಚುಗಾರಿಕೆಯನ್ನು ಕಳೆದುಕೊಂಡಿರತು. ಇಲ್ಲಿಯವರೆಗೂ ವಿರೂಪಾಕ್ಷ ದೇವಾಲಯದಲ್ಲಿ ಕೇಂದ್ರೀಕೃತ ಗೊಳ್ಳುತ್ತಿದ್ದ ಸಂಪತ್ತು ಹಜಾರರಾಮ, ವಿಠಲ ಇತ್ಯಾದಿ ದೇವಾಲಯಗಳತ್ತ ವಿಕೇಂದ್ರಿ ಕರಣಗೊಳ್ಳತೊಡಗಿತು. ವಿರೂಪಾಕ್ಷನಷ್ಟೇ ಪ್ರಭಾವವನ್ನು ವಿಠಲ ದೇವಾಲಯವು ಪಡೆದಿತ್ತು. ಕೃಷ್ಣದೇವರಾಯ ಮೊದಲುಗೊಂಡು ಅರಸಿಯುರು, ಸಾಮಂತರು ಮಾಂಡಳಿಕರು, ಸಾಮಾನ್ಯ ಜನತೆ ವಿವಿಧ ರೀತಿಯಲ್ಲಿ ದತ್ತಿ ದಾನಗಳನ್ನು ವಿಠಲ ದೇವರಿಗೆ ನೀಡಿರುವುದನ್ನು ಸು. 34 ಹಂಪೆಯ ಪರಿಸರದ ಶಾಸನಗಳು ದೃಢಪಡಿಸಿವೆ[43]. ಕ್ರಿ.ಶ. 1524ರ ವೇಳೆಗಾಗಲೇ ವಿರೂಪಾಕ್ಷ ದೇವಾಲಯಕ್ಕೆ ನೀಡಿದ ದತ್ತಿಯಲ್ಲಿಯ ಕೆಲ ಭಾಗವನ್ನು ಅನ್ಯ ದೇವರಿಗೆ ನೀಡಲು ರಾಜರು ಆಜ್ಞೆ ಮಾಡಿದ್ದನ್ನು ಶಾಸನ ತಿಳಿಸುತ್ತದೆ. ತೆರಕಣಾಂಬಿಯ ವಿರೂಪಾಕ್ಷ ಭಟ್ಟನ ಮಗ ಗೋಪಿನಾಥ ದೀಕ್ಷಿತನು ಹಿರಿಯ ಕಾಲುವೆಯಲ್ಲಿ ತಾನು ಪ್ರತಿಷ್ಠಾಪಿಸಿದ ರಘುನಾಥದೇವರಿಗೆ ಪಂಪಾ ವಿರೂಪಾಕ್ಷದೇವರ ದೇವಾಲಯದಿಂದ ದಿನವೊಂದಕ್ಕೆ ಐದು ಪಡಿ ಅಕ್ಕಿ, ಕಾಲುಪಡಿ ಎಣ್ಣೆಯನ್ನು ಕೊಡುವ ಕಟ್ಟಳೆಯನ್ನು ಅರಸ ಕೃಷ್ಣದೇವರಾಯ ಮಾಡಿದ ವಿವರ ಕಂಡುಬರುತ್ತದೆ[44]. ಕ್ರಿ.ಶ. 1529ರ ಶಾಸನದ ಪ್ರಕಾರ ಕನ್ನಿಸೆಟ್ಟಿ ಪಿಜಾರಿಸೆಟ್ಟಿ ಮತ್ತು ಇತರರು ವೊಳಕೋಟೆಯ ರೆಂಮುಜೆಡಿಯ ಬಳಿಯ ಮಡುವಿನ ಒಂದು ಖಂಡುಗ ಹೊಲಗದ್ದೆಯನ್ನು ತೆಗೆದುಕೊಂಡು ಅದರಲ್ಲಿ ರಾಮಚಂದ್ರ ದೇವಸ್ಥಾನದ ಭಾಗವನ್ನು ಕಳೆದು ಉಳಿದ ಭಾಗವನ್ನು ವಿರೂಪಾಕ್ಷ ದೇವರಿಗೆ ದಾನವಾಗಿಕೊಟ್ಟರು ಎಂಬ ವಿಷಯವನ್ನು ದಾಖಲಿಸಿದೆ[45]. ಕ್ರಿ.ಶ. 1535ರ ಶಾಸನವು ವಿರೂಪಾಕ್ಷ ಸನ್ನಿಧಿಯ ಪದ್ಮ ವಿನಾಯಕನಿಗೆ ತಿರುಮಲದೇವಿಪಟ್ಟಣದ ಬಳಿ ತೋಟವನ್ನು ಸಮರ್ಪಿಸಿದ ವಿಷಯ ತಿಳಿಸುತ್ತದೆ. ಶಾಸನಗಳನ್ನು ಉಲ್ಲೇಖಿಸಿ ಹೇಳುವುದಾದರೆ ತುಳುವ ಅರಸರ ಕಾಲಕ್ಕಾಗಲೇ ವಿರೂಪಾಕ್ಷನ ಸಾಮ್ರಾಜ್ಯದೊಳಗೆ ವಿಜಯವಿಠಲ ದೇವನು ಪಾಲನ್ನು ಕೇಳಲು ಪ್ರಾರಂಭಿಸಿ, ವಿರೂಪಾಕ್ಷನಷ್ಟೇ ಸ್ಥಾನವನ್ನೇ ವಿಠಲನು ಪಡೆದುಕೊಂಡಿದ್ದ ಎಂದು ಹೇಳಬಹುದು. ಹಂಪೆಯಲ್ಲಿ ಅತ್ಯಂತ ಪ್ರಭಾವಶಾಲಿ , ಏಕಮೇವಾದ್ವಿತೀಯನಾಗಿದ್ದ ವಿರೂಪಾಕ್ಷನಿಗೆ ವಿಠಲಸ್ವಾಮಿಯು ಪ್ರಬಲ ಸ್ಪರ್ಧಿಯಾಗಿ ಕ್ರಿ.ಶ. 1520ರ ನಂತರ ಕಾಣತೊಡಗಿದ್ದು ಶಾಸನಗಳಿಂದ ವ್ಯಕ್ತವಾಗುತ್ತದೆ. ಕೆಲವು ಕಾಲ ವಿರೂಪಾಕ್ಷನಿಗಿಂತ ವಿಠಲನ

---

[43]ಹೆಚ್ಚಿನ ವಿವರಗಳಿಗೆ ನೋಡಿ, ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ 3 ಹಂಪೆಯ ಶಾಸನಗಳು ಪು. 130 – 176

[44]ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ –3 ಹಂಪೆಯ ಶಾಸನಗಳು ಸಂ. 229, ಪು. 179 ಶಾ.ಸಂ. 27. ಪು. 13

[45]ಅದೇ ಶಾ.ಸಂ. 27, ಪು. 13

ವೈಭವವೇ ಹೆಚ್ಚಾದಂತೆ ಕಂಡುಬರುತ್ತದೆ. ರಾಜಧಾನಿಯ ಹೊರಗಡೆ ದತ್ತಿದಾನಗಳನ್ನು ನೀಡುವ ವ್ಯಕ್ತಿಗಳು 'ತುಂಗಭದ್ರಾ ತೀರದಲು ಭಾಸ್ಕರ ಕ್ಷೇತ್ರದಲು ಪಂಪಾ ಸರಸ್ಸುವಿನ ಸಮೀಪವಾದ ಶ್ರೀ ವಿಜಯವಿಠಲ ದೇವರ ಸನ್ನಿಧಿಯಲ್ಲಿ' ಎಂದು ಉಲ್ಲೇಖಿಸಿ ದಾನಗಳನ್ನು ನೀಡುವಷ್ಟರ ಮಟ್ಟಿಗೆ ಖ್ಯಾತಿಯನ್ನು ಪಡೆದಿದ್ದ ಎಂಬುದು ವ್ಯಕ್ತವಾಗುತ್ತದೆ. ಕ್ರಿ.ಶ. 1542ರ ಶಾಸನದಲ್ಲಿಯ ವಿವರ ಪ್ರಕಾರ ಹಿಂದೆ ವಿರೂಪಾಕ್ಷ ದೇವರ ಪಡಿಗೆ ಕುರುಗೋಡು ಸೀಮೆಗೆ ಸಲುವ ಗುಂಡಿಗೆ ನೂರ ಗ್ರಾಮವನ್ನು ಪ್ರತಾಪ ದೇವ ರಾಯನು ಲಕ್ಷ್ಮೀಕಾಂತ ದೀಕ್ಷಿತರಿಗೆ ನೀಡಿದ್ದನ್ನು ಲಖಣ ದಣಾಯಕನು ಅರಮನೆಗೆ ಮುಟ್ಟುಗೋಲು ಹಾಕಿಕೊಂಡಿದ್ದನೆಂದೂ ಇದನ್ನು ಲಕ್ಷ್ಮೀಕಾಂತ ದೀಕ್ಷಿತರ ವಂಶಸ್ಥರ ಬಳಿ ಇದ್ದ ದಾಖಲೆಗಳನ್ನು ಪರಿಶೀಲಿಸಿ ಸದಾಶಿವರಾಯನು ಆ ವಂಶದವರಿಗೆ ಮತ್ತೆ ನೀಡಿದ ವಿವರ ಉಕ್ತವಾಗಿದೆ[47]. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಪ್ರತಾಪರಾಯನು ಲಕ್ಷ್ಮೀ ಕಾಂತ ದೀಕ್ಷಿತರಿಗೆ ನೀಡಿದ್ದ ವಿರೂಪಾಕ್ಷ ದೇವರ ಪಡಿಗೆ ಕುರುಗೋಡು ಸೀಮೆಗೆ ಸಲುವ ಗುಂಡಿಗೆನೂರ ಗ್ರಾಮವನ್ನು ಲಕ್ಕಣ್ಣ ದಂಡನಾಯಕ ಮುಟ್ಟುಗೋಲು ಹಾಕಿಕೊಂಡಿದ್ದ ಎಂಬುದು. ಬಹುಶಃ ಇದಕ್ಕೆ ಕಾರಣ ವಿರೂಪಾಕ್ಷನ ಹೆಸರಿನಲ್ಲಿ ನೀಡಿದ ದಾನ ಸದ್ವಿನಿಯೋಗವಾಗದೇ ಇದ್ದುದನ್ನು ಕಂಡು ವಿರೂಪಾಕ್ಷನಲ್ಲಿ ನಿಷ್ಠೆಯನ್ನುಳ್ಳ ದಂಡ ನಾಯಕನು ಅದನ್ನು ಅರಮನೆಗೆ ಮುಟ್ಟುಗೋಲು ಹಾಕಿಕೊಂಡಿದ್ದಿರಬಹುದು ಎಂದು ಊಹೆ ಮಾಡಲು ಅವಕಾಶ ಇದೆ. ಈ ರೀತಿಯ ಉಲ್ಲೇಖಗಳು ವಿರೂಪಾಕ್ಷನ ಹೆಸರಿನಲ್ಲಿ ನೀಡಿದ ದಾನಗಳ ಬಳಕೆಯ ಸಾರ್ಥಕತೆಯ ಬಗೆಗೆ ಬೆಳಕು ಚೆಲ್ಲುತ್ತದೆ. ಹಂಪೆಯ ವಿರೂಪಾಕ್ಷ ದೇವರಿಗೆ ಸಂಗಮರ ಅರಸರುಗಳ ಹಾಗೆ ನಂತರದ ಅರಸರು ಗಳಿಂದ ಪ್ರೋತ್ಸಾಹ ದೊರೆಯದಿದ್ದರೂ ಪೂರ್ವದಿಂದ ಜನತೆಯ ಆರಾಧ್ಯ ದೈವನಾಗಿದ್ದ ವಿರೂಪಾಕ್ಷನು ಭಕ್ತ ಜನತೆಯ ನೆರವಿನಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದ ನೆಂದು ಹೇಳಬಹುದು. ವಿರೂಪಾಕ್ಷನು ಮಹಿಮಾಶಾಲಿಯಾಗಿ 15-16ನೇ ಶತಮಾನ ದಲ್ಲಿಯೂ ಮುಂದುವರಿದಿದ್ದ ಎಂಬುದಕ್ಕೆ ಶಾಸನಗಳಲ್ಲಿ ಮಾಹಿತಿ ಇದೆ. ಕೆಲವು ದಂಡ ನಾಯಕರು, ಜನತೆ ವಿರೂಪಾಕ್ಷ ದೇವರನ್ನು, ದೇವಾಲಯದ ಶಿಖರವನ್ನು ಕಳಸವನ್ನು ದರ್ಶನ ಮಾಡಿದರೆ ಕೃತಾರ್ಥರಾದೆವು ಎನ್ನುವ ಭಾವನೆಯನ್ನು ತಾಳಿದವರಾಗಿದ್ದರು. ರಾಮಯ್ಯನ ಮಗ ಪಿರಿಯ ನಾಗಣನು ವಿರೂಪಾಕ್ಷ ದೇವರ (ದೇವಸ್ಥಾನದ) ಶಿಖರಕ್ಕೆ ನಮಸ್ಕಾರ ಮಾಡಿ ಕೃತಾರ್ಥನಾದನೆಂದು ತಿಳಿಸುತ್ತದೆ[48]. ಮತ್ತರಸನ ಮಗಳು ರಾಮಾ ಯಿಯು ವಿರೂಪಾಕ್ಷ ದೇವರ ಕಳಸವನ್ನು ನೋಡಿ ನಮಸ್ಕಾರ ಮಾಡಿ ಕೃತಾರ್ಥಳಾದ ಳೆಂದು ಶಾಸನ ತಿಳಿಸುತ್ತದೆ[49]. ಕೇತಪ್ಪನ ಮಗ ಮಾದಣ್ಣನು ಮತಂಗ ಪರ್ವತಕ್ಕೆ ಬಂದು

---

[46]ಅದೇ ಶಾಸನ ಸಂಪು –1, ಹೊಸಪೇಟೆ ಸಂ. 3 ಪು. 140

[47]ಅದೇ ಶಾಸನ ಸಂಪುಟ 1, ಸಿರುಗುಪ್ಪ ಸಂ. 43, ಪು. 121

[48]ಅದೇ, ಶಾ.ಸಂಪುಟ. 3 ಶಾ.ಸಂಖ್ಯೆ 115, ಪು. 97

[49]ಅದೇ, ಶಾಸನ ಸಂಖ್ಯೆ 116. ಪು. 98

ವಿರೂಪಾಕ್ಷ ದೇವರನ್ನು ಕಂಡು ಕೃತಾರ್ಥನಾದನೆಂದು ಶಾಸನದಿಂದ ತಿಳಿದು ಬರುತ್ತದೆ[50]. ಹದಿನೈದನೇ ಶತಮಾನದ ಶಾಸನದಲ್ಲಿ ಬೊಮ್ಮೋಜ ತನ್ನನ್ನು ವಿರೂಪಾಕ್ಷ ದೇವರ ಸೇವಕ ಎಂದು ಕರೆದುಕೊಂಡಿದ್ದಾನೆ.

ಕ್ರಿ.ಶ. 15-16ನೇ ಶತಮಾನದ ಶಾಸನದಲ್ಲಿ 'ವಿರೂಪಾಕ್ಷ ದೇವರ ಪಾದಗಳ ಉಲ್ಲೇಖ ಇದ್ದು ಈ ಸ್ಥಳಕ್ಕೆ ಬಂದು ಪಾದಗಳನ್ನು ಪೂಜೆ ಮಾಡಿದವರಿಗೆ ಶಾಪ ವಿಧಿಸಿದ ವಿಷಯ ವ್ಯಕ್ತವಾಗಿದೆ[51]. ಈ ವಿವರ ಪರೋಕ್ಷವಾಗಿ ಹಂಪೆ ವಿರೂಪಾಕ್ಷನ ಪ್ರಭಾವದಲ್ಲಿ ಸ್ವಲ್ಪ ಮಟ್ಟಿಗೆ ಇಳಿಮುಖವಾದುದ್ದನ್ನು ಸೂಚಿಸುತ್ತದೆ. ತುಳುವ ಹಾಗೂ ನಂತರದ ಅರಸರ ಕಾಲದಲ್ಲಿಯ ವಿರೂಪಾಕ್ಷ ದೇವಾಲಯಕ್ಕೆ ನೀಡಿದ ದತ್ತಿದಾನಗಳು ವಿಜಯವಿಠಲ ದೇವಾಲಯಕ್ಕೆ ಬಿಟ್ಟ ದತ್ತಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳುವುದಾದರೆ ಅಂತಹ ಗಣನೀಯವಾದವುಗಳಿಲ್ಲ ಎಂದೆನಿಸುತ್ತದೆ. ಬಹುಮಟ್ಟಿಗೆ ಸಾಮಾನ್ಯ ಭಕ್ತ ಜನತೆ ನೀಡಿದ ಕೊಡುಗೆಗಳಾಗಿವೆ. ಶ್ರೀ ವಿರೂಪಾಕ್ಷ ದೇವರಿಗೆ ಮಂಲಣರಸ ಮಾಡಿಸಿದುದು, ಹತ್ತಿ ಬೆಳಗಲ್ಲಿನ ನಾಗಣ ಗವುಡ ಮತ್ತು ಮುದೆಯಂಮ್ಮನ ಕೊಮರ ಸೋಮಣ ಗವುಡನು ವಿರೂಪಾಕ್ಷ ದೇವರಿಗೆ ಸಮರ್ಪಿಸಿದ ಘಂಟೆ[52] ಇತ್ಯಾದಿ ಅಂಶಗಳು ಮೇಲಿನ ಹೇಳಿಕೆಯನ್ನು ಸಾಕ್ಷೀಕರಿಸುತ್ತವೆ. ಭಕ್ತ ಜನತೆಯ ಮೂಲಕ ಯಥಾರೀತಿಯಲ್ಲಿ ವಿರೂಪಾಕ್ಷ ದೇವಾಲಯದ ಪೂಜಾ ಕಾರ್ಯಗಳು ನಡೆಯುತ್ತಿದ್ದವು ಎನ್ನಬಹುದು. ವಿಜಯನಗರ ಪೂರ್ವ ಹಾಗೂ ವಿಜಯನಗರದ ಸಂಗಮ ಅರಸರುಗಳ ಕಾಲದಲ್ಲಿ ಧಾರ್ಮಿಕ ಚಕ್ರಾಧಿಪತ್ಯವನ್ನು ಪಡೆದುಕೊಂಡು, ಸಾಹಿತ್ಯಕ, ಆರ್ಥಿಕ ಸಾಂಸ್ಕೃತಿಕ ಕೇಂದ್ರವಾಗಿದ್ದ ಹಂಪೆಯ ವಿರೂಪಾಕ್ಷ ದೇವಾಲಯವು ನಂತರ ಅರಸರುಗಳ ಕಾಲದಲ್ಲಿ ಧಾರ್ಮಿಕ ಶ್ರದ್ಧೆಯ ಬದಲಾವಣೆಯ ಕಾರಣ ಅರಸರ ನಿರ್ಲಕ್ಷೆಗೆ ಒಳಗಾಯಿತು. ಆದಾಗ್ಯೂ ಕ್ರಿ.ಶ. 1565ರ ರಕ್ಕಸತಂಗಡಗಿ ಯುದ್ಧದಲ್ಲಿಯ ವಿಜಯನಗರದ ಪತದನ ನಂತರ ಉಳಿದೆಲ್ಲಾ ದೇವಾಲಯಗಳು ಅಸ್ತಿತ್ವ ಕಳೆದುಕೊಂಡರೂ ಹಂಪೆಯ ವಿರೂಪಾಕ್ಷ ದೇವಾಲಯವು ಭಕ್ತ ಜನತೆಯ ಪ್ರೋತ್ಸಾಹದಿಂದ ಮುಂಚಿನಷ್ಟು ಅಲ್ಲದಿದ್ದರೂ ಬಹುಮಟ್ಟಿಗೆ ಅಸ್ತಿತ್ವವನ್ನು ಉಳಿಸಿಕೊಂಡು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿ ಮುಂದುವರಿದುಕೊಂಡು ಬಂದಿದೆ. ವಿಜಯ ನಗರ ಸಾಮ್ರಾಜ್ಯದ ಪತನದ ನಂತರ ಹಂಪೆಯ ವಿರೂಪಾಕ್ಷನಲ್ಲಿ ಕವಿಗಳು, ಜನತೆಯೂ, ಸ್ಥಳೀಯ ಅರಸರು ಎಂದಿನಂತೆ ನಿಷ್ಠೆಯನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಕ್ರಿ.ಶ. 1584ರಲ್ಲಿದ್ದ ವಿರೂಪಾಕ್ಷ ಪಂಡಿತನು ತನ್ನ ಚನ್ನಬಸವ ಪುರಾಣದಲ್ಲಿ ಪ್ರತಿಸಂಧಿಯ ಮೊದಲ ಪದ್ಯದಲ್ಲಿ ಪ್ರಾರ್ಥನಾ ರೂಪವಾಗಿ ಹಂಪೆಯ ವಿರೂಪಾಕ್ಷನ ಸ್ತುತಿಯನ್ನು

---

[50] ಅದೇ, ಶಾಸನ ಸಂಖ್ಯೆ 117, ಪು. 99

[51] ಅದೇ ಶಾಸನ ಸಂಖ್ಯೆ 23, ಪು. 11

[52] ಅದೇ, ಶಾಸನ ಸಂಖ್ಯೆ 48, ಪು. 27

ಮಾಡಿದ್ದಾನೆ. ಹಸ್ತಪ್ರತಿಗಳಲ್ಲಿ ವಿರೂಪಾಕ್ಷನ ಸ್ತುತಿ ಇರುವ ಪದ್ಯಗಳೇ ಪ್ರತ್ಯೇಕವಾಗಿ ಸಿಗುತ್ತಿದ್ದು ಚೆನ್ನಬಸವ ಪುರಾಣದ ನಾಂದ್ಯ ಪದ್ಯಗಳಾಗಿವೆ. ಹದಿನೇಳು ಹಾಗೂ ಹದಿನೆಂಟನೇ ಶತಮಾನಗಳಲ್ಲಿ ಹಸ್ತಪ್ರತಿಗಳನ್ನು ನಕಲು ಮಾಡಿರುವ ಹಸ್ತಪ್ರತಿಕಾರರು ತಮ್ಮ ಪುಷ್ಪಿಕೆಗಳಲ್ಲಿ ಹಂಪೆ ವಿರೂಪಾಕ್ಷನನ್ನು ಕುರಿತು 'ಹಂಪೆ ವಿರೂಪಾಕ್ಷದೇವ, ಶ್ರೀ ಗುರು ಹಂಪೆ ವಿರೂಪಾಕ್ಷ ಲಿಂಗಾಯನಮಃ , ಹಂಪೆ ವಿರೂಪಾಕ್ಷ ಲಿಂಗ ಸ್ವಾಮಿಯವರ ಪಾದವೇಗತಿ. ಶ್ರೀ ಹಂಪೆ ವಿರೂಪಾಕ್ಷ ಲಿಂಗಯೇ ನಮಹಾ, ಶ್ರೀಗುರು ಹಂಪೆಯ ವಿರೂಪಾಕ್ಷಾಯಿ ನಮಃ[53]' ಎಂದು ಮುಕ್ತ ಕಂಠದಿಂದ ಸ್ತುತಿಸಿರುವುದನ್ನು ನೋಡಿದರೆ ಕವಿಗಳ , ಲಿಪಿಕಾರರ, ಜನತೆಯ ಆರಾಧ್ಯ ದೈವವಾಗಿ ಹಂಪೆಯ ವಿರೂಪಾಕ್ಷ ಮುಂದುವರೆದುಕೊಂಡು ಬಂದಿದ್ದ ಎಂಬುದು ವ್ಯಕ್ತವಾಗುತ್ತದೆ.

ಒಟ್ಟಾರೆ ಹಂಪೆಯ ವಿರೂಪಾಕ್ಷ ದೇವಾಲಯವು ಪ್ರಾಚೀನ ಕಾಲದಿಂದಲೂ ಇಲ್ಲಿಯವರೆಗೂ ಹಲವಾರು ಏರಿಳಿತಗಳ ನಡುವೆಯೂ ಅರಸರುಗಳ, ಸಾಮಂತರ ಅಮಾತ್ಯರ, ಸ್ಥಳೀಯ ಅರಸರ, ಸಾಮಾನ್ಯ ಜನತೆಯ ಆಶಯದ ಪ್ರತೀಕವಾಗಿದ್ದು ಸಾಂಸ್ಕೃತಿಕ ಜೀವನ ರೂಪುಗೊಳ್ಳುವಲ್ಲಿ ಪ್ರಮುಖಪಾತ್ರ ವಹಿಸಿದೆ.

---

[53]ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು (ಸಂ.//ಎಸ್. ಶಿವಣ್ಣ) ಪು. 24, 26.112

ಸಿಂಹನಗದ್ದೆ ಜೈನಮಠದ ಅಪ್ರಕಟಿತ ತಾಮ್ರ ಶಾಸನಗಳು

– ಎಂ.ಜಿ. ಮಂಜುನಾಥ

ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರವು ಕರ್ನಾಟಕದ ಪ್ರಮುಖ ಜೈನ ಕ್ಷೇತ್ರಗಳಲ್ಲೊಂದಾಗಿದೆ. ಸಿಂಹನಗದ್ದೆ ಎಂಬುದು ನರಸಿಂಹರಾಜಪುರದ ಹಿಂದಿನ ಹೆಸರು. ಸಿಂಹನಗದ್ದೆಯು ಜೈನಧರ್ಮೀಯರ ಪವಿತ್ರವಾದ ತೀರ್ಥಕ್ಷೇತ್ರವಾಗಿದೆ. ಸಿಂಹನಗದ್ದೆಯ ಜೈನಮಠವು ಕರ್ನಾಟಕದ ಪ್ರಮುಖ ಜೈನಮಠಗಳಲ್ಲೊಂದಾಗಿದ್ದು ನಾಡಿನಾದ್ಯಂತ ಭಕ್ತಾದಿಗಳನ್ನು ಹೊಂದಿದೆ.

ನಾನು ಕ್ಷೇತ್ರಕಾರ್ಯಕ್ಕೆಂದು ಸಿಂಹನಗದ್ದೆಗೆ ಹೋಗಿದ್ದಾಗ ಅಲ್ಲಿಯ ಜೈನಮಠದಲ್ಲಿನ ತಾಮ್ರ ಶಾಸನಗಳನ್ನು ಮಠಾಧೀಶರಾದ ಸ್ವಸ್ತಿಶ್ರೀ ಜಗದ್ಗುರು ಶ್ರೀ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯರು ತೋರಿಸಿದರು. ಆ ತಾಮ್ರ ಶಾಸನಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದುದರ ಫಲಿತವಾಗಿ ಈ ಸಂಪ್ರಬಂಧ ರೂಪುಗೊಂಡಿದೆ.

ಪ್ರಸ್ತುತ ತಾಮ್ರಪಟಗಳ ಗೊಂಚಲಿನಲ್ಲಿ ನಾಲ್ಕು ಹಲಗೆಗಳಿವೆ. ಈ ನಾಲ್ಕೂ ಹಲಗೆಗಳ ಎರಡೂ ಬದಿಗಳಲ್ಲಿ ಬರಹವಿದೆ. ಹಿಂದೆ ಬರೆಯಲಾಗಿದ್ದ ದೇವನಾಗರಿ ಲಿಪಿಯ ಶಾಸನವನ್ನು ಅಳಿಸಿಹಾಕಿ ನಂತರ ಈ ಶಾಸನಗಳನ್ನು ಕೊರೆಯಲಾಗಿದೆ. ಹಿಂದೆ ಬರೆಯಲ್ಪಟ್ಟ ದೇವನಾಗರಿ ಲಿಪಿಯ ಶಾಸನವು ಅಸ್ಪಷ್ಟವಾಗಿ ಕಾಣುವಂತಿದೆ.

ಈ ತಾಮ್ರಪತ್ರಗಳ ಒಂದನೇ ಹಲಗೆ ೧೮ ಸೆಂ.ಮೀ. ಅಗಲ, ೨೬ ಸೆಂ.ಮೀ ಉದ್ದವಾಗಿವೆ. ಎರಡನೇ ಹಲಗೆ ೧೭.೫ ಸೆಂ.ಮೀ. ಅಗಲ, ೨೫.೫ ಸೆಂ.ಮೀ ಉದ್ದವಾಗಿದೆ. ಮೂರನೇ ಹಲಗೆ ೧೭.೫ ಸೆಂ.ಮೀ. ಅಗಲ, ೨೬ ಸೆಂ.ಮೀ. ಉದ್ದವಾಗಿದೆ. ನಾಲ್ಕನೇ ಹಲಗೆ ೧೮ ಸೆಂ.ಮೀ. ಅಗಲ ೨೬.೫ ಸೆಂ.ಮೀ ಉದ್ದವಾಗಿದೆ. ಈ ನಾಲ್ಕು ತಾಮ್ರಪತ್ರಗಳನ್ನು ೫ ಸೆಂ.ಮೀ. ವ್ಯಾಸದ ಬಳೆಯಿಂದ ಬಂಧಿಸಿದ್ದು, ವರಾಹ ಲಾಂಛನದ ಮುದ್ರೆಗಳನ್ನು ಹಾಕಲಾಗಿದೆ. ವರಾಹ ಲಾಂಛನದ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರಗಳಿವೆ.

ಇಲ್ಲಿಯ ಎಂಟೂ ಶಾಸನಗಳು ಅಪ್ರಕಟಿತ ಶಾಸನಗಳು. ಆದರೆ ಈ ಶಾಸನಗಳ ತಾಳೇಗರಿ ಪ್ರತಿಯನ್ನು ಬಳಸಿಕೊಂಡು ಅಲ್ಪ ಸ್ವಲ್ಪ ವ್ಯತ್ಯಾಸವಾಗಿರುವಂತೆ ನಾಲ್ಕು

ಶಾಸನಗಳನ್ನು EC.VIರಲ್ಲಿ ಪ್ರಕಟಿಸಲಾಗಿದೆ. ಮೂರು ಶಾಸನಗಳನ್ನು ೧೯೩೧ ರ M.A.R.ನಲ್ಲಿ ಮೂಲ ಶಾಸನಗಳ ಪ್ರತಿಯಾದ ಬೇರೆ ಶಾಸನಗಳನ್ನು (ತಾಮ್ರ ಪತ್ರಗಳು) ಬಳಸಿ ಪ್ರಕಟಿಸಲಾಗಿದೆ. ಆದರೆ ಇವೂ ಸಹ ಅಲ್ಪಸ್ವಲ್ಪ ಬೇರೆ ಪಾಠಗಳನ್ನು ಹೊಂದಿವೆ. ಮತ್ತೊಂದು ಶಾಸನ ಎಲ್ಲೂ ಪ್ರಕಟವಾಗಿಲ್ಲ. ಅದರ ಬಗ್ಗೆ ೧೯೩೧ ರ M.A.R.ನಲ್ಲಿ ಒಂದು ಸಾಲಿನಲ್ಲಿ ವಿವರಿಸಲಾಗಿದೆ.

ಎಪಿಗ್ರಾಫಿಯ ಕರ್ನಾಟಿಕದ ಚಿಕ್ಕಮಗಳೂರು ಜಿಲ್ಲೆಯEC.VI ಕೊಪ್ಪ ೨೧,೨೨,೨೩,೨೪ನೇ ಈ ನಾಲ್ಕು ಶಾಸನಗಳು "ಸ್ಥಳದವರ ಪ್ರತಿಯಿಂದ" ಎಂದು ಉಲ್ಲೇಖಿಸಲ್ಪಟ್ಟು ತಾಳೆಗರಿಯಲ್ಲಿ ಲಿಖಿತವಾದಂತಹವು. ಶಾಸನ ಸಂಪುಟಗಳ ಪರಿಷ್ಕೃತ ಆವೃತ್ತಿಗಳಲ್ಲಿ ಈ ರೀತಿಯ ತಾಳೆಗರಿಯ ಬರಹಗಳನ್ನು ಶಾಸನಗಳೆಂದು ಮಾನ್ಯ ಮಾಡುವುದಿಲ್ಲವಾದ್ದರಿಂದ ಇವುಗಳನ್ನು ಪ್ರಕಟಿಸುತ್ತಿರಲಿಲ್ಲ. EC.VI ರಲ್ಲಿ ಈ ನಾಲ್ಕು ಶಾಸನಗಳನ್ನು ವಾಡಿಕೆಯ ಕ್ರಮದಲ್ಲಿ ಪ್ರಕಟಿಸದೆ, ಉದ್ದವಾಗಿ ಒಂದೇ ವಾಕ್ಯದಲ್ಲಿ ಪ್ರಕಟಿಸಲಾಗಿದೆ. ಉಳಿದ ಮೂರು ಶಾಸನಗಳನ್ನು ೧೯೩೧ ರ M.A.R.ನಲ್ಲಿ ಪ್ರಕಟಿಸಲಾಗಿದೆ. ಇವು ತರೀಕೆರೆಯ ಜೋಯಿಸ ಶ್ರೀ ಟಿ.ಸಿ. ವೆಂಕಟಕೃಷ್ಣಪ್ಪಯ್ಯ ಮತ್ತು ಶ್ರೀ ಬಿ. ದೇವರಭಟ್ಟರ ವಶದಲ್ಲಿದೆಯೆಂದು ಸಂಪಾದಕರು ತಿಳಿಸಿದ್ದಾರೆ. ಬಹುಶಃ ಈ ಮೂರೂ ಶಾಸನಗಳ ಮತ್ತೊಂದು ಪ್ರತಿ ತರೀಕೆರೆಯಲ್ಲಿರಬಹುದು. ಅವುಗಳ ಮೂಲಪ್ರತಿಗಳು ಸಿಂಹನಗದ್ದೆಯ ಜೈನಮಠದಲ್ಲಿರಬಹುದೆಂದು ತೋರುತ್ತದೆ.

ಎಪಿಗ್ರಾಫಿಯ ಕರ್ನಾಟಕದ ಸಂಪುಟವನ್ನು ಸಂಪಾದಿಸಿದ ಶ್ರೀ. ಬಿ.ಎಲ್. ರೈಸ್ ಅವರಾಗಲೀ ಅಥವಾ ೧೯೩೧ರ M.A.R.ನ್ನು ಸಂಪಾದಿಸಿದವರಾಗಲೀ ಸಿಂಹನಗದ್ದೆಯ ಮಠದ ಶಾಸನಗಳನ್ನು ಗಮನಿಸಿಲ್ಲ. EC.VI ರ ಕೊಪ್ಪ ೨೧,೨೨,೨೩,೨೪ ಮತ್ತು ೧೯೩೧ ರ M.A.R. ನ ೯,೧೦,೧೧ ರಲ್ಲಿ ಪ್ರಕಟವಾಗಿರುವ ಶಾಸನಗಳಿಗೂ ಪ್ರಸ್ತುತ ಶಾಸನ ಪಾಠಗಳಿಗೂ ಕೆಲವು ಅಕ್ಷರಗಳು ಮಾತ್ರ ವ್ಯತ್ಯಾಸವಿದೆ. ಆದರೆ ಆ ಶಾಸನಗಳ ಸಾರಾಂಶಗಳಿಗೆ ಮಾತ್ರ ಅಂತಹ ಪ್ರಮುಖ ವ್ಯತ್ಯಾಸಗಳಿಲ್ಲ. ಆದರೂ ಈ ಶಾಸನಗಳು ಅಪ್ರಕಟಿತ ಶಾಸನಗಳಾದ್ದರಿಂದ ಪ್ರಕಟಿಸುವುದು ಅಗತ್ಯವಾಗಿದೆ.

ಇಲ್ಲಿಯ ಎಲ್ಲ ಶಾಸನಗಳೂ ಕ್ರಯದಾನ ಶಾಸನಗಳಾಗಿದ್ದು, ಆ ಪ್ರದೇಶದಲ್ಲಿ ಅಧಿಕಾರದಲಿದ್ದ ದಾಸಿವಾಸ ಎಂಬ ಸಣ್ಣ ಅರಸು ಮನೆತನಕ್ಕೆ ಸೇರಿದಂತಹ ಶಾಸಗಳಾಗಿವೆ.

ಶಾಸನ ಪಾಠಗಳು

I. ಒಂದನೇ ತಾಮ್ರಪಟದ ಮೊದಲ ಬದಿಯ ಬರಹ

೧. ಶುಭಮಸ್ತು ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ

೨. ವೆ ತ್ರೈಲೋಕ್ಯ ನಗರರಾಂಭಾ ಮೂಲಸ್ತಂಭಾಯ ಶಂಬವೆ ಸಸ್ತಿಶ್ರೀ

೩. ಜಯಾಭ್ಯುದಯ ಶಾಲಿವಾಹನ ಶಕ ವರುಶ ೧೪೦೭ ಸಂದ ವರ್ತ

೪. ಮಾನ ಪ್ರಜೋತ್ಪತ್ಯ ಸಂ ।ಚಯಿತ್ರ ಬ ೭ ಮಿ ಆದಿವಾರದಲು ಶ್ರೀಮ

೫. ತ್ತು। ದಾನಿವಾಸದ। ಚೆಂನರಾಯವಡೆರು । ಮಕಳು ಚಿಕ್ಕವೀರಪ್ಪವ

೬. ಡೇರು ಮಕ್ಕಳು ।ಚೆಂನವೀರಪ್ಪನ ವಾಡೆರು ।ಗೇರಸೊಪ್ಪೆಸಂಮಂತ್ರಬ

೭. ದ್ರ ದೇವರ ಶಿಶ್ಯರು ಗುಣಬದ್ರದೇವರ ಶಿಶ್ಯರು ವೀರಸೇನ ದೇವರಿಗೆ ಕೊಟ

೮. ಭೂಮಿಕ್ರಯ ಪತ್ರದ ಕ್ರಮವೆಂತೆಂದರೇ ನಾಗಲಾಪುರದ ಗ್ರಾಮದಲ್ಲಿ ಗು

೯. ರುಗಳ ಕೊಡಿಗೆ ಬೀಜವರಿ ಖ ೫ ರ ಆ ಭೂಮಿಗೆ ಸಲುವ ಕ್ರಯದ್ರವ್ಯ

೧೦. ಣಲಕ್ಷಿತ ।ತತ್ಕಾಲೋಚಿತ ಮಧ್ಯಸ್ತಪರಿಕಲ್ಪಿತ ಸಂಪತಿಪಂನಕಾಲಪರಿ

೧೧. ವರ್ತನಕ್ಕೆ ಸಲುಪ್ರಿಯ ಸ್ರಾಹೆ ।ನಿಜಗಟಿವರಹಗದ್ಯಾಣಗೆ ೩೫ ಅಕ್ಷ

೧೨. ರದಲು ಮೂವತ್ತ ಅಯಿದೂ ।ತರವೀಸ ಉಳಿಯದೆ ಸಲಿಸಿ ಕೊಂಡೆವಾ

೧೩. ಗಿ ಆ ಭೂಮಿಗೆ ಸಲುವಚತ್ತು ಸೀಮೆ ।ವಿವರನೆ ತಿಕಟು ಮೂಡಲೂಮಾರು

೧೪. ೪ಂತ್ತು ಪಡುವಲು ಮೂರು ೩ಂ ತ್ತು ।ಬಡಗಲು ಮೂರು ೪೫ ತೆಂಕ್ಕಲು ಕಂಪ

೧೫. ದ ಹೊಟ್ಟೆಗೆರೆ ಯಿಂತೀ ಚತ್ತು ಸೀಮೆವಳಗುಳ್ಳನಿಧಿ ನಿಕ್ಷೇಪ್ಪ ಜಲಪಾಸಾ

೧೬. ಣ ಅಕ್ಷಿಣಿ ಆಗಮಿ ।ಸಿದ ಸಾಂದ್ಯಂಗಳೆಂಬ। ಅಷ್ಟ ಭೋಗತೇಜಸಾಂ

೧೭. ಮ್ಯವಂನು ।ನೀವು ನಿಂಮಶಿಶ್ಯರು ಪಾರಂಪರಿಯವಾಗಿ ।ಆ ಚಂದಾರ್ಕ್ಕ

೧೮. ಸ್ತಾಯಿಯಾಗಿ ಸುಖದಿಂ ।ಬೊ(ೞ)ಗಿಸಿಬಹರಿಯಂದು। ದಾನಿವಾಸದ ಚೆಂನರಾ

೧೯. ಯವಾಡೆರಮಕ್ಕಳು ಚಿಕ್ಕವೀರಪ್ಪವಾಡೆರು ಮಕ್ಕಳು ಚೆಂನವೀರಪ ವಾಡೆರು ಗೇ

೨೦. ರಸೊಪ್ಪೆಸಂಮಂತಬದ್ರ ದೇವರ ಶಿಶ್ಯರು, । ಗಣಬದ್ರದೇವರು ।
೨೧. ಆವರ ಸಿಶ್ಯರು ।ವೀರಸೇನದೇವರಿಗೆ ಕೊಟ ಭೂಮಿ ಕ್ರಯ
೨೨. ಪತ್ರದ ।ಬರಸಿಕೊಟ ಶಾಸನದ ಪಟಿ । ಯಿದಕ್ಕೆ ತಪಿದರೆ ದೇವ
೨೩. ಲೋಕ ।ಮರ್ತ್ಯ ಲೋಕಕೆ ವಿರಹಿತನು ।ಮಾತೃಸ್ತ್ಯಾನಕ್ಕೆ ತಪ್ಪಿದ
೨೪. ದೋಷಕ್ಕೆ ಬಾಜನರಹರೂ ।ವೀರಪ್ಪ ವೊ ಶ್ರೀ ಶ್ರೀ ಶ್ರೀ

II. ಒಂದನೇ ತಾಮ್ರಪಟದ ಎರಡನೇ ಬದಿಯ ಬರಹ

೧. ಶ್ರೀ ಚಂದ್ರನಾಥಾಯನಮಃ ।ಶುಭಮ
೨. ಸು ।ನಮಸ್ತುಂಗ ಶಿರಸ್ತುಂಬಿ ಚಂದ್ರಚಾಮರ
೩. ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸಂಭಾಯ
೪. ಶಂಭವೇ ।ಸ್ವಸ್ತಿ ಶ್ರೀ ಜಯಾದ್ಭುದಯ ಶಾಲಿವಾಹನ ಶ
೫. ಕ ವರುಷ ೧೪೦೫ ಸಂದ ವರ್ತಮಾನ ಶುಕ್ಲಸಂ
೬. ಪಾಲ್ಗುಣ ಶು ೨ ಗು ಸ್ತಿರವಾರದಲು ।ಶ್ರೀಮತು ದಾನಿವಾ
೭. ಸದ ।ಚೆಂನರಾಯ ವಾಡೆರಮಕ್ಕಳು। ಚಿಕವೀರಪ್ಪವಡೆರು
೮. ಮಕ್ಕಳು ಚೆಂನವೀರಪ್ಪವಾಡೆರು ।ಗೇರಸೊಪ್ಪೆಸಂಮಂ
೯. ತ ಬದ್ರದೇವರ ಶಿಶ್ಯರು ಗುಣಬದ್ರದೇವರ ಶಿಸ್ಯರು ವೀರಸೇನದೇವ
೧೦. ರಿಗೆ ಕೊಟ ಭೂಮಿ ಕ್ರಯ ಪತ್ರದ ಕ್ರಮವೆಂತ್ತೆಂದರೆ ಕೆರೆ ಕೊಪದ
೧೧. ಗ್ರಾಮದಲು ಬೊಂಮಿನಾಯ್ಕನ ಕಟೆ ಬೀಜವರಿ ಖ೬ ಆ ಭೂಮಿ
೧೨. ಗೆ ಸಲುವ ಕ್ರಯದ್ರವ್ಯ ।ಲಕ್ಷಣಲಕ್ಷಿತ। ತತ್ಕಾಲೋಚಿತ ಮದ್ಯಸ್ತಪ
೧೩. ರಿಕಲ್ಪಿತ ಸಂಪತಿಪಂನಕಾಲ ಪರವರ್ತ್ತನಕ್ಕೆ ಸಲುವ ಪ್ರಿಯಸಾಹ ।ನಿ
೧೪. ಜಗಟಿವರಹ ।ಗದ್ಯಾಣ ಗ ೪೦ ಅಕ್ಷರದಲು ನಾಲ್ವತು ।ವರಹನು।
೧೫. ತರವೀಸ ಉಳಿಯದೆ ಸಲಿಸಿಕೊಂಡೆವಾಗಿ ।ಆ ಭೂಮಿಗೆ ಸಲುವ
೧೬. ಚತ್ತು ಸೀಮೆ ಮೂಡಲು ಗೋವಿಂದನಗದೆ ಬದಲು ।ಪಡುವಲು
೧೭. ರಾಮನಗದ್ದೆ ಬದುಖ ತ್ತೆಂಕ್ಕಲು ।ಅಯಿತ್ತು। ಮಾರೂ ।ಬ
೧೮. ಡಗಲು ಸೀರು ವರಿ ಅಗಳು ಪ್ರಮಾಣು ಮಾರು ಅರವತ್ತು
೧೯. ಯಿಂತ್ತೀ ಚತುಸೀಮೆವಳಗುಂಳ ನಿಧಿ ನಿಕ್ಷೇಪ್ಪ ಜಲಪಾಸಣ ಅ

೨೦. ಕ್ಷೀಣಿ ಆಗಮಿಸಿದ್ಧ ಸಾಂದ್ಯಂಗಳೆಂಬ ಅಷ್ಟ ಭೋಗತೇಜ ಸಾಂಮ್ಯವಂ
೨೧. ನು ।ನೀವು ನಿಂಮ ಸಿಶ್ಯರು ಪಾರಂಪರಿಯವಾಗಿ ।ಆ ಚಂದ್ರಾಂ
೨೨. ರ್ಕ ಸ್ತಾಯಿಯಾಗಿ ಸುಖದಿಂ ।ಭೋಗಿಸಿ ಬಹಿರಿಯುಂದು। ದಾಸಿವಾಸದ
೨೩. ಚೆಂನರಾಯವಾಡೆರ ಮಕ್ಕಳು ಚಿಕ್ಕವಾರಪ್ಪವಾಡೇರು ಮಕ್ಕಳು ಚಂನವೀ
೨೪. ರಪ್ಪವಾಡೆರು ।ಗೇರ ಸೊಪ್ಪೆ ಸಂಮಂತ್ತಬದ್ರದೇವರ ಶಿಶ್ಯರು ಗುಣಬದ್ರ
೨೫. ದೇವರು ।ಅವರ ಸಿಶ್ಯರು ।ವೀರಸೇನದೇವರಿಗೆ ।ಕೊಟ ಭೂಮಿಕ್ರಯ
೨೬. ಪತ್ರದ ಬರಸಿಕೊಟ ಶಾಸನದ ಪಟಿ ।ಯಿದಕ್ಕೆ ತಪ್ಪಿದರೆ ।ದೇವಲೋಕ
೨೭. ಮರ್ತ್ಯ ಲೋಕಕ್ಕೆ ವಿರಹಿತನು ।ಮಾತ್ರುಸ್ತಾನಕ್ಕೆ ತಪಿದ ದೋ
೨೮. ಷಕೆ ಬಾಜನರಾಹರೂ ।।ಶ್ರೀ ಶ್ರೀ।।

III. **ಎರಡನೇ ತಾಮ್ರಪತ್ರದ ಒಂದನೇ ಭಾಗದ ಬರಹ**

೧. ಸುಭಮಸ್ತು ನಮಸುಂಗ ಶಿರಸ್ತುಂಬಿ ಚಂದ್ರ ಚಾಮರವೇ
೨. ತ್ರೈಲೋಕ್ಯನಗರಾರಂಭ ಮೂಸ್ತಂಬಯ ಶಾಂಬವೇ ।ಸ್ವಸ್ತಿಶ್ರೀ
೩. ವಿಜಯಾದ್ಭುದಯ ಶಾಲಿವಾಹನ ಶಕ ವರುಷ ೧೫೦೬ ನೆಯ ಸಂದ ವರ್ತಮಾನ
೪. ತಾರಣ ಸಂ ।ಆಶ್ವಜ ಶು ೧೦ ಮಿ ಆದಿವಾರದಲು ಶ್ರೀಮತು ।ದಾಸಿವಾ
೫. ಸದ ಚೆಂನರಾಯವಡೇರ ।ಮಕ್ಕಳು ಚಿಕವೀರಪ್ಪ ವಾಡೆರು ಮಕ್ಕಳು ಚೆಂನವೀ
೬. ರವಾಡೆರು ಗೇರಸೊಪ್ಪೆಸಮಂತ್ತಬದ್ರದೇವರ ಸಿಶ್ಯರು । ಗುಣಬದ್ರ ದೇವರು ।ಸಿಶ್ಯ
೭. ರುವೀರಸೇನದೇವರಿಗೆ ।ಕೊಟ ಭೂಮಿ ಕ್ರಯ ಪತ್ರದ ಕ್ರಮವೆಂತೆಂದರೆ ಬಾಳೆಪಾ(ಲ)
೮. ಬಂದಪ್ಪನ ಮಗಲಿಂಗಂಣನೂ ।ನಷ್ಟಸಂತಾನವಾಹರದಸಂಮಂದ ।ಆತನ ಭೂ
೯. ಮಿಾ ನಾಗಲಾಪುರದ ಗ್ರಾಮದವಳಗೇ ತೆಂಗಿನ ಹೊಲಗದ್ದೆ ೫೯ ಕಂಡುಗ ವಂಭ

೧೦. ತ್ತು ಬೀಜವರಿ। ಆ ಭೂಮಿ ನಂಮ ಅರಮನಿಗೆ ಹರವರಿಯಾಗಿ ಬಂದ
೧೧. ಸಂಮಂದ ।ಯಿಾ ವೀರಸೇನ ದೇವರಿಗೆ ಕ್ರಯವಾಗಿ ಕೊಟ್ಟೆವಾಗಿ। ಆ ಭೂಮಿ
೧೨. ಗೆ ಸಲುವ ಕ್ರಯದ್ರವ್ಯ। ಲಕ್ಷಣ ಲಕ್ಷಿತ ತತ್ಕಾಲೋಚಿತ । ಮಧ್ಯಸ್ತಪರಿಕಲ್ಪಿತಲು
೧೩. ಭಯವಾದಿ ಸಂಪ್ರತ್ತಿಪಂನ ಕಾಲ ಪರಿವರ್ತ್ತನಕ್ಕೆ ಸಲುವ ಬಯಸಾಹೆ ನಿಜಗ
೧೪. ಟಿ ವರಹ ಗ ೩೨ ಅಕ್ಷರದಲು ಮುವತ್ತುಯರಡು ವರಹನು ।ತರವೀಸ ಉಳಿ
೧೫. ಯದೆ ।ಸಲೆಸಾಕಲ್ಯವಾಗಿ ಸಲ್ಲಿಸಿಕೊಂಡೆವಾಗಿ ।ಆ ಭೂಮಿಗೆ ಸಲುವ ಚತ್ತು
೧೬. ಸೀಮೆಯವಿವರ ।ಮೂಡಲುಯಿಾಗದ್ದೆಯ ನೀರ ಏರ್ರಿಕಲ ಆಗಳಿಂದಂ ಪಡುಲು ।
೧೭. ತ್ತೆಂಕ್ಕಲು ಕೆರೆ ಏರಿಯಿಂದಂಬಡ್ಗಗಲು। ಪಡವಲು ಗುರುವಪ್ಪ ಹೆಬರುವನತೋ
೧೮. ಟದಿಂದಂಮೂಡಲು ।ಬಡ್ತಗಲು ಹಾನಂಬಿಯಿಂದ ತೆಂಕಲೂ ಯಿಂತೀತ್ತಚತ್ತುಸೀ
೧೯. ಮೆ ವಳಗುಳ್ಳ ನಿಧಿ ನಿಕ್ಷೇಪಜಲ ಪಾಸಾಣ ಅಕ್ಷಿಣಾ ಆಗಮಿ ಸಿದ್ಧಶಾಂ
೨೦. ದ್ಯಂಗಳೆಂಬ ಅಷ್ಠ ಭೋಗತೇಜ ಸಾಂಮ್ಯವಂನು ನೀವು ನಿಂಮ ಶಿಶ್ಯರು ಪಾ
೨೧. ರಂಪರಿಯವಾಗಿ ಸುಖದಿಂ ಭೋಗಿಸಿ ಬಹಿರಿಯಂದು ಬರಸಿ ಕೊಟ್ಟಕ್ರಯಶಾ
೨೨. ಶನಪಟಯಿದಕ್ಕೆ ಅಭಿಲಾಸೆ ಬೀರುವರು ದೇವಲೋಕಮರ್ತ್ಯ ಲೋಕಕ್ಕೆ ವಿರ
೨೩. ಓತರೂ ಶ್ರೀಹತ್ಯ ಗೋಹತ್ಯಕ್ಕೆ ಬಾಜನರಹರೂ ವೀರಪವ
೨೪. ಡೆರು ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ.

೧ ಸಾಲಿನ ಕೆಳಭಾಗದಲ್ಲಿ 'ಡ' ಅಕ್ಷರವನ್ನು ಬರೆಯಲಾಗಿದೆ.

೨ ಸಾಲಿನ ಮೇಲ್ಭಾಗದಲ್ಲಿ ಸಣ್ಣದಾಗಿ 'ಡ' ಅಕ್ಷರವನ್ನು ಬರೆಯಲಾಗಿದೆ.

IV. ಎರಡನೇ ತಾಮ್ರಪತ್ರದ ಎರಡನೇ ಬದಿಯಲ್ಲಿನ ಬರಹ

೧. ಶುಭಮಸ್ತು ।ನಮಸುಂಗ ಶಿರಸ್ತುಂಬಿ।

೨. ಚಂದ್ರಚಾಮರ (ಚಾರ)೧ ವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂ

೩. ಭಾಯ ಶಾಂಬವೇ ।ಸ್ವಸ್ತಿಶ್ರೀಜಯಾಧ್ಭುದಯ ಶಾಲ್ಲಿವಾ

೪. ಹನಶಕವರುಷ ೧೫೦೬ ನೆಯ ಸಂದವರ್ತಮಾನ ।ತಾ

೫. ರಣ ಸಂ ।ಪಾಲ್ಗುಣ ಶು ೧೩ ಯು ಗುರುವಾರದಲು ಶ್ರೀ

೬. ಮತ್ತು ।ದಾನಿವಾಸದ ಚೆಂನರಾಯವಡೆರ ಮಕ್ಕಳು ।ಚಿಕ್ಕವೀ

೭. ರಪ್ಪವಾಡೆರು ಮಕ್ಕಳು ಚೆಂನವೀರವಾಡೆರು ಗೇರಸೊಪ್ಪೆ

೮. ಸಮಂತಭದ್ರದೇವರ ಸಿಶ್ಯರು ।ಗುಣಬದ್ರದೇವರು। ಸಿ

೯. ಶರು ವೀರ ಸೇನದೇವರಿಗೆ ಕೊಟ ಭೂಮಿಕ್ರಯಪತ್ರ ಕ್ರ

೧೦. ಮವೆಂತ್ತೆಂದರೇ ಬಾಳೆಪಾಲನಾರಸಿಂಹ ದೇವೈಯನ ಮಗ ಬೊಂಮಾ(ರ)೨ ಸಹೆಬಾ

೧೧. ರನ ।ಕುಂಬರ ಕೊಪ್ಪದ ಕೊಡಗಿಗದ್ದೆ ೫೧೦ ಖಂಡುಗಹತು ।ಆ ಭೂಮಿ

೧೨. ಯು ನಂಮ ಅರಮನಿಗೆ ಹರವರಿಯಾಗಿ ಬಂದ ಸಂಮಂದ ಯಿಾವೀರಸೇನ

೧೩. ರಿಗೆ ಕ್ರಯಕ್ಕೆಕೊಟೆವಾಗಿ ।ಆ ಭೂಮಿ೩ ಗೆ ಸಲುವಕ್ರಯದ್ರವ್ಯ ।ಲಕ್ಷಣ ಲಕ್ಷಿತತತಾ

೧೪. ಲೋಚಿತಮಧ್ಯಸ್ತಪರಿಕಲ್ಪಿತ ಉಭಯವಾದಿ ಸಂಪ್ರತ್ತಿಪಂನಕಾಲ ಪರಿವರ್ತ್ತ

೧೫. ನಕ್ಕೆಸಲು ಪ್ರಿಯಸ್ರಾಹೆನಿಜಗಟಿವರಹ ಗ ೪೦ ಅಕ್ಷರ ದಲು ನಾಲ್ವತ್ತು ವರ

೧೬. ಹನು ।ತರವೀಸ ಉಳಿಯದೆ ಸಾಕಲ್ಯವಾಗಿ ಸಲ್ಲಿಸಿಕೊಂಡೆವಾಗಿ ।ಆ

೧೭. ಭೂಮಿಗೆ ಸಲುವ ಚತ್ತು ಸೀಮೆಯ ವಿವರ ಮೂಡಲು ಕೆಳಗಣ ಕೆರೆ

೧೮. ಯಿಂದಂ ।ಪಡುವಲು ।ತ್ತೆಂಕಲು ಕೂಣ ಊರಗಡಿಯಿಂದಂ ಬಡಗಲೂ (ಬಗ

೧೯. ಲು) [೪] ಪಡುವಾಲು ಜಿಗಳೆ ಕೆರೇನತ್ತಿಕಟ್ಟು ನೀರವರೀ ಕಲ್ಲಿಂದಂ ಮೂಡ
೨೦. ಬಡಗಲು ಹೆದಾರಿಯಿಂದಂ ।ತ್ತೆಂಕಲು। ನತ್ತಿಕಟುನಿರವರೀ ಯಿಂತೀ
೨೧. ಚತುಸೀಮೆವಳಗುಳನಿಧಿ ನಿಕ್ಷೇಪಜಲಪಾಸಣ ।ಅಕ್ಷಿಣೀ ಆಗಮಿಸಿದ
೨೨. ಶಾಂದ್ಯಂಗಳೆಂಬ ಅಷ್ಟಭೋಗತೇತ್ತಜಸಾಂಮ್ಯವಂನುನೀಉನಿಂಮಶಿಶ್ಯರು
೨೩. ಪಾರಂಪರಿಯವಾಗಿ ಸುಖದಿಂಭೋಗಿಸಿ ಬಹಿರಿಯಂದು ಬರಸಿಕೊಟ।
೨೪. ಕ್ರಯಶಾಶನ ಪಟೆ ।ಯಿದಕ್ಕೆ ಅಭಿಲಾಸೆ ಬಟವರು ದೇವಲೋಕ
ಮರ್ತ್ತಲೋ
೨೫. ಕಕ್ಕೆ ವಿರಹಿತರೂ ।ಶ್ರೀ ಹಾತ್ಯಗೋಹತ್ಯ ।ಕ್ಕೆ ಬಜನರಹರು ।ಚೆಂನವೀ
೨೬. ರ ವಾಡೆರು ಶ್ರೀ ಶ್ರೀ ಶ್ರೀ ಶ್ರೀ ಶ್ರೀ

[೧] **ಸಾಲಿನ ಮೇಲ್ಭಾಗದಲ್ಲಿ ಸಣ್ಣದಾಗಿ ಕೊರೆಯಲಾಗಿದೆ.**
[೨] 'ರ' ಎಂಬ ಅಕ್ಷರ ಬಿಟ್ಟು ಹೋಗಿದೆ
[೩] 'ಮಿ' ಎಂಬ ಅಕ್ಷರವನ್ನು ಸಾಲಿನ ಕೆಳಭಾಗದಲ್ಲಿ ಕೊರೆಯಲಾಗಿದೆ
[೪] 'ಬಡಗಲು' ಎಂಬ ಪದ ಪುನರಾವರ್ತನೆಯಾಗಿದ್ದು 'ಡ' ಎಂಬ ಅಕ್ಷರ ಬಿಟ್ಟು ಹೋಗಿದೆ.

V. ಮೂರನೇ ತಾಮ್ರ ಪತ್ರದ ಒಂದನೇ ಮುಖದ ಬರಹ

೧. ಶು
೨. ಭಮಸ್ತು ।ನಮಸ್ತುಂಗ ಶಿರಸ್ತುಂಬಿ ಚಂದ್ರ ಚಾಮರಚಾ
೩. ರವೇ ತ್ರೈಲೋಕ್ಯ ನಗರಾರಂ ಭಾಮೂಲಸ್ತಂಭಾಯ ಶಾಂಬವೇ ಸ್ವ
೪. ಸ್ತಿಶ್ರೀ ಜಯಾಧ್ಯುದಯ ಶಾಲಿವಾಹನ ಶಕ ವರುಷ ೧೫೦೭
೫. ಸಂದ ವರ್ತ್ತಮಾನ ಪಾರ್ಥಿವ ಸಂವತ್ಸರದ ಚಯಿತ್ರ ಬ ೭ ಮಿ ಆದಿ
೬. ವಾರದಲೂ ಶ್ರೀಮತ್ತು। ದಾನಿವಾಸದ ಚೆಂನರಾಯ ವೊಡೆಯರಮ
೭. ಕ್ಕಳು ।ಚಿಕ್ಕವೀರಪ್ಪವೊಡೆಯರ ಮಕ್ಕಳು ಚೆಂನವೀರವೊಡೆಯರೂ ।ಗೇರಸೊ
೮. ಪ್ಪೆಸಮಂತ್ರಬದ್ರದೇವರ ಸಿಶ್ಯರು ।ಗುಣಬದ್ರದೇವರ ಸಿಶ್ಯ
೯. ವೀರಸೇನದೇವರಿಗೆ ಕೊಟ ಬೂಮಿ ಕ್ರಯ ಪತ್ರದ ಕ್ರಮವೆಂತ್ತೆ

೧೦. ದರೇ ಬಾಳಿಪಾಲ ತಂಮಯನ ಮಗ ನರಸಪ್ಪನು ನಷ್ಟಸಂ

೧೧. ತಾನವಾಗಿ ಹೋದ ಸಂಮಂದ ಆತನ ಭೂಮಿಯಿಾಚಲದಾಳಗ್ರಾಮದಲಿ

೧೨. ಎಂಟು ಖಂಡುಗ ಬೀಜವರಿ ಭೂಮಿ ನಂಮ ।ಅರಮನಿಗೇ ಹರವರಿಯಾಗಿ

೧೩. ಬಂದಸಂಮಂದ ಆ ಭೂಮಿನೂ ದಾನಿವಾಸದ ಚೆಂನರಾಯವೊಡೆಯ

೧೪. ರ ಮಕ್ಕಳು ।ಚಿಕ್ಕವೀರವೊಡೆಯರ ಮಕ್ಕಳು ।ಚೆಂನವೀರವೊಡೆಯರು

೧೫. ಗೇರಸೊಪ್ಪೆಯ ಸಮಂತಬದ್ರದೇವರ ಶಿಶ್ಯರೂ ಗುಣಬದ್ರದೇವರ ಶಿಶ್ಯರು

೧೬. ವೀರಶೇನ ದೇವರಿಗೇ ಕ್ರಯವಾಗಿ ಕೊಟೆವಾಗಿ ।ಆ ಭೂಮಿಗೆ ಸಲುವ ಕ್ರ

೧೭. ಯದ್ರವ್ಯ ।ಲಕ್ಷಣ ಲಕ್ಷಿತ ತತ್ಕಾಲೋಚಿತ ಮಧ್ಯಸ್ತಪರಿಕಲ್ಪಿತ ।ಉಭೆ

೧೮. ಯವಾದಿ ಸಂಪತ್ತಿಪಂನ ಕಾಲ ಪರಿವರ್ತ್ತನಕ್ಕೆ ಸಲುವ ।ಪ್ರಿಯ

೧೯. ಸ್ರಾಹೆ ।ನಿಜ ಗಟಿ ವರಹಗದ್ಯಾಣ ಗ ೩೦ ಅಕ್ಷರದಲು ಮು

೨೦. ವತ್ತು ವರಹಂನುತಾರವೀಸ ಉಳಿಯದೆ ಸಲ್ಲಿಸಿಕೊಂಡೆವಾಗಿ ।ಆ ಎಂಟು

೨೧. ಖಂಡುಗ ಭೂಮಿಗೆ ಸಲುವ ಚತುಸೀಮೆಯ ವಿವರ ।ಮೂಡಲು
ನಂಡಿಗಾವಾ

೨೨. ತ್ತಿಂಮರ ಸ್ಯೆಯುನಗದೆಯಿಂದಲೂ ಪಡುವಲು ।ಪಡುವಲು ನರಸಾಪುರದ

೨೩. ೦ಹಳದಿಂದಲೂ ।ಮೂಡಲೂ ।ಬಡಗಲೂ ವರೆಯಿಂದಲೂ। ತ್ತೆಂಕಲೂ
ತ್ತೆಂ

೨೪. ಕಲು ಅರಮನೆ ಗದೆಯಿಂದಲೂ ಬಡಗಲೂ ।ಯಿಂತೀ ಚತುಸೀಮೆ
ಯೊಳಗು

೨೫. ಳ ನಿಧಿ ನಿಕ್ಷೇಪ ಜಲಪಾಶಾಣ ಆಕ್ಷೀಣಿ ಆಗಮಿಸಿಧ ಸಾದ್ಯಂಗಳೆಂಬ

೨೬. ಅಷ್ಟ ಭೋಗತ್ತೇಜಸಾಮ್ಯವಂನು ಆಗುಮಾಡಿಕೊಂಡ ನೀವು ನಿಂಮಶಿಶ್ಯ

೨೭. ರುಪಾರಂಪ (ರೆ) ಯಾಗಿ ಆಚಂದ್ರಾರ್ಕ ಸ್ತಾಯಿಯಾಗಿ ಸುಖದಿಂ
ಭೋಗಿಸಿ

೨೮. ಬಹಿರಿಯೆಂದು ಬರಸಿಕೊಟ ಕ್ರಯಸ್ಯಾಸನಪಟಿಯಿದಕ್ಕೆ ಅಭಿಲಾ

೨೯. ಸೆ ಬಟವರೂ ದೇವಲೋಕ ಮರ್ತ್ತಲೋಕಕ್ಕೆ ವಿರಹಿತರು ।ಶ್ರೀ ಹತ್ಯ

೩೦. ಗೋಹತ್ಯಕ್ಕೆ ಬಜನರಹರು । ಚಂನವೀರವಡೇರು ಶ್ರೀ

೩೧. ಶ್ರೀ ಶ್ರೀ ಶ್ರೀ .

೧ 'ಪಡುವಲು' ಎಂಬ ಪದ ಪುನರಾವರ್ತನೆಯಾಗಿದೆ

೨ 'ತ್ತೆಂಕಲು' ಎಂಬ ಪದವನ್ನೂ ಎರಡು ಸಾರಿ ಬರೆಯಲಾಗಿದೆ.

೩ 'ರೆ' ಎಂಬ ಅಕ್ಷರ ಬಟ್ಟು ಹೋಗಿದೆ.

VI. ಮೂರನೆಯ ತಾಮ್ರಪತ್ರದ ಎರಡನೇ ಬದಿಯ ಬರಹ

೧. ಸುಭಮಸ್ತುನಮಸ್ತುಂಗಶಿರಸ್ತುಂಭಿ ಚಂದ್ರಚಾಮರ

೨. ಚಾರವೇ ತ್ರೈಲೋಕ್ಯ ನಗರಾರಂಭಾಮೂ(ಲ)೧ಸ್ತಂಭಾಯ ಶಾಂಬವೇ।

೩. ಸ್ವಸ್ತಿ ಶ್ರೀ ಜಯಾದ್ಭುದಯ ಶಾಲಿವಾಹನ ಶಕ ವರುಷ ೧೫೪೯

೪. ನೆಯ ಸಂದವರ್ತಮಾನ ।ಸರ್ವ್ವಜಿತ್ತು ಸಂ। ವಯಿಶಾಕ ಶು ೫ ಮಿ

೫. ಯು ಆದಿವಾರದಲು ಶ್ರೀಮತ್ತು ದಾನಿವಾಸದ ಚೆಂನರಾ

೬. ಯವಡೇರಮಕಳು। ಚಿಕ್ಕವೀರಪ್ಪವಾಡೆರ ಮಕ್ಕಳು ಚೆಂನವೀರವಾ

೭. ಡೇರು। ಗೇರಸೊಪ್ಪೆಸಮಂತ್ತಭದ್ರದೇವರ ಸಿಶ್ಯರು ।ಗುಣಬದ್ರದೇವ

೮. ರಸಿಶ್ಯರು । ವೀರಸೇನದೇವರಿಗೆ ಕೊಟ ಭೂಮಿ ಕ್ರಯಪತ್ರದ ಕ್ರಮ

೯. ವೆಂತ್ತೆಂದರೇ ನಾಗಲಪುರದ ಗ್ರಾಮದೊಳಗೇ ಸಂಕಂಣನಮಗಮಲ

೧೦. ಯನ ಡೊಂಕ್ಕಿನಕೊಡ್ಗಿಗೇ ಬೀಜವರಿ ಖ೧೦ ಹದ್ತು ಖಂಡುಗದ ಭೂಮಿ

೧೧. ಯು ಸಲವೀಟು ನಂಮ ಅರಮನಿಗೇ ಹರವರಿಯಾಗಿ ಬಂದ ಸಂ

೧೨. ಮಂದ। ಯಿಾ ವೀರಸೇನದೇವರಿಗೆ ಕ್ರಯಕ್ಕೆ ಕೊಟೆವಾಗಿ ।ಆ ಭೂಮಿಗೆ ಸಲು

೧೩. ವಕ್ರಯ ದ್ರವ್ಯ। ಲಕ್ಷಣಲಕ್ಷಿತ ತತ್ಕಾಲೋಚಿತಮಧ್ಯಸ್ತ ಪರಿಕಲ್ಪಿತ।

೧೪. ಉಭಯವಾದಿ ಸಂಪತ್ತಿಪಂಸಕಾಲ ಪರಿವರ್ತ್ತನಕ್ಕೆ ಸಲುವ ಪ್ರಿಯ ಸ್ವಾ

೧೫. ಹೆ ।ನಿಜಗಟಿವರಹ ಗ ೪೦ ಅಕ್ಷರದಲು ನಾಂಲ್ವತ್ತು ವರಹನು ।ತರ

೧೬. ವೀಸ ಉಳಿಯದೆ ಸಾಕಲ್ಯವಾಗಿ ।ಸಲಿಸಿಕೊಂಡೆವಾಗಿ ಆ ಭೂಮಿಗೆ ಸಲು

೧೭. ವ ಚತುಸೀಮೆಯ ವಿವರ ಮೂಡಲು ಯಿಾಗದ್ದೆಯ ನೀರ ಆ ಕಾಲ (ವೆ)೨ ಗಳಿಂದ

೧೮. ದ ಪಡವಲು ।ಬಡಗಲು ಕೆರೆಯೇರಿಯಿಂದ ತೆಂಕಲು ।ತ್ತೆಂಕಲ್ಲೂ ಸಂ

೧೯. ಮಗದ್ದೆಯಿಂದಂ ಬಡಗಲು ।ಯಿಂತೀ್ತ ಚತುಸ್ಸೀಮೆಯೊಳಗುಳನಿ
೨೦. ಧಿ ನಿಕ್ಷೇಪ ಜಲಪಾಸಾಣ ।ಅಕ್ಷೀಣಿ ಆಗಮಿ ಸಿದಸಾಂದ್ಯಂಗ
೨೧. ಳೆಂಬ ಅಷ್ಟ ಭೋಗತೇಜ ಸಾಂಮ್ಯವಂನು ನೀವು ನಿಂಮ ಶಿ
೨೨. ಶ್ಯರು ಪಾರಂಪರಿಯವಾಗಿ ಸುಖದಿಂಬೋಗಿಸಿ ಬಹಿರಿ
೨೩. ಯೆಂದು ಬರಸಿಕೊಟಕ್ರಯ ಶಾಶನಪಟ।ಯಿದಕ್ಕೆ ಅಭಿಲಾಷೆ ಬಟವರುದೇ
೨೪. ವ ಲೋಕ ಮರ್ತ್ಯ ಲೋಕಕ್ಕೆ ವಿರಹಿತರು ಶ್ರೀಹತ್ಯ ಗೋಹತ್ಯಕ್ಕೆ ಬಜನ
೨೫. ರು। ಚೆಂನವೀರವಡೆರು ಶ್ರೀ ಶ್ರೀ ಶ್ರೀ ಶ್ರೀ

೧ 'ಲ' ಎಂಬ ಅಕ್ಷರ ಬಿಟ್ಟು ಹೋಗಿದೆ

೨ 'ವೆ' ಎಂಬ ಅಕ್ಷರ ಬಿಟ್ಟು ಹೋಗಿದೆ.

೩ 'ತ್ತೆಂಕಲೂ' ಎಂಬ ಪದವನ್ನು ಎರಡು ಸಾರಿ ಬರೆಯಲಾಗಿದೆ

VII. ನಾಲ್ಕನೇ ತಾಮ್ರಪತ್ರದ ಒಂದನೇ ಬದಿಯ ಬರಹ

೧. ಸುಬಮಸ್ತು: ।।ನಮಸ್ತುಂಗ ಶಿರಸ್ತುಂಬಿ ಚಂದ್ರಚಾಮರಚಾರವೇ
೨. ತ್ರೈಲೋಕ್ಯನಗರಾರಂಭಾಮೂಲಸ್ತಂಭಾಯ ಶಾಂಬವೇ ಸ್ವಸ್ತಿ, ಶ್ರೀಜ
೩. ಯಾದ್ಭುದಯ ಶಾಲಿವಾಹನ ಶಕವರುಶಾ ೧೩೫೫ಯ ಸಂದವರ್ತ್ತ
೪. ಮಾನ ಶುಕ್ಲಸಂ ।ಚಯಿತ್ರ ಶು ೨ ಗು । ಗುವಾರದಲು ಶ್ರೀ ಮತ್ತು
೫. ದಾನಿವಾಸವ। ಚೆಂನರಾಯವಾಡೆರು । ಗೇರಸೊಪ್ಪೆಯ ಸಂಮಂತ್ತಬ
೬. ದ್ರದೇವರು ।ಶಾಂತೀಶ್ವರಶ್ವಾಮಿಯ ನ್ಯೆವಿದ್ಯಕ್ಕು ।ತಂಮ ಆಹಾರ ದಾನ
೭. ಕ್ಕು। ಸ್ವಸ್ತಿ ಆಗಬೇಕ್ಕು। ಆರಮಾನಿಗೆ ಕಾಣಿಕ್ಕೆಕೊಟೆಲುಯಂದುಹೇ।
೮. (ಳಿ೨) ಕೊಂಡ ಸಂಮದಕೊಟಭೂಮಿ ಸಿಂಗನಗದೆಗ್ರಾಮದಲು ।ಕೊ
೯. ಡಿಗಿಯಿಂದ ಸಹ ಬೀಜವರಿ ।ಖ ೩೦ ಅಕ್ಷರದಲು ಮೂವತ್ತು ಕಂಡು
೧೦. ಗ ಭೂಮಿಯಂನು ಧಾರಪೂರ್ವ್ವಕವಾಗಿ ಕೊಟೆಲು ।ನಿಂಮ ಕೈಯಕಾಣಿ
೧೧. ಕ್ಕೆಯಾಗಿ ತ್ತೆಗದು ಕೊಂಡದೂ ಗದ್ಯಾಣ ಗ ೧೨೦ ನೂರಯಿಪ್ಪತ್ತು ।ವರ
೧೨. ಹಸು ।ತರವೀಸ ಉಳಿಯದೆ ನಂಮ್ಮ ಅರಮನೆಗೆ ಸಾಕಲ್ಯವಾಗಿ ಸಂತ್ತು।
ಆ
೧೩. ಭೂಮಿಗೆ ಸಲುವ ಚತ್ತುರ್ಗ್ಗಡಿ ವಿವರ ।ಮೂಡಲು ನೆತ್ತಿಕಟು ನೀರವರಿ
ಪಮ

೧೪. ೫ ಮೂರು ೫೦ ಪಡುವಾಲು ಬೋಗರಮಾನೆ ಹೆದಾರಿಂದಾಮಾರು ೫೦ ತ್ತ್ರಂ

೧೫. ಕ್ಕಲು ಹೆಂದಾರಿಮೇಗಳ ಅಗಳು ಪ್ರಮಾಣು ಮಾರು ೬೦ ಬಡಗಲು ನೆತ್ತಿಕಟು

೧೬. ಸೀರಾವರಿ ಪ್ರಮಾಣು ಮಾರೂ ೪೦ ಯಿಂತೀ ಚತುಸೀಮೆವಳಗುಳ ನಿಧಿನಿಕ್ಷೆ

೧೭. ಪ ಜಲಪಾಸಾಣ ಅಕ್ಷಿಣಿ ಆಗಮಿ ಸಿದ ಶಾಂದ್ಯಂಗಳೆಂಬ ಅಷ್ಟ ಭೋಗತೇ

೧೮. ಜ ಸಾಂಮ್ಯವಂನು ಆ ಚಂದ್ರಾರ್ಕ ಸ್ತಾಯಿಗಳಾಗಿ ಸುಖದಿಂ ಭೋಗಿಸಿಬ

೧೯. ಓರಿಯಂದು ಬರಸಿಕೊಟ ಶಾಸನಪಟೆ |ಯಿ ಧರ್ಮಕ್ಕೆ ಅಭಿಲಾಸೆ ಬ

೨೦. ಟವರು ದೇವಲೋಕಮರ್ತ್ಯ ಲೋಕಕ್ಕೆ ವಿರಹಿತರೂ ಬ್ರಂಹಹತ್ಯ ಸ್ತ್ರೀ ಹತ್ಯೆ

೨೧ ಗೋಹತ್ಯದ ದೋಷಕ್ಕೆ ಬಜನರಹರೂ |ಚೆಂನರಾಯರು|| ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ

೧ '೨ ' ಎರಡು ಕಡೆ ಬಿಟ್ಟು ಹೋಗಿದೆ.

೨ 'ಳಿ' ಎಂಬ ಅಕ್ಷರ ಬಟ್ಟು ಹೋಗಿದೆ.

VIII. ನಾಲ್ಕನೇ ತಾಮ್ರಪತ್ರದ ಎರಡನೇ ಬದಿಯ ಬರಹ

೧. ಸುಬಮಸ್ತು:|| ಮನಸ್ತುಂಗ ಶಿರಸ್ತುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯನಗರಾ

೨. ರಂಭಾಮೂಲ ಸ್ತಂಬಾಯಾಶಾಂಬವೇ ||ಸ್ವಸ್ತಿ ಶ್ರೀ ಜಯಾದ್ಭುದಯ ಶಾಲಿವಾಹನ

೩. ಶಕ ವರುಷ (ಮುಂದೆ ಬರವಣಿಗೆಯಿಲ್ಲ).

ಶಾಸನಗಳ ಸಾರಾಂಶ : - ಇಲ್ಲಿಯ ಎಲ್ಲ ಶಾಸನಗಳೂ ಕ್ರಯಪತ್ರಗಳು. ದಾಸಿವಾಸ ಮನೆತನದವರು ಸಿಂಹನಗದ್ದೆಯ ಜೈನಮಠದ ವೀರಸೇನದೇವರಿಗೆ ಭೂಮಿಯನ್ನು ಮಾರಿದ ವಿವರಗಳುಳ್ಳ ಶಾಸನಗಳು. ಈ ಶಾಸನಗಳಲ್ಲಿ ಅತ್ಯಂತ ಪ್ರಾಚೀನವಾದದ್ದೆಂದರೆ ಕ್ರಿ.ಶ. ೧೪೩೩ರಲ್ಲಿ ಬರೆಯಲ್ಪಟ್ಟ ಪ್ರಸ್ತುತ ಲೇಖನದ ೭ನೆಯ ಶಾಸನ ಹಾಗೂ ಕಾಲದ ದೃಷ್ಟಿಯಿಂದ ಅತ್ಯಂತ ಈಚಿನದ್ದೆಂದರೆ ಕ್ರಿ.ಶ. ೧೫೮೭ ರಲ್ಲಿ

ಬರೆಯಲ್ಪಟ್ಟ ಪ್ರಸ್ತುತ ಲೇಖನದ ೬ನೆಯ ಶಾಸನ.

೧ ಒಂದನೆಯ ಶಾಸನವು ಶಾಲಿವಾಹನ ಶಕ ವರ್ಷ ೧೪೦೬ನೆಯ ಪ್ರಜೋತ್ಪತ್ತಿ ಸಂವತ್ಸರದ ಚೈತ್ರ ಬಹುಳ ಸಪ್ತಮಿ ಭಾನುವಾರದ ಉಲ್ಲೇಖವಿದೆ. ಇದು ಕ್ರಿ.ಶ. ೧೪೮೫ರ ವಿಶ್ವಾವಸು ಸಂವತ್ಸರ ಏಪ್ರಿಲ್ ಗುರುವಾರಕ್ಕೆ ಸರಿ ಹೊಂದುತ್ತದೆ. ದಾನಿವಾಸದ ಚೆನ್ನರಾಯವಡೆಯರ ಮಗ ಚಿಕ್ಕ ವೀರಪ್ಪ ವಡೆಯರ ಮಗ ಚೆನ್ನವೀರಪ್ಪ ವಡೆಯರು ಗೇರಸೊಪ್ಪೆಯ ಸಮಂತಭದ್ರ ದೇವರ ಶಿಷ್ಯರಾದ ಗುಣಭದ್ರದೇವರ ಶಿಷ್ಯರಾದ ವೀರಸೇನದೇವರಿಗೆ ನಾಗಲಾಪುರ ದಲ್ಲಿನ ಭೂಮಿಯನ್ನು ಮಾರಿದ ವಿವರಗಳಿವೆ.

೨ ಎರಡನೆಯ ಶಾಸನವು ಶಾಲಿವಾಹನ ಶಕವರ್ಷ ೧೪೦೫ನೇಯ ಶುಕ್ಲ ಸಂವತ್ಸರ ಫಾಲ್ಗುಣ ಶುದ್ಧ ೨ ಗು ಸ್ತಿರವಾರದ ಉಲ್ಲೇಖವಿದೆ. ಇದು ಕ್ರಿ.ಶ. ೧೪೮೩ರ ಶೋಭಕೃತ್ ಸಂವತ್ಸರ ಫೆಬ್ರವರಿ ೨೮ಕ್ಕೆ ಸರಿ ಹೊಂದುತ್ತದೆ. ದಾನಿವಾಸದ ಚೆನ್ನರಾಯ ವಡೆಯರ ಮಗ ಚಿಕ್ಕ ವೀರಪ್ಪ ವಡೆಯರ ಮಗ ಚೆನ್ನವೀರಪ್ಪವಡೆಯರು ಗೇರಸೊಪ್ಪೆಯ ಸಮಂತಭದ್ರದೇವರ ಶಿಷ್ಯರಾದ ಗುಣಭದ್ರದೇವರ ಶಿಷ್ಯರಾದ ವೀರಸೇನದೇವರಿಗೆ ಕೆರೆಕೊಪ್ಪ ಗ್ರಾಮದಲ್ಲಿ ಬೊಮ್ಮಿನಾಯ್ಕನ ಕಟ್ಟೆ ಭೂಮಿಯನ್ನು ಮಾರಿದ ವಿವರಗಳಿವೆ.

೩ ಮೂರನೆಯ ಶಾಸನವು ಶಾಲಿವಾಹನ ಶಕ ವರ್ಷ ೧೫೦೬ನೆಯ ತಾರಣ ಸಂವತ್ಸರದ ಆಶ್ವಯುಜ ಶುದ್ಧ ದಶಮಿ ಆದಿವಾರದಂದು ರಚಿತವಾಗಿದೆ. ಇದು ಕ್ರಿ.ಶ. ೧೫೮೪ರ ನವೆಂಬರ್ ೩ ಭಾನುವಾರಕ್ಕೆ ಸರಿ ಹೊಂದುತ್ತದೆ. ದಾನಿವಾಸದ ಚೆನ್ನರಾಯರ ವಡೆಯರ ಮಗ ಚಿಕ್ಕವೀರಪ್ಪ ವಡೆಯರ ಮಗ ಚೆನ್ನವೀರ ವಡೆಯರು ಗೇರಸೊಪ್ಪೆ ಸಮಂತಭದ್ರ ದೇವರ ಶಿಷ್ಯರು ಗುಣಭದ್ರ ದೇವರ ಶಿಷ್ಯ ವೀರಸೇನ ದೇವರಿಗೆ ಬಾಳೆಪಾಲ ಬಂದಪ್ಪನ ಮಗ ಲಿಂಗಣ್ಣನಿಗೆ ಮಕ್ಕಳಿಲ್ಲ ವಾದ್ದರಿಂಬ ನಾಗಲಾಪುರದಲ್ಲಿದ್ದ ಆತನ ತೆಂಗಿನ ತೋಟ, ಹೊಲಗದ್ದೆಗಳು ಅರಮನೆಗೆ ವಶಕ್ಕೆ ಬಂದಿದ್ದನ್ನು ಮಾರಿದ ವಿವರಗಳಿವೆ.

೪ ನಾಲ್ಕನೆಯ ಶಾಸನವು ಶಾಲಿವಾಹನ ಶಕ ವರ್ಷ ೧೫೦೬ನೆಯ ತಾರಣ ಸಂವತ್ಸರದ ಫಾಲ್ಗುಣ ಶುದ್ಧ ೧೩ ಗುರುವಾರದಂದು ರಚಿತವಾಗಿದೆ. ಇದು ಕ್ರಿ.ಶ. ೧೫೮೫ ರ ಏಪ್ರಿಲ್ ೧ ಗುರುವಾರಕ್ಕೆ ಸರಿಹೊಂದುತ್ತದೆ. ದಾನಿವಾಸದ ಚೆನ್ನರಾಯ

ವಡೆಯರ ಮಗ ಚಿಕ್ಕವೀರವಡೆಯರ ಮಗ ಚೆನ್ನವೀರವಡೆಯರು ಗೇರುಸೊಪ್ಪೆಯ ಸಮಂತಭದ್ರ ದೇವರ ಶಿಷ್ಯ ಗುಣಭದ್ರದೇವರ ಶಿಷ್ಯ ವೀರಸೇನ ದೇವರಿಗೆ ಬಾಳೆಪಾಲ ನರಸಿಂಹದೇವಯ್ಯನ ಮಗ ಬೊಮ್ಮರಸ ಹೆಬ್ಬಾರರ ಕುಂಬಾರ ಕೊಪ್ಪದ ಕೊಡುಗೆ ಗದ್ದೆಯನ್ನು ಮಾರಿದ ವಿವರಗಳಿವೆ.

೫. ಐದನೆಯ ಶಾಸನ ಶಾಲಿವಾಹನ ಶಕ ವರ್ಷ ೧೫೦೭ ರ ಪಾರ್ಥಿವ ಸಂವತ್ಸರ ದ ಚೈತ್ರ ಸಪ್ತಮಿ ಆದಿವಾರದಂದು ರಚಿತವಾಗಿದೆ. ಇದು ಕ್ರಿ.ಶ. ೧೫೮೫ರ ಏಪ್ರಿಲ್ ೧೧ ಭಾನುವಾರಕ್ಕೆ ಸರಿ ಹೊಂದುತ್ತದೆ. ದಾನಿವಾಸದ ಚೆನ್ನರಾಯ ವಡೆಯರ ಮಗ ಚಿಕ್ಕವೀರಪ್ಪ ವಡೆಯರ ಮಗ ಚೆನ್ನವೀರಪ್ಪ ವಡೆಯರು ಗೇರಸೊಪ್ಪೆಯ ಸಮಂತಭದ್ರ ದೇವರ ಶಿಷ್ಯರಾದ ಗುಣಭದ್ರದೇವರ ಶಿಷ್ಯರಾದ ವೀರಸೇನದೇವರಿಗೆ ಬಾಳೆಪಾಲ ತಮ್ಮಯ್ಯನ ಮಗ ನರಸಪ್ಪನಿಗೆ ಮಕ್ಕಳಿರಲಿಲ್ಲ ವಾದ್ದರಿಂದ ಅರಮನೆ ವಶಕ್ಕೆ ಬಂದ ಈಚಲದಾಳ ಗ್ರಾಮದ ಭೂಮಿಯನ್ನು ಮಾರಿದ ವಿವರಗಳಿವೆ.

೬. ಆರನೆಯ ಶಾಸನವು ಶಾಲಿವಾಹನ ಶಕ ವರ್ಷ ೧೫೦೯ರ ಸರ್ವಜಿತು ಸಂವತ್ಸರದ ವೈಶಾಖ ಶುದ್ಧ ಪಂಚಮಿ ಆದಿವಾರದಂದು ರಚಿತವಾಗಿದೆ. ಇದು ಕ್ರಿ.ಶ. ೧೫೮೭ರ ಏಪ್ರಿಲ್ ೩೦ ಭಾನುವಾರಕ್ಕೆ ಸರಿಹೊಂದುತ್ತದೆ. ದಾನಿವಾಸದ ಚೆಂನ್ನ ರಾಯವಡೆಯರ ಮಗ ಚಿಕ್ಕವೀರಪ್ಪವಡೆಯರ ಮಗ ಚೆನ್ನವೀರವಡೆಯರು ಗೇರಸೊಪ್ಪೆ ಸಮಂತ ಭದ್ರದೇವರ ಶಿಷ್ಯರಾದ ಗುಣಭದ್ರ ದೇವರ ಶಿಷ್ಯರಾದ ವೀರಸೇನ ದೇವರಿಗೆ ನಾಗಲಾಪುರದ ಸಂಕಣ್ಣನ ಮಗ ಮಲ್ಲಯ್ಯನ ಕೊಡಿಗೆ ಜಮೀನು ಅರಮನೆಗೆ ಹರವರಿಯಾಗಿ ಬಂದದ್ದನ್ನು ಮಾರಿದ ವಿವರಗಳಿವೆ.

೭. ಏಳನೆಯ ಶಾಸನವು ಶಾಲಿವಾಹನ ಶಕವರ್ಷ೧೩೫೫ರ ಶುಕ್ಲ ಸಂವತ್ಸರದ ಚೈತ್ರ ಶುದ್ಧ ೩ ಗುರುವಾರದ ಉಲ್ಲೇಖವಿದೆ. ಇದು ಕ್ರಿ.ಶ. ೧೪೩೩ ಪ್ರಮೋದೂತ ಸಂವತ್ಸರದ ಏಪ್ರಿಲ್ ೨೧ರ ಮಂಗಳವಾರಕ್ಕೆ ಸರಿ ಹೊಂದುತ್ತದೆ. ದಾನಿವಾಸದ ಚೆನ್ನರಾಯವಡೆಯರು ಗೇರಸೊಪ್ಪೆಯ ಸಮಂತಭದ್ರದೇವರು ಶಾಂತೀಶ್ವರ ಸ್ವಾಮಿಯ ನೈವೇದ್ಯಕ್ಕೆ ಹಾಗೂ ತಮ್ಮ ಆಹಾರ ದಾನಕ್ಕೆ ಬೇಕೆಂದು ಕೇಳಿದಾಗ ೧೨೦ ವರಹ ಹಣತೆಗೆದುಕೊಂಡು ೩೦ ಖಂಡುಗ ಭೂಮಿಯನ್ನು ಮಾರಿದ ಬಗ್ಗೆ ವಿವರಗಳಿವೆ.

ಐತಿಹಾಸಿಕ ಅಂಶಗಳು :- ಪ್ರಸ್ತುತ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ದಾನಿವಾಸದ ಮನೆತನದವರು ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರದ ಸಮೀಪದ ದಾನಿವಾಸವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ಈ ವಂಶದವರ ಮೂರು ಶಿಲಾಶಾಸನಗಳು ದೊರೆತಿರುವುದು ಬಿಟ್ಟರೆ ಪ್ರಸ್ತುತ ದೊರೆತಿರುವ ಎಂಟು ತಾಮ್ರ ಶಾಸನಗಳೇ ದಾನಿವಾಸದವರ ಬಗೆಗೆ ದೊರೆಯುವ ಶಾಸನ ಸಾಮಗ್ರಿ.

ಹೊಯ್ಸಳರ ವೀರಬಲ್ಲಾಳನಿಂದ 'ವಂಶಾನ್ವಯವಾಗಿ ನಾಯಕತನವನ್ನು' ಪಡೆದುಕೊಂಡ ದಾನಿವಾಸದ ಪಾಳೆಯಗಾರರು ವೀರಶೈವ ಧರ್ಮಾವಲಂಬಿಗಳು. ವೀರಬಲ್ಲಾಳನಿಂದ "ಹೊಯ್ಸಳ ಮನೆತನದ ವಿನಾಶಕ್ಕೆ (೧೩೪೦) ಮೊದಲು ಪ್ರಾಪ್ತವಾಗಿದೆಯೆಂದು ಸ್ಪಷ್ಟವಾಗುತ್ತದೆ. [೧] ದಾನಿವಾಸದ ಮನೆತನದವರ ಶಿಲಾಶಾಸನ ಹಾಗೂ ಪ್ರಸ್ತುತ ದೊರೆತಿರುವ ತಾಮ್ರಶಾಸನಗಳ ಪರಿಶೀಲನೆಯಿಂದ ಈ ಮನೆತನದವರ ವಂಶವೃಕ್ಷವನ್ನು ಪುನಾರಚಿಸಲು ಪ್ರಯತ್ನಿಸಬಹುದು. ತತ್ಫಲವಾಗಿ ಈ ಕೆಳಗಿನಂತೆ ಆ ವಂಶದ ವಂಶವೃಕ್ಷ ದೊರೆಯುತ್ತದೆ.

ದಾನಿವಾಸ ಅರಸುಮನೆತನದ ವಂಶವೃಕ್ಷ

ವಿರೂಪಾಕ್ಷರಸ. ಕ್ರಿ.ಶ.ಸು. ೧೫೦೦-೧೫೨೫

ಚೆನ್ನರಾಯ ವೊಡೆಯ ಕ್ರಿ.ಶ. ಸು. ೧೫೨೫-೧೫೫೦ ಅರಸಪ್ಪನಾಯಕ

ಲಿಂಗಣ್ಣನಾಯಕ(ಸು. ೧೫೫೦-೧೫೫೩) ಚಿಕ್ಕವೀರಪ್ಪವೊಡೆಯ(ಸು. ೧೫೫೩-೧೫೭೫)

ಚೆನ್ನವೀರಪ್ಪ ಲಿಂಗಣ್ಣನಾಯಕ ಮಲ್ಲಣ್ಣನಾಯಕ ಚಿಕ್ಕಮಲ್ಲಣ್ಣನಾಯಕ

ಪತ್ನಿ ಪಾರ್ವತಮ್ಮ

(ಸು. ೧೫೭೫-೧೫೮೭)

ದಾನಿವಾಸ ಮನೆತನದ ಎಲ್ಲ ಶಾಸನಗಳ ಅಧ್ಯಯನದಿಂದ ಈ ಮೇಲಿನಂತೆ ಆ ವಂಶದ ವಂಶವೃಕ್ಷ ದೊರೆಯುತ್ತದೆ. ಆದರೆ ಕುಣಿಗಲ್ ತಾಲ್ಲೂಕಿನ ಯಡೆಯೂರು ದೇವಾಲಯದ ಶಿಲಾ ಶಾಸನದ ಪ್ರಕಾರ ಲಿಂಗಣ್ಣ ನಾಯಕನ ಮಗ ಚೆನ್ನವೀರಪ್ಪ ಎಂದು ತಿಳಿದು ಬರುತ್ತದೆ. [೨] ಆದರೆ ಪ್ರಸ್ತುತ ತಾಮ್ರಪತ್ರಗಳಲ್ಲಿನ ೩,೪,೫,೬ ನೆಯ ಶಾಸನಗಳ

---

[೧] ಡಾ ಬಿ. ನಂಜುಂಡಸ್ವಾಮಿ. ದಾನಿವಾಸ ಅರಸುಮನೆತನ. ಸಾರಂಗಶ್ರೀ. ಪು. ೨೬೨

[೨] EC. XVI. ಕುಣಿಗಲ್ ೪೯

ಪ್ರಕಾರ ಚೆನ್ನವೀರಪ್ಪ ವೊಡೆಯನ ತಂದೆಯ ಹೆಸರು ಚಿಕ್ಕವೀರಪ್ಪ ವೊಡೆಯ ಎಂಬುದು ತಿಳಿದುಬರುತ್ತದೆ. ಬಹುಶಃ ಲಿಂಗಣ್ಣನಾಯಕನಿಗೆ ಮಕ್ಕಳಿಲ್ಲದಿದ್ದುದರಿಂದ ಚಿಕ್ಕವೀರಪ್ಪವೊಡೆಯನ ಮಗನಾದ ಚೆನ್ನವೀರಪ್ಪನನ್ನು ದತ್ತು ತೆಗೆದುಕೊಂಡಿದ್ದನೆಂದು ತೋರುತ್ತದೆ.

ಪ್ರಸ್ತುತ ತಾಮ್ರ ಶಾಸನಗಳಲ್ಲಿ ೧,೨, ಹಾಗೂ ಏಳನೆಯ ಶಾಸನಗಳು ಕೂಟ ಶಾಸನಗಳು. ಏಕೆಂದರೆ ೧ನೆಯ ಶಾಸನದಲ್ಲಿ ಉಲ್ಲೇಖಿತವಾಗಿರುವ ಕಾಲ ಶಕ ೧೪೦೭. ಪ್ರಜೋತ್ಪತ್ತಿ ಸಂವತ್ಸರ ಚೈತ್ರ ಬಹುಳ ಸಪ್ತಮಿ ಭಾನುವಾರ. ಆದರೆ ಇದು ಕ್ರಿ.ಶ. ೧೪೮೫ರ ವಿಶ್ವಾವಸು ಸಂವತ್ಸರ ಏಪ್ರಿಲ್ ೭ರ ಗುರುವಾರಕ್ಕೆ ಸರಿಹೊಂದುತ್ತದೆ. ಎರಡನೆಯ ಶಾಸನದಲ್ಲಿ ಉಲ್ಲೇಖಿತವಾಗಿರುವ ಕಾಲ ಶಕ ೧೪೦೫, ಶುಕ್ಲಸಂವತ್ಸರ ಫಾಲ್ಗುಣ ಶುದ್ಧ ೨ ಸ್ಥಿರವಾರ. ಆದರೆ ಇದು ಕ್ರಿ.ಶ. ೧೪೮೩ರ ಶೋಭಕೃತ್ ಸಂವತ್ಸರದ ಫೆಬ್ರುವರಿ ೨೮ ಶನಿವಾರಕ್ಕೆ ಸರಿಹೊಂದುತ್ತದೆ. ಏಳನೆಯ ಶಾಸನದಲ್ಲಿ ಉಲ್ಲೇಖಿತ ವಾಗಿರುವ ಕಾಲ ಶಕ ೧೩೫೫ರ ಶುಕ್ಲ ಸಂವತ್ಸರ, ಚೈತ್ರ ಶುದ್ಧ ೩ ಗುರುವಾರ. ಆದರೆ ಅದು ಕ್ರಿ.ಶ. ೧೪೩೩ ರ ಪ್ರಮೋದೂತ ಸಂವತ್ಸರದ ಏಪ್ರಿಲ್ ೨೧ ಮಂಗಳವಾರಕ್ಕೆ ಸರಿ ಹೊಂದುತ್ತದೆ. ಹಾಗೂ ಈ ಮೂರೂ ಶಾಸನಗಳಲ್ಲಿ ಉಲ್ಲೇಖಿತರಾದ ವ್ಯಕ್ತಿಗಳು ಆ ಶಾಸನದ ಕಾಲದಲ್ಲಿ ಹುಟ್ಟಿರಲೇ ಇಲ್ಲವೆಂಬುದು ಗಮನಾರ್ಹ ಅಂಶ. ಆದ್ದರಿಂದ ಇವು ಮೂರೂ ಕೂಟ ಶಾಸನಗಳೆಂಬುದು ತಿಳಿಯುತ್ತದೆ.

ಇತರ ಅಂಶಗಳು :- ದಾನಿವಾಸದ ಅರಸುಮನೆತನವು ವೀರಬಲ್ಲಾಳನ ಕಾಲದ ವೇಳೆಗಾಗಲೇ, ಅಸ್ತಿತ್ವಕ್ಕೆ ಬಂದಿತೆಂದು ಹೇಳಿಕೊಂಡಿದ್ದರೂ ಸಹ ,ಕ್ರಿ.ಶ. ೧೫೦೦ ಕ್ಕಿಂತ ಹಿಂದೆ ಇದ್ದಿರಬಹುದಾದ ಈ ವಂಶದ ಅರಸರ ಬಗ್ಗೆ ಮಾಹಿತಿ ದೊರೆಯುವುದಿಲ್ಲ.

ದಾನಿವಾಸ ಮನೆತನದ ವಿರೂಪಾಕ್ಷ ಒಡೆಯರು, ಚೆನ್ನರಾಯ ಒಡೆಯರು, ಅರಸಪ್ಪ ಒಡೆಯರು ಬಾಳೆಹಳ್ಳಿ ಮಠದಿಂದ ೧೨,೦೦೦ (ಹನ್ನೆರಡು ಸಾವಿರ) ವರಹ ಸಾಲ ಮಾಡಿದ್ದ ವಿಷಯ ಹಾಗೂ ಅದನ್ನು ತೀರಿಸಲಾರದೆ ಚೆನ್ನವೀರಣ್ಣ ನಾಯಕರು, ಲಿಂಗಣ್ಣನಾಯಕರು, ಮಲ್ಲಣ್ಣನಾಯಕರು, ಚಿಕ್ಕಮಲ್ಲಣ್ಣನಾಯಕರು ಮೂರು ಹಳ್ಳಿ ಗಳನ್ನು ಕೊಟ್ಟು ಋಣಮುಕ್ತರಾದರೆಂದು ಬಾಳೆಹೊನ್ನೂರು ಹೋಬಳಿ ಬಾಳೆಹಳ್ಳಿ ಮಠದ ವೀರಭದ್ರ ದೇವಾಲಯದ ಮುಂದಿನ ಶಾಸನದಿಂದ ತಿಳಿಯುತ್ತದೆ. ಹಾಗೂ

---

[1] EC. VI. ಚಿಕ್ಕಮಗಳೂರು ಜಿಲ್ಲೆ ಕೊಪ್ಪ ೧೭

ಪ್ರಸ್ತುತ ದೊರೆತಿರುವ ತಾಮ್ರ ಶಾಸನಗಳಲ್ಲಿನ ೩, ೪, ೫, ೬ನೆಯ ಸಂಖ್ಯೆಯ ಶಾಸನಗಳು ಚೆನ್ನವೀರಣ್ಣನಾಯಕರು ಜಮೀನನ್ನು ಮಾರಿಕೊಂಡ ಉಲ್ಲೇಖ ಸಿಗುತ್ತದೆ. ಆದ್ದರಿಂದ ದಾನಿವಾಸ ಅರಸುಮನೆತನದವರು ಆರ್ಥಿಕವಾಗಿ ತೀರಾದುರ್ಬಲರಾಗಿದ್ದು ಚೆನ್ನವೀರಣ್ಣ ನಾಯಕರ ಕಾಲಕ್ಕಾಗಲೇ ಅವಸಾನದೆಡೆಗೆ ಸಾಗುತ್ತಿದ್ದು ಕ್ರಮೇಣ ಇತಿಹಾಸದ ಪುಟಗಳಿಂದ ಹಾಗೂ ಅಧಿಕಾರದ ಗದ್ದುಗೆಯಿಂದ ಅಸ್ತಂಗತರಾದರೆಂದು ತೋರುತ್ತದೆ.

ಕ್ಷೇತ್ರಕಾರ್ಯದ ವೇಳೆಯಲ್ಲಿ ವಿಶೇಷ ನೆರವು ನೀಡಿದ ಸಿಂಹನಗದ್ದೆ ಮಠಾಧೀಶರಾದ ಸ್ವಸ್ತಿ ಶ್ರೀಮತ್ ಲಕ್ಷ್ಮಿಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳಿಗೆ ಹಾಗೂ ಆತ್ಮೀಯ ಗೆಳೆಯರಾದ ಆರ್. ಜಗದೀಶ್, ಹೊ.ನ. ನೀಲಕಂಠೇಗೌಡ ಅವರಿಗೆ ಧನ್ಯವಾದಗಳು.

ಮಂಥನ

ವಚನಕಾರರೂ ಕಾವ್ಯಮೀಮಾಂಸೆಯೂ

-ಬಿ. ಶರಣಪ್ಪ ಸತ್ಯಂಪೇಟೆ

ಬಸವಣ್ಣನನ್ನು 'ಕನ್ನಡ ಸಾಹಿತ್ಯದ ಹೆಮ್ಮೆ' ಎಂದು ಕರೆಯುವುದಕ್ಕೆ ಹತ್ತು ಹಲವು ಕಾರಣಗಳಿವೆ. ಕನ್ನಡದಲ್ಲಿ ಚಳವಳಿ ಸಾಹಿತ್ಯವನ್ನು ಹುಟ್ಟುಹಾಕಿದ್ದು ಸಾಹಿತ್ಯವನ್ನು ಜಂಗಮಗೊಳಿಸಿದ್ದು ಇತ್ಯಾದಿ ಕಾರಣಗಳು ಇದರಲ್ಲಿ ಸೇರಿವೆ. ಬಸವಣ್ಣ ಕಾವ್ಯ ಮೀಮಾಂಸಕನೂ ಆಗಿದ್ದನೆನ್ನುವುದು ಆತನ ಬಗೆಗೆ ಸಹೃದಯರು ವಿಶೇಷ ಗೌರವ ತಾಳುವುದಕ್ಕೆ ಕಾರಣವಾಗಿದೆ. ಬಹಳ ವಿಶೇಷದ ಸಂಗತಿಯೆಂದರೆ : ಏಕಕಾಲಕ್ಕೆ ಬಸವಣ್ಣ ಕವಿಯೂ ಕಾವ್ಯಮೀಮಾಂಸಕನೂ ಹೌದಾಗಿರುವುದು !

ಬಸವಣ್ಣ ಕವಿಯೆನ್ನುವುದರಲ್ಲಿ ಎರಡು ಮಾತಿಲ್ಲ ; ಆದರೆ ಆತ ಕಾವ್ಯ ಮೀಮಾಂಸಕನೂ ಆಗಿದ್ದನೇ ಎನ್ನುವುದು ಕೇವಲ ಕುತೂಹಲದ ವಿಷಯ ಮಾತ್ರವಲ್ಲ, ವಿಚಾರಣೀಯ ಸಂಗತಿಯೂ ಆಗಿದೆ. ಹೌದು, ಖಂಡಿತವಾಗಿಯೂ ಬಸವ ಕಾವ್ಯ ಮೀಮಾಂಸಕ.

ಬಸವಣ್ಣ ಕಾವ್ಯಮೀಮಾಂಸಕನೆಂದು ರುಜುವಾತುಪಡಿಸುವುದಕ್ಕೆ ಸಾಕಷ್ಟು ಆಧಾರಗಳಿವೆ. ಆತನ ಅಭಿವ್ಯಕ್ತಿಗಳಲ್ಲೇ ಕಾವ್ಯಮೀಮಾಂಸೆ ಸಂಬಂಧಿ ಪರಿಕಲ್ಪನೆಗಳ ಕುರಿತು ಸ್ಪಷ್ಟವಾದ ವಿಚಾರಗಳಿವೆ. ಆತನೇ ಬರೆದ

ತಾಳಮಾನ ಸರಿಸವನರಿಯೆ,
ಓಜೆ ಬಜಾವಣೆಯ ಲೆಕ್ಕವರಿಯೆ, ಅಮೃತಗಣದೇವಗಣವನರಿಯೆ,
ಕೂಡಲಸಂಗಮದೇವಾ, ನಿನಗೆಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ

- ಬ.ವ.ಸಂ. 494

ಎಂಬ ವಚನ 'ವಚನಕಾವ್ಯಮೀಮಾಂಸೆ'ಯ ಸ್ಪಷ್ಟಪರಿಕಲ್ಪನೆಯನ್ನು ಅರುಹುತ್ತದೆ. ವಚನಕಾರರೆಂದರೆ ಸ್ಥಾಪಿತ ಮೌಲ್ಯಗಳ ಹಾಗೂ ತತ್ವ - ಸಿದ್ಧಾಂತಗಳ ನಿರಾಕರಣ ವಾದಿಗಳು. ಅವರಿಗೆ ಆ ಕಾಲದ ಬದುಕು, ಜನಜೀವನ, ಮೌಲ್ಯ, ವ್ಯವಸ್ಥೆ - ಎಲ್ಲವೂ ತುಂಬಾ ಬಾಲಿಶವಾಗಿ ಕಾಣುತ್ತದೆ. ಅವರ ದೃಷ್ಟಿಗೆ 'ಹೊಸಸಮಾಜ' ಕಟ್ಟುವುದು

ಅನಿವಾರ್ಯ ಅಗತ್ಯವೆನಿಸುತ್ತದೆ. ಎಂತಲೇ ಆ ಕಾಲದ ಸಾಹಿತ್ಯವನ್ನು ತಿರಸ್ಕರಿಸಿದರು. ಆದ್ದರಿಂದಲೇ ಚನ್ನಬಸವಣ್ಣ 'ಕವಿತ್ವಸಾಧಕರೆಲ್ಲರೂ ಕಳವಳಿಸಿ ಹೋದರು, ವಿದ್ಯಾ ಸಾಧಕರೆಲ್ಲರೂ ಬುದ್ಧಿಗೆಟ್ಟರು' (ಚೆನ್ನ.ವ.518) ಎಂದು ಬರೆಯುವ ಮೂಲಕ ಆ ಕಾಲದ ಸಾಹಿತ್ಯವನ್ನು ನಿರಾಕರಿಸಿದ.

ಹೊಸಪರಂಪರೆಯನ್ನು ಹುಟ್ಟುಹಾಕುವವನ ಜವಾಬ್ದಾರಿ ಕೇವಲ ಹಿಂದಿನದನ್ನು ತಿರಸ್ಕರಿಸುವುದಲ್ಲ; ಅದಕ್ಕೆ ಬದಲಾಗಿ ಪರ್ಯಾಯವನ್ನು ಪುರಸ್ಕರಿಸುವುದೂ ಆಗಿರುತ್ತದೆ. ಆ ಕಾಲದ 'ರಾಜಮಾನ್ಯ' ಕಾವ್ಯವನ್ನು ತಿರಸ್ಕಿರಸಿದ ಇವರು ಅದಕ್ಕೆ ಪರ್ಯಾಯವಾಗಿ 'ಜನಮಾನ್ಯಕಾವ್ಯ'ವನ್ನು ಪುರಸ್ಕರಿಸಿದರು. ಎಂತಲೇ ಅವರು ತಾಳ, ಕ್ರಮ, ಅಮೃತಗಣ, ದೇವಗಣಗಳನ್ನು ನಿರಾಕರಿಸಿದರು. ಅವು ಅವರಿಗೆ ಅಸಂಗತವೆನಿಸಿದವು. ಆದ್ದರಿಂದ 'ಜನಸಮ್ಮುಖ' ಕಾವ್ಯಕಟ್ಟುವ ಪರಮೋದ್ದೇಶವಿಟ್ಟುಕೊಂಡಿದ್ದ ಅವರು 'ಆನು ಒಲಿದಂತೆ - ಹಾಡುವೆ' ಎಂಬುದನ್ನು ವಚನ ಚಳವಳಿಯ ಕಾವ್ಯತತ್ವವನ್ನಾಗಿ ರೂಪಿಸಿಕೊಂಡರು. ಈ ಕಾವ್ಯತತ್ವದ ರೂವಾರಿ ಬಸವಣ್ಣ. ಇದನ್ನೇ ಎಲ್ಲಾ ವಚನಕಾರರು ಕಾವ್ಯತತ್ವವನ್ನಾಗಿ ಗ್ರಹಿಸಿದರು. ಅಂತೆಯೇ ಇದು ವಚನಗಳುದ್ದಕ್ಕೂ ಎಡಬಿಡದೆ ಕಾಣಸಿಗುತ್ತದೆ. ಈ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಬಸವಣ್ಣ ವಚನ ಚಳವಳಿಯ ರೂವಾರಿಯೆಂದು ಒಪ್ಪಿಕೊಂಡಂತೆ, ವಚನಕಾವ್ಯಮೀಮಾಂಸೆಯ ಪ್ರವರ್ತಕನೂ ಆಗಿದ್ದನೆಂದು ಗ್ರಹಿಸಿದರೆ ಪ್ರಾಯಶಃ ತಪ್ಪಾಗಲಿಕ್ಕಿಲ್ಲ. ಒಟ್ಟಂದದಲ್ಲಿ ಬಸವ ಆದ್ಯ ವಚನಕಾವ್ಯಮೀಮಾಂಸಕ ಎನ್ನುವುದರಲ್ಲಿ ಎರಡು ಮಾತಿಲ್ಲ.

ಬಸವಣ್ಣ ಹೇಳಿದ 'ಆನು ಬಂದಂತೆ ಹಾಡುವೆ' ಎಂಬ ನುಡಿಗಟ್ಟು ಕಾವ್ಯ ಮೀಮಾಸೆಯ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಾದುದು. ನನ್ನ ಅಭಿಮತದ ಪ್ರಕಾರ ಇದು ಮತ್ತು ಇಂಥ ಇನ್ನೂ ಅನೇಕ ನುಡಿಗಟ್ಟುಗಳೇ ಬಸವಣ್ಣನನ್ನು ಓರ್ವ ಕಾವ್ಯಮೀಮಾಂಸಕನನ್ನಾಗಿಸಿವೆ.

'ಒಲಿದಂತೆ ಹಾಡು' ಎಂದರೆ ಕೇವಲ ತಿಳಿದಂತೆ, ತೋಚಿದಂತೆ ಗೀಚು ಎಂದರ್ಥವಲ್ಲ. ಹಾಗೆ ಭಾವಿಸುವುದು ಶುದ್ಧಪ್ರಮಾದ. 'ಆನು ಒಲಿದಂತೆ ಹಾಡುವೆ' ಎನ್ನುವುದನ್ನು ಲೇಖಕ ತನತನಗೆ ತಿಳಿದಂತೆ, ಹೊಳೆದಂತೆ ಬರೆಯುವುದೆಂದು ವ್ಯಾಖ್ಯಾನಿಸುವ ಅಪಾಯವಿದೆ ; ಆ ಕುರಿತು ನನಗೆ ತೀವ್ರ ಆತಂಕವಿದೆ. ಆದರೆ ವಚನಕಾರರು ಹಾಗೆ ಹೇಳುವುದು ಅಸಂಭವನೀಯ ಮಾತ್ರವಲ್ಲ, ಅನೂಹ್ಯವೂ ಹೌದು. 'ಒಲಿದಂತೆ - ಹಾಡುವೆ'- ಎನ್ನುವುದು ವ್ಯಕ್ತಿಸ್ವಾತಂತ್ರದ ಪ್ರತೀಕ; ಮಾತ್ರವಲ್ಲ ಕವಿಯ ಮನೋಧರ್ಮವೂ ಅದೇ ಆಗಿರಬೇಕೆನ್ನುವುದರ ಸಂಕೇತ.

ಸ್ವಾತಂತ್ರ್ಯವೆಂದರೆ ಹೇಗೆ ಸ್ವೇಚ್ಛಾಚಾರವಲ್ಲವೋ ಹಾಗೆಯೇ ಒಲಿದಂತೆ- ಹಾಡುವೆನೆಂದರೆ ತಿಳಿದಂತೆ, ತೋಚಿದಂತೆ ಬರೆಯುವುದೂ ಅಲ್ಲ. 'ಒಲಿದಂತೆ ಹಾಡು'

ಎಂಬುದು ಒಲಿದ ಆಲೋಚನೆ, ಒಲಿದ ಭಾಷೆ, ಒಲಿದ ಶೈಲಿ - ಇತ್ಯಾದಿಯನ್ನು ಮೇಳೈಸಿಕೊಂಡು ಅಭಿವ್ಯಕ್ತಿ ರೂಹು ಪಡೆಯಲಿ ಎಂಬ ಆಶಯದಿಂದ ಆಡಿದ ಮಾತು.

ಬಸವನಿಗೆ ಒಲಿದ ಭಾಷೆ, ಚೌಡಯ್ಯನಿಗೆ ಒಲಿಯಲಿಲ್ಲ. ಏಕೆ ಹೀಗಾಯಿತು? ಉತ್ತರ ಸ್ಪಷ್ಟವಿದೆ : ನಿಜವಾಗಿಯೂ ಒಬ್ಬನಿಗೆ ಒಗ್ಗಿದ ಭಾಷೆ, ಒಲಿದ ಶೈಲಿ ಇತ್ಯಾದಿ ಇನ್ನೊಬ್ಬನಿಗೆ ದಕ್ಕುವುದೇ ಇಲ್ಲ. ಪಂಪನ ಶೈಲಿಯೇ ಬೇರೆ, ರನ್ನನ ಶೈಲಿಯೇ ಬೇರೆ. ಈ ಜಗತ್ತಿನಲ್ಲಿ ಎಷ್ಟು ವ್ಯಕ್ತಿತ್ವಗಳಿವೆಯೋ ಅಷ್ಟು ಶೈಲಿಗಳಿವೆ. ಏಕೆಂದರೆ ಯಾರೂ ಒಂದೇ ಭಾಷಾಪರಿಸರದಲ್ಲಿ ಬೆಳೆದಿರುವುದಿಲ್ಲ ; ಬೆಳೆದರೂ ಒಂದೇ ರೀತಿಯ ಪ್ರಭಾವಕ್ಕೆ ಈಡಾಗಿರುವುದಿಲ್ಲ. ಅಂತೆಯೇ ಶೈಲಿ ಪ್ರತಿಯೋರ್ವನಲ್ಲಿ ವಿಶೇಷ ರೂಹು ಪಡೆಯುತ್ತದೆ. ಆದ್ದರಿಂದ ಬರಹಗಾರನ ಶೈಲಿಯ ಆಶಯದಲ್ಲಿ ಏಕತೆಕಾಣಬಹುದೇ ವಿನಃ ಶೈಲಿಯ ಸ್ವರೂಪದಲ್ಲಿ ಏಕಾತ್ಮಕತೆ ಅಸಾಧ್ಯ. ಈ ಎಲ್ಲಾ ಕಾರಣಗಳಿಗಾಗಿಯೇ, ಪ್ರತಿಯೋರ್ವರೂ ತಮತಮಗೆ ಒಲಿದ ಭಾಷೆ, ಶೈಲಿಯಲ್ಲಿ ಆಲೋಚನೆಗಳನ್ನು ಅಭಿವ್ಯಕ್ತಿಸುವ ಸ್ವಾತಂತ್ರ್ಯವಿರಲಿ ಎಂದು ಬಸವಣ್ಣ 'ಒಲಿದಂತೆ ಹಾಡುವೆ/ ಹಾಡು' ಎಂದು ಹೇಳಿರಬೇಕೆಂದು ತೋರುತ್ತದೆ.

ಆದ್ದರಿಂದ ಅಲ್ಲಮನ ಅನುಭಾವ ಬೆಡಗಿನಲ್ಲಿ ರೂಹು ಪಡೆಯಿತು ; ಚೌಡಯ್ಯನ ತೀಕ್ಷ್ಣ ಸಾಮಾಜಿಕ ತುಡಿತ ಬಂಡಾಯದ ಭಾಷೆಯಲ್ಲಿ ಅಭಿವ್ಯಕ್ತವಾಯಿತು. ಅಕ್ಕನ ಆಂತರಿಕ ತಳಮಳ, ವೈರಾಗ್ಯ ನವುರಾದ, ಭಾವಗೀತಾತ್ಮಕವಾದ ಭಾಷೆಯಲ್ಲಿ ಪ್ರಕಟಗೊಂಡಿತು. ಬಸವಣ್ಣ ತಾನು ಎದುರಿಸಿದ ಸವಾಲು ಹಾಗೂ ಸಾಜಿಕ ಸಮಸ್ಯೆಗಳಿಗೆ 'ಜನಮಾನ್ಯಭಾಷೆ'ಗೆ ಒಲಿದ. ಹೀಗೆ ಪ್ರತಿಯೋರ್ವರೂ ತಮತಮಗೆ ಒಗ್ಗಿದ ಭಾಷೆಗೆ ಒಲಿದರು.

ಹೀಗೆಯೇ ಬರೆಯಬೇಕೆನ್ನುವುದು ಬಂಧನ ; ಒಲಿದಂತೆ ಬರೆಯಬೇಕೆನ್ನುವುದು ನಿರ್ಬಂಧನ ; ನಿರ್ಬಯಲು. ವಚನಕಾರರು ಆಕಾರ, ರೂಪ ಹಾಗೂ ಸ್ಥಾವರವಿರೋಧಿ ನಿಲುವುಗಳನ್ನು ಹೊಂದಿದವರು. ಅವರಿಗೆ ನಿರಾಕಾರ, ನಿರೂಪ, ನಿರ್ಬಯಲು ಇತ್ಯಾದಿಗಳೇ ಆಕರ್ಷಣೀಯ. ಅದಕ್ಕೆಂದೇ ಅಲ್ಲಮಪ್ರಭು

> ಬಯಲು ಬಯಲನೆ ಬಿತ್ತಿ ಬಯಲುಬಯಲನೆ ಬೆಳೆದು
> ಬಯಲು ಬಯವಾಗಿ ಬಯವಾಯಿತ್ತಯ್ಯಾ
> ಬಯಲ ಜೀವನ ಬಯಲಭಾವನೆ,
> ಬಯಲು ಬಯಲಾಗಿ ಬಯಲಾಯಿತ್ತಯ್ಯಾ
> -ಅ. ಪ್ರ.ವ.ಸಂ. 639

ಎಂದು ಹೇಳಿರಬೇಕು. 'ಬಯಲು' ಎನ್ನುವುದು ಅನುಭಾವಸಂಬಂಧಿ ಪರಿಕಲ್ಪನೆಯಾಗಿರುವಂತೆ ಕಾವ್ಯಸಂಬಂಧಿ ಪರಿಕಲ್ಪನೆಯೂ ಆಗಿದೆ. ಬಯಲು ಎಂದರೆ ಬಂಧನ ಮೀರಿದ

ಭಾಷೆ. ಗಡಿರೇಖೆಗಳಿಲ್ಲದ ನಿಸ್ಸೀಮಶೈಲಿ ; ಸ್ಥಾಪಿತಕಾವ್ಯಬಂಧಗಳನ್ನು ಮೀರುವ ಆಶಯವುಳ್ಳದ್ದು. ಬಸವಣ್ಣನ 'ಒಲಿದಂತೆ ಹಾಡುವೆ' ಎನ್ನುವ ಮಾತು ಕೂಡಾ ತಾಳ, ಕ್ರಮ, ಬ್ರಹ್ಮಗಣ, ವಿಷ್ಣುಗಳನ್ನು ಮೀರುವುದಕ್ಕೆ ಪೂರಕವಾಗಿರುವಂತೆಯೇ ಅಲ್ಲಮನ 'ಬಯಲು' ಎನ್ನುವುದು ಕೂಡಾ ಕಾವ್ಯ, ಈ ಎಲ್ಲ ಬಂಧಗಳನ್ನು ಮೀರುವ ಆಶಯವುಳ್ಳದ್ದಾಗಿರಬೇಕೆಂಬುದೇ ಆಗಿದೆ. ಆದ್ದರಿಂದಲೇ ಈ ಅರ್ಥದಲ್ಲಿ ಬಸವಣ್ಣ ಅಲ್ಲಮ - ಈ ಇರ್ವರೂ ವಚನಕಾವ್ಯಮೀಮಾಂಸೆಗೆ ಭದ್ರ ತಳಪಾಯ ಹಾಕಿದವರು. ಅಂತೆಯೇ ಬಸವಣ್ಣನೂ ಕಾವ್ಯಮೀಮಾಂಸಕ ; ಅಲ್ಲಮನೂ ಕಾವ್ಯಮೀಮಾಂಸಕ.

ಕಾವ್ಯಮೀಮಾಂಸಕರೆಂದರೆ ಈಗಾಗಲೇ ಸ್ಥಾಪಿತವಾದ ಭಾರತೀಯ ಕಾವ್ಯಮೀಮಾಂಸೆ ಬರೆದವರು ಎಂದರ್ಥವಲ್ಲ. ಭಾರತೀಯ ಸಂಸ್ಕೃತಿ ಬಹುತೇಕ ಭಾಗವನ್ನು ನಿರಾಕರಿಸಿದ ಅವರು ಅದನ್ನು ಬರೆಯುವುದು ತೀರಾ ಅಸಂಭವನೀಯ ಕೂಡಾ. ಅವರದು ಪರ್ಯಾಯ ಕಾವ್ಯಮೀಮಾಂಸೆ. ಅದನ್ನು 'ವಚನಕಾವ್ಯಮೀಮಾಂಸೆ' ಎನ್ನಲು ಅಡ್ಡಿಯಿಲ್ಲ.

---

* ಈ ಲೇಖನದಲ್ಲಿ ಬಳಸಲಾದ ವಚನಗಳನ್ನು ಸಮಗ್ರ ವಚನ ಸಂಪುಟ ಜನಪ್ರಿಯ ಆವೃತ್ತಿ, ಕನ್ನಡ ಮತ್ತು ಸಂಸ್ಕೃತಿ - ನಿರ್ದೇಶನಾಲಯ, ಬೆಂಗಳೂರು - ಇವುಗಳಿಂದ ಆಯ್ದುಕೊಳ್ಳಲಾಗಿದೆ.

ಚೋಳರ ಕಾಲದ ಅಗ್ರಹಾರ ಆಡಳಿತ ವ್ಯವಸ್ಥೆ

- ಪ್ರೊ. ಹೆಚ್. ರೇವಣಸಿದ್ಧಪ್ಪ

ಒಂದನೇ ಪರಾಂತಕ ಚೋಳನ ಕಾಲದ ಉತ್ತರ ಮೇರೂರು ಶಾಸನವನ್ನು ಕ್ರಿ.ಶ. 950ರಲ್ಲಿ ಬರೆಸಲಾಗಿದೆ. ಅದನ್ನು ಆಧರಿಸಿ ಪ್ರೊ. ನೀಲಕಂಠಶಾಸ್ತ್ರಿ ಮತ್ತಿತ್ತರರು ಚೋಳ ಸ್ಥಳೀಕ ಸರಕಾರ ಪದ್ಧತಿಯನ್ನು ಕುರಿತು ಬರೆದಿದ್ದಾರೆ. ಈ ಶಾಸನದ ಪ್ರಕಾರ ಒಂದು ಗ್ರಾಮದ ಅಥವಾ ಊರಿನ ಆಡಳಿತವನ್ನು ಆರು ವಾರಿಯಂಗಳನ್ನಾಗಿ ಅಂದರೆ ವಿಭಾಗಗಳನ್ನಾಗಿ ಅಥವಾ ಸಮಿತಿಗಳನ್ನಾಗಿ ವಿಂಗಡಿಸಲಾಗಿತ್ತು. ಈ ವಾರಿಯಂಗಳಿಗೆ 30 ಪ್ರತಿನಿಧಿಗಳನ್ನು ಆರಿಸಲಾಗುತ್ತಿತ್ತು. ಅವರನ್ನು ವಾರಿಯರ್ ಎಂದು ಕರೆಯುತ್ತಿದ್ದರು.

ಈ ಪ್ರತಿನಿಧಿಗಳ ಅಥವಾ ಸದಸ್ಯರನ್ನು ಆಯ್ಕೆ ಮಾಡಲು ಈ ಅರ್ಹತೆಗಳನ್ನು ಸೂಚಿಸಲಾಗಿತ್ತು

1. ಕನಿಷ್ಠ 1.5 ಎಕರೆ ಅಥವಾ 60 ಗುಂಟೆ ಜಮೀನು ಹೊಂದಿರಬೇಕು.
2. ಸ್ವಂತ ಮನೆ ಇರಬೇಕು
3. ವಯಸ್ಸು 35 ರಿಂದ 75ರೊಳಗಿರಬೇಕು
4. ವೇದ ಮತ್ತು ಮಂತ್ರಗಳ ಜ್ಞಾನವಿರಬೇಕು

ಅನರ್ಹತೆಗಳು

1. ಹಿಂದೆ ಮೂರು ಬಾರಿ ಸದಸ್ಯರಾಗಿದ್ದವರು
2. ಸದಸ್ಯರಾಗಿದ್ದಾಗ ಲೆಕ್ಕಪತ್ರ ಕೊಡದೇ ಇದ್ದವರು.
3. ಸಗೋತ್ರ ವಿವಾಹವಾದವರು
4. ಅಪರಾಧಿಗಳು
5. ಅಪರಾಧಿಗಳ ಸಂಬಂಧಿಗಳು / ಸಂಬಂಧವಿರುವವರು

ಆಯ್ಕೆ ಪದ್ಧತಿ : ಕುಡುವೋಲೈ ಅಥವಾ ಕೊಡ ಒಲೆ ಪದ್ಧತಿ. ಸದಸ್ಯರನ್ನು ಆರಿಸಲು ಅಭ್ಯರ್ಥಿಗಳ ಹೆಸರುಗಳನ್ನು ಓಲೆಗಳ ಮೇಲೆ ಅಥವಾ ಗರಿಗಳ ಮೇಲೆ ಬರೆದು ಒಂದು ಕೊಡ (ಬಿಂದಿಗೆ) ದಲ್ಲಿ ಹಾಕಿ 5 ವರ್ಷದ ಬಾಲಕನ ಕೈಯಿಂದ 30

ಓಲೆಗಳನ್ನು ಎತ್ತಿಸಲಾಗುತ್ತಿತ್ತು. ಈ ಪದ್ಧತಿಯನ್ನು ಇಂದಿನ ಲಾಟರಿಪದ್ಧತಿಗೆ ಹೋಲಿಸಬಹುದು. ಈ ಪದ್ಧತಿಯಿಂದ ಪ್ರಚಾರದ, ಅವ್ಯವಹಾರದ, ಅನಗತ್ಯ ವೆಚ್ಚಗಳ ಸಮಸ್ಯೆ ಇಲ್ಲದಂತಾಗಿತ್ತು.

ಈ ರೀತಿ ಆಯ್ಕೆಯಾದ ಸದಸ್ಯರ 6 ಸಮಿತಿಗಳನ್ನು ರಚಿಸಲಾಗುತ್ತಿತ್ತು.

ದೇವಾಲಯ ಸಮಿತಿ	5 ಸದಸ್ಯರು
ಕೆರೆ ಸಮಿತಿ	5 ಸದಸ್ಯರು
ಲೆಕ್ಕಪತ್ರ ಸಮಿತಿ	5 ಸದಸ್ಯರು
ಸುವರ್ಣ (ಹಣಕಾಸು) ಸಮಿತಿ	5 ಸದಸ್ಯರು
ನ್ಯಾಯ ಸಮಿತಿ	5 ಸದಸ್ಯರು
ವಾರ್ಷಿಕ ಸಮಿತಿ	5 ಸದಸ್ಯರು
	60 ಸದಸ್ಯರು

ಈ ಸದಸ್ಯರು ಊರಿನ ದೇವಾಲಯದ ಅರಳಿಕಟ್ಟೆ ಮೇಲೆ ಸಭೆ ನಡೆಸುತ್ತಿದ್ದರು. ಕಾನೂನುಪಾಲನೆ, ತೆರಿಗೆ ವಸೂಲಿ, ಕೆರೆ ನೀರಿನ ಹಂಚಿಕೆ, ಅಪರಾಧಿಗಳ ವಿಚಾರಣೆ ರಸ್ತೆ, ಕೆರೆ ದುರಸ್ತಿ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದರು, ದೇವಸ್ಥಾನದಲ್ಲಿ ಪೂಜಾ ಮತ್ತು ಮಠಗಳ ಕಾರ್ಯಗಳನ್ನು ಜಾತ್ರೆ ರಥೋತ್ಸವಗಳನ್ನು ನೋಡಿಕೊಳ್ಳುತ್ತಿದ್ದರು.

ವಿಮರ್ಶೆ

ಈ ವ್ಯವಸ್ಥೆಯನ್ನು ಈವರೆಗೆ ಇತಿಹಾಸಕಾರರು ಚೋಳರ ಸ್ಥಳೀಯ ಆಡಳಿತ ವ್ಯವಸ್ಥೆ ಎಂದು ಹೇಳಿಕೊಂಡು ಬಂದಿದ್ದಾರೆ. ಆದರೆ ಇದು ಅಗ್ರಹಾರಗಳಿಗೆ ಮಾತ್ರ ಸೀಮಿತವಾಗಿದ್ದ ಆಡಳಿತ ವ್ಯವಸ್ಥೆ ಎಂದು ಖಚಿತವಾಗಿ ಹೇಳಬಹುದು. ಏಕೆಂದರೆ ಗ್ರಾಮಗಳಲ್ಲಿ ಸಾಮಾನ್ಯವಾಗಿ ಗೌಡರು, ಶಾನುಭೋಗರು ತಳವಾರರು ಇತರರು ಆಡಳಿತ ನಿರ್ವಹಿಸುತ್ತಿದ್ದರು ಅವರಿಗೆ ವೇದಮಂತ್ರಗಳ ಜ್ಞಾನವಿರುತ್ತಿರಲಿಲ್ಲ ಇನ್ನಿತರ ಅರ್ಹತೆಗಳು - ಅನರ್ಹತೆಗಳು , ಆಯ್ಕೆ ಪದ್ಧತಿ ಇರಲಿಲ್ಲ.

ಈ ಕೊಡ - ಓಲೆ ಪದ್ಧತಿ, ಚತುರ್ವೇದಿ ಮಂಗಲಂ ಸತ್ಯಮಂಗಲಂ ಮೊದಲಾದ ಅಗ್ರಹಾರಗಳಿಗೆ ಸೀಮಿತವಾಗಿತ್ತು ಅಲ್ಲಿನ ಬ್ರಾಹ್ಮಣರು ವಾರಿಯಂ ಪದ್ಧತಿಯನ್ನು ಅವುಗಳ ನಿಯಮಗಳನ್ನು ಅನುಸರಿಸುತ್ತಿದ್ದರು. ಆದ್ದರಿಂದ ಅದನ್ನು ಸ್ಥಳೀಯ ಸರಕಾರ ಪದ್ಧತಿ ಎಂದು ಹೇಳುತ್ತಾ ಹೋಗುವುದು ಸರಿಯಲ್ಲ (HRS 25-2-2000).

★★★

ಈ ಸಂಚಿಕೆಯ ಲೇಖಕರು

1.	ಪ್ರೊ. ಬಿ.ವೈ. ಲಲಿತಾಂಬ	ಮಲ್ಟಿ - 5 , ವಿಶ್ವವಿದ್ಯಾಲಯ ಶಿಕ್ಷಕ ಆವಾಸ ಖಂಡವಾರಸ್ತೆ, ಇಂದೋರ್ - 452 017 (ಮಧ್ಯ ಪ್ರದೇಶ)
2.	ಎಸ್. ಶಿವಣ್ಣ	ನಂ. 138,7ನೇ ಸಿ ಮುಖ್ಯ ರಸ್ತೆ ಆರ್.ಪಿ.ಸಿ. ಲೇಔಟ್ ಬೆಂಗಳೂರು - 560 040
3.	ಡಾ. ಪಿ.ಎಂ. ದಿನೇಶ	ಸಂಸ್ಕೃತ ವಿಭಾಗ ಎಸ್.ಜೆ.ಎಂ.ವಿ.ಎಸ್.ಮಹಿಳಾ ಕಾಲೇಜು ಜಯರಾಮರಾಜನಗರ ಹುಬ್ಬಳ್ಳಿ - 580 020
4.	ಡಾ. ವಿಜಯಶ್ರೀ ಸಬರದ	ಬಸವಶ್ರೀ ಕುಸನೂರು ರಸ್ತೆ, ಸರಸ್ವತಿ ಪುರ ವಿಶ್ವವಿದ್ಯಾಲಯ ಅಂಚೆ ಗುಲಬರ್ಗಾ - 6
5.	ಡಾ. ನಾರಾಯಣಸ್ವಾಮಿ ಕೆ. ವೈ.	ಉಪನ್ಯಾಸಕರು ಪದವಿ ಕಾಲೇಜು ಚಿಂತಾಮಣಿ ಕೋಲಾರ ಜಿಲ್ಲೆ
6.	ಡಾ.ಎಸ್. ವಿದ್ಯಾಶಂಕರ್	ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು - 560 056

7. ಡಾ. ಸಿ. ನಾಗಭೂಷಣ
ಅಧ್ಯಾಪಕರು
ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ
ಯರಗೇರಾ
ರಾಯಚೂರು - 584 133

8. ಡಾ. ಎಂ.ಜಿ. ಮಂಜುನಾಥ
ಅಧ್ಯಾಪಕ
ಸ್ನಾತಕೋತ್ತರ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಕೋಲಾರ

9. ಶರಣಪ್ಪ ಸತ್ಯಂಪೇಟೆ
ಲಕ್ಷ್ಮಿಪುರ (ಅಂಚೆ)
ಸುರಪುರ (ತಾಲ್ಲೂಕು)
ಗುಲಬರ್ಗಾ ಜಿಲ್ಲೆ

10. ಪ್ರೊ. ಎಚ್. ರೇವಣಸಿದ್ದಪ್ಪ
ಪ್ರಾಧ್ಯಾಪಕ
ಇತಿಹಾಸ ವಿಭಾಗ
ಶ್ರೀ ಸಿದ್ಧಗಂಗ ಬಾಲಕರ ಕಾಲೇಜು
ತುಮಕೂರು

★ ★ ★

ವಿವರಗಳಿಗೆ ವ್ಯವಹರಿಸಿ :
ನಿರ್ದೇಶಕರು
ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು - 560 056

6957 - ಬೆಂ. ವಿ. ಮು - 400 - ಡಿಸೆಂಬರ್ 2001